# ಯೋಜನಾ

ಅಭಿವೃದ್ಧಿ ಮಾಸಪತ್ರಿಕೆ

ಮಾರ್ಚ್ 2018 ಸಂಚಿಕೆ – 8 ಸಂಪುಟ – 33



ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ಮುಖಪುಟ ವಿನ್ಯಾಸ
**ಗಜಾನನ ಪಿ. ದೋಪೆ**


ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.


**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**



ವಿಳಾಸ

ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in


## ಈ ಸಂಚಿಕೆಯಲ್ಲಿ ..........


ಸಂಪಾದಕೀಯ 2

ಮುನ್ನಡೆಯತ್ತ ಆರ್ಥಿಕತೆ 3
*** ಡಾ. ಹಸ್ಮುಖ್ ಅಧಿಯಾ**

ಹಣಕಾಸು ವ್ಯವಸ್ಥೆಯ ಪುನಶ್ಚೇತನ 5
*** ಪ್ರೊ. ಜೆ. ಡಿ. ಅಗರ್‌ವಾಲ್**

ಎಂಎಸ್‌ಎಂಇ; ಬಲವರ್ಧನೆಯ ಚಾಲಕ ಶಕ್ತಿ 10
*** ಅನಿಲ್ ಭಾರದ್ವಾಜ್**

ದೇಶ ಜೋಡಿಸುವ ಮೂಲಸೌಕರ್ಯ ಸೃಷ್ಟಿ 12
*** ಜಿ. ರಘುರಾಮ್**

ಮೌಲ್ಯವರ್ಧಿತ ಉತ್ಪನ್ನ 15
*** ಪ್ರೊ. ಎಂ. ಎಸ್. ಸ್ವಾಮಿನಾಥನ್**

ಆರೋಗ್ಯ ಉಪಚಾರಕ್ಕೆ ಒತ್ತು 18
*** ಕೆ. ಶ್ರೀನಾಥ್ ರೆಡ್ಡಿ**

ಭಾರತದ ಆಶೋತ್ತರ ಜಿಲ್ಲೆಗಳ ಪರಿವರ್ತನೆ; ಅಭಿವೃದ್ಧಿ ಯಾನ 21
*** ಅಮಿತಾಬ್ ಕಾಂತ್**

ಆರ್ಥಿಕ ಸಮೀಕ್ಷೆ – ಕ್ಷೇತ್ರವಾರು ಸಾಧನೆ 28

ಉದ್ಯೋಗ ಸೃಷ್ಟಿಗೆ ಆದ್ಯತೆ 30
*** ರಂಜಿತ್ ಮೆಹ್ತಾ**

ಎಲ್‌ಪಿಜಿ ಪಂಚಾಯತ್ 35

ರೈಲು ಸೇವೆ ಲೋಕಾರ್ಪಣೆ 36

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ 38

ಮಹಿಳಾ ಸಶಕ್ತೀಕರಣದ ದಿಸೆಯಲ್ಲಿ 39
*** ಡಾ. ಶಹೀನ್ ರಾಝಿ**

ಕಪ್ಪುಹಣಕ್ಕೆ ಬಜೆಟ್ ಕಡಿವಾಣ 41
*** ರಮೇಶ್ ಯಾದವ್**

ಕೇಂದ್ರ ಬಜೆಟ್‌ನಲ್ಲಿ ಹಿರಿಯರಿಗೆಷ್ಟು ಲಾಭ? 45
*** ಸುಮತಿ ಕುಲಕರ್ಣಿ**

ಕಪ್ಪು ಹಲಗೆಯಿಂದ ಡಿಜಿಟಲ್ ಬೋರ್ಡ್‌ವರೆಗೆ 48
*** ಕಿರಣ್ ಭಟ್ಟಿ**

ವ್ಯವಸಾಯ; ಅನುಶೋಧನೆಗಳಿಗೆ ಮಹತ್ವ 51
*** ಡಾ. ಜೆ.ಪಿ ಮಿಶ್ರಾ ಮತ್ತು ಶಿವಲಿಕ ಗುಪ್ತಾ**

ವ್ಯಾಪಾರ ವಹಿವಾಟು ಸರಳೀಕರಣ 57
*** ಡ್ಯಾನಿಶ್ ಎ ಹಾಶಿಮ್ ಮತ್ತು ವರ್ಷಾ ಕುಮಾರಿ**

ಬಯಲು ಬಹಿರ್ದೆಸೆ ಮುಕ್ತಗೊಂಡ ದಾವಣಗೆರೆ ಜಿಲ್ಲೆ 60
*** ಎಸ್. ಅಶ್ವತಿ**

ಮನ್ ಕೀ ಬಾತ್ 63
*** ಕೃಪೆ; ಆಕಾಶವಾಣಿ, ಬೆಂಗಳೂರು**

ಕರ್ನಾಟಕ ಬಜೆಟ್ 2018–19 67
*** ಕೃಪೆ : ಹಣಕಾಸು ಇಲಾಖೆ ವೆಬ್‌ಸೈಟ್**

ನಿಮಗಿದು ತಿಳಿದಿದೆಯೇ? 71

ವಾರ್ತಾ ವಿಶೇಷ 72



**ಯೋಜನಾ ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

*Log on to*
**http://publicationsdivision.nic.in/**,
*in collaboration with* **bharatkosh.gov.in**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು, PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಪಾದಕೀಯ – ಜನರ ಮುಂಗಡ ಪತ್ರ




ಮುಂಗಡ ಪತ್ರ, ನಿಮ್ಮ ಹಣ ಎಲ್ಲಿ ಹೋಯಿತು ಎಂದು ಆಲೋಚಿಸುವ ಮುನ್ನವೇ ಈ ಉದ್ದೇಶಕ್ಕಾಗಿ ಇಷ್ಟು ಖರ್ಚಾಗುತ್ತಿದೆಯೆಂದು ಮೊದಲೆ ನಿಖರವಾಗಿ ಮಾರ್ಗದರ್ಶಿಸುವ ಅಧಿಕೃತ ದಾಖಲೆಯಾಗಿದೆ. ಮನೆಯ ಆದಾಯ-ವೆಚ್ಚ ಲೆಕ್ಕ ಹಾಕುವ ನಮಗೆ ಮುಂಗಡಪತ್ರದ ಮಹತ್ವ ತಿಳಿದಿದೆ. ಆದಾಯದ ಹಿಡಿತದಲ್ಲಿ ವೆಚ್ಚವಿರಬೇಕೆನ್ನುವ ಅರಿವೂ ಇದೆ. "ಆದಾಯ ಅರ್ಧ ರೂಪಾಯಿ – ಖರ್ಚು ಪೂರಾ ರೂಪಾಯಿ" ಎನ್ನುವ ಮಾತು ಆರ್ಥಿಕ ಶಿಸ್ತಿನ ಜಾಗೃತಿ ಮೂಡಿಸುತ್ತದೆ. ನಿಯಂತ್ರಣವಿಲ್ಲದ ವೆಚ್ಚವೆಂದರೆ, ತಳವಿಲ್ಲದ ಹಗೆವಿಗೆ ಧಾನ್ಯ ತುಂಬಿದಂತೆ! ಆದಾಯಕ್ಕೆ ತಕ್ಕಂತೆ ವೆಚ್ಚವನ್ನು ಯೋಜಿಸುವ ಮಾರ್ಗ, ಮುಂಗಡಪತ್ರ, ದೇಶದ ಜನರ ಆಸೆ, ಆಶೋತ್ತರಗಳನ್ನು ಬಿಂಬಿಸುವ ಮಹತ್ವಪೂರ್ಣ ಸ್ಪಂದನೆಯಾಗಿದೆ. ವಿವಿಧ ಕ್ಷೇತ್ರಗಳಿಂದ ಸಂಪನ್ಮೂಲ ಕ್ರೋಢೀಕರಿಸಿಕೊಂಡು ಅದಕ್ಕೆ ಸಮನಾಗಿ ವೆಚ್ಚ ಹೊಂದಿಸುವುದು ಉತ್ತಮ ಆಡಳಿತಗಾರರ ಕರ್ತವ್ಯವಾಗಿದೆ. ಮನೆಯ ಲೆಕ್ಕಾಚಾರದಲ್ಲಿ ಶಿಕ್ಷಣ, ಆರೋಗ್ಯ, ಇತರ ಅಗತ್ಯಗಳಿಗೆ ನಿಗದಿಪಡಿಸಿದಂತೆ ದೇಶದ ಬಜೆಟ್‌ನಲ್ಲಿ ವಿವಿಧ ಕ್ಷೇತ್ರಗಳಿಗೆ ಹಣ ಮೀಸಲಿಡಲಾಗುತ್ತದೆ. 2018-19ರ ಕೇಂದ್ರ ಬಜೆಟ್, ಪ್ರಸ್ತುತ ಲೋಕಸಭೆಯಲ್ಲಿ ಮಂಡಿಸಲಾದ ಚುನಾವಣಾ ಪೂರ್ವದ ಪೂರ್ಣಪ್ರಮಾಣದ ಮುಂಗಡ ಪತ್ರವಾಗಿದೆ. ಸರ್ಕಾರ ಕೃಷಿ, ಗ್ರಾಮೀಣ ಅಭಿವೃದ್ಧಿ, ಮೂಲಭೂತ ಸೌಕರ್ಯ ಮತ್ತು ಆರೋಗ್ಯ ಹೀಗೆ ವಿವಿಧ ರಂಗಗಳನ್ನು ಹಂಚಿಕೆಯಲ್ಲಿ ಗಮನದಲ್ಲಿ ಇರಿಸಿಕೊಂಡು ಆದಾಯ-ವೆಚ್ಚಗಳನ್ನು ಸಮತೋಲನದಲ್ಲಿ ಇಡಲು ಸ್ಪಷ್ಟವಾಗಿ ಯತ್ನಿಸಿದೆ.

ದೇಶದ ಬಹುಜನರು ಕೃಷಿಯನ್ನು ಅವಲಂಬಿಸಿರುವಾಗ ವ್ಯವಸಾಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ಸಹಜ. ಮುಂಗಡಪತ್ರ ಕೃಷಿ ಕ್ಷೇತ್ರಕ್ಕೆ, ಕೃಷಿ ಸುಧಾರಣೆಗೆ ಆದ್ಯ ಗಮನ ನೀಡಿದೆ. ಟೊಮೊಟೊ, ಈರುಳ್ಳಿ, ಆಲೂಗಡ್ಡೆ ಮೊದಲಾದ ಬೆಳೆಗಳ ಬೆಲೆ ಏರಿಳಿತದ ಕುಂದುಗಳನ್ನು ನಿವಾರಿಸಲು ಹಸಿರು ಕಾರ್ಯಾಚರಣೆ, ಮುಂಗಾರು ಬೆಳೆಗಳ ಬೆಂಬಲ ಬೆಲೆಯಲ್ಲಿ ಒಂದೂವರೆ ಪಟ್ಟು ಹೆಚ್ಚಳ, ಗ್ರಾಮೀಣ ಕೃಷಿ ಮಾರುಕಟ್ಟೆಗಳಲ್ಲಿ 22,000 ಗ್ರಾಮೀಣ ಹಾತ್‌ಗಳ ಮೇಲ್ದರ್ಜೆಗೆ ಕಾರ್ಯಕ್ರಮ, ರೈತರಿಗೆ ಕೃಷಿಸಾಲ ಮೊದಲಾದವು ಸೇರಿವೆ.

ರೈತ ಸಮುದಾಯಕ್ಕೆ ಸೇರಿದ ಮತ್ತೊಂದು ಕ್ಷೇತ್ರ, ಗ್ರಾಮೀಣಾಭಿವೃದ್ಧಿ ಕೂಡಾ ಮುಂಗಡ ಪತ್ರದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ನಿರ್ಮಾಣ, ಉದ್ಯೋಗಾವಕಾಶ ಸೃಷ್ಟಿಗೆ ಒತ್ತು ನೀಡಲಾಗಿದೆ. 2022ರ ವೇಳೆಗೆ ಸರ್ವರಿಗೂ ಸೂರು ಸಾಕಾರಕ್ಕಾಗಿ 2019ರ ವೇಳೆಗೆ ಒಂದು ಕೋಟಿಗೂ, ಹೆಚ್ಚು ಮನೆಗಳ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಸ್ವಚ್ಛ ಭಾರತ ಮಿಷನ್ ಅಡಿ ಹೆಚ್ಚುವರಿಯಾಗಿ ಎರಡು ಕೋಟಿ ಶೌಚಾಲಯಗಳನ್ನು ಕಟ್ಟುವ ಗುರಿ ಹೊಂದಲಾಗಿದೆ. ತಳ ಹಾಗೂ ಮಧ್ಯಮ ವರ್ಗಗಳ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಮಹಿಳಾ ಸ್ವಸಹಾಯ ಗುಂಪು, ಸೌಭಾಗ್ಯ ಮೊದಲಾದ ಕಾರ್ಯಕ್ರಮಗಳಡಿ ಹೆಚ್ಚಿನ ಗುರಿ ನಿಗದಿಪಡಿಸಲಾಗಿದೆ. ಆಹಾರ ಸಂಸ್ಕರಣೆ ಉದ್ದಿಮೆಗೆ ಕಳೆದ ಬಜೆಟ್‌ಗೆ ಹೋಲಿಸಿದಲ್ಲಿ ದುಪ್ಪಟ್ಟು ಅಂದರೆ ರೂ.1400 ಕೋಟಿ ರೂ ನಿಗದಿ, ಮೀನುಗಾರಿಕೆ ಮತ್ತು ಪಶುಸಂಗೋಪನೆಗೆ ನಿಧಿ ಸ್ಥಾಪನೆ, ರಾಷ್ಟ್ರೀಯ ಬಿದಿರು ಬೆತ್ತ-ಮಿಷನ್ನಿನ ಪುನಾರಚನೆ, ಮೊದಲಾದ ಉದ್ದೇಶಗಳು ಗ್ರಾಮೀಣ ಕ್ಷೇತ್ರದಲ್ಲಿ ರೈತರ ಆದಾಯ ಹೆಚ್ಚಿಸುವ, ಉದ್ಯಮಶೀಲತೆಗೆ ಅವಕಾಶ ಕಲ್ಪಿಸುವ ಸರ್ಕಾರದ ಆದ್ಯತೆಯ ಪ್ರತೀಕಗಳಾಗಿವೆ.

ಮುಂಗಡ ಪತ್ರದಲ್ಲಿ ಆರೋಗ್ಯ ಉಪಚಾರಕ್ಕೆ ಗಣನೀಯ ಸ್ಥಾನ ಒದಗಿಸಲಾಗಿದೆ. ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ ವಿಶ್ವದಲ್ಲೆ ಅತಿ ದೊಡ್ಡ, ಆರೋಗ್ಯ ಉಪಚಾರ ಸಂರಕ್ಷಣಾ ಯೋಜನೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆರೋಗ್ಯ ರಕ್ಷಣೆಯನ್ನು ಕೇಂದ್ರವಾಗಿಟ್ಟುಕೊಳ್ಳಲಾದ ಈ ಯೋಜನೆ 10 ಕೋಟಿ ಬಡ ಹಾಗೂ ದುರ್ಬಲ ಕುಟುಂಬಗಳಿಗೆ ವಾರ್ಷಿಕ ಐದು ಲಕ್ಷ ರೂಪಾಯಿ ಮೊತ್ತದವರೆಗೆ ಆರೋಗ್ಯ ರಕ್ಷಣೆ ಕಲ್ಪಿಸುತ್ತದೆ. ಆಯುಷ್ಮಾನ್ ಭಾರತ ಕಾರ್ಯಕ್ರಮದಡಿ 1.5 ಲಕ್ಷ ಆರೋಗ್ಯ ಮತ್ತು ಸ್ವಚ್ಛತೆಯ ಕೇಂದ್ರಗಳಿಗೆ 1200 ಕೋಟಿ ರೂ. ಗಳ ಮೂಲ ಕಾಪು ನಿಧಿ ಒದಗಿಸುವ ಪ್ರಸ್ತಾಪ ಬಜೆಟ್‌ನಲ್ಲಿದೆ.

ಬುಡಕಟ್ಟು ಜನಾಂಗದ ಎಳೆಯರಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಬುಡಕಟ್ಟು ಪರಿಸರದಲ್ಲೇ ಏಕಲವ್ಯ ಮಾದರಿ ವಸತಿ ಶಾಲೆ ಕಲ್ಪಿಸುತ್ತಿರುವುದು ಸ್ವಾಗತಾರ್ಹ ಕ್ರಮ. ಪ್ರಧಾನಮಂತ್ರಿಗಳ ಸಂಶೋಧನಾ ಫೆಲೊ ಯೋಜನೆ 1000 ಪ್ರತಿಭಾನ್ವಿತ ಬಿ.ಟೆಕ್ ವಿದ್ಯಾರ್ಥಿಗಳಿಗೆ ಐಐಟಿ, ಐಐಎಸ್‌ಸಿಗಳಲ್ಲಿ ಪಿಹೆಚ್‌ಡಿ ಮಾಡಲು ಆಕರ್ಷಕ ಫೆಲೋಶಿಪ್ ಒದಗಿಸುತ್ತದೆ.

ಹಿರಿಯ ನಾಗರಿಕರಿಗೆ ಗೌರವಯುತ ಜೀವನ ನಡೆಸಲು ಅನುಕೂಲ ಕಲ್ಪಿಸುವಂತೆ ಬ್ಯಾಂಕ್ ಮತ್ತು ಅಂಚೆ ಕಚೇರಿಗಳ ಠೇವಣಿ ಮೇಲಿನ ಬಡ್ಡಿಗಾಗಿ ಕರ ವಿನಾಯ್ತಿಯನ್ನು ಈಗಿನ 10,000 ರೂದಿಂದ 50,000 ರೂಗಳಿಗೆ ಏರಿಸಲಾಗಿದೆ. ಆರೋಗ್ಯ ವಿಮಾ ಪ್ರೀಮಿಯಂ ಮತ್ತು ವೈದ್ಯಕೀಯ ವೆಚ್ಚ ಕುರಿತಾದ ಕಡಿತ ಮಿತಿಯನ್ನು ರೂ. 30,000 ದಿಂದ ರೂ. 50,000ಕ್ಕೆ ಹೆಚ್ಚಿಸಲಾಗಿದೆ. ಪ್ರಧಾನಮಂತ್ರಿ ವಯ ವಂದನ ಯೋಜನೆಯ ಶೇ.8ರ ಫಲ ಸಂದಾಯ ಖಾತ್ರಿಯಡಿ ಹೂಡಿಕೆ ಮೊತ್ತವನ್ನು ಹಿಂದಿನ 7.5 ಲಕ್ಷ ರೂದಿಂದ ರೂ. 15 ಲಕ್ಷ ರೂವರೆಗೇರಿಸಿ, ಮಾರ್ಚ್ 2020 ರವರೆಗೆ ವಿಸ್ತರಿಸಲಾಗಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳನ್ನು ಪ್ರಗತಿಯ ಚಾಲಕಶಕ್ತಿಗಳೆಂದು ಪರಿಗಣಿಸಿ, ಈ ಕ್ಷೇತ್ರದ ಸಾಲ ಬೆಂಬಲ, ಬಂಡವಾಳ, ಬಡ್ಡಿ ಸಹಾಯ ಧನ ಮತ್ತು ಆವಿಷ್ಕಾರ ಕಾರ್ಯಕ್ರಮಗಳಿಗಾಗಿ 3794 ಕೋಟಿ ರೂ. ನಿಗದಿಮಾಡಲಾಗಿದೆ. ಇದು ಯುವ ಜನತೆಗೆ ಕ್ಷಿಪ್ರವಾಗಿ ಉದ್ಯೋಗ ಸೃಷ್ಟಿ ಮಾಡುತ್ತದೆ ಹಾಗೂ ಸ್ವ-ಉದ್ಯೋಗಕ್ಕೆ ಅವಕಾಶ ಕಲ್ಪಿಸುತ್ತದೆ.

ದೇಶದ ನಾಗರಿಕರ ಕ್ಷೇಮ ಜೀವನಕ್ಕಾಗಿ ಸರ್ಕಾರ ಸುಲಭ ವ್ಯಾಪಾರಕ್ಕೂ ಒತ್ತು ನೀಡಿದೆ. ಇವೆಲ್ಲವುಗಳಲ್ಲಿ ಜನರ ಜೀವನ ತಲುಪುವ ಮೂಲಕ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಶ್ರಮಿಸುವ ಕಳಕಳಿ ಅಡಗಿದೆ. ❑

# ಮುನ್ನಡೆಯತ್ತ ಆರ್ಥಿಕತೆ

* ಡಾ. ಹಸ್ಮುಖ್ ಅಧಿಯಾ



ಇದು ಅಭಿವೃದ್ಧಿ ಪರವಾದ, ಬಜೆಟ್. ಈ ಬಜೆಟ್ ಗ್ರಾಮೀಣ ಆರ್ಥಿಕತೆಗೆ ಪುನರುಜ್ಜೀವನ ನೀಡಲಿದೆ ಮತ್ತು ಇದು ಹೊಸ ಉದ್ಯೋಗಗಳ ಸೃಷ್ಟಿಗೆ ಬುನಾದಿ ಹಾಕಲಿದೆ.

ಕೇಂದ್ರ ಬಜೆಟ್ 2018–19 ಹಲವು ಅಂಶಗಳಿಂದಾಗಿ ವಿಭಿನ್ನವಾಗಿದೆ. ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ನೋಟು ಅಮಾನ್ಯೀಕರಣ ಮತ್ತು ಸರಕು ಮತ್ತು ಸೇವಾ ತೆರಿಗೆ – ಜಿಎಸ್‌ಟಿ ಜಾರಿಯಂತಹ ಎರಡು ಪ್ರಮುಖ ಸಾಂಸ್ಥಿಕ ಸುಧಾರಣೆಗಳನ್ನು ಕೈಗೊಂಡ ನಂತರ ಆಗುತ್ತಿರುವ ಸಕಾರಾತ್ಮಕ ಪರಿಣಾಮಗಳು ಆರ್ಥಿಕತೆಯಲ್ಲಿ ಕಾಣುತ್ತಿರುವ ಈ ಹೊತ್ತಿನಲ್ಲಿ ಬಜೆಟ್ ಮಂಡಿಸಲಾಗಿದೆ. ಆರ್ಥಿಕ ಚಟುವಟಿಕೆಗಳ ಸೂಚ್ಯಂಕಗಳೆಲ್ಲ ಏರುಮುಖಿಯಾಗಿರುವ ಈ ಸಂದರ್ಭದಲ್ಲಿ, ಭಾರತದಲ್ಲಿ ಮುಂದಿನ ವರ್ಷಗಳಲ್ಲಿ ವಾರ್ಷಿಕ ಶೇಕಡ 8ರಷ್ಟು ಪ್ರಗತಿ ಸಾಧಿಸಲು ಅನುಕೂಲಕರ ಆರ್ಥಿಕ ವಾತಾವರಣ ನಿರ್ಮಿಸುವ ಉದ್ದೇಶವನ್ನು ಬಜೆಟ್ ಹೊಂದಿದೆ.

ಈ ಬಾರಿಯ ಬಜೆಟ್, ಇತರೆ ಬಜೆಟ್‌ಗಳಿಗೆ ಹೋಲಿಸಿದರೆ ಹಲವು ಅಂಶಗಳಿಂದ ಭಿನ್ನ ರೀತಿಯಲ್ಲಿ ಕೂಡಿದೆ. ಬಜೆಟ್‌ನಲ್ಲಿ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ ಮೇಲೆ ಹೆಚ್ಚಿನ ಹಣ ವ್ಯಯಿಸಲು ಗಮನಹರಿಸಲಾಗಿದ್ದು, ಆ ಮೂಲಕ ರೈತರಿಗೆ ತಮ್ಮ ಆದಾಯ ಹೆಚ್ಚಳಕ್ಕೆ ಸಹಾಯ ಮಾಡುವುದು ಹಾಗೂ ಸರಕು ಮತ್ತು ಸೇವೆಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಸುವ ಜೊತೆಗೆ ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಅಂಶವಿದೆ. ಬಜೆಟ್ ಅನುದಾನದಲ್ಲಿ ಗ್ರಾಮೀಣ ಜೀವನೋಪಾಯ ಕಾರ್ಯಕ್ರಮಕ್ಕೆ ಹೆಚ್ಚಿನ ಹಣ ಮೀಸಲಿಡಲಾಗಿದೆ. ಅದರಲ್ಲೂ ವಿಶೇಷವಾಗಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಹಣ ಒದಗಿಸಿ, ಅವುಗಳಿಗೆ ಆವರ್ತ ನಿಧಿ ಒದಗಿಸುವ ಜತೆಗೆ ಬ್ಯಾಂಕ್ ಸಾಲದ ಮೂಲಕ ನೆರವು ನೀಡಲಾಗುವುದು. ಆಹಾರ ಸಂಸ್ಕರಣಾ ಉದ್ಯಮದ ಜತೆಗೆ ಪಶುಸಂಗೋಪನಾ ವಲಯಕ್ಕೂ ಕೂಡ ಬಜೆಟ್‌ನಲ್ಲಿ ಅನುದಾನವನ್ನು ಗಮನಾರ್ಹವಾಗಿ ಏರಿಕೆ ಮಾಡಲಾಗಿದೆ. ಇದರಿಂದಾಗಿ ತೋಟಗಾರಿಕಾ ವಲಯದ ಹಲವು ಚಟುವಟಿಕೆಗಳಿಗೆ ನೆರವಾಗುವುದಲ್ಲದೆ, ಪ್ರಾಥಮಿಕ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಲ್ಲೂ ಸಹ ಪ್ರತಿಫಲ ನಿರೀಕ್ಷಿಸಬಹುದಾಗಿದೆ. ಟೊಮೆಟೊ, ಈರುಳ್ಳಿ, ಆಲೂಗಡ್ಡೆ (ಟಿಒಪಿ) ಯಂತಹ ಪ್ರಮುಖ ಮೂರು ತರಕಾರಿ ಬೆಳೆಗಳ ಬೆಲೆಯಲ್ಲಿನ ಏರುಪೇರನ್ನು, ಅಸಮಾನತೆಯನ್ನು ನಿವಾರಿಸಲು 'ಹಸಿರು ಕಾರ್ಯಾಚರಣೆ' ಹೆಸರಿನ ಹೊಸ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಹಾಲು ಉತ್ಪಾದನಾ ವಲಯದಲ್ಲಿ ಮಾಡಿದ 'ಕ್ಷೀರಧಾರೆ ಕಾರ್ಯಾಚರಣೆ' ಮಾದರಿಯಲ್ಲೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾಗಿ ಪ್ರಕಟಿಸಲಾಗಿದೆ. ಈ 'ಹಸಿರು ಕಾರ್ಯಾಚರಣೆ' ಯೋಜನೆಗೆ ಆರಂಭಿಕವಾಗಿ 500 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ. ಇದರಡಿ ಕೃಷಿ ಉತ್ಪನ್ನಗಳನ್ನು ಉತ್ಪಾದನಾ ಕೇಂದ್ರಗಳಿಂದ ಗ್ರಾಹಕರಿಗೆ ತಲುಪಿಸುವ ಕೇಂದ್ರಗಳವರೆಗೆ ಸಮರ್ಪಕ ಹಾಗೂ ಸೂಕ್ತ ರೀತಿಯ ಸಾಗಾಣಿಕೆಗೆ ನೆರವು ನೀಡಲಾಗುವುದು. ರೈತ ಉತ್ಪಾದಕರ ಸಂಘ (ಎಫ್‌ಪಿಓ) ಸಂಪರ್ಕ ಜಾಲದ ನೆರವಿನಿಂದ ಅಗತ್ಯವಿರುವ ಕಡೆಗಳಲ್ಲಿ ಹೊಸ ಗೋದಾಮು ಮತ್ತು ಸಂಸ್ಕರಣಾ ಸಾಮರ್ಥ್ಯವನ್ನು ಈ ಬೆಳೆಗಳಿಗೆ ಸೃಷ್ಟಿಸಿ ಕೊಡಲಾಗುವುದು. ಇದಲ್ಲದೆ, ಬಜೆಟ್‌ನಲ್ಲಿ ನೂರು ಕೋಟಿ

* ಹಣಕಾಸು ಕಾರ್ಯದರ್ಶಿ, ಭಾರತ ಸರ್ಕಾರ.



ರೂಪಾಯಿಗಳವರೆಗಿನ ವಹಿವಾಟು ನಡೆಸುವ ರೈತ ಉತ್ಪಾದನಾ ಕಂಪನಿಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ ನೀಡುವುದಾಗಿ ಪ್ರಕಟಿಸಲಾಗಿದೆ. ಈ ಘೋಷಣೆ ಕೃಷಿ ಸಂಸ್ಕರಣಾ ವಲಯದಲ್ಲಿ ವೃತ್ತಿಪರತೆಯನ್ನು ಉತ್ತೇಜಿಸಲು ನೆರವಾಗುತ್ತದೆ. ಸರ್ಕಾರದ ಬಜೆಟ್ ಪ್ರಸ್ತಾವಗಳಲ್ಲಿ ಗ್ರಾಮೀಣ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಅದರಡಿ 321 ಕೋಟಿ ಮಾನವ ದಿನ ಉದ್ಯೋಗ ಸೃಷ್ಟಿ, 51 ಲಕ್ಷ ಹೊಸ ಗ್ರಾಮೀಣ ಮನೆಗಳ ನಿರ್ಮಾಣ, 1.88 ಕೋಟಿ ಶೌಚಾಲಯ ನಿರ್ಮಾಣ, 3.17 ಲಕ್ಷ ಕಿ.ಮೀ. ರಸ್ತೆ ಅಭಿವೃದ್ಧಿ, 1.75 ಕೋಟಿ ಮನೆಗಳಿಗೆ ಹೊಸದಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವುದು ಸೇರಿದಂತೆ ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ.

2018–19ನೇ ಸಾಲಿನ ಕೇಂದ್ರ ಬಜೆಟ್‌ನ ಎರಡನೇ ಅತ್ಯಂತ ಪ್ರಮುಖ ಅಂಶ ಅಥವಾ ಭಾಗವೆಂದರೆ ಆರೋಗ್ಯ, ಶಿಕ್ಷಣ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದು. ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಒತ್ತು ನೀಡುವ ಜತೆಗೆ ಶಿಕ್ಷಕರ ಗುಣಮಟ್ಟ ಹೆಚ್ಚಳ ಮತ್ತು ಪೂರಕ ಕಲಿಕೆಗೆ ಹಾಗೂ ಡಿಜಿಟಲ್ ತಂತ್ರಜ್ಞಾನದ ಬಳಕೆಗೆ ಗಮನಹರಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಗಳಂತಹ ಮಾದರಿ ಶ್ರೇಷ್ಠ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯ ಯೋಜನೆಯೂ ಇದೆ. ಬಹುತೇಕ ಬಜೆಟ್ ಹೊರಗೆ ಇದಕ್ಕೆ ಅನುದಾನ ಕಲ್ಪಿಸಲಾಗುವುದು.

ಆರೋಗ್ಯ ವಲಯದಲ್ಲಿ ಮಹತ್ವಾಕಾಂಕ್ಷೆಯ 'ಆರೋಗ್ಯ ಭಾರತ' ಯೋಜನೆ ಪ್ರಕಟಿಸಲಾಗಿದ್ದು, ಇದರಲ್ಲಿ ಪ್ರಾಥಮಿಕ ಆರೋಗ್ಯ ರಕ್ಷಣೆಗೆ ಸೌಖ್ಯ ಕೇಂದ್ರಗಳನ್ನು ತೆರೆಯಲಾಗುವುದು. ಪ್ರಾಥಮಿಕ ಮತ್ತು ಇನ್ನಿತರ ಕಾಯಿಲೆಗಳಿಗೆ ಪ್ರತಿಯೊಂದು ಬಿಪಿಎಲ್ ಕುಟುಂಬಗಳಿಗೂ ಸುಮಾರು 5 ಲಕ್ಷದವರೆಗೆ ಆರೋಗ್ಯ ರಕ್ಷಣಾ ವಿಮಾ ಯೋಜನೆ ಕಲ್ಪಿಸಲಾಗುವುದು. ಈ ಮಹತ್ವಾಕಾಂಕ್ಷೆ ಯೋಜನೆಯಿಂದ ಸುಮಾರು 10 ಕೋಟಿ ಕುಟುಂಬಗಳಿಗೆ(ಅಂದರೆ ಸುಮಾರು 50 ಕೋಟಿ ಜನರಿಗೆ) ಅನುಕೂಲವಾಗಲಿದೆ. ಅವರು ಒಂದು ಪೈಸೆ ಹಣ ವ್ಯಯಮಾಡದೆ, ಗೊತ್ತು ಮಾಡಿದ ಖಾಸಗಿ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವಾರ್ಷಿಕ ರೂ. 5 ಲಕ್ಷದವರೆಗೆ ಶಸ್ತ್ರ ಚಿಕಿತ್ಸೆ ಹಾಗೂ ಇನ್ನಿತರ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ. ಈ ಕಾರ್ಯಕ್ರಮ ಎಲ್ಲ ಬಡವರಿಗೆ ಕ್ಯಾನ್ಸರ್, ಹೃದಯ ಕಾಯಿಲೆ ಅಥವಾ ಕಿಡ್ನಿ ವೈಫಲ್ಯ ಮತ್ತಿತರ ಪ್ರಮುಖ ಸಂಕಷ್ಟದ ಸಂದರ್ಭಗಳಲ್ಲಿ ಸರ್ಕಾರ ಅಂತಹವರ ಆರೋಗ್ಯ ರಕ್ಷಣೆ ಅಗತ್ಯತೆಗಳ ಬಗ್ಗೆ ಕಾಳಜಿ ವಹಿಸುತ್ತದೆ ಎಂಬ ಭರವಸೆ ನೀಡುತ್ತದೆ.

ಉದ್ಯೋಗ ಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುವ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಸಹಾಯ ನೀಡುವ ಹಲವು ಕಾರ್ಯಕ್ರಮಗಳನ್ನು 2018–19ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಹೊಸದಾಗಿ ಉದ್ಯೋಗಗಳು ಸೃಷ್ಟಿಯಾದರೆ ಅದರಲ್ಲಿ ನೌಕರರಿಗೆ ಉದ್ಯೋಗದಾತರು ನೀಡುವ ಶೇಕಡ 12 ರ ವೇತನ ಕೊಡುಗೆ ಸರ್ಕಾರವೇ ಭರಿಸುವುದಾಗಿ ಘೋಷಿಸಲಾಗಿದೆ.

ಇದಲ್ಲದೆ ಆದಾಯ ತೆರಿಗೆ ಕಾನೂನಿನಡಿ ಹೊಸ ಉದ್ಯೋಗ ಸೃಷ್ಟಿಸಿದಾಗ ಶೇ. 30ರಷ್ಟು ವೇತನಗಳಿಗೆ ವಿನಾಯಿತಿ ನೀಡಲಾಗುವುದು. ಬಜೆಟ್‌ನಲ್ಲಿ ಜವಳಿ ಮತ್ತು ಚರ್ಮೋದ್ಯಮ ವಲಯಗಳ ಉತ್ತೇಜನಕ್ಕೂ ಹಲವು ಕ್ರಮ ಪ್ರಕಟಿಸಲಾಗಿದೆ. ಮೂಲಸೌಕರ್ಯ ವಲಯದಲ್ಲಿ ಕೇಂದ್ರ ಸರ್ಕಾರ ಮಹತ್ವದ ಯೋಜನೆಯನ್ನು ಘೋಷಿಸಿದ್ದು, ಹಾಲಿ ಇರುವುದರ ಜತೆಗೆ ಹೊಸ ರಸ್ತೆ, ರೈಲು ಮತ್ತು ನಗರ ಮೂಲಸೌಕರ್ಯ ಯೋಜನೆಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಸಂಪನ್ಮೂಲ ಮತ್ತು ಸಾಲ ಸೌಲಭ್ಯ ಪಡೆಯುವ ಕ್ರಮಗಳಿವೆ. 2017–18ರಲ್ಲಿ ಮೂಲಸೌಕರ್ಯ ವಲಯಕ್ಕೆ ಒದಗಿಸಿದ ವೆಚ್ಚದ ಅಂದಾಜು 4.94 ಲಕ್ಷ ಕೋಟಿ ರೂ. ಆಗಿದ್ದರೆ, 2018–19ನೇ ಸಾಲಿನಲ್ಲಿ ಆ ಪ್ರಮಾಣ 5.97 ಲಕ್ಷ ಕೋಟಿ ಆಗಲಿದೆ.

ಜಿಎಸ್‌ಟಿ ಅನುಷ್ಠಾನದ ನಂತರ ಆಗುತ್ತಿರುವ ವರ್ಗಾವಣೆಯ ಪರಿಣಾಮ ಮತ್ತು ಅಪರೋಕ್ಷ ತೆರಿಗೆ ಸಂಗ್ರಹದಲ್ಲಿನ ಅನಿಶ್ಚಿತತೆಯ ನಡುವೆಯೂ ಕೇಂದ್ರ ಬಜೆಟ್‌ನಲ್ಲಿ ವಿತ್ತೀಯ ಸ್ಥಿರತೆ ಮತ್ತು ಆರ್ಥಿಕ ಪ್ರಗತಿಗೆ ಉತ್ತಮ ನೀಲನಕ್ಷೆ ಹಾಕಲಾಗಿದೆ. 2017–18ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ. 3.2ರಿಂದ 3.5ಕ್ಕೆ ಪರಿಷ್ಕೃತಗೊಳಿಸಲಾಗಿತ್ತು ಮತ್ತು ಮುಂದಿನ ವರ್ಷಕ್ಕೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇಕಡ 3.3ಕ್ಕೆ ನಿಗದಿಪಡಿಸಲಾಗಿದೆ. ಮುಂಬರುವ ಎರಡು ವರ್ಷಗಳಲ್ಲಿ (ಸಾಧ್ಯವಾದರೆ ಒಂದೇ ವರ್ಷದಲ್ಲಿ) ವಿತ್ತೀಯ ಕೊರತೆಯನ್ನು ಶೇಕಡ 3ಕ್ಕೆ ಇಳಿಸುವ ಯೋಜನೆ ಇದೆ. ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿ ಮತ್ತಿತರ ಉತ್ತಮ ಕ್ರಮಗಳಿಂದಾಗಿ 2018–19ನೇ ಸಾಲಿನಲ್ಲಿ ಆದಾಯ ಸಂಗ್ರಹದಲ್ಲಿ ಭಾರೀ ಏರಿಕೆ ನಿರೀಕ್ಷಿಸಲಾಗಿದ್ದು, ಇದರಿಂದಾಗಿ ಮುಂದಿನ ಆರ್ಥಿಕ ವರ್ಷ ನಿರೀಕ್ಷೆಗೂ ಮೀರಿ ಆದಾಯ ಸಂಗ್ರಹವಾಗಿ, ಪರಿಸ್ಥಿತಿ ಸುಧಾರಿಸುವ ಸಾಧ್ಯತೆಗಳಿವೆ. ಇದು ಸಾಧ್ಯವಾದರೆ ಸರ್ಕಾರಿ ಯೋಜನೆಗಳಿಗೆ ಹೆಚ್ಚಿನ ಹಣ ಹರಿದುಬರಲಿದೆ.

ಒಟ್ಟಾರೆ ಇದು ಅಭಿವೃದ್ಧಿ ಪರವಾದ, ಬಜೆಟ್. ಈ ಬಜೆಟ್ ಗ್ರಾಮೀಣ ಆರ್ಥಿಕತೆಗೆ ಪುನರುಜ್ಜೀವನ ನೀಡಲಿದೆ ಮತ್ತು ಇದು ಹೊಸ ಉದ್ಯೋಗಗಳ ಸೃಷ್ಟಿಗೆ ಬುನಾದಿ ಹಾಕಲಿದೆ. ❑

# ಹಣಕಾಸು ವ್ಯವಸ್ಥೆಯ ಪುನಶ್ಚೇತನ

* ಪ್ರೊ. ಜೆ. ಡಿ. ಅಗರ್‌ವಾಲ್



**2018-19ರ ಬಜೆಟ್ ಜನಪರ, ಪ್ರಗತಿದಾಯಕ, ಸಮತೋಲಿತ ಮತ್ತು ವಿಶಿಷ್ಟವಾದದ್ದಾಗಿದೆ. ಇದು ಎಲ್ಲಾ ಜನರ ಅಗತ್ಯತೆಗಳನ್ನು ಈಡೇರಿಸುವಂಥದ್ದಾಗಿದೆ. ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಉದ್ಯೋಗ ಮತ್ತು ಹೂಡಿಕೆ ಮೇಲೆ ಹೆಚ್ಚು ಗಮನಹರಿಸಿರುವುದರಿಂದ ಇದು ಪ್ರಗತಿದಾಯಕ ಬಜೆಟ್ ಎಂಬುದನ್ನು ಸಾಬೀತು ಮಾಡುತ್ತದೆ.**

ಈ ವರ್ಷದ ಬಜೆಟ್ ಅನ್ನು ಆರ್ಥಿಕತೆಯ ಕುಸಿತ, ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಬೇಕಾಗಿದೆ. ಪ್ರಸ್ತುತ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ ತೆಗೆದುಕೊಂಡ ಹಲವಾರು ಸುಧಾರಣಾ ಕ್ರಮಗಳಿಂದಾಗಿ 2017–18ರಲ್ಲಿ ದೇಶದ ವಾಸ್ತವಿಕ ಜಿಡಿಪಿ ದರ ಶೇ.6.75ಕ್ಕೆ ಬಂದು ತಲುಪಿದೆ. 2018–19ಕ್ಕೆ ಇದೇ ಜಿಡಿಪಿ ಶೇ.7.5ಕ್ಕೆ ಏರಿಕೆ ಕಾಣುವ ನಿರೀಕ್ಷೆಯೂ ಇದೆ. 2016ರ ನವೆಂಬರ್‌ನಲ್ಲಿ ತೆಗೆದುಕೊಂಡ ನೋಟು ಅಮಾನ್ಯ ನಿರ್ಧಾರ, 2017ರ ಜು.1 ರಂದು ಜಾರಿ ಮಾಡಿದ ಸರಕು ಮತ್ತು ಸೇವಾ ತೆರಿಗೆ, ಹೊಸ ದಿವಾಳಿತನ ಸಂಹಿತೆ, ಆಧಾರ್ ಕಾರ್ಡ್‌ನ ಜಾರಿ, ಎಫ್‌ಡಿಐನಲ್ಲಿ ಸುಧಾರಣೆ, ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಗಟ್ಟಿಗೊಳಿಸುವ ಸಲುವಾಗಿ 88 ಸಾವಿರ ಕೋಟಿ ರೂ.ಗಳ ಮರುಬಂಡವಾಳೀಕರಣ ಪ್ಯಾಕೇಜ್ ನಿರ್ಧಾರಗಳಿಂದಾಗಿ ದ್ವಿತೀಯ ಅವಧಿಯಲ್ಲಿ ಆರ್ಥಿಕತೆ ಪ್ರಗತಿಯತ್ತ ಸಾಗಿತು. ಶೇ.7.2ರಷ್ಟು ದೃಢವಾದ ಆರ್ಥಿಕ ಪ್ರಗತಿ, ಸ್ಥಿರ ಹಣದುಬ್ಬರ (ಕಳೆದ ಆರು ವರ್ಷಗಳಲ್ಲೇ ಕಡಿಮೆ) ವಿತ್ತ ಕ್ರೋಢೀಕರಣ, ಬೃಹತ್ ಆರ್ಥಿಕತೆಯ ಸ್ಥಿರತೆ ಮತ್ತು ದೃಢ ವಿದೇಶಿ ವಿನಿಮಯ ಮೀಸಲು, ಅಂದರೆ 409.4 ಬಿಲಿಯನ್ ಡಾಲರ್ ನಿಂದಾಗಿ ಪ್ರಗತಿ ದರವು ಶೇ.14.1ಕ್ಕೆ ಬಂದು ನಿಂತಿತು. ಅಲ್ಲದೆ ಬಂಡವಾಳ ವಾಪಸಾತಿಯಿಂದಾಗಿ ಒಂದು ಲಕ್ಷ ಕೋಟಿ ರೂ.ಗಳಷ್ಟು ಉಳಿತಾಯವೂ ಆಯಿತು. ಇದರ ಜತೆಗೆ ನೇರ ನಗದು ವರ್ಗಾವಣೆ ನೀತಿಯಿಂದಾಗಿ ಸಬ್ಸಿಡಿ ಸೋರಿಕೆ ತಡೆಯಾಗಿ 65,000 ಕೋಟಿಯಷ್ಟು ಹಣ ಉಳಿಯಿತು. ಇವೆಲ್ಲವೂ ಭಾರತದ ಆರ್ಥಿಕತೆ ಸ್ಥಿರವಾಗಿ ಉಳಿಯಲು ಕಾರಣವಾದವು. ಭಾರತದ ಆರ್ಥಿಕತೆ ಇಡೀ ಜಗತ್ತಿನಲ್ಲೇ ಹೆಚ್ಚು ಸಾಧನೆ ಮಾಡುತ್ತಿರುವಂಥದ್ದಾಗಿದೆ. ಇದರ ಜತೆಗೆ ನೋಟು ಅಮಾನ್ಯ ಮತ್ತು ಜಿಎಸ್‌ಟಿ ಜಾರಿ ವೇಳೆ ಆದ ತೊಂದರೆಗಳು ರಚನಾತ್ಮಕ ಸುಧಾರಣೆಗೆ ಕೆಲವೊಂದು ಪೆಟ್ಟು ನೀಡಿದ್ದು ಹೌದು. ಆದರೆ ಇವು ಆರ್ಥಿಕ ಪ್ರಗತಿ ಮೇಲೆ ಭಾರಿ ಪ್ರಮಾಣದ ಪೆಟ್ಟು ಕೊಡಲಿಲ್ಲವೆಂಬುದು ಸಮಾಧಾನದ ವಿಚಾರ. ಹಾಗೆಯೇ ಸಮತೋಲನವನ್ನೂ ಕಾಯ್ದುಕೊಳ್ಳಲಾಗಿದೆ.

ಆದರೂ, ದೇಶದ ಆರ್ಥಿಕತೆ ಮೇಲೆ ಕೆಲವೊಂದು ವಲಯಗಳು ಸವಾಲೊಡ್ಡಿದ್ದು ಸುಳ್ಳಲ್ಲ. 2017–18ರಲ್ಲಿ ಕೃಷಿ ವಲಯದಲ್ಲಿ ಶೇ.2.1ರಷ್ಟು ಪ್ರಗತಿದರ ಕಂಡುಬಂದಿದೆ. ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ಬಹಳಷ್ಟು ಸಾಧನೆಯಾಗಿದೆ. ಅಂದರೆ 2016–17ರಲ್ಲಿ 275.7 ಮಿಲಿಯನ್ ಟನ್‌ನಷ್ಟು ಆಹಾರ ಪದಾರ್ಥಗಳ ಉತ್ಪಾದನೆ ಮತ್ತು 300 ಮಿಲಿಯನ್ ಟನ್‌ನಷ್ಟು ಹಣ್ಣು ಮತ್ತು ತರಕಾರಿಯ ಉತ್ಪಾದನೆಯಾಗಿದೆ. ಅಲ್ಲದೆ ಕೃಷಿಯಲ್ಲಿ ಹೆಚ್ಚಿನ ಆದಾಯ ಬರಬೇಕು, ಹೊಲಗಳಲ್ಲಿ ಉತ್ಪಾದನೆ ಹೆಚ್ಚಬೇಕು, ಕೃಷಿ ಸ್ಥಿತಿಸ್ಥಾಪಕತ್ವ ಹೆಚ್ಚಬೇಕು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ವಿಸ್ತರಣೆಯಾಗಬೇಕು, ಉದ್ಯೋಗಾವಕಾಶಗಳು ಹೆಚ್ಚೆಚ್ಚು ಸೃಷ್ಟಿಯಾಗಬೇಕು, ಹೂಡಿಕೆಯಲ್ಲಿ ಹೆಚ್ಚಳವಾಗಬೇಕು, ಹಾಗೆಯೇ ರಫ್ತು ಕೂಡ ಮೇಲುಗತಿಯಲ್ಲಿ ಹೋಗಬೇಕು, ಬಡತನ ನಿವಾರಣೆಯಾಗಬೇಕು, ಮಹಿಳಾ ಸ್ವಾವಲಂಬನೆ ಆಗಬೇಕು, ಗ್ರಾಮೀಣ

* ಮುಖ್ಯಸ್ಥರು, ಹಣಕಾಸು ವಿಭಾಗ, ಭಾರತೀಯ ಹಣಕಾಸು ಸಂಸ್ಥೆ, ಗ್ರೇಟರ್ ನೋಯ್ಡಾ. E-mail : jda@iif.edu

ಪ್ರದೇಶಗಳಿಗೂ ಕುಡಿಯುವ ನೀರು ಮತ್ತು ವಿದ್ಯುತ್ ಸೌಲಭ್ಯ ನೀಡಬೇಕು ಎಂಬುದು ಪ್ರಧಾನಿಗಳ ಆಶಯವಾಗಿದೆ. ಅಲ್ಲದೆ, ಈ ಸರ್ಕಾರಕ್ಕಿರುವ ಮತ್ತೊಂದು ಸವಾಲೆಂದರೆ ಅದು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿರುವ ಬೃಹದಾಕಾರದ ಅನುತ್ಪಾದಕ ಸಾಲ ಮತ್ತು ಬ್ಯಾಂಕುಗಳ ಮರುಬಂಡವಾಳ ಹೂಡಿಕೆ.

ಪ್ರಸ್ತುತ ಬಜೆಟ್ ರಚನಾತ್ಮಕ ಸುಧಾರಣೆಗಳ ಹಿನ್ನೆಲೆಯಲ್ಲೇ ಮೂಡಿಬಂದಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರ ಆರ್ಥಿಕ ಸುಧಾರಣೆಯಲ್ಲಿ ಎದುರಿಸಿದ ಸವಾಲುಗಳು ಮತ್ತು ಸಾಧನೆಗಳನ್ನು ಸಮ್ಮಿಳಿತಗೊಳಿಸಿಕೊಂಡಿದೆ. ಅಲ್ಲದೆ ಈ ಬಜೆಟ್‌ಗೆ ಪ್ರಧಾನಿ ಅವರ ಮಿಷನ್ ಆದ ಕೃಷಿಯ ಸಾಮರ್ಥ್ಯ ಹೆಚ್ಚಳ, ಗ್ರಾಮೀಣ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ಉದ್ಯೋಗ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ವಲಯಗಳ ಆದ್ಯತೆಯ ಬೆಂಬಲವೂ ಸಿಕ್ಕಿದೆ.

### 1. ಆರ್ಥಿಕ ಪ್ರಗತಿ ಮತ್ತು ವಿತ್ತೀಯ ಬಲವರ್ಧನೆ

ಭಾರತ 2.5 ಟ್ರಿಲಿಯನ್ ಆರ್ಥಿಕತೆಗೆ ಮುಟ್ಟಿದ್ದನ್ನು ಈ ಬಾರಿಯ ಬಜೆಟ್ ತೋರಿಸಿದೆ. ವಿತ್ತ ಸಚಿವರು ಶೇ.8ರ ಜಿಡಿಪಿ ಗುರಿ ಹೊಂದಿದ್ದು 2018–19ರಲ್ಲಿ ಶೇ.7.2 ರಿಂದ ಶೇ.7.4ಕ್ಕೆ ತಲುಪುವ ನಿರೀಕ್ಷೆ ಹೊಂದಿದ್ದಾರೆ. ಜತೆಗೆ ಭಾರತ 2018–19ರಲ್ಲೂ ಇಡೀ ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬುದನ್ನು ತೋರಿಸುತ್ತಿದ್ದು, ಜಗತ್ತಿನ ಆರ್ಥಿಕತೆಗೂ ತನ್ನದೇ ಆದ ಧನಾತ್ಮಕ ಕೊಡುಗೆ ನೀಡುತ್ತಾ ಬಂದಿದೆ. ಅಲ್ಲದೆ ವಿತ್ತ ಸಚಿವರು ಕೃಷಿ ಮತ್ತು ಕೈಗಾರಿಕಾ ವಲಯದಲ್ಲಿ ಮೇಕ್ ಇನ್ ಇಂಡಿಯಾ ಮಿಷನ್ ಮೂಲಕ ಅಪೇಕ್ಷಣೀಯ ಪ್ರಗತಿ ಸಾಧಿಸಲು ಬೇಕಾದ ದಾರಿ ಹುಡುಕಿಕೊಟ್ಟಿದ್ದಾರೆ.

ದೇಶದ ವಿತ್ತೀಯ ಕೊರತೆ ಜಿಡಿಪಿಯ ಶೇ.3.2ರಷ್ಟಕ್ಕೆ ಉಳಿದುಕೊಂಡದ್ದು ವಿತ್ತ ಸಚಿವರ ಆತಂಕಕ್ಕೆ ಕಾರಣ. 2010ರಲ್ಲಿ ಶೇ.6.4ರಷ್ಟು ಇದ್ದ ವಿತ್ತೀಯ ಕೊರತೆಯನ್ನು ಈಗ ಶೇ.3.2ಕ್ಕೆ ಇಳಿಕೆ ಮಾಡಿರುವುದು ಸುಲಭವಾದ ಸಾಧನೆಯೇನಲ್ಲ. ಅಲ್ಲದೆ ವಿತ್ತೀಯ ಕೊರತೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಸಾಗಿದ್ದರಿಂದಲೇ ಕಳೆದ ವರ್ಷ ಭಾರತದ ಒಪ್ಪಿಕೊಳ್ಳುವ ರೇಟಿಂಗ್ ಏರಿಕೆಯಾದದ್ದು ಸುಳ್ಳೇನಲ್ಲ. ಸಾರ್ವಭೌಮ ರೇಟಿಂಗ್ ಮತ್ತು ಈಸ್ ಆಫ್ ಡೂಯಿಂಗ್ ಬಿಸಿನೆಸ್, ಚಿಲ್ಲರೆ ಮಾರುಕಟ್ಟೆಯಲ್ಲಿ ಶೇ.100ರಷ್ಟು ವಿದೇಶಿ ಹೂಡಿಕೆ ಹಾಗೂ ಇತರೆ ರಚನಾತ್ಮಕ ಸುಧಾರಣಾ ನೀತಿಯಿಂದಾಗಿ ನಿರೀಕ್ಷಿತ ಪ್ರಗತಿ ದರ ಸಾಧಿಸಲು ಸಾಧ್ಯವಾಯಿತು.

ಗ್ರಾಮೀಣ ಪ್ರದೇಶದ ಜನರ ಜೀವನಮಟ್ಟ ಸುಧಾರಣೆಗಾಗಿ 14.34 ಲಕ್ಷ ಕೋಟಿ ರೂ. ಅನುದಾನ ನೀಡಿದ್ದು ಅತ್ಯುತ್ತಮ ಬೆಳವಣಿಗೆ. ಹಾಗೆಯೇ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಹೊಸ ಯೋಜನೆ ಪ್ರಕಟಿಸಿದ್ದು ಧನಾತ್ಮಕ ಅಂಶವಾಗಿದೆಯಲ್ಲದೇ, ಗರೀಬಿ ಹಟಾವೊ ಮಿಷನ್ ಗುರಿ ಸಾಧಿಸಲು ಇವು ಅನುಕೂಲಕರವಾಗಿವೆ ಕೂಡ. ಅಲ್ಲದೆ ರೈತರು, ಬಡವರು ಮತ್ತು ಸಮಾಜದ ಇತರೆ ಕೆಳವರ್ಗದ ಜನತೆ ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳ ಪ್ರಸ್ತಾಪ ಮಾಡುವ ಮೂಲಕ ಅವರ ಜೀವನದಲ್ಲಿ ರಚನಾತ್ಮಕ ಸುಧಾರಣೆ ಮತ್ತು ಪ್ರಗತಿಗೆ ಮನಸ್ಸು ಮಾಡಿರುವುದು ಶ್ಲಾಘನೀಯ ಬೆಳವಣಿಗೆ. ಈ ವರ್ಷದ ಬಜೆಟ್ ಈ ವಿಚಾರದಲ್ಲಿ ಸಮಗ್ರ ದೃಷ್ಟಿಕೋನ ಹೊಂದಿದೆ.

### 2. ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ

ಭಾರತದ ಆರ್ಥಿಕತೆ ಇನ್ನೂ ಕೃಷಿಯನ್ನೇ ಅವಲಂಬಿಸಿದ್ದು ಶೇ.49 ರಷ್ಟು ಜನ ನೇರವಾಗಿ ಕೃಷಿ ಅವಲಂಬಿತರಾಗಿಯೇ ಬದುಕುತ್ತಿದ್ದಾರೆ. ಭಾರತ ಬದುಕುತ್ತಿರುವುದೇ ಗ್ರಾಮೀಣ ಭಾಗದಲ್ಲಿ. ಇವರಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳನ್ನು ನೀಡಲೇಬೇಕಾಗಿದೆ. ವಿತ್ತ ಸಚಿವರು ಈ ಬಜೆಟ್‌ನಲ್ಲಿ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಸದೃಢಗೊಳಿಸಲು ಸರಿಯಾದ ಕ್ರಮಗಳನ್ನೇ ತೆಗೆದುಕೊಂಡಿದ್ದಾರೆ. 2022ರ ವೇಳೆಗೆ ಕೃಷಿಕರ ಆದಾಯ ದುಪ್ಪಟ್ಟು ಹೆಚ್ಚಬೇಕು ಎಂಬ ಪ್ರಧಾನಿಯವರ ಆಶಯದಂತೆ ವಿತ್ತ ಸಚಿವರು, ರೈತರು ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದನೆ ಮಾಡಿ ಆದಾಯ ಹೆಚ್ಚು ಗಳಿಸುವಂತೆ ಮಾಡಲು ಸಕಾರಾತ್ಮಕ ಕ್ರಮ ತೆಗೆದುಕೊಂಡಿದ್ದಾರೆ. ಇದು ರೈತರು ಮಾಡಿದ ಉತ್ಪಾದನೆಗೆ ನ್ಯಾಯಯುತ ಬೆಲೆ ಸಿಗಲು ಕಾರಣವಾಗುತ್ತದೆ. ಅಲ್ಲದೆ ರೈತರಿಗೆ ಮಾರುಕಟ್ಟೆಗಳ ಸಂಪರ್ಕವೂ ಅತ್ಯಂತ ಜರೂರಾಗಿ ಬೇಕಾಗಿದೆ.

ವಿತ್ತ ಸಚಿವರು ಘೋಷಣೆ ಮಾಡಿರುವ ಮುಂಗಾರು ಬೆಳೆ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನೇ ತೆಗೆದುಕೊಳ್ಳುವುದಾದರೆ, ಇದರಿಂದ 23 ಕೃಷಿ ಉತ್ಪಾದನೆ ವಸ್ತುಗಳ ಮೇಲೆ 1.5ರಷ್ಟು ಹೆಚ್ಚು ಹಣ ಸಿಗುತ್ತದೆ. ಅಲ್ಲದೆ ಅವರು ಕೃಷಿ ಮಾರುಕಟ್ಟೆಗಾಗಿ ರೂ. 2000 ಕೋಟಿಯನ್ನೂ ತೆಗೆದಿರಿಸಿದ್ದು, ಇದರ ಜತೆಗೆ ಮೂಲಸೌಕರ್ಯ ನಿಧಿ ರೂಪದಲ್ಲಿ 500 ಕೋಟಿ ರೂ.ಗಳಷ್ಟು ಹೆಚ್ಚು ಹಣವನ್ನೂ ನೀಡಿದ್ದಾರೆ. ಇದನ್ನು ಕೃಷಿ ಉತ್ಪಾದನೆಯ ಉತ್ತೇಜನಕ್ಕಾಗಿ ಆಪರೇಶನ್ ಗ್ರೀನ್ ಹೆಸರಲ್ಲಿ ತೆಗೆದಿರಿಸಲಾಗಿದೆ.



ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರ ಅನುಕೂಲಕ್ಕಾಗಿ ಮತ್ತು ಅವರ ಕೃಷಿ ಉತ್ಪಾದನೆ ಹೆಚ್ಚಳ ಮಾಡುವ ನಿಟ್ಟಿನಲ್ಲಿ ಕೃಷಿ ಸಾಲ ಸೌಲಭ್ಯಗಳನ್ನು ಹೆಚ್ಚಿಸಲಾಗಿದೆ. ಕೃಷಿ ಸಾಲದ ಗುರಿಯನ್ನು 8.5 ಲಕ್ಷ ಕೋಟಿ ರೂ.ಗಳಿಂದ 11 ಲಕ್ಷ ಕೋಟಿ ರೂ. ಗಳಿಗೆ ಏರಿಕೆ ಮಾಡಿರುವುದು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಅನುಕೂಲಕರ ಸಂಗತಿಯೇ ಆಗಿದೆ. ಆದರೂ, ನಿಜವಾಗಿಯೂ ರೈತರಿಗೆ ಈ ಸಾಲ ಸೌಲಭ್ಯ ಲಭ್ಯವಾಗುತ್ತಿದೆ ಎಂಬುದನ್ನು ನೋಡಿಕೊಳ್ಳಲೇಬೇಕಾಗಿದೆ. ಇದರ ಜತೆಯಲ್ಲೇ ಮೇಲಿನ ಪ್ರಸ್ತಾಪಗಳೊಂದಿಗೆ ಮೀನುಗಾರಿಕೆ ಮತ್ತು ಪಶುಸಂಗೋಪನೆಗೂ ಕಿಸಾನ್ ಕ್ರೆಡಿಟ್ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಮೀನುಗಾರಿಕೆ ಮತ್ತು ಕೃಷಿ ಅಭಿವೃದ್ಧಿ ನಿಧಿಗಾಗಿ 10 ಸಾವಿರ ಕೋಟಿ ಮತ್ತು ಪಶುಸಂಗೋಪನೆ ನಿಧಿಗಾಗಿ 10 ಸಾವಿರ ಕೋಟಿಯನ್ನು ತೆಗೆದಿರಿಸಿರುವುದು ಕೂಡ ಉತ್ತಮ ಯೋಚನೆಯ ನಡೆ. ಈ ಹಣದಿಂದಾಗಿ ಈ ವಲಯಗಳ ಜನರಿಗೆ ಸೌಲಭ್ಯಗಳು ಮತ್ತು ಅವರ ಆದಾಯ ಹೆಚ್ಚಿಸಿಕೊಳ್ಳಲು ಸಹಾಯಕವಾಗುತ್ತದೆ.

22 ಸಾವಿರ ಹಾತ್ಸ್‌ಗಳನ್ನು ಗ್ರಾಮೀಣ ಕೃಷಿ ಮಾರುಕಟ್ಟೆಗಳಾಗಿ ಉನ್ನತೀಕರಿಸಲು ವಿತ್ತ ಸಚಿವರು ಹೊರಟಿರುವುದೂ ಒಳ್ಳೆಯದೇ ಆಗಿದೆ. ಇದರಿಂದಾಗಿ ದೇಶದಲ್ಲಿರುವ ಶೇ.86ರಷ್ಟು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ಮಾರುಕಟ್ಟೆ ಒದಗಿಸುತ್ತದೆ. ಹಾಗೆಯೇ 1290 ಕೋಟಿ ವೆಚ್ಚದಲ್ಲಿ 42 ಮೆಗಾ ಫುಡ್ ಪಾರ್ಕ್‌ಗಳನ್ನು ಸ್ಥಾಪಿಸಹೊರಟಿರುವುದು ಉತ್ತಮ ನಿರ್ಧಾರ. ಇದರಿಂದ ಕೃಷಿ ವಲಯದ ಉತ್ಪಾದನೆ ಹೆಚ್ಚಿಸಬಹುದಾಗಿದೆ.

ಕಟಾವು ನಂತರದ ತೆರಿಗೆ ಪ್ರೋತ್ಸಾಹ ಮತ್ತು ಕೃಷಿ ಉತ್ಪಾದನಾ ಕಂಪನಿಗಳ ಶೇ.100ರಷ್ಟು ತೆರಿಗೆ ರದ್ದತಿ ನಿರ್ಧಾರದಿಂದಾಗಿ ಕೃಷಿ ಉತ್ಪಾದನೆ ಹೆಚ್ಚಿಸಬಹುದಾಗಿದೆ ಮತ್ತು ಇದೇ ವಲಯದಿಂದ 100 ಬಿಲಿಯನ್ ಡಾಲರ್ ಮೌಲ್ಯದ ವಸ್ತುಗಳನ್ನು ರಫ್ತು ಮಾಡಬೇಕು ಎಂಬ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಹಾಗೆಯೇ ನಿಗದಿತ ಅವಧಿಯಲ್ಲಿ ಅವರ ಆದಾಯವನ್ನೂ ಹೆಚ್ಚಿಸಲೂ ಸಾಧ್ಯವಾಗುತ್ತದೆ. ಇವೆಲ್ಲದರ ಜತೆಗೆ ರೈತರಿಗೆ ನೀರಾವರಿಗಾಗಿ ಸೌರ ನೀರಿನ ಪಂಪ್‌ಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಟ್ಟಿರುವುದು ಶ್ಲಾಘನೀಯ ಬೆಳವಣಿಗೆ. ಮೀನುಗಾರಿಕೆ ಮತ್ತು ಪಶುಸಂಗೋಪನೆ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡುವುದರಿಂದ ಅವರಿಗೆ ಅಗತ್ಯವಾದ ಬಂಡವಾಳ ದೊರಕಿ ಅವರ ಆದಾಯ ಹೆಚ್ಚಿಸಲು ನೆರವಾಗುತ್ತದೆ.

**3. ಗ್ರಾಮೀಣ ಆರ್ಥಿಕತೆ**

ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳನ್ನು ಘೋಷಿಸುವ ಮೂಲಕ ಹಣಕಾಸು ಸಚಿವರು ಗಂಭೀರವಾದ ಪ್ರಯತ್ನಗಳನ್ನೇ ಮಾಡಿದ್ದಾರೆ. ಇದು ಬಜೆಟ್‌ನ ಮಾನವತೆಯ ಮುಖ. ಉಜ್ವಲ ಯೋಜನೆ ಮುಖಾಂತರ ದೇಶದಲ್ಲಿನ ಬಡ ಮತ್ತು ಕೆಳ ಮಧ್ಯಮ ವರ್ಗದ ಜನರ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ಬಡ ಮಹಿಳೆಯರಿಗಾಗಿ 8 ಕೋಟಿ ಉಚಿತ ಅನಿಲ ಸಂಪರ್ಕಗಳನ್ನು ನೀಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಲ್ಲದೆ ಸೌಭಾಗ್ಯ ಯೋಜನೆಯಡಿಯಲ್ಲಿ 16 ಸಾವಿರ ಕೋಟಿ ವೆಚ್ಚದಲ್ಲಿ 4 ಕೋಟಿ ಬಡ ಕುಟುಂಬಗಳಿಗೆ ಉಚಿತವಾಗಿ



ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಈ ಯೋಜನೆಗಳಿಂದಾಗಿ ಇಂಧನವನ್ನು ಉರಿಸುವುದು ತಪ್ಪಿದೆಯಲ್ಲದೇ, ಅರಣ್ಯನಾಶ ಸಮಸ್ಯೆಯೂ ಹೋಗಿದೆ. ಹಾಗೆಯೇ ಮಹಿಳೆಯರ ಪರದಾಟಕ್ಕೂ ಅಂತ್ಯ ಸಿಕ್ಕಿದೆ. 2022ರ ವೇಳೆಗೆ ದೇಶದ ಎಲ್ಲರಿಗೂ ವಸತಿ ಮಾಡಿಕೊಡುವ ಉದ್ದೇಶದಿಂದ ಗ್ರಾಮೀಣ ಪ್ರದೇಶದಲ್ಲಿ ಒಂದು ಕೋಟಿಗೂ ಹೆಚ್ಚು ಮನೆ ನಿರ್ಮಿಸಿಕೊಡುವ ಗುರಿ ಹೊಂದಲಾಗಿದೆ. ಈಗಾಗಲೇ ಸ್ವಚ್ಛ ಭಾರತ ಯೋಜನೆ ಅಡಿಯಲ್ಲಿ ಈಗಿರುವ 6 ಕೋಟಿ ಶೌಚಾಲಯಗಳಲ್ಲದೆ, ಇನ್ನೂ 2 ಕೋಟಿ ಶೌಚಾಲಯಗಳನ್ನು ನಿರ್ಮಿಸಹೊರಟಿರುವುದು ಸ್ವಾಗತಾರ್ಹ ಬೆಳವಣಿಗೆ. 2018–19ರಲ್ಲಿ ರಾಷ್ಟ್ರೀಯ ಜೀವನೋಪಾಯಕ್ಕಾಗಿ 5750 ಕೋಟಿ ರೂ, ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ 9975 ಕೋಟಿ ರೂ. ಮೀಸಲಿಟ್ಟಿರುವುದೂ ಅತ್ಯುತ್ತಮವಾದದ್ದು. ಈ ಯೋಜನೆಗಳು ಭಾರತೀಯ ಮಹಿಳೆಯರ ಗೌರವ ಹೆಚ್ಚಿಸಲು ಸಹಾಯ ಮಾಡುತ್ತವೆ.

ಆದರೂ, ಯೋಜನೆಗಳನ್ನು ಘೋಷಣೆ ಮಾಡಿ ಅವುಗಳನ್ನು ಸರಿಯಾದ ಸಮಯಕ್ಕೆ ದಕ್ಷವಾಗಿ ಜಾರಿಗೊಳಿಸದೇ ಇದ್ದಲ್ಲಿ ಪ್ರಯೋಜನವಿಲ್ಲ. ಸರಿಯಾದ ಸಮಯಕ್ಕೆ ಜಾರಿಯಾದಲ್ಲಿ ಮಾತ್ರ ಇವುಗಳು ಶ್ಲಾಘನೆಗೆ ಅರ್ಹವಾಗಿರುತ್ತವೆ. ಅಲ್ಲದೆ ತಳಮಟ್ಟದಲ್ಲೇ ಭ್ರಷ್ಟಾಚಾರವನ್ನು ನಿಗ್ರಹಿಸಿ ಸರ್ಕಾರಿ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡಿ ಅರ್ಹರಿಗೆ ತಲುಪುವಂತಾದರೆ ಮಾತ್ರ ಸಾರ್ಥಕವಾಗುತ್ತವೆ.

**4. ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸುರಕ್ಷತೆ**

ಸದೃಢ ಸಮಾಜವನ್ನು ಕಟ್ಟುವುದರಲ್ಲಿ ಶಿಕ್ಷಣ ಮತ್ತು ಆರೋಗ್ಯಗಳು ದೇಶದ ಆಧಾರ ಸ್ತಂಭಗಳಾಗಿದ್ದು, ಶಿಕ್ಷಣದಿಂದಾಗಿ ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಂಡು ಈ ಮೂಲಕ ದೇಶದ ಸಂಪತ್ತನ್ನು ಹೆಚ್ಚಿಸಬಹುದಾಗಿದೆ. ಹಾಗೆಯೇ ಜನರ ಜೀವನ ಮಟ್ಟವನ್ನೂ ಹೆಚ್ಚಿಸಬಹುದಾಗಿದೆ. ಅಲ್ಲದೆ ಉತ್ತಮ ಆರೋಗ್ಯ ಸೌಲಭ್ಯಗಳು ಮಾನವ ಸಂಪನ್ಮೂಲಗಳನ್ನು ಚೆನ್ನಾಗಿ ಬಳಸಿಕೊಳ್ಳುವಲ್ಲಿ ನೆರವಾಗುತ್ತವೆ. ಇದು ಇಡೀ ಜಗತ್ತಿನ ಸೃಷ್ಟಿಗೆ ನೀಡಲಾಗುತ್ತಿರುವ ಅತಿದೊಡ್ಡ ಕೊಡುಗೆ. ಹಣಕಾಸು ಸಚಿವರು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಬಗ್ಗೆ ಹೆಚ್ಚು ಗಮನಹರಿಸಿದ್ದಾರೆ. ಆದರೆ, ಬ್ರಿಕ್ಸ್ ದೇಶಗಳಿಗೆ ಹೋಲಿಕೆ ಮಾಡಿದರೆ ಹಣಕಾಸು ಸಚಿವರು ಆರೋಗ್ಯಕ್ಕೆ ನೀಡಿರುವ ಪಾಲು ತೀರಾ ಕಡಿಮೆ. ಅಂದರೆ ನೆರೆಯ ಚೀನಾ ತನ್ನ ಜಿಡಿಪಿಯ ಶೇ. 2ರಷ್ಟನ್ನು ಆರೋಗ್ಯ ಕ್ಷೇತ್ರದ ಮೇಲೆ ವೆಚ್ಚ ಮಾಡುತ್ತಿದ್ದರೆ, ಭಾರತ ಶೇ.1.4 ರಷ್ಟನ್ನು ನೀಡುತ್ತಿದೆ.

ಶಿಕ್ಷಣದಲ್ಲಿನ ಮೂಲಸೌಕರ್ಯಕ್ಕೆ 1 ಲಕ್ಷ ಕೋಟಿ ರೂ. ಯೋಜನೆ ಮತ್ತು ವಾಸ್ತುಶಿಲ್ಪಕ್ಕಾಗಿ ಎರಡು ಹೊಸ ಶಾಲೆಗಳು, ಪ್ರತಿ ಮೂರು ಸಂಸದೀಯ ಕ್ಷೇತ್ರಗಳಿಗೊಂದು ವೈದ್ಯಕೀಯ ಕಾಲೇಜುಗಳಂತೆ 24 ಹೊಸ ಮೆಡಿಕಲ್ ಕಾಲೇಜುಗಳು, ಸ್ಥಳೀಯವಾಗಿಯೇ ವೈದ್ಯಕೀಯ ಕಾಲೇಜುಗಳ ಲಭ್ಯತೆಗಾಗಿ ಆಸ್ಪತ್ರೆಗಳನ್ನು ಮೆಡಿಕಲ್ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸುವ ನಿರ್ಧಾರವನ್ನು ಬಜೆಟ್‌ನಲ್ಲಿ ತೆಗೆದುಕೊಳ್ಳಲಾಗಿದೆ.

ಅದೇ ರೀತಿಯಲ್ಲಿ 2020ರೊಳಗೆ 50 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಮುಂದಾಗಿರುವುದು ಕೂಡ ಮೆಚ್ಚತಕ್ಕ ವಿಷಯವೇ. ಇದರಿಂದ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗುವುದಲ್ಲದೇ ಅವರ ಕುಟುಂಬ ಸದಸ್ಯರು ತಮ್ಮ ಮಕ್ಕಳ ಬಗ್ಗೆ ಹೊಂದಿರುವ ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣದ ಕನಸು ಕೂಡ ಈಡೇರುತ್ತದೆ.

ಆಯುಷ್ಮಾನ್ ಭಾರತ್ ಕಾರ್ಯಕ್ರಮದ ಅಡಿಯಲ್ಲಿ ಜನರಿಗೆ ಅವರ ಮನೆಯ ಹತ್ತಿರವೇ ಆರೋಗ್ಯ ಸೌಲಭ್ಯಗಳು ಸಿಗುವ ರೀತಿಯಲ್ಲಿ 1.5 ಲಕ್ಷ ಕೇಂದ್ರಗಳನ್ನು ತೆರೆಯಲು ಹೊರಟಿರುವುದು ಒಪ್ಪಿಕೊಳ್ಳುವ ವಿಷಯವಾಗಿದೆ. ಈ ಯೋಜನೆಗೆ 1200 ಕೋಟಿ ಅನುದಾನ ನೀಡಿದ್ದು, ಎಲ್ಲರಿಗೂ ಆರೋಗ್ಯ ಸೇವೆ ಸಿಕ್ಕಂತಾಗುತ್ತದೆ. ಇದೇ

ರೀತಿಯಲ್ಲಿ ಟಿಬಿ ನಿವಾರಣೆಗೆ ಪೋಷಕಾಂಶ ಬೆಂಬಲ ನೀಡುವುದಕ್ಕಾಗಿ ಹೆಚ್ಚಿನ ಹಣ ನೀಡಿರುವುದು ಬಜೆಟ್ ನಲ್ಲಿ ಇರುವ ಒಂದು ಸ್ವಾಗತಾರ್ಹ ವಿಚಾರ.

ಹಣಕಾಸು ಸಚಿವರು ಇಡೀ ಜಗತ್ತಿನಲ್ಲೇ ಅತ್ಯಂತ ದೊಡ್ಡ ಆರೋಗ್ಯ ಸೇವೆ ಕಾರ್ಯಕ್ರಮವನ್ನು ಘೋಷಿಸಿದ್ದಾರೆ. ರಾಷ್ಟ್ರೀಯ ಆರೋಗ್ಯ ಸುರಕ್ಷಾ ಯೋಜನೆ ಹೆಸರಿನ ಈ ಕಾರ್ಯಕ್ರಮದ ಅಡಿಯಲ್ಲಿ 10 ಕೋಟಿ ಬಡ ಮತ್ತು ಕೆಳ ವರ್ಗದ ಕುಟುಂಬಗಳಿಗೆ ಆರೋಗ್ಯ ಸೇವೆ ಸಿಕ್ಕಂತಾಗುತ್ತದೆ. ಅಂದರೆ ಸುಮಾರು 50 ಕೋಟಿ ಜನ ಈ ಸೌಲಭ್ಯ ಪಡೆಯಲಿದ್ದಾರೆ. ಈ ಕುಟುಂಬಗಳಿಗೆ ದ್ವಿತೀಯ ಮತ್ತು ತೃತೀಯ ಸೇವೆಯ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ವರ್ಷಕ್ಕೆ 5 ಲಕ್ಷ ರೂ. ಗಳನ್ನು ಹೆಲ್ತ್ ಕವರೇಜ್ ನೀಡಲಾಗಿದ್ದು, ಇದೊಂದು ಉತ್ತಮ ಯೋಜನೆಯಾಗಿದೆ. ಈ ಯೋಜನೆಯ ಮೂಲಕ ವಿಮಾ ಉದ್ಯಮವೂ ಚುರುಕಾಗಲಿದ್ದು, ಹೆಚ್ಚಿನ ಉದ್ಯೋಗವೂ ಸೃಷ್ಟಿಯಾಗುತ್ತದೆ. ಆರೋಗ್ಯ ಸೇವೆಗಳಿಗಾಗಿ 1.5 ಲಕ್ಷ ಕೇಂದ್ರಗಳು, ಮೆಡಿಕಲ್ ಕಾಲೇಜುಗಳು ಮತ್ತು ಸರ್ಕಾರದ ಹಣದಿಂದಲೇ ಶುರುವಾಗುವ ಆರೋಗ್ಯ ಸೇವೆ ಕಾರ್ಯಕ್ರಮಗಳೂ ಹೆಚ್ಚಿನ ಉದ್ಯೋಗವಾಕಾಶ ಸೃಷ್ಟಿಸುವುದಲ್ಲದೇ, ದೇಶದ ಆರೋಗ್ಯವನ್ನೂ ಉತ್ತಮವಾಗಿ ಇಡುತ್ತವೆ. ಅಲ್ಲದೆ ದೇಶದ ಬೇರೆ ಬೇರೆ ವಿಭಾಗಗಳ ಜನ ಕೂಡ ಉತ್ತಮವಾದ ಆರೋಗ್ಯ ಸೇವೆ ಪಡೆದುಕೊಳ್ಳಬಹುದಾಗಿದೆ. ಅಂದರೆ, ಪ್ರತಿಯೊಂದು ಚಿಕಿತ್ಸೆಗೂ ದೊಡ್ಡ ನಗರಗಳಿಗೆ ಹೋಗುವ ಅಗತ್ಯವೂ ಇರುವುದಿಲ್ಲ.

ಪ್ರಧಾನಮಂತ್ರಿಗಳ ಜನಧನ ಯೋಜನೆಯಡಿಯಲ್ಲಿ ಖಾತೆ ತೆರೆದಿರುವ 16 ಕೋಟಿ ಮಂದಿಗೆ ಸೂಕ್ಷ್ಮ ವಿಮೆ ಮತ್ತು ಪಿಂಚಣಿ ಯೋಜನೆಗಳನ್ನು ಸೇರಿಸಹೊರಟಿರುವುದು ಉತ್ತಮ ಯೋಚನೆ. ಸಾಮಾಜಿಕ ಒಳಗೊಳ್ಳುವಿಕೆ ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿಗಾಗಿ ರೂ. 52719 ಕೋಟಿ ಮತ್ತು ಪರಿಶಿಷ್ಟ ವರ್ಗಗಳಿಗಾಗಿ ರೂ. 39139 ಕೋಟಿ ಅನುದಾನ ನೀಡಿರುವುದು ಉತ್ತಮವಾಗಿದ್ದು, ಇದರಿಂದ ಇವರ ಕಲ್ಯಾಣ ಸಾಧ್ಯವಾಗಲಿದೆ. ಎಲ್ಲಿ ಪರಿಶಿಷ್ಟ ವರ್ಗದ ಜನಸಂಖ್ಯೆ ಶೇ.50ಕ್ಕಿಂತ ಹೆಚ್ಚಿದೆಯೊ ಅಲ್ಲಿ



ನವೋದಯ ಶಾಲೆಗಳ ಮಾದರಿಯಲ್ಲೇ ಏಕಲವ್ಯ ಶಾಲೆಗಳನ್ನು ತೆರೆಯಲು ಯೋಜನೆ ರೂಪಿಸಲಾಗಿದೆ. ಉದ್ಯೋಗದಾತರನ್ನು ಸಬಲೀಕರಣ ಮಾಡುವ ದೃಷ್ಟಿಯಿಂದ ಹೊಸ ನೌಕರರ ಇಪಿಎಫ್‌ನ ಶೇ. 12 ವೇತನವನ್ನು ಮೂರು ವರ್ಷಗಳವರೆಗೆ ಸರ್ಕಾರವೇ ತುಂಬಲಿದೆ. ಜತೆಗೆ ಇಪಿಎಫ್ ನಲ್ಲಿ ಮಹಿಳೆಯರ ಪಾಲನ್ನು ಮುಂದಿನ ಮೂರು ವರ್ಷಗಳ ವರೆಗೆ ಶೇ.8ಕ್ಕೆ ಇಳಿಕೆ ಮಾಡಲಾಗಿದೆ.

**ಮೂಲಸೌಕರ್ಯ ಮತ್ತು ಕೈಗಾರಿಕೆ**

ಪ್ರಗತಿಯ ಮುಂಚೂಣಿಯಲ್ಲಿರುವ ಆರ್ಥಿಕತೆಯಲ್ಲಿ ಮೂಲಸೌಕರ್ಯಕ್ಕೆ ಉತ್ತೇಜನ ನೀಡುವುದಕ್ಕೆ ಹಣಕಾಸು ಸಚಿವರು ಸಮಾನ ಆದ್ಯತೆ ನೀಡಿದ್ದಾರೆ. 2018–19ನೇ ಸಾಲಿನಲ್ಲಿ ಮೂಲಸೌಕರ್ಯಕ್ಕಾಗಿ 5.97 ಲಕ್ಷ ಕೋಟಿ ಬಜೆಟ್ ಅನುದಾನವನ್ನು ನೀಡಿದ್ದಾರೆ. ಈ ಹಣದಿಂದ ರಸ್ತೆ, ವಿಮಾನ ನಿಲ್ದಾಣ, ರೈಲ್ವೆ, ಬಂದರು ಮತ್ತು ಆಂತರಿಕ ಜಲಮಾರ್ಗಗಳ ಅಭಿವೃದ್ಧಿ ಮಾಡುವ ಮೂಲಕ ದೇಶವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ಸಂಪರ್ಕಿಸಲು ಅನುವು ಮಾಡಿಕೊಟ್ಟಿದ್ದಾರೆ. ಇದರ ಜತೆಗೆ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ದೇಶದ 10 ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಆದರ್ಶ ಪ್ರವಾಸೋದ್ಯಮ ಸ್ಥಳಗಳಾಗಿ ಗುರುತಿಸಿ ಅಭಿವೃದ್ಧಿ ಮಾಡುವುದಾಗಿ ಘೋಷಿಸಿದ್ದಾರೆ. ಇಲ್ಲಿ ಮೂಲಸೌಕರ್ಯ ಮತ್ತು ಕೌಶಲ್ಯ ಅಭಿವೃದ್ಧಿ, ತಾಂತ್ರಿಕತೆಯ ಅಭಿವೃದ್ಧಿ, ಖಾಸಗಿ ಹೂಡಿಕೆಗೆ ಆಕರ್ಷಣೆ, ಬ್ರಾಂಡಿಂಗ್ ಮತ್ತು ಮಾರ್ಕೆಟಿಂಗ್ ವಿಚಾರದಲ್ಲಿ ಎಲ್ಲರನ್ನೂ ಒಳಗೊಂಡು ಕೆಲಸ ಮಾಡುವ ರೀತಿಯಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಅಲ್ಲದೆ ಇದರಲ್ಲಿ ಉದ್ಯೋಗಾವಕಾಶಗಳು ಹೆಚ್ಚಳವಾಗುವುದೂ ಸ್ವಾಗತಾರ್ಹ ಸಂಗತಿ.

ರೈಲ್ವೆ, ವಿಮಾನಯಾನ ಮತ್ತು ಆರ್ಥಿಕತೆಯನ್ನು ಡಿಜಿಟಲೀಕರಣ ಮಾಡುವುದಕ್ಕಾಗಿ ಹೆಚ್ಚಿನ ಅನುದಾನ ನೀಡಲಾಗಿದೆ. ರೈಲ್ವೆಯಲ್ಲಿ ಮಾನವ ರಹಿತ ರೈಲ್ವೆ ಕ್ರಾಸಿಂಗ್‌ಗಳನ್ನು ಸಂಪೂರ್ಣವಾಗಿ ತೆಗೆದುಹಾಕಲು ನಿರ್ಧರಿಸಲಾಗಿದೆ. ಇದರ ಜತೆಗೆ, ವೈಫೈ, ಸಿಸಿಟಿವಿಗಳನ್ನು ಅಳವಡಿಸಲೂ ಈ ಹಣ ಬಳಸಿಕೊಳ್ಳಲಾಗುತ್ತದೆ. ಅಲ್ಲದೆ, ಮುಂಬೈ ರೈಲ್ವೆ ಸಂಪರ್ಕಕ್ಕೆ 11 ಸಾವಿರ ಕೋಟಿ ಹಾಗೂ ಬೆಂಗಳೂರು ಮೆಟ್ರೊಗೆ 17 ಸಾವಿರ ಕೋಟಿ ನೀಡಲಾಗಿದ್ದು ಈ ಮೂಲಕ ಮೆಟ್ರೊ ಸಿಟಿಗಳನ್ನು ಅಭಿವೃದ್ಧಿಗೊಳಿಸಲು ಆದ್ಯತೆ ನೀಡಲಾಗಿದೆ.

ಹಳ್ಳಿಗಳಲ್ಲಿ ಬ್ರಾಡ್ ಬ್ಯಾಂಡ್ ಸೇವೆಯನ್ನು ನೀಡುವ ಸಲುವಾಗಿ ಸರ್ಕಾರ ಐದು ಲಕ್ಷ ವೈಫೈ ಹಾಟ್ ಸ್ಪಾಟ್‌ಗಳನ್ನು ಆರಂಭಿಸಲು ಪ್ರಸ್ತಾಪಿಸಿದೆ. ಈ ಮೂಲಕ ಐದು ಕೋಟಿ ಹಳ್ಳಿಗರಿಗೆ ಇಂಟರ್ನೆಟ್ ಸೇವೆ ನೀಡಲು ಉದ್ದೇಶಿಸಲಾಗಿದೆ. ಜತೆಗೆ 2018–19ನೇ ಸಾಲಿನಲ್ಲಿ ದೂರ ಸಂಪರ್ಕ ಮೂಲಸೌಕರ್ಯವನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರದ ಡಿಜಿಟಲ್ ಇಂಡಿಯಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದಕ್ಕಾಗಿ 10 ಸಾವಿರ ಕೋಟಿ ಅನುದಾನ ನೀಡಲಾಗಿದೆ.

ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಮೇಲೆ ಹೆಚ್ಚು ಗಮನ ಹರಿಸಿರುವ ಹಣಕಾಸು ಸಚಿವರು, ಇವರಿಗೆ ಸಾಲ ಸೌಲಭ್ಯ, ಬಂಡವಾಳ ಮತ್ತು ಬಡ್ಡಿ ಸಬ್ಸಿಡಿ ನೀಡುವ ಸಲುವಾಗಿ 3794 ಕೋಟಿ ರೂ. ನೀಡಲು ನಿರ್ಧರಿಸಿದ್ದಾರೆ. ಎಂಎಸ್‌ಎಂಇಯಲ್ಲಿ ಘಟಕಗಳು ಮತ್ತು ಯಂತ್ರೋಪಕರಣಗಳು ಹಾಗೂ ಸಾಧನಗಳ ಮೇಲೆ ಬಂಡವಾಳ ಹೂಡಿಕೆಯ ವಿಚಾರದಲ್ಲಿ ಕೊಂಚ ಬದಲಾವಣೆ ಮಾಡಲಾಗಿದ್ದು, ವಾರ್ಷಿಕ ರೂ. 50 ಕೋಟಿಯಿಂದ 250 ಕೋಟಿವರೆಗೆ ವಹಿವಾಟು ನಡೆಸುವಂಥ ಕಂಪನಿಗಳಿಗೆ ಶೇ.25 ರಷ್ಟು ತೆರಿಗೆ ದರ ಕಡಿತ ಮಾಡಲಾಗಿದೆ. ಇದರಿಂದ ಅವರು ಸರಳವಾಗಿ ಉದ್ಯಮ ನಡೆಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅಲ್ಲದೆ ಇವರನ್ನು ಪ್ರಗತಿದಾಯಕ ಮತ್ತು ಹೊಸ ತೆರಿಗೆ ನೀತಿ ಜಿಎಸ್‌ಟಿಯೊಳಗೆ ಸೇರ್ಪಡೆ ಮಾಡಲು ಸಹಾಯ ಮಾಡಿದಂತಾಗುತ್ತದೆ. ಜತೆಗೆ

ಹಣಕಾಸು ಸಚಿವರು ಎಂಎಸ್‌ಎಂಇಗಳಿಗೆ ಮುದ್ರಾ ಯೋಜನೆಯಡಿಯಲ್ಲಿ 3 ಲಕ್ಷ ಕೋಟಿ ರೂ.ಗಳ ಸಾಲ ಸೌಲಭ್ಯ ನೀಡಲೂ ಉದ್ದೇಶಿಸಿದ್ದಾರೆ. 2018–19ರಲ್ಲಿ ಜವಳಿ ಕ್ಷೇತ್ರದಲ್ಲಿನ 7148 ಕೋಟಿ ಬಂಡವಾಳ ಹೂಡಿಕೆ ಹೆಚ್ಚಿನ ಉದ್ಯೋಗ ಸೃಷ್ಟಿ ಮತ್ತು ಪ್ರಗತಿಗೆ ಪೂರಕವಾಗಿದೆ.

**ಉದ್ಯೋಗ**

ಸದ್ಯ ಭಾರಿ ಪ್ರಮಾಣದ ನಿರುದ್ಯೋಗ ಸಮಸ್ಯೆ ಶಿಕ್ಷಿತ ಯುವಕರಲ್ಲಿ ಅಸಹನೆ ಹೆಚ್ಚಲು ಕಾರಣವಾಗಿದ್ದು, ಈ ಕೂಡಲೇ ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕಾಗಿದೆ. ಈ ವರ್ಷದ ಬಜೆಟ್ ನಲ್ಲಿ 70 ಲಕ್ಷ ಔಪಚಾರಿಕ ಉದ್ಯೋಗ ಸೃಷ್ಟಿಗೆ ಒತ್ತು ನೀಡಲಾಗಿದೆ. ಮೂಲಸೌಕರ್ಯ, ರಸ್ತೆ, ರೈಲ್ವೆ, ವಿಮಾನ ನಿಲ್ದಾಣಗಳು ಮತ್ತು ಹೆಲಿಪ್ಯಾಡ್‌ಗಳು, ಗ್ರಾಮೀಣ ಮೂಲಸೌಕರ್ಯ, ಹಳ್ಳಿಗರ ಜೀವನ ಮಟ್ಟ ಸುಧಾರಿಸಲು ಗ್ರಾಮೀಣ ಮತ್ತು ನಗರ ಪ್ರದೇಶಗಳ ಸಂಪರ್ಕ ಕಲ್ಪಿಸಲು ಹೆಚ್ಚಿನ ಅನುದಾನ ನೀಡುವ ಮೂಲಕ ಉದ್ಯೋಗ ಸೃಷ್ಟಿಗೆ ಮಹತ್ವ ನೀಡಲಾಗಿದೆ. ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸುತ್ತಲೇ, ಇದರ ಜತೆಗೆ ಭಾರತೀಯ ಹಣಕಾಸು ಸಂಸ್ಥೆ ಶಿಫಾರಸು ನೀಡಿದ ಹಾಗೆ ನ್ಯಾಷನಲ್ ಲೇಬರ್ ಎಕ್ಸ್ ಚೇಂಜ್ ಅನ್ನು ಸ್ಥಾಪಿಸಲು ಮುಂದಾಗಬಹುದು. ದೇಶದ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವ ದೃಷ್ಟಿಯಿಂದ ಈ ವರದಿಯನ್ನು ಭಾರತದ ಆರ್ಥಿಕತೆಯಲ್ಲಿ ಪ್ರಕಟಿಸಲಾಗಿತ್ತು. ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯದಲ್ಲಿ ಹೆಚ್ಚಿನ ಹಣ ಹೂಡುವ ಮೂಲಕ ಸಾಮಾಜಿಕ ಕಲ್ಯಾಣಕ್ಕೆ ಒತ್ತು ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ. ಅಲ್ಲದೆ ಬಂಡವಾಳ ಹಿಂತೆಗೆತದಲ್ಲಿ ಕೊಂಚ ಬದಲಾವಣೆ ಮಾಡಿ 80 ಸಾವಿರ ಕೋಟಿ ರೂ.ಗಳಿಗೆ ಇಳಿಕೆ ಮಾಡಲಾಗಿದೆ. ಈ ಮೂಲಕ ಹಣಕಾಸು ಸಚಿವರು ವಿತ್ತೀಯ ಕೊರತೆಯನ್ನು ಶೇ.3.3 ರಷ್ಟಕ್ಕೇ ಇರಿಸಿಕೊಂಡು ಯಾವುದೇ ತೆರಿಗೆ ಹೊರೆ ಹಾಕದೇ ಶೇ.7.2 ರಿಂದ ಶೇ.7.4ರ ಜಿಡಿಪಿ ದರ ಕಾಯ್ದುಕೊಳ್ಳಬಹುದಾಗಿದೆ.

**ತೆರಿಗೆ ಪ್ರಸ್ತಾವಗಳು**

ತೆರಿಗೆ ವ್ಯವಸ್ಥೆಯಲ್ಲಿನ ಸ್ಥಿರತೆಗಾಗಿ ಹೆಚ್ಚಿನ ಬದಲಾವಣೆ ಮಾಡಬಾರದು ಎಂಬುದು ಹಿಂದಿನಿಂದಲೂ ಪ್ರಚಲಿತದಲ್ಲಿರುವ ನಂಬಿಕೆ. ಹೀಗಾಗಿಯೇ ಹಣಕಾಸು ಸಚಿವರು, ವೈಯಕ್ತಿಕ ಮತ್ತು ಕಾರ್ಪೊರೇಟ್ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಆದರೂ ವೇತನದಾರರಿಗೆ ಸಮಾಧಾನ ನೀಡುವ ಸಲುವಾಗಿ ಸ್ಟ್ಯಾಂಡರ್ಡ್ ಡಿಡಕ್ಷನ್ ಅನ್ನು ಜಾರಿಗೊಳಿಸಿದ್ದು ಈ ಮೂಲಕ 40 ಸಾವಿರ ರೂ.ಗಳ ಸಾರಿಗೆ ಭತ್ಯೆಯ ವಾಪಸಾತಿಯ ಸೌಲಭ್ಯ ನೀಡಿದ್ದಾರೆ. ಅಲ್ಲದೆ ಅವರು ಹಿರಿಯ ನಾಗರಿಕರಿಗೆ ಕೊಂಚ ನಿರಾಳತೆ ನೀಡಿದ್ದು, ಬ್ಯಾಂಕು ಮತ್ತು ಅಂಚೆ ಕಚೇರಿಗಳಲ್ಲಿನ ಉಳಿತಾಯ ಠೇವಣಿ ಮೇಲೆ ಇದ್ದ ಬಡ್ಡಿ ಆದಾಯವನ್ನು 194ಎ ನಂತೆ 10 ಸಾವಿರ ರೂ.ಗಳಿಂದ 50 ಸಾವಿರಕ್ಕೆ ಏರಿಕೆ ಮಾಡಿದ್ದಾರೆ. ಇದರ ಜತೆಗೆ ಸೆಕ್ಷನ್ 80 ಡಿನಂತೆ ಆರೋಗ್ಯ ವಿಮಾ ಪ್ರಿಮಿಯಮ್‌ನ ವಾಪಸಾತಿ ಮಿತಿ ಮತ್ತು ಆರೋಗ್ಯ ವೆಚ್ಚವನ್ನು ರೂ. 30 ಸಾವಿರದಿಂದ ರೂ. 50 ಸಾವಿರಕ್ಕೆ ಏರಿಸಿದ್ದಾರೆ. ಇದು ಮಧ್ಯಮ ವರ್ಗಗಳಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ.

ಹಣಕಾಸು ಸಚಿವರು ಈಕ್ವಿಟಿಯ ಆಧಾರದಲ್ಲಿ ದೀರ್ಘಾವಧಿ ಬಂಡವಾಳ ಲಾಭ ತೆರಿಗೆಯನ್ನು ಶೇ.10ರ ದರದಲ್ಲಿ



ಪರಿಚಯಿಸಿದ್ದಾರೆ. 3.6 ಲಕ್ಷ ಕೋಟಿಯಷ್ಟು ಆದಾಯ ಗಳಿಸುತ್ತಿರುವ ಈ ಶ್ರೀಮಂತ ವರ್ಗವನ್ನು ತೆರಿಗೆಯಿಂದ ಹೊರಗಿಡಲಾಗಿತ್ತು. 2004ರ ಅಕ್ಟೋಬರ್‌ಗಿಂತ ಹಿಂದೆ ಇದ್ದ ಹಾಗೆ ಈ ದೀರ್ಘಾವಧಿ ಬಂಡವಾಳ ಲಾಭ ತೆರಿಗೆಯನ್ನು ಶೇ. 20ರಷ್ಟೇ ಇಡಬೇಕಾಗಿತ್ತು. ಈ ಬಜೆಟ್‌ನಲ್ಲಿ ಈಕ್ವಿಟಿ ಮ್ಯೂಚ್ಯುವಲ್ ಫಂಡ್‌ಗಳಲ್ಲಿ ವಿತರಣೆ ಮಾಡುವ ಲಾಭಾಂಶದಲ್ಲಿ ಶೇ.10ರಷ್ಟು ತೆರಿಗೆ ಕಟ್ಟುವುದನ್ನು ಪರಿಚಯಿಸಲಾಗಿದೆ. ಇದರಿಂದಾಗಿ ಮ್ಯೂಚ್ಯುವಲ್ ಫಂಡ್ ಕಂಪನಿಗಳು ಹೆಚ್ಚಿನ ಹಣವನ್ನು ಅವರ ಹೂಡಿಕೆದಾರರಿಗೆ ನೀಡುವುದು ತಪ್ಪಿದಂತಾಗಿದೆ. ಎಲ್‌ಟಿಸಿಜಿ ಮಾರುಕಟ್ಟೆಗಳ ಮೇಲೆ ಇದು ಅಡ್ಡಪರಿಣಾಮ ಬೀರಿದರೂ ಅದನ್ನು ವಾಪಸ್ ಪಡೆದಿಲ್ಲ. ಅಲ್ಲದೆ ಭಾರಿ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ಬಂಡವಾಳ ಕ್ರೋಢೀಕರಣ ಮಾಡಲು ಶೇ.1 ರಷ್ಟು ಶಿಕ್ಷಣ ಸೆಸ್ (ತೆರಿಗೆ ಮೇಲೆ ತೆರಿಗೆ) ವಿಧಿಸಲಾಗಿದೆ.

15 ಸಾವಿರ ಕೋಟಿ ರೂ.ಗಳ ನಷ್ಟದ ಹೊರತಾಗಿಯೂ ವೈಯಕ್ತಿಕ ಆದಾಯ ತೆರಿಗೆ ಮಿತಿಯನ್ನು 3 ಲಕ್ಷಕ್ಕೆ ಏರಿಕೆ ಮಾಡಿ ಈ ಮೂಲಕ ಕನಸಿನ ಬಜೆಟ್ ಮಂಡನೆ ಮಾಡಬಹುದಾಗಿತ್ತು. ಅಲ್ಲದೆ ಈ ನಷ್ಟವನ್ನು ಎಲ್ಟಿಸಿಜಿ ಮೇಲೆ ಶೇ.20 ರಷ್ಟು ತೆರಿಗೆ ಹಾಕಿ ಸರಿದೂಗಿಸಿಕೊಳ್ಳಬಹುದಾಗಿತ್ತು.

ಅಲ್ಲದೆ 250 ಕೋಟಿ ರೂ.ಗಳಿಗಿಂತ ಕಡಿಮೆ ವಹಿವಾಟು ನಡೆಸುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಮೇಲಿನ ಕಾರ್ಪೊರೇಟ್ ತೆರಿಗೆಯನ್ನು ಶೇ.25 ರಷ್ಟು ಕಡಿತ ಮಾಡಿದ್ದಾರೆ. ಇದು ವೈಯಕ್ತಿಕ ತೆರಿಗೆಗೆ ನಿರಾಳತೆ ತಂದುಕೊಟ್ಟಿದ್ದರೂ, ಬೊಕ್ಕಸಕ್ಕೆ 5995 ಕೋಟಿ ಆದಾಯ ನಷ್ಟವಾಗಲಿದೆ.

ಆದಾಗ್ಯೂ ಮೇಕ್ ಇನ್ ಇಂಡಿಯಾಗೆ ಉತ್ತೇಜನ ನೀಡುವ ಸಲುವಾಗಿ ಮತ್ತು ಆದಾಯ ಕ್ರೋಢೀಕರಣಕ್ಕಾಗಿ ಸುಗಂಧ ದ್ರವ್ಯ, ಶೌಚಾಲಯ ಸಲಕರಣೆಗಳು (ಶೇ.10), ವಾಹನ ಉದ್ಯಮ ಮತ್ತು ವಾಹನೋದ್ಯಮದ ಸಲಕರಣೆಗಳು (ಶೇ.5), ಪಾದರಕ್ಷೆ (ಶೇ.10), ಕೃತಕ ಆಭರಣಗಳು (ಶೇ.5), ಎಲೆಕ್ಟ್ರಾನಿಕ್ಸ್/ಹಾರ್ಡ್ ವೇರ್ (ಶೇ.5), ಗೃಹೋಪಕರಣಗಳು (ಶೇ.10), ವಾಚ್‌ಗಳು ಮತ್ತು ಗಡಿಯಾರಗಳು (ಶೇ.10), ಆಟದ ಸಾಮಾನುಗಳು ಮತ್ತು ಗೇಮ್‌ಗಳು (ಶೇ.10), ಜವಳಿ (ಶೇ.10), ತರಕಾರಿಯಿಂದ ಮಾಡಿದ ಅಡುಗೆ ಎಣ್ಣೆ (ಶೇ.15 ರಿಂದ ಶೇ.17.5) ಹಾಗೂ ಇತರೆ. ಆದರೆ ಕ್ಯಾಪಿಟಲ್ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ಸ್‌ಗಳ ಮೇಲೆ ಕಸ್ಟಮ್ ಸುಂಕವನ್ನು ಶೇ.5, ಆರೋಗ್ಯ ಸಾಧನಗಳ ಮೇಲೆ ಶೇ.2.5, ಅಂಟು ಪದಾರ್ಥಗಳು (ಶೇ.2.5) ರಷ್ಟು ಕಡಿಮೆ ಮಾಡಲಾಗಿದೆ. ಹೀಗಾಗಿ ಕೆಲವೊಂದು ವಸ್ತುಗಳ ಬೆಲೆ ಹೆಚ್ಚಾಗಿದ್ದರೆ, ಇನ್ನೂ ಕೆಲವು ವಸ್ತುಗಳ ಬೆಲೆ ಕಡಿಮೆಯಾಗಿದೆ.

**(17ನೇ ಪುಟಕ್ಕೆ)**

# ಎಂಎಸ್ಎಂಇ; ಬಲವರ್ಧನೆಯ ಚಾಲಕ ಶಕ್ತಿ



* ಅನಿಲ್ ಭಾರದ್ವಾಜ್

**ಕೃಷಿ ಮತ್ತು ಮೂಲಸೌಕರ್ಯವೃದ್ಧಿಗೆ ಭಾರೀ ಪ್ರಮಾಣದ ಹಣ ಮೀಸಲಿಟ್ಟಿರುವುದರಿಂದ ಜಿಡಿಪಿ ಬೆಳವಣಿಗೆಗೆ ಹೆಚ್ಚಿನ ಉತ್ತೇಜನ ನೀಡಿದಂತಾಗುತ್ತದೆ. ಉದ್ಯೋಗ ಸೃಷ್ಟಿಗೆ ಎಂಎಸ್ಎಂಇಗಳು ಅತ್ಯುತ್ತಮ ಎಂದು ಪರಿಗಣಿಸಲಾಗಿದೆ.**

ಸಂಸತ್ತಿನಲ್ಲಿ ಫೆಬ್ರವರಿ 1, 2018ರಂದು ಕೇಂದ್ರ ಹಣಕಾಸು ಸಚಿವರು ಮಂಡಿಸಿದ 2018–19ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯವಾಗಿ ನಾಲ್ಕು ವಲಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅವುಗಳೆಂದರೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ, ಆರೋಗ್ಯ ರಕ್ಷಣೆ ಮತ್ತು ಮಧ್ಯಮ, ಸಣ್ಣ ಹಾಗೂ ಅತಿಸಣ್ಣ ಕೈಗಾರಿಕೆಗಳು (ಎಂಎಸ್ಎಂಇ) ಮೂಲಕ ಉದ್ಯೋಗ ಸೃಷ್ಟಿ.

ಈ ಲೇಖನದಲ್ಲಿ ನಾಲ್ಕನೇ ಅಂಶದ ಬಗ್ಗೆ ಹೆಚ್ಚಿನ ಗಮನಹರಿಸಲಾಗುತ್ತಿದೆ, ಅದೆಂದರೆ ಮಧ್ಯಮ, ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳು (ಎಂಎಸ್ಎಂಇ). ಬಜೆಟ್ ಮಂಡನೆ ಮರುದಿನವೇ ಕ್ರಿಸಿಡೆಕ್ಸ್ ಉದ್ಘಾಟಿಸಿದ ಕೇಂದ್ರ ಹಣಕಾಸು ಸಚಿವರು ಭಾರತೀಯ ಆರ್ಥಿಕತೆಯ ಒಗ್ಗೂಡಿಸುವಿಕೆಗೆ ಮಧ್ಯಮ, ಸಣ್ಣ ಹಾಗೂ ಅತಿಸಣ್ಣ ಕೈಗಾರಿಕೆಗಳು (ಎಂಎಸ್ಎಂಇ) ಇಂಜಿನ್, ಇವು ಒಂದು ಯಂತ್ರ ಅಥವಾ ಸಾಧನದ ರೀತಿ ಕಾರ್ಯನಿರ್ವಹಿಸುತ್ತಿವೆ ಎಂದು ಘೋಷಿಸಿದ್ದಾರೆ. ಕೊನೆಗೂ ಎಂಎಸ್ಎಂಇಗಳಿಗೆ ಮಾನ್ಯತೆ ಸಿಕ್ಕಿದೆ.

ಉದ್ಯೋಗ ಸೃಷ್ಟಿಗಾಗಿ ಸಶಕ್ತ ಕ್ರಮ ಕೈಗೊಳ್ಳದಿದ್ದರೆ ಭಾರತದಲ್ಲಿ ಕ್ರಮೇಣ ಬಿಕ್ಕಟ್ಟಿನ ರೀತಿ ಸಂದರ್ಭ ಸೃಷ್ಟಿಯಾಗುತ್ತದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಪ್ರತಿವರ್ಷ ಉದ್ಯೋಗ ಮಾರುಕಟ್ಟೆಗೆ 10 ರಿಂದ 12 ದಶಲಕ್ಷ ಜನ ಬರುತ್ತಿದ್ದರೂ ಅವರಿಗೆ ಅಗತ್ಯ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ವಿಫಲವಾಗುತ್ತಿದ್ದೇವೆ. ನಿಜವಾಗಿ ಹೇಳಬೇಕೆಂದರೆ ಉತ್ಪಾದನಾ ವಲಯಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದೆ. ಜಿಡಿಪಿಗೆ ಅದರ ಕೊಡುಗೆಯನ್ನು ಶೇಕಡ 25ಕ್ಕೆ ಹೆಚ್ಚಿಸಲು ಪ್ರಯತ್ನ ನಡೆಸಿದೆಯಾದರೂ ಅದು ಶೇಕಡ 15ರಿಂದ 16ಕ್ಕಿಂತ ಮೇಲೇರುತ್ತಿಲ್ಲ. ಆದರೆ ಯಾವುದೇ ಸುಧಾರಣೆಗಳಿಲ್ಲದೆ, ಎಂಎಸ್ಎಂಇಗಳಲ್ಲಿ ಪ್ರತಿಫಲ ಪ್ರಮಾಣ ಮುಂದುವರಿದಿದೆ.

2018–19ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಈಗಿನ ಸ್ಥಿತಿಯಲ್ಲಿ ಬದಲಾವಣೆ ತರುವ ಸಂಕೇತಗಳು ಕಾಣುತ್ತಿವೆ.

ಮೊದಲಿಗೆ ಎಲ್ಲ ವಲಯಗಳಲ್ಲಿ ನಿಗದಿತ ಅವಧಿಯ ಉದ್ಯೋಗ ಮೀಸಲಿಡಲು ಅವಕಾಶ ಕಲ್ಪಿಸಿ ಘೋಷಿಸಲಾಗಿದೆ. ಮೊದಲು ಇದು ಕೇವಲ ಜವಳಿ ವಲಯಕ್ಕೆ ಸೀಮಿತವಾಗಿತ್ತು. ಇದೀಗ ಎಲ್ಲ ವಲಯಗಳನ್ನು ಅದರ ವ್ಯಾಪ್ತಿಗೆ ತಂದಿರುವುದು ಕಾರ್ಮಿಕ ಸುಧಾರಣೆಯಲ್ಲಿ ಮಹತ್ವದ ಬದಲಾವಣೆಯಾಗಿದೆ. ಇದು ಉದ್ಯೋಗಗಳನ್ನೂ ಸೃಷ್ಟಿಸುತ್ತದೆ. ಕೆಲವು ವಲಯಗಳಲ್ಲಿನ ಉದ್ಯೋಗಗಳು ಋತುಮಾನಕ್ಕೆ ಮತ್ತು ಕೆಲವೊಂದು ಅವಧಿಯಲ್ಲಿ ಮಾತ್ರ ಇರುತ್ತವೆ. ಇದರಡಿ ಉದ್ಯೋಗದಾತರು ಜನರನ್ನು ಉದ್ಯೋಗಕ್ಕೆ ಪಡೆಯುವುದಿಲ್ಲ ಅಥವಾ ಉದ್ಯೋಗ ನೀಡಿದರೂ ಆ ಬಗ್ಗೆ ವರದಿ ನೀಡುವುದಿಲ್ಲ, ಏಕೆಂದರೆ ಅತ್ಯಲ್ಪ ಅವಧಿಗೆ ಅವರನ್ನು ನೇಮಕ ಮಾಡಿಕೊಳ್ಳುವುದು ಅಕ್ರಮವಾಗುತ್ತದೆ. (ಇಂತಹ ಸಂದೇಹಾತ್ಮಕ ಒಂದು ಪ್ರಸ್ತಾವನೆ

* ಪ್ರಧಾನ ಕಾರ್ಯದರ್ಶಿ, ಎಫ್ಐಎಸ್ಎಮ್ಇ, ನವದೆಹಲಿ. E-mail : sg@fisme.org.in

ಚಾಲ್ತಿಯಲ್ಲಿದ್ದರೂ ಕಾರ್ಮಿಕ ಸಂಘಟನೆಗಳ ಪ್ರಬಲ ವಿರೋಧದಿಂದಾಗಿ ಅದು ಜಾರಿಯಾಗುತ್ತಿಲ್ಲ).

ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವುದನ್ನು ಉತ್ತೇಜಿಸಲು ಬಜೆಟ್‌ನಲ್ಲಿ ಹೆಚ್ಚುವರಿ ದುಡಿಯುವ ಸಿಬ್ಬಂದಿಗಳ ವೆಚ್ಚದ ಮೇಲಿನ ಶೇಕಡ 130ರಷ್ಟು ವೆಚ್ಚದ ಕಡಿತಕ್ಕೆ ಅವಕಾಶ ಮಾಡಿಕೊಡಲಾಗಿದೆ. ಅಲ್ಲದೆ ಹೊಸ ಉದ್ಯೋಗಿಗಳಿಗೆ ಮೂರು ವರ್ಷಗಳ ಕಾಲ ಸರ್ಕಾರ ತಾನೇ ಭವಿಷ್ಯನಿಧಿ ವಂತಿಗೆಯನ್ನೂ ಸಹ ಭರಿಸುತ್ತದೆ.

ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಮತ್ತೊಂದು ಬಲವಾದ ಅಂಶವೆಂದರೆ ಉತ್ಪಾದನಾ ವಲಯಕ್ಕೆ ಉತ್ತೇಜನ ನೀಡಿರುವುದು. ಈ ವಲಯದಲ್ಲಿನ 40 ಕಾರ್ಮಿಕ ಆಧಾರಿತ ಉತ್ಪನ್ನಗಳಲ್ಲಿ ದೇಶಿ ಮೌಲ್ಯವರ್ಧನೆ ಉತ್ತೇಜನಕ್ಕೆ ಸೀಮಾಸುಂಕವನ್ನು ಶೇಕಡ 5ರಿಂದ 15ಕ್ಕೆ ಹೆಚ್ಚಿಸಲಾಗಿದೆ. ಈ ಮುಂದಿನ ವಿಭಾಗಗಳಲ್ಲಿ ಆಮದು ತಡೆಯಲು ಹೆಚ್ಚಿನ ರಕ್ಷಣೆ ದೊರಕಿದಂತಾಗಿದೆ.

* ಸಂಸ್ಕರಿತ ಆಹಾರ. * ಸುಗಂಧ ದ್ರವ್ಯ ಮತ್ತು ಶೌಚಾಲಯ ಬಳಕೆ ಉತ್ಪನ್ನಗಳು. * ಆಟೋಮೊಬೈಲ್ ಮತ್ತು ಆಟೋ ಬಿಡಿ ಭಾಗಗಳು. * ಪಾದರಕ್ಷೆ. * ವಜ್ರ, ಅಮೂಲ್ಯ ಹರಳುಗಳು ಮತ್ತು ಆಭರಣ. * ವಿದ್ಯುನ್ಮಾನ ಮತ್ತು ಹಾರ್ಡ್‌ವೇರ್. * ಎಲ್‌ಸಿಡಿ/ಎಲ್‌ಇಡಿ / ಓಎಲ್‌ಇಡಿ ಪ್ಯಾನಲ್ ಮತ್ತು ಇತರೆ ಉತ್ಪನ್ನಗಳು. * ಪೀಠೋಪಕರಣಗಳು. * ಕೈಗಡಿಯಾರ ಮತ್ತು ಗೋಡೆ ಗಡಿಯಾರ. * ಆಟಿಕೆಗಳು, ಟ್ರೈಸಿಕಲ್, ಸ್ಕೂಟರ್, ಪೆಡಲ್‌ಕಾರ್, ಕ್ರೀಡಾ ಸಾಮಗ್ರಿ. * ಗೇರು (ಕಚ್ಚಾ ಗೋಡಂಬಿ). * ಖಾದ್ಯ ತೈಲ (ವನಸ್ಪತಿ). * ಮಸೂರಗಳು. * ಮೇಣದಬತ್ತಿ, ಸನ್‌ಗ್ಲಾಸ್ ಇತ್ಯಾದಿ.

ಇದಲ್ಲದೆ ಸೌರ ಆಧರಿತ ಗಾಜುಗಳು, ಸೌರ ಸೆಲ್‌ಗಳು, ಪ್ಯಾನಲ್ ಮತ್ತಿತರ ಕಚ್ಚಾ ವಸ್ತುಗಳು, ಶ್ರವಣ ಸಾಧನಗಳಿಗೆ ಬಳಸುವ ಬಿಡಿ ಭಾಗಗಳು ಹಾಗೂ ಸಾಮಗ್ರಿಗಳಿಗೆ ಸೀಮಾ ಸುಂಕದಿಂದ ವಿನಾಯಿತಿ ನೀಡಲಾಗಿದೆ.



ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ 1991ರಿಂದೀಚೆಗೆ ಅನುಸರಿಸುತ್ತಿರುವ ಸೀಮಾಸುಂಕ ಇಳಿಮುಖಿಯಾಗುತ್ತಿರುವುದು. ಇದು ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲು ಕೈಗೊಂಡಿರುವ ಕ್ರಮವಾಗಿದೆ. ಈ ಸಂಕೇತಗಳು ಅವಾಸ್ತವಿಕ ಧೋರಣೆಯದಾಗಿದೆ. ತೆರಿಗೆಗಳನ್ನು ಜಾರಿಗೊಳಿಸಿದ ನಂತರವೂ ವಿಶ್ವ ವ್ಯಾಪಾರ ಸಂಸ್ಥೆ ಒಪ್ಪಂದದಂತೆ ತೆರಿಗೆ ದರ ಶೇಕಡ 25ರಿಂದ 40ರ ವ್ಯಾಪ್ತಿಯಲ್ಲೇ ಇದೆ. ಈ ಕ್ರಮದ ಬಗ್ಗೆ ಕೆಲವು ತಜ್ಞರು ಟೀಕಿಸಿದ್ದು ಅವರು ಇದು ಕಠಿಣ ಕ್ರಮವಾಗಿದೆ ಎಂದು ಬಣ್ಣಿಸಿದ್ದಾರೆ. ಈ ಕ್ರಮ ಭಾರತೀಯ ಉದ್ಯಮವನ್ನು ರಕ್ಷಿಸುವ ಕ್ರಮವಾಗಿದೆಯೇ ಅಥವಾ ಉದ್ಯಮವನ್ನು ಜಾಗತಿಕ ಸ್ಪರ್ಧೆ ಎದುರಿಸಲು ಸಜ್ಜುಗೊಳಿಸುವಂತಹುದೇ? ಎಂದು ಕೇಳಿದ್ದಾರೆ. ಇದೆಲ್ಲದಕ್ಕಿಂತ ಹೆಚ್ಚಾಗಿ ತೆರಿಗೆ ಏರಿಕೆ ಕೆಲವೊಂದು ಹಿತಾಸಕ್ತಿ ಅಥವಾ ಲಾಭಿಯ ಒತ್ತಡಕ್ಕೆ ಮಾಡಿರುವುದಂತಹುದಾಗಿದೆ. ಉದಾಹರಣೆಗೆ ಉಕ್ಕು ಮತ್ತು ಅಲ್ಯುಮಿನಿಯಂ ಇತ್ಯಾದಿ. ಇವೆಲ್ಲ ಮೂಲ ಸಾಮಗ್ರಿಗಳು.

ಮೂರನೆಯದಾಗಿ ಖಾಸಗಿ ವಲಯದ ಬ್ಯಾಂಕುಗಳು ಮತ್ತು ಕಾರ್ಪೊರೇಟ್‌ಗಳನ್ನು ವ್ಯಾಪಾರ ವಿದ್ಯುನ್ಮಾನ ಸ್ವೀಕರಿಸಬಹುದಾದ ವಿನಾಯಿತಿ ವ್ಯವಸ್ಥೆ (ಟ್ರೆಡ್ಸ್–ಟಿಆರ್‌ಇಡಿಎಸ್) ವ್ಯಾಪ್ತಿಗೆ ತರಲಾಗುವುದು ಎಂದು ಪ್ರಕಟಿಸಲಾಗಿದೆ. ಇದು ಆನ್‌ಲೈನ್ ಬಿಲ್ಲಿಂಗ್ ಡಿಸ್ಕೌಂಟ್ ವ್ಯವಸ್ಥೆಯಾಗಿದೆ. ಇದನ್ನು ಸರಕು ಮತ್ತು ಸೇವಾ ತೆರಿಗೆ ಸಂಪರ್ಕ ಜಾಲದ ಜತೆ ಸಂಯೋಜಿಸಲಾಗುತ್ತಿದೆ. ಇದರಿಂದಾಗಿ ದೊಡ್ಡ ಖರೀದಿದಾರರು ಮತ್ತು ಎಂಎಸ್‌ಎಂಇ ಮಾರಾಟಗಾರರ ನಡುವಿನ ಎಲ್ಲ ವಹಿವಾಟುಗಳು ಸಹಜವಾಗಿಯೇ ಪರಿಶೀಲನೆಗೆ ಒಳಪಡುತ್ತವೆ. ಒಪ್ಪಿತ ಸ್ವೀಕೃತಿ ಪದ್ಧತಿಯನ್ನು ತರಲು ಇನ್ನೂ ಹೆಚ್ಚಿನ ಶಾಸನಾತ್ಮಕ ಕ್ರಮಗಳ ಅಗತ್ಯವಿದೆ.

ನಾಲ್ಕನೆಯದಾಗಿ ಬಜೆಟ್‌ನಲ್ಲಿ ಮಧ್ಯಮ, ಸಣ್ಣ ಹಾಗೂ ಅತಿಸಣ್ಣ ಕೈಗಾರಿಕಾ (ಎಂಎಸ್‌ಎಂಇ) ವಲಯಕ್ಕೆ ಸಾಲಸೌಲಭ್ಯ ಮತ್ತು ಬಂಡವಾಳ, ಬಡ್ಡಿ ಸಬ್ಸಿಡಿ ಮತ್ತು ಆವಿಷ್ಕಾರಗಳ ಉತ್ತೇಜನಕ್ಕೆ 3794 ಕೋಟಿ ಅನುದಾನ ಮೀಸಲಿಡಲಾಗಿದೆ. ಬಹುತೇಕ ಎಂಎಸ್‌ಎಂಇ ವಲಯ ಈ ಕ್ರಮವನ್ನು ಸ್ವಾಗತಿಸಿದೆ. ಆದರೆ ಆ ಬಗ್ಗೆ ಹೆಚ್ಚಿನ ವಿವರಗಳಿಲ್ಲದೆ ಪ್ರತಿಕ್ರಿಯಿಸುವುದು ಕಷ್ಟಕರ.

ಮೊದಲು ರೂ. 50 ಕೋಟಿ ವರೆಗೆ ವಹಿವಾಟು ನಡೆಸುತ್ತಿರುವ ಕಂಪನಿಗಳಿಗೆ ಶೇ.25ರ ಕಾರ್ಪೊರೇಟ್ ತೆರಿಗೆ ಇಳಿಕೆ ಇತ್ತು. ಇದೀಗ ಆ ವ್ಯಾಪ್ತಿಯನ್ನು 250 ಕೋಟಿ ರೂಪಾಯಿ ವಹಿವಾಟುಗಳ ವರೆಗೆ ವಿಸ್ತರಿಸಿರುವುದರಿಂದ ಎಂಎಸ್‌ಎಂಇ ವಲಯಕ್ಕೆ ಹೆಚ್ಚಿನ ಪ್ರಯೋಜನವಾಗಲಿದೆ. ಆದರೆ ಇದರಲ್ಲಿ ಕಂಪನಿಗಳಿಗೆ ಮಾತ್ರ ಪ್ರಯೋಜನ ಸೀಮಿತಗೊಳಿಸಲಾಗಿದೆ. ಆದರೆ ಬಹುತೇಕ ಅಂದರೆ ಶೇಕಡ 93ರಷ್ಟು ಎಂಎಸ್‌ಎಂಇಗಳು ಕಂಪನಿಗಳಾಗಿರುವುದಿಲ್ಲ, ಅವು ಪಾಲುದಾರಿಕೆ ಸಂಸ್ಥೆ ಅಥವಾ ಪ್ರೊಪ್ರೈಟರ್ ಸಂಸ್ಥೆಗಳಾಗಿರುತ್ತವೆ.

ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಮತ್ತೊಂದು ಒಳ್ಳೆಯ ಕ್ರಮವೆಂದರೆ ಕಡಿಮೆ ಶ್ರೇಯಾಂಕವಿರುವ ಕಂಪನಿಗಳೂ ಸಹ ಷೇರು ಮಾರುಕಟ್ಟೆಯನ್ನು ಪ್ರವೇಶಿಸಲು ಅರ್ಹತೆ ಪಡೆಯಬಹುದು ಎನ್ನುವುದಾಗಿದೆ. ಕೇವಲ ದೊಡ್ಡ ಕಂಪನಿಗಳು ಮಾತ್ರ ಷೇರು ಮಾರುಕಟ್ಟೆ ಪ್ರವೇಶಿಸಿದರೆ, ಎಂಎಸ್‌ಎಂಇಗಳಿಗೆ ಬ್ಯಾಂಕುಗಳಿಂದ ಹೆಚ್ಚಿನ ಹಣಕಾಸು ಸೌಲಭ್ಯ ಸಿಗುತ್ತದೆ.

ಒಟ್ಟಾರೆ ಬಜೆಟ್ ಸೂಚಿಸಿರುವ ಹಾದಿ ಸಕಾರಾತ್ಮಕ ನಿಟ್ಟಿನಲ್ಲಿದೆ. ಕೃಷಿ ಮತ್ತು ಮೂಲಸೌಕರ್ಯವೃದ್ಧಿಗೆ ಭಾರೀ ಪ್ರಮಾಣದ ಹಣ ಮೀಸಲಿಟ್ಟಿರುವುದರಿಂದ ಜಿಡಿಪಿ ಬೆಳವಣಿಗೆಗೆ ಅಗತ್ಯ ಬೇಡಿಕೆ ಮತ್ತು ಹೆಚ್ಚಿನ ಉತ್ತೇಜನ ನೀಡಿದಂತಾಗುತ್ತದೆ. ಉದ್ಯೋಗ ಸೃಷ್ಟಿಗೆ ಎಂಎಸ್‌ಎಂಇಗಳು ಅತ್ಯುತ್ತಮ ಎಂದು ಪರಿಗಣಿಸಲಾಗಿದೆ. ವಾಸ್ತವವಾಗಿ ಹೆಚ್ಚಿನ ಬಂಡವಾಳ ಹರಿದುಬಂದು ಅಗತ್ಯಕ್ಕಿಂತ ಉತ್ತಮ ಫಲಿತಾಂಶ ಕಾಣಬಹುದಾಗಿದೆ ಎಂಬ ಭರವಸೆ ಇದೆ. ❑

# ದೇಶ ಜೋಡಿಸುವ ಮೂಲಸೌಕರ್ಯ ಸೃಷ್ಟಿ



* ಜಿ. ರಘುರಾಮ್



ಒಟ್ಟು ದೇಶೀಯ ಉತ್ಪನ್ನ 'ಜಿಡಿಪಿ' ದರ ಪ್ರಗತಿ ಕಾಣಬೇಕಾದರೆ, ಮೂಲಸೌಕರ್ಯ ರಂಗಕ್ಕೆ ಕನಿಷ್ಠ 50 ಟ್ರಿಲಿಯನ್ ರೂಪಾಯಿಗಿಂತ ಹೆಚ್ಚಿನ ಹೂಡಿಕೆಯ ಅಗತ್ಯವಿದೆ. ರಸ್ತೆ, ವಿಮಾನ ನಿಲ್ದಾಣಗಳು, ರೈಲ್ವೆ, ಬಂದರು, ಜಲಮಾರ್ಗಗಳಿಗೆ ಸಂಪರ್ಕ ಕಲ್ಪಿಸಿ, ರಾಷ್ಟ್ರವನ್ನು ಸಮಗ್ರಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ದೇಶಕ್ಕೆ ಅಗತ್ಯವಿರುವ ಹೂಡಿಕೆ ಕ್ರೋಢೀಕರಣವನ್ನು ದೃಢಪಡಿಸಲಾಗುವುದು ಎಂದು ಹಣಕಾಸು ಸಚಿವರು ಘೋಷಿಸಿದ್ದಾರೆ.

ಇತ್ತೀಚೆಗೆ ಮಂಡನೆಯಾದ ಕೇಂದ್ರ ಬಜೆಟ್‌ನಲ್ಲಿ ಮೂಲಸೌಕರ್ಯ ವಲಯದ ಅಭಿವೃದ್ಧಿಗೆ 5.97 ಟ್ರಿಲಿಯನ್ ರೂಪಾಯಿ ಅನುದಾನ ಹಂಚಿಕೆ ಮಾಡಲಾಗಿದೆ. 2017–18ನೇ ಸಾಲಿನ 4.94 ಟ್ರಿಲಿಯನ್ ರೂಪಾಯಿಯ ನಿರೀಕ್ಷಿತ ವೆಚ್ಚಕ್ಕೆ ಹೋಲಿಕೆ ಮಾಡಿದಾಗ ಈ ಬಾರಿ ಹೆಚ್ಚಿನ ಅನುದಾನ ಹಂಚಿಕೆ ಮಾಡಲಾಗಿದೆ. ಒಟ್ಟಾರೆ ಬಜೆಟ್ ಅನುದಾನ ಹಂಚಿಕೆಯಲ್ಲಿ ಈ ಬಾರಿ ಮೂಲಸೌಕರ್ಯ ರಂಗಕ್ಕೆ ಗಣನೀಯ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ. ರೈಲ್ವೆ, ರಸ್ತೆ, ನಾಗರಿಕ ವಿಮಾನಯಾನ ಸೇರಿದಂತೆ ಮೂಲಸೌಕರ್ಯ ರಂಗದ ಎಲ್ಲಾ ಉಪವಲಯಗಳಿಗೂ ಬಜೆಟ್ ಅನುದಾನ ಹಂಚಿಕೆಯಲ್ಲಿ ಹೆಚ್ಚಳವಾಗಿದೆ.

ಭಾರತೀಯ ರೈಲ್ವೆಗೆ ಈ ಬಾರಿ ಅತಿ ಹೆಚ್ಚಿನ ಹೂಡಿಕೆ ಮಾಡುವ ಪ್ರಸ್ತಾವನೆ ಮಾಡಲಾಗಿದೆ. ಜೋಡಿ ರೈಲ್ವೆ ಮಾರ್ಗ, ಮೂರು ಮತ್ತು ನಾಲ್ಕನೇ ಮಾರ್ಗಗಳ ಅಭಿವೃದ್ಧಿ ಕಾಮಗಾರಿ, 5 ಸಾವಿರ ಕಿ.ಮೀ. ರೈಲು ಗೇಜ್ ಪರಿವರ್ತನೆ, ದೇಶಾದ್ಯಂತ 600 ರೈಲು ನಿಲ್ದಾಣಗಳ ಮರುಅಭಿವೃದ್ಧಿ, ಆಧುನಿಕ ರೈಲುಗಳ ಪರಿಚಯ ಸೇರಿದಂತೆ ರೈಲ್ವೆ ವಲಯದ ಸಾಮರ್ಥ್ಯ ಸೃಷ್ಟಿಗೆ ಈ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಉದ್ದೇಶಿತ ಗೇಜ್ ಪರಿವರ್ತನೆಯಲ್ಲಿ ರಾಷ್ಟ್ರದ ರೈಲು ಮಾರ್ಗವನ್ನು ಏಕರೂಪದ ಬ್ರಾಡ್‌ಗೇಜ್‌ಗೆ ಪರಿವರ್ತಿಸುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ. ಇದಲ್ಲದೆ ಸರ್ಕಾರ, ಬೆಂಗಳೂರು, ಮುಂಬೈ ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿ 'ಉಪ ನಗರ ರೈಲು ಯೋಜನೆ'ಗಳ ಅಭಿವೃದ್ಧಿಗೂ ವಿಶೇಷ ಗಮನ ನೀಡಿದೆ. ಮುಂಬೈ ನಗರ ಸಾರಿಗೆ ಯೋಜನೆಯನ್ನು 3ಎ ಹಂತದಲ್ಲಿ 0.55 ಟ್ರಿಲಿಯನ್ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ಪ್ರಸ್ತಾಪಿಸಿದೆ.

ರಸ್ತೆ ಮೂಲಸೌಕರ್ಯ ಅಭಿವೃದ್ಧಿಯ ಬಜೆಟ್ ಯೋಜನಾ ಗಾತ್ರವನ್ನು 1.21 ಟ್ರಿಲಿಯನ್ ರೂಪಾಯಿಗೆ ಏರಿಸಲಾಗಿದೆ. 5.35 ಟ್ರಿಲಿಯನ್ ರೂಪಾಯಿಯ ಭಾರತ್‌ಮಾಲಾ ಯೋಜನೆಯ ಒಂದು ಭಾಗ ಇದಾಗಿದೆ. ಆರ್ಥಿಕ ಕಾರಿಡಾರ್‌ಗಳ ಅಭಿವೃದ್ಧಿ, ಪ್ರಮುಖ ರಾಷ್ಟ್ರೀಯ ಮತ್ತು ಗಡಿ ಭಾಗದ ಕಾರಿಡಾರ್‌ಗಳ ದಕ್ಷತೆ ಸುಧಾರಣೆ, ಕರಾವಳಿ ಮತ್ತು ಬಂದರುಗಳನ್ನು ಸಂಪರ್ಕಿಸುವ ರಸ್ತೆಗಳ ಸುಧಾರಣೆ ಇವುಗಳಲ್ಲಿ ಸೇರಿವೆ.

ಬಜೆಟ್ ಅನುದಾನ ಮತ್ತು ಆಂತರಿಕ ಉಳಿತಾಯದ ಹಣದ ಜೊತೆಗೆ, ರೈಲ್ವೆ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳು ಈ ಮೇಲಿನ ಯೋಜನೆಗಳಿಗೆ ಆರ್ಥಿಕ ನೆರವು ಒದಗಿಸಲಿವೆ. ರೈಲ್ವೆ ಇಲಾಖೆಯು ಸಾಂಪ್ರದಾಯಿಕವಾಗಿ ಬಾಂಡ್‌ಗಳ ಮೂಲಕ ನಿಧಿ ಕ್ರೋಢೀಕರಣ ಮಾಡುವ ಜತೆಗೆ, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳಿಗೆ ಅವಕಾಶ ಕಲ್ಪಿಸಿ ನಿಧಿ ಸಂಗ್ರಹಿಸುವ ಗುರಿ ಹಾಕಿಕೊಂಡಿದೆ. ಅದರಲ್ಲೂ ವಿಶೇಷವಾಗಿ, ರೈಲು ನಿಲ್ದಾಣಗಳ ಮರುಅಭಿವೃದ್ಧಿ, ರೋಲಿಂಗ್ ಸ್ಟಾಕ್‌ಗಳ ಉತ್ಪಾದನೆಗೆ ಅವಕಾಶ ನೀಡಿ ನಿಧಿ ಸಂಗ್ರಹಕ್ಕೆ ಗಮನ ನೀಡಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಟೋಲ್ ಸಂಗ್ರಹ, ಕಾರ್ಯಾಚರಣೆ ಮತ್ತು ವರ್ಗಾವಣೆ, ರಸ್ತೆ ಸ್ವತ್ತುಗಳನ್ನು ಬಳಸಿ, ಹಣಕಾಸು ಮಾರುಕಟ್ಟೆಯಲ್ಲಿ ಈಕ್ವಿಟಿ

* ನಿರ್ದೇಶಕರು, ಭಾರತೀಯ ನಿರ್ವಹಣಾ ಸಂಸ್ಥೆ, ಬೆಂಗಳೂರು. E-mail : graghu@iimb.ac.in

(ಷೇರುಗಳು) ಮೂಲಕ ನಿಧಿ ಸಂಗ್ರಹದ ಉದ್ದೇಶ ಹೊಂದಿದೆ.

ಸಾಗರ ವಲಯದ ಅಭಿವೃದ್ಧಿಗೂ ಸರ್ಕಾರ ಆದ್ಯತೆಯ ಗಮನ ನೀಡಿದೆ. ಸಾಗರಮಾಲಾ ಯೋಜನೆಯ ಅಡಿ ಸಾಗರ ಮಾರ್ಗಗಳ ಅಭಿವೃದ್ಧಿಗೆ ಆದ್ಯತೆ ನೀಡಿದೆ. ನಾಗರಿಕ ವಿಮಾನಯಾನ ರಂಗದಲ್ಲಿ ವಿಮಾನ ನಿಲ್ದಾಣಗಳ ಸಾಮರ್ಥ್ಯ ಸುಧಾರಣೆಗೆ ಗಮನ ಕೇಂದ್ರೀಕರಿಸಿದೆ. ಹೊಸ ವಿಮಾನ ನಿಲ್ದಾಣಗಳ ಅಭಿವೃದ್ಧಿ, ಹೆಲಿಪ್ಯಾಡ್ ಮತ್ತು ಹೊಸ ಸ್ಥಳಗಳಿಗೆ ವಿಮಾನ ಸಂಪರ್ಕ ಸೇವೆ ಹೆಚ್ಚಿಸಲು ಒತ್ತು ನೀಡಿದೆ.

ಮೂಲಸೌಕರ್ಯ ವಲಯದ ಇತರೆ ಆಭಿವೃದ್ಧಿ ಪ್ರಸ್ತಾವನೆಗಳೆಂದರೆ, ದೇಶಾದ್ಯಂತ ಸ್ಮಾರ್ಟ್ ಸಿಟಿಗಳ ನಿರ್ಮಾಣ, ಗ್ರಾಮೀಣ ರಸ್ತೆಗಳ ಅಭಿವೃದ್ಧಿ, ವಸತಿಗಳ ನಿರ್ಮಾಣ, ವಿದ್ಯುತ್ ಸಂಪರ್ಕ, ನೈರ್ಮಲ್ಯೀಕರಣ, ನೀರಾವರಿ ಮತ್ತು ನೀರು ಪೂರೈಕೆ ಮೂಲಕ ಗ್ರಾಮೀಣ ಭಾಗಗಳಿಗೆ ಮೂಲಸೌಕರ್ಯ ಒದಗಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

### ಯೋಜನೆಗಳ ವೆಚ್ಚಕ್ಕೆ ಸಾಕಷ್ಟಿಲ್ಲದ ಆರ್ಥಿಕ ಸಂಪನ್ಮೂಲ

ಬಜೆಟ್‌ನಲ್ಲಿ ಮೂಲಸೌಕರ್ಯ ವಲಯಕ್ಕೆ ಏರಿಕೆ ಮಾಡಲಾಗಿರುವ ಅನುದಾನ ಪ್ರಮಾಣವನ್ನು ಹೇಗೆ ಪರಿಣಾಮಕಾರಿಯಾಗಿ ವೆಚ್ಚ ಮಾಡುತ್ತೇವೆ ಎಂಬುದೇ ನಮ್ಮ ಮುಂದಿರುವ ಮಹತ್ವದ ಸವಾಲಾಗಿದೆ. ಉದಾಹರಣೆಗೆ, 2017–18ರ ಬಜೆಟ್‌ನಲ್ಲಿ ರೈಲ್ವೆ ವಲಯಕ್ಕೆ ಒಟ್ಟು ಬಜೆಟ್ ಬೆಂಬಲ 0.55 ಟ್ರಿಲಿಯನ್ ರೂಪಾಯಿ ಹಂಚಿಕೆ ಮಾಡಲಾಗಿತ್ತು. ಆದರೆ, ನಿರೀಕ್ಷಿತ ವೆಚ್ಚವನ್ನು ಪರಿಷ್ಕರಿಸಿ, 0.42 ಟ್ರಿಲಿಯನ್ ರೂಪಾಯಿಗೆ ತಗ್ಗಿಸಲಾಗಿತ್ತು. ಅದೇ ಈ ಬಾರಿಯ ಬಜೆಟ್‌ನಲ್ಲಿ ರೈಲ್ವೆ ಇಲಾಖೆಗೆ ಒಟ್ಟು ಬಜೆಟ್ ಅನುದಾನವನ್ನು ಕಳೆದ ಸಾಲಿನಷ್ಟೇ ಅಂದರೆ 0.55 ಟ್ರಿಲಿಯನ್ ರೂಪಾಯಿಗೆ ಸೀಮಿತಗೊಳಿಸಲಾಗಿದೆ. ಈ ಬಾರಿ ಅನುದಾನವನ್ನು ಏರಿಕೆ ಮಾಡಿಲ್ಲ.

ಗಮನಾರ್ಹ ಸಂಗತಿ ಎಂದರೆ, ಮೂಲಸೌಕರ್ಯ ವಲಯದ ನೂರೆಂಟು ಯೋಜನೆಗಳಿಗೆ ಸರ್ಕಾರವೇನೊ ಸಾಕಷ್ಟು ಅನುದಾನ ಹಂಚಿಕೆ ಮಾಡಿದೆ. ಅದು ಸ್ವಾಗತಾರ್ಹ ಕ್ರಮವೇ ಸರಿ. ಆದರೆ, ಈ ಎಲ್ಲಾ ಯೋಜನೆಗಳಿಗೆ ಖರ್ಚು ಮಾಡಲು ಸರ್ಕಾರ ಶ್ರಮಿಸಬೇಕಿದೆ. ಏಕೆಂದರೆ ಸರ್ಕಾರದ ಆಡಳಿತಾತ್ಮಕ ವಿಷಯಗಳು ಯೋಜನೆಗಳ ವೆಚ್ಚಕ್ಕೆ ಅಡಚಣೆ ಉಂಟು ಮಾಡಲಿವೆ. ಯೋಜನೆಗೆ ಸಂಬಂಧಿಸಿದ ಪರಿಪಕ್ವ ದಾಖಲೆಗಳ ಕೊರತೆ, ಯೋಜನೆಗಳಿಗೆ ತ್ವರಿತವಾಗಿ ಅನುಮತಿ ನೀಡು ವಿಧಿವಿಧಾನಗಳು, ಕಾನೂನಾತ್ಮಕ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಸಮಸ್ಯೆಗಳು, ಮೂಲಸೌಕರ್ಯ ವಲಯದಲ್ಲಿರುವ ಅಪಾರ ಪ್ರಮಾಣದ ಅನುತ್ಪಾದಕ ಸ್ವತ್ತು ಮತ್ತಿತರ ನೂರೆಂಟು ಸಮಸ್ಯೆಗಳಿವೆ. ಈ ಎಲ್ಲಾ ಸಮಸ್ಯೆಗಳು ಸರ್ಕಾರದ ಸಾಲ ಸೌಲಭ್ಯ ಪಡೆಯುವ ಚಿಂತನೆ ಮತ್ತು ಪ್ರಯತ್ನಗಳಿಗೆ ಮಿತಿ ಹಾಕಿವೆ. ಕಾನೂನಾತ್ಮಕ ವಿವಾದಗಳು ಬಗೆಹರಿಯದೆ ಹಾಗೂ ಸರ್ಕಾರದ ಅನುಮತಿ ಸಿಗದೆ ಹಲವಾರು ಮೂಲಸೌಕರ್ಯ ಯೋಜನೆಗಳು ಮಧ್ಯದಾರಿಯಲ್ಲಿ ಬಂದು ನಿಂತಿವೆ.

ಸ್ಥಗಿತಗೊಂಡಿರುವ ಇಂತಹ ಸ್ವತ್ತು ಮತ್ತು ಯೋಜನೆಗಳನ್ನು ಸಂರಕ್ಷಿಸಲು ಸರ್ಕಾರ ಸಂಘಟಿತ ಪ್ರಯತ್ನಗಳನ್ನು ನಡೆಸುವುದು ಅತ್ಯಗತ್ಯ ಮತ್ತು ಅತಿಮುಖ್ಯ. ನಾನಾ ಯೋಜನೆಗಳಿಗೆ ಎದುರಾಗಿರುವ ಕಾನೂನಾತ್ಮಕ ಸಮಸ್ಯೆಗಳು, ಯೋಜನೆಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಹೂಡಿಕೆದಾರರು, ಉದ್ಯಮಿಗಳು ಮತ್ತು ಪಾಲುದಾರರ ಹಲವು ಸಮಸ್ಯೆಗಳನ್ನು ಬಗೆಹರಿಸಲು ರಸ್ತೆ ಮತ್ತು ಹೆದ್ದಾರಿ ಸಚಿವಾಲಯ ಎಲ್ಲಾ ಪ್ರಯತ್ನಗಳನ್ನು ತ್ವರಿತವಾಗಿ ಮಾಡಬೇಕು.

ದುರದೃಷ್ಟಕರ ವಿಚಾರವೆಂದರೆ, ಪ್ರತಿ ವರ್ಷವೂ ಬಜೆಟ್‌ನಲ್ಲಿ ಸರ್ಕಾರ, ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಲು ಮತ್ತು ಹೊಸ ಯೋಜನೆಗಳನ್ನು ಜಾರಿಗೆ ತರಲು ವಿಶೇಷ ಗಮನವನ್ನೇ ನೀಡುತ್ತಾ ಬಂದಿದೆ. ಆದರೆ, ಬಜೆಟ್‌ನಲ್ಲಿ ಘೋಷಣೆಯಾಗುವ ಕಾರ್ಯಕ್ರಮಗಳ ಜಾರಿ ಮತ್ತು ಅನುಷ್ಠಾನದ ವಿವಿಧ ಹಂತಗಳ ಪರಿಶೀಲನೆ ಮತ್ತು ಪರಾಮರ್ಶೆಗೆ ಸರ್ಕಾರದಿಂದ ಯಾವುದೇ ಸೂಕ್ತ ವ್ಯವಸ್ಥೆ ರೂಪುಗೊಳ್ಳುತ್ತಿಲ್ಲ. ಹಣಕಾಸಿನ ಸಮರ್ಪಕ ಬಳಕೆಯಾಗಲಿ, ಕಾಮಗಾರಿಗಳ ಪರಿಶೀಲನೆಯಾಗಲಿ, ಯೋಜನೆಗಳ ವಾಸ್ತವಿಕ ಫಲಶೃತಿಯ ಪರಿಶೀಲನೆ ಮತ್ತು ವಿಶ್ಲೇಷಣೆ ನಡೆಯುವುದೇ ಇಲ್ಲ. ಬಜೆಟ್‌ಗೆ ಮುನ್ನಾ ದಿನ ವಾರ್ಷಿಕವಾಗಿ ಪ್ರಕಟವಾಗುವ ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆಯು ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳ ಒಟ್ಟಾರೆ ಕಾರ್ಯಕ್ಷಮತೆ ಆಧರಿಸಿದ ಕೇವಲ ಒಂದು ದಾಖಲೆಯಾಗಿರುತ್ತದೆ ಅಷ್ಟೆ. ಅದು ಸಮಗ್ರವಾಗಿ, ಎಲ್ಲಾ ವಲಯಗಳು ಮತ್ತು ಉಪವಲಯಗಳ ಕಾರ್ಯಕ್ಷಮತೆಯ ಪರಾಮರ್ಶೆ ನಡೆಸಿರುವುದಿಲ್ಲ. ಬಜೆಟ್‌ನಲ್ಲಿ ರಾಜಕೀಯ ಹಿತಾಸಕ್ತಿಗಳಿಗೆ ಹೆಚ್ಚಿನ ಗಮನ ಕೇಂದ್ರೀಕರಿಸಲಾಗುತ್ತಿದೆ. ಇಂತಹ ಹಿತಾಸಕ್ತಿಗಳಿಂದಾಗಿ ಹಲವಾರು ಯೋಜನೆಗಳನ್ನು ಪುನರಾವರ್ತಿಸಲಾಗುತ್ತಿದೆ. ಕಳೆದ ವರ್ಷ ಘೋಷಿಸಿದ ಕಾರ್ಯಕ್ರಮಗಳನ್ನೇ ಈ ಬಾರಿಯೂ ಪ್ರಕಟಿಸಲಾಗಿದೆ. ಉದಾಹರಣೆಗೆ, ರೈಲು ನಿಲ್ದಾಣಗಳ ಅಭಿವೃದ್ಧಿ ಮತ್ತು ಹೊಸ ವಿಮಾನ ನಿಲ್ದಾಣಗಳ ಆಭಿವೃದ್ಧಿ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದಲೂ ಬಜೆಟ್‌ನಲ್ಲಿ ಘೋಷಿಸುತ್ತಾ ಬರಲಾಗುತ್ತಿದೆ. ಈ ಹಿಂದಿನ ಬಜೆಟ್‌ಗಳಲ್ಲಿ ಸೇತುಭಾರತಂ (ರಾಷ್ಟ್ರೀಯ ಹೆದ್ದಾರಿಯಲ್ಲಿ ಲೆವೆಲ್ ಕ್ರಾಸಿಂಗ್ ತೆಗೆಯುವ ಯೋಜನೆ), ಸಾರಿಗೆ ಸಂಶೋಧನೆ ಮತ್ತು ವಿಶ್ಲೇಷಣೆಯ ವಿಶೇಷ ಘಟಕ ಸ್ಥಾಪನೆ (ಸೂತ್ರ), ಕಾರ್ಯತಂತ್ರ ತಂತ್ರಜ್ಞಾನ ಮತ್ತು ಹೋಲಿಸ್ಟಿಕ್ ಅಡ್ವಾನ್ಸ್‌ಮೆಂಟ್ ಅಡಿ ವಿಶೇಷ ರೈಲ್ವೆ ಸಂಸ್ಥೆ ಸ್ಥಾಪನೆಯಂತಹ ಯೋಜನೆಗಳು ಘೋಷಣೆಯಾಗಿದ್ದವು. ಆದರೆ, ಈ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನ ಸ್ಥಿತಿ ಏನಾಯಿತು, ಅವುಗಳ ಮೂಲ ಉದ್ದೇಶ ಈಡೇರಿತಾ, ಪ್ರಗತಿಯ ಹಂತ ಎಲ್ಲಿಗೆ ಬಂತು ಎಂಬುದನ್ನು ತಿಳಿಯಬೇಕಾಗಿದೆ.

### ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಕಾರ್ಯಕ್ರಮದ ವೆಚ್ಚ ನಿರ್ದೇಶನ

ಪ್ರಧಾನ್ ಮಂತ್ರಿ ಗ್ರಾಮ್ ಸಡಕ್ ಯೋಜನೆಯಂತಹ ದೀರ್ಘಕಾಲೀನ ಬಹುಚಟುವಟಿಕೆಯ ನಾನಾ ವಲಯಗಳ ಕಾರ್ಯಕ್ರಮಗಳಿಗೆ ಕಳೆದ ಕೆಲವು ವರ್ಷಗಳಿಂದ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಸಾಗರ್‌ಮಾಲಾ, ಹೈಸ್ಪೀಡ್ ರೈಲ್ ಮತ್ತು ಭಾರತ್ ಮಾಲಾ ಯೋಜನೆ ಇವೆಲ್ಲಾ ಪರಿಕಲ್ಪನೆ ಹೊಂದಿರುವ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳಾಗಿವೆ. ಭಾರತ್ ಮಾಲಾ ವಾಸ್ತವವಾಗಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಪರಿಷ್ಕೃತ ಕಾರ್ಯಕ್ರಮವಾಗಿದೆ. ಈ ರೀತಿಯ ಪರಿಕಲ್ಪನೆಯು ಯೋಜನೆಗಳ ನಿರ್ದೇಶನಕ್ಕೆ ಸ್ಥಿರತೆ ಒದಗಿಸಬಲ್ಲದು.

ಮಹತ್ವಾಕಾಂಕ್ಷಿಯ ದೀರ್ಘಕಾಲೀನ ಯೋಜನೆಗಳ ಹೊರತಾಗಿ ನಾವು ಹಲವು ಕ್ಷೇತ್ರಗಳಲ್ಲಿ ಎಡವಿದ್ದೇವೆ. ಉದಾಹರಣೆಗೆ, ಪ್ರತಿ ಗ್ರಾಮಕ್ಕೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವ ಭಾರತ್ ಅಂತರ್ಜಾಲ ಯೋಜನೆ (ಹಿಂದಿನ ರಾಷ್ಟ್ರೀಯ ಆಪ್ಟಿಕಲ್ ಫೈಬರ್ ಜಾಲ) ಜಾರಿಯಲ್ಲಿ ಹಲವು ಅಡೆತಡೆಗಳು ಎದುರಾಗಿವೆ. ಇದು ಯೋಜನೆಯ ಸಾಕಷ್ಟು ವಿಳಂಬಕ್ಕೆ ಕಾರಣವಾಗಿದೆ. ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನೆಲೆಗಟ್ಟಿನಲ್ಲಿ ಹೇಳುವುದಾದರೆ, ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆ ಅತ್ಯಂತ ಯಶಸ್ವಿ ಮೂಲಸೌಕರ್ಯ ಯೋಜನೆಯಾಗಿದೆ. ಈ ಯೋಜನೆಯ ಎರಡನೇ ದಶಕದ ಹಂತವು 2021ರ ಬದಲಿಗೆ 2019ರ ಹೊತ್ತಿಗೆ ಮುಂಗಡವಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಹಾಗಾಗಿ, ಮೂರನೇ ಹಂತದಲ್ಲಿ ಯೋಜನೆಯ ಜಾರಿಯನ್ನು ನಿಗದಿತ ಕಾಲ ಗಡುವಿನಲ್ಲಿ ಪೂರ್ಣಗೊಳಿಸಬಹುದು.

ಗ್ರಾಮೀಣ ಮೂಲಸೌಕರ್ಯಕ್ಕೆ ವಿಶೇಷ ಒತ್ತು ನೀಡುವ ಜತೆಗೆ, ಗ್ರಾಮೀಣ ರಸ್ತೆಗಳ ಜಾಲದ ನಿರ್ವಹಣೆ ಮತ್ತು ಸೇವೆಯ ಸುಧಾರಣೆಗೆ ಗಮನ ಕೇಂದ್ರೀಕರಿಸಲಾಗುತ್ತಿದೆ. ಗ್ರಾಮೀಣ ವಿದ್ಯುದೀಕರಣದ ವಿಷಯಕ್ಕೆ ಬಂದರೆ, ಸರ್ಕಾರದ ಆದ್ಯತೆಯ ಗಮನವೀಗ ಹಳ್ಳಿಗಳ ವಿದ್ಯುದೀಕರಣದಿಂದ ಮನೆ ಮನೆಯ ವಿದ್ಯುತ್ ಸಂಪರ್ಕಕ್ಕೆ ಬದಲಾಗಿರುವುದು ಒಳ್ಳೆಯ ಬೆಳವಣಿಗೆ.

ಅದೇ ರೀತಿ ಗ್ರಾಮೀಣ ನೈರ್ಮಲೀಕರಣ ವಿಷಯಕ್ಕೆ ಬಂದರೆ, ಶೌಚಾಲಯಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ಶೌಚಾಲಯಗಳ ಪೂರ್ಣ ಪ್ರಮಾಣದ ಬಳಕೆಯಿಂದ ಮಾತ್ರ ಯೋಜನೆ ಪರಿಣಾಮಕಾರಿಯಾಗಲು ಸಾಧ್ಯ. ಗ್ರಾಮೀಣರ ದೈನಂದಿನ ನಡವಳಿಕೆಯನ್ನು ಬದಲಾಯಿಸುವ ಪ್ರಯತ್ನಗಳಿಂದ ನೈರ್ಮಲೀಕರಣದ ಪೂರ್ಣ ಸಾಧನೆ ಆಗಲಿದೆ. ಯಾವುದೇ ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಗೆಲ್ಲಿಸುವ ರೀತಿಯ ಪ್ರಯತ್ನಗಳನ್ನು ಮಾಡಿದರೆ ನೈರ್ಮಲೀಕರಣ ಯೋಜನೆ ಪೂರ್ಣ ಯಶಸ್ವಿಯಾಗಲಿದೆ.

**ಅಂತರ್–ವಲಯ ವಿವಾದಗಳು**

ಯಾವುದೇ ಯೋಜನೆ ಜಾರಿ ಮಾಡುವಾಗ ಆ ಯೋಜನೆಗೆ ಇತರೆ ಕ್ಷೇತ್ರಗಳಿಂದ ಎದುರಾಗಬಹುದಾದ ಸಮಸ್ಯೆಗಳೇನು ಎಂಬುದನ್ನು ಪರೀಕ್ಷಿಸುವುದು ನಿಜವಾದ ಒಂದು ಸವಾಲು. ಉದಾಹರಣೆಗೆ, ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುವ ಮತ್ತು ಅವುಗಳಿಗೆ ಸಂಪರ್ಕ ಕಲ್ಪಿಸುವ ಯೋಜನೆ ಸರಿ ಇರಬಹುದು. ಆದರೆ ಅದು ಅಸ್ಪಷ್ಟ. ಅದೆಲ್ಲಕ್ಕಿಂತ ರಸ್ತೆಗಳ ಸಂಪರ್ಕ ಸುಧಾರಣೆಯೇ ಸೂಕ್ತ. ಹೆಚ್ಚಿನ ಸಂಖ್ಯೆಯ ವಿಮಾನ ನಿಲ್ದಾಣಗಳ ನಿರ್ಮಾಣದಿಂದ ಸಾರ್ವಜನಿಕರಿಗೆ ಸೇವೆ ಸರಾಗವಾಗುತ್ತದೆ ನಿಜ. ಆದರೆ, ಒಟ್ಟಾರೆ ಯೋಜನಾ ವೆಚ್ಚ ಮತ್ತು ಕಾರ್ಯಸಾಧ್ಯತೆಯ ಪ್ರಶ್ನೆ ಎದುರಾಗುತ್ತದೆ.

ಉದಾಹರಣೆಗೆ, ಹುಬ್ಬಳ್ಳಿ ಮತ್ತು ಬೆಳಗಾವಿ ನಗರಗಳು 100 ಕಿ.ಮೀ. ಅಂತರದೊಳಗೆ ಇವೆ. ಈ ಎರಡು ನಗರಗಳ ನಡುವಿನ ರಸ್ತೆ ಸಂಪರ್ಕ ಅತ್ಯುತ್ತಮವಾಗಿದೆ. ಅದಾಗ್ಯೂ, ಈ ನಗರಗಳಿಗೆ ಆಧುನಿಕ ವಿಮಾನ ನಿಲ್ದಾಣ ಆಗಬೇಕು. ದಿನವೂ ಮೂರ್‍ನಾಲ್ಕು ವಿಮಾನಗಳು ಹಾರಾಡಬೇಕು ಎಂಬ ಬೇಡಿಕೆ ಮತ್ತು ಬಯಕೆ ಜನರದ್ದಾಗಿದೆ.

ವಾಸ್ತವವೇನೆಂದರೆ, ಜನರು ಏರ್‌ಪೋರ್ಟ್ ತಲುಪಲು 2 ತಾಸು ಸಾಕಾಗುತ್ತದೆ. ಇದನ್ನು ಹೋಲಿಸುವುದಾದರೆ, ಬೆಂಗಳೂರಿನ ವಿವಿಧ ಉಪನಗರ ಭಾಗಗಳಿಂದ ಏರ್‌ಪೋರ್ಟ್ ತಲುಪಲು 2 ತಾಸಿಗಿಂತ ಹೆಚ್ಚಿನ ಸಮಯ ಹಿಡಿಯುತ್ತದೆ. ಹಾಗಾಗಿ, ವಿಮಾನ ನಿಲ್ದಾಣಗಳ ನಿರ್ಮಾಣಕ್ಕಿಂತ ಮೊದಲು ರಸ್ತೆಗಳ ಸಂಪರ್ಕ ಕಲ್ಪಿಸಲು ಆದ್ಯತೆ ನೀಡಿ, ನಂತರ ವೈಮಾನಿಕ ಸೇವೆಗೆ ಗಮನ ನೀಡಬಹುದು. ಈ ರೀತಿ ಮಾಡುವುದರಿಂದ ಸಾರ್ವಜನಿಕರ ಅತ್ಯಮೂಲ್ಯ ಸಮಯ ಮತ್ತು ಪ್ರಯಾಣ ವೆಚ್ಚ ಉಳಿತಾಯವಾಗಿ, ಪ್ರಯಾಣವೂ ಸುಖಕರವಾಗಿರಲಿದೆ. ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ಏರ್‌ಪೋರ್ಟ್‌ಗಳ ಸಂಖ್ಯೆ ಹೆಚ್ಚಿಸುವ ಚಿಂತನೆ ಸರಿ ಎನ್ನಬಹುದು.

ಅಂತರ್–ವಲಯ ಕಾರ್ಯಕ್ಷೇತ್ರದ ಮತ್ತೊಂದು ಸಮಸ್ಯೆ ಎಂದರೆ, ಮೆಟ್ರೊ ಮತ್ತು ರೈಲ್ವೆ ನಡುವೆ ಮಧ್ಯಂತರ ಸಂಪರ್ಕ ಕಲ್ಪಿಸುವುದು ಅಗತ್ಯ. ದೆಹಲಿ ಮತ್ತು ಬೆಂಗಳೂರು ನಗರಗಳೇ ಇದಕ್ಕೆ ಉದಾಹರಣೆ. ಮೆಟ್ರೊ ಮತ್ತು ರೈಲ್ವೆ ನಡುವೆ ಸಂಪರ್ಕ ಕಲ್ಪಿಸುವ ವಿಷಯದಲ್ಲಿ ಈ ಎರಡೂ ನಗರಗಳು ವಿಫಲವಾಗಿವೆ. ಇದರಿಂದ ಸಾರ್ವಜನಿಕ ಸೇವಾ ಗುಣಮಟ್ಟ ದುರ್ಬಲವಾಗಿ, ಬೇಡಿಕೆ ಕಡಿಮೆಯಾಗಿದೆ. ಇವೆಲ್ಲವನ್ನು ಗಮನಿಸಿದಾಗ ಅನಿಸುವ ಒಂದಂಶವೇನೆಂದರೆ, ಸ್ಮಾರ್ಟ್‌ನೆಸ್ ಇಂದಿನ ಅಗತ್ಯ ಎಂಬುದು ಪ್ರತಿಫಲಿಸುತ್ತಿದೆ.




ಅದೇ ರೀತಿ, ಇಂಧನ ಮತ್ತು ಸಾಗಣೆ ಕ್ಷೇತ್ರದ ನಡುವೆ ಅಂತರ್–ವಲಯ ವಿವಾದಗಳಿವೆ. ಕೇಂದ್ರ ಸರ್ಕಾರ ವಿದ್ಯುತ್ ರೈಲುಗಳ ಉತ್ತೇಜನಕ್ಕೆ ಮಹತ್ವದ ಅನುದಾನ ಹಂಚಿಕೆ ಮಾಡಿದೆ. 2030ರ ವೇಳೆಗೆ ಎಲ್ಲಾ ರಸ್ತೆ ವಾಹನಗಳನ್ನು ವಿದ್ಯುತ್ ವಾಹನಗಳಾಗಿ ಪರಿವರ್ತಿಸುವ ನೀತಿ ಪ್ರಕಟಿತವಾಗಿದೆ. ಆದರೆ ಸರ್ಕಾರದ ಈ ನೀತಿಗೆ ಸಾರಿಗೆ ಉದ್ಯಮ ಸಂಪೂರ್ಣ ಒಪ್ಪಿಗೆ ನೀಡಿಲ್ಲ. ಹಾಗಾಗಿ ರಸ್ತೆ ವಾಹನಗಳ ಪರಿವರ್ತನಾ ಸುಧಾರಣೆ ಸಂಪೂರ್ಣ ಸಾಧ್ಯವೇ ಆಗಿಲ್ಲ.

**ಅಂತಿಮ ನಿರ್ಣಯ**

ದೇಶದ ಒಟ್ಟು ಆಂತರಿಕ ಉತ್ಪನ್ನ 'ಜಿಡಿಪಿ' ದರ ಪ್ರಗತಿ ಕಾಣಬೇಕಾದರೆ, ಮೂಲಸೌಕರ್ಯ ರಂಗಕ್ಕೆ ಕನಿಷ್ಠ 50 ಶತಕೋಟಿ ರೂಪಾಯಿಗಿಂತ ಹೆಚ್ಚಿನ ಹೂಡಿಕೆಯ ಅಗತ್ಯವಿದೆ ಎಂದು ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಅವರು ಬಜೆಟ್ ಮಂಡನೆಯ ಆರಂಭದಲ್ಲೇ ಪ್ರಸ್ತಾಪಿಸಿದ್ದಾರೆ.

ರಸ್ತೆ, ವಿಮಾನ ನಿಲ್ದಾಣಗಳು, ರೈಲ್ವೆ, ಬಂದರು, ಜಲಮಾರ್ಗಗಳಿಗೆ ಸಂಪರ್ಕ ಕಲ್ಪಿಸಿ, ರಾಷ್ಟ್ರವನ್ನು ಸಮಗ್ರಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ದೇಶಕ್ಕೆ ಅಗತ್ಯವಿರುವ ಹೂಡಿಕೆ ಕ್ರೋಢೀಕರಣವನ್ನು ದೃಢಪಡಿಸಲಾಗುವುದು ಎಂದು ಅವರು ಘೋಷಿಸಿದ್ದಾರೆ. ಆದರೆ, ನಿಜವಾದ ಸವಾಲು ಇರುವುದು ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡುವುದರಲ್ಲಿ ಅಲ್ಲ. ಯೋಜನೆಗಳನ್ನು ಸಕಾಲದಲ್ಲಿ ಜಾರಿ ಮಾಡುವುದನ್ನು ದೃಢಪಡಿಸುವುದರಲ್ಲಿ. ❑

# ಮೌಲ್ಯವರ್ಧಿತ ಉತ್ಪನ್ನ

* ಪ್ರೊ. ಎಂ. ಎಸ್. ಸ್ವಾಮಿನಾಥನ್



**ಬೆಳೆಗಳ ಕೊಯ್ಲಿನ ನಂತರದ ನಿರ್ವಹಣೆ ಕೂಡ ಮತ್ತೊಂದು ಗಮನಹರಿಸಬೇಕಿರುವ ವಿಷಯವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಉತ್ಪಾದನೆ ಮತ್ತು ಕೊಯ್ಲೋತ್ತರ ನಿರ್ವಹಣೆಯಲ್ಲಿ ಹೊಂದಾಣಿಕೆಯೇ ಇಲ್ಲ. ಈಗಿನ ಕೊಯ್ಲೋತ್ತರ ತಂತ್ರಜ್ಞಾನಗಳು ಉತ್ಪಾದಕರಿಗೆ ಮತ್ತು ಗ್ರಾಹಕರಿಗೆ ಸಾಕಷ್ಟು ಆರ್ಥಿಕ ಹೊರೆಯನ್ನು ಹೇರುತ್ತಿವೆ. ಹಾಗಾಗಿ ಆಹಾರ ಸಂಸ್ಕರಣಾ ಉದ್ಯಮಗಳು ಅತ್ಯವಶ್ಯವಾಗಿ ಬೇಕಾಗಿವೆ.**

ಪ್ರತಿಯೊಂದು ಕುಟುಂಬವನ್ನು ಹಸಿವು ಮುಕ್ತಗೊಳಿಸಲು ಸಂಸತ್ತಿನ ಕಾಯಿದೆಯ ಮೂಲಕವೇ ಆಹಾರ ಭದ್ರತೆ ಒದಗಿಸಿರುವ ದೇಶವೆಂದರೆ ಅದು ಬಹುಶಃ ಭಾರತ ಒಂದೇ. ಆದಾಗ್ಯೂ ಹಸಿವು ಮತ್ತು ಅಪೌಷ್ಟಿಕತೆ ದೇಶದೆಲ್ಲೆಡೆ ತಾಂಡವವಾಡುತ್ತಿದೆ. ಇದರಿಂದಾಗಿ ನಮ್ಮ ಅನೇಕ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ಭೌತಿಕ ಮತ್ತು ಮಾನಸಿಕ ವಿಕಾಸಕ್ಕೆ ಬೇಕಾದ ತಮ್ಮೊಳಗಿನ ಶಕ್ತಿಯನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಬಜೆಟ್ ಮತ್ತು ಅದರ ಬೆಳವಣಿಗೆಗಳ ಆಧಾರದ ಮೇಲೆ ನಾನು ಹಣಕಾಸು ಮತ್ತು ವೈಜ್ಞಾನಿಕವಾಗಿ ಹೆಚ್ಚಿನ ಗಮನದ ಅವಶ್ಯಕತೆ ಇರುವ ಕೆಲವು ಕ್ಷೇತ್ರಗಳ ಬಗ್ಗೆ ಇಲ್ಲಿ ಸಲಹೆ ನೀಡಲು ಬಯಸುತ್ತೇನೆ.

### ಬೆಲೆ ಅಸ್ಥಿರತೆ

ನಮ್ಮ ರೈತರು ಯಾವಾಗಲೂ ಬೆಲೆ ಅನಿಶ್ಚಿತತೆಯಿಂದ ನರಳುತ್ತಾರೆ. ಅದರಲ್ಲೂ ವಿಶೇಷವಾಗಿ ಆಲೂಗಡ್ಡೆ, ಟೊಮೆಟೊ ಮತ್ತು ಈರುಳ್ಳಿಯಂಥ ತರಕಾರಿಗಳ ಬೆಲೆಗಳು ಯಾವಾಗಲೂ ಅಸ್ಥಿರತೆಯಲ್ಲಿಯೇ ಇರುತ್ತವೆ. ಈ ಬೆಲೆ ಅನಿಶ್ಚಿತತೆ ಎಂಬುದು ವರ್ಷಗಳಿಂದ ಕಾಡುತ್ತಿರುವ ಒಂದು ಗಂಭೀರವಾದ ಸಮಸ್ಯೆ. ನಾವು ಈ ಸಮಸ್ಯೆಗೆ ಕೇವಲ ಗ್ರಾಹಕನನ್ನು ತೃಪ್ತಿಪಡಿಸಲು ತಾತ್ಕಾಲಿಕ ನಿರ್ಧಾರಗಳನ್ನು ಕೈಗೊಳ್ಳದೇ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಿದೆ. ಈ ದಿಸೆಯಲ್ಲಿ ನಗರ ಕೇಂದ್ರಿತ ತೋಟಗಾರಿಕೆ ಒಂದು ಸರಳವಾದ ವಿಧಾನ. ನಗರದೊಳಗೆ ಮತ್ತು ಹತ್ತಿರದ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದ ಭೂಮಿ ಲಭ್ಯವಿದೆ. ತಾರಸಿ ಮೇಲೆ ಕೃಷಿ ಮತ್ತು ಖಾಲಿ ಜಾಗದಲ್ಲಿ ಟೊಮೆಟೊ, ಈರುಳ್ಳಿ, ಮೆಣಸಿನಕಾಯಿ ಮತ್ತಿತರ ಅವಶ್ಯಕ ತರಕಾರಿ, ಧಾನ್ಯ ಸಸಿಗಳೂ ಸೇರಿದಂತೆ ಈ ಭೂಮಿಯನ್ನು ನಗರಕೇಂದ್ರಿತ ತೋಟಗಾರಿಕೆ ಅಭಿಯಾನವನ್ನು ಉತ್ತೇಜಿಸಲು ಬಳಸಿಕೊಳ್ಳಬಹುದು. ಇದರಿಂದ ಎರಡು ಲಾಭಗಳಿವೆ – ಒಂದು ಬೆಲೆ ಸ್ಥಿರತೆಯನ್ನು ಕಾಯ್ದುಕೊಳ್ಳಬಹುದು; ಮತ್ತೊಂದು ಸುಸ್ಥಿರ ಪೌಷ್ಟಿಕತೆ ಭದ್ರತೆಯನ್ನು ವೃದ್ಧಿಸಿಕೊಳ್ಳಬಹುದು.

### ಕರಾವಳಿ ಪ್ರದೇಶದ ಸಮೃದ್ಧಿಗಾಗಿ ಸಮುದ್ರದ ನೀರು ಬಳಕೆ

ಭಾರತ ಸುಮಾರು 8,000 ಕಿ.ಮೀ. ಉದ್ದದ ಸಮುದ್ರ ತೀರವನ್ನು ಹೊಂದಿದೆ. ಕೇರಳದ ಕುಟ್ಟನಾಡ ಪ್ರದೇಶದಲ್ಲಿ ಕೈಗೊಳ್ಳಲಾಗಿರುವ ಸಮುದ್ರ ನೀರಿನ ಕೃಷಿಯಂತೆ ಈ ತೀರ ಪ್ರದೇಶದಲ್ಲಿ ಸಮುದ್ರ ನೀರಿನ ಕೃಷಿಗೆ ವ್ಯಾಪಕವಾದ ಅವಕಾಶಗಳಿವೆ. ಸಮುದ್ರ ನೀರಿನ ಕೃಷಿ–ಅರಣ್ಯ ಪದ್ಧತಿಯಲ್ಲಿ ಬೆಳೆ ಒಕ್ಕಲುತನ ಮತ್ತು ಮೀನುಗಾರಿಕೆ ಎರಡನ್ನೂ ಕೈಗೊಳ್ಳಬಹುದು. ಜಾಗತಿಕವಾಗಿ ಲಭ್ಯ ಇರುವ ಜಲಸಂಪನ್ಮೂಲದಲ್ಲಿ ಶೇ 97ರಷ್ಟು ನೀರು ಸಮುದ್ರ ನೀರು ಆಗಿದ್ದು, ಇದನ್ನು ನಾನಾ ವಿಧದ ಬೆಳೆಗಳನ್ನು ಬೆಳೆಯಲು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ತೋರಿಸುವುದರ ಮೂಲಕ ಭಾರತ ಈ ಸಂಶೋಧನೆಯಲ್ಲಿ ವಿಶ್ವಕ್ಕೇ ನಾಯಕನಾಗಬಹುದು. ಈ ಪ್ರಯೋಗದಿಂದ ಕರಾವಳಿ ಕೃಷಿಯ ಆದಾಯ ವೃದ್ಧಿಸುವುದಲ್ಲದೇ ಅಲ್ಲಿನ ಜನರನ್ನು ಸುನಾಮಿಯಂಥ ನೈಸರ್ಗಿಕ ಪ್ರಕೋಪಗಳನ್ನು ಸಮರ್ಥವಾಗಿ ಎದುರಿಸಲು ಸಿದ್ಧರಾಗಿರುವಂತೆ ಮಾಡುತ್ತದೆ. ಸಮುದ್ರ ನೀರಿನ ಕೃಷಿ ಮತ್ತು ಸಮುದ್ರ ತಳದ ಕೃಷಿಯ ತಂತ್ರಜ್ಞಾನಗಳು, ಈ ಕ್ಷೇತ್ರದಲ್ಲಿ

* ಸಂಸ್ಥಾಪಕ ಅಧ್ಯಕ್ಷ, ಎಂ.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಷನ್, ಚೆನ್ನೈ. E-mail : swami@mssrf.res.in

ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಯಂಥ ಕಾರ್ಯಕ್ರಮಗಳನ್ನು ಕೈಗೊಳ್ಳುವ ಎಂ.ಎಸ್. ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನದಲ್ಲಿ ಲಭ್ಯ ಇವೆ. ಉಷ್ಣವಲಯದ ಕಾಡುಗಳ ಸಂರಕ್ಷಣೆ ಮತ್ತು ಇತರ ಉಪ್ಪು ಸಹಿಷ್ಣು ಪ್ರಭೇದಗಳ ಸಂರಕ್ಷಣೆಯನ್ನೂ ಈ ತಂತ್ರಜ್ಞಾನ ಒಳಗೊಂಡಿದೆ. ಇದೇ ಉದ್ದೇಶಕ್ಕಾಗಿ ಒಂದು ಉಪ್ಪು ನೀರಿನಲ್ಲಿ ಬೆಳೆಯುವ ಸಸ್ಯಗಳ (ಹ್ಯಾಲೊಫೈಟ್ಸ್) ತಳಿ ಒಂದು ಉದ್ಯಾನವನ್ನೂ ನಿರ್ಮಿಸಲಾಗಿದೆ.

### ಸಿರಿಧಾನ್ಯಗಳ ರಾಷ್ಟ್ರೀಯ ವರ್ಷ

ಭಾರತ ಸರ್ಕಾರ 2018ಅನ್ನು ಸಿರಿಧಾನ್ಯಗಳ ರಾಷ್ಟ್ರೀಯ ವರ್ಷ ಎಂದು ಘೋಷಿಸಿದೆ. ಸಾಮೆ, ನವಣೆ, ರಾಗಿ, ಹರಕಾ, ಸಜ್ಜೆ ಮುಂತಾದ ಅನೇಕ ಕಿರುಧಾನ್ಯಗಳನ್ನು ಬೆಳೆಯುವಲ್ಲಿ ತಮಿಳುನಾಡು ಮುಂದಿದೆ. ಕೊಲ್ಲಿ ಪರ್ವತ ಪ್ರದೇಶ ಇಂಥ ಧಾನ್ಯಗಳಿಂದ ಸಮೃದ್ಧವಾದ ಕಣಜವನ್ನೇ ಹೊಂದಿದೆ. ಹಾಗಾಗಿ ಸಿರಿಧಾನ್ಯಗಳ ಸಂರಕ್ಷಣೆಗೆ ಸಿರಿಧಾನ್ಯ ಜೈವಿಕ ಕಣಿವೆಯನ್ನು ಏರ್ಪಡಿಸುವುದು ಅತ್ಯವಶ್ಯ. ಇಂಥ ಕಾರ್ಯಕ್ರಮಕ್ಕೆ ಸಿರಿಧಾನ್ಯಗಳನ್ನು ಉಪಹಾರಕ್ಕಾಗಿ ಸಂಸ್ಕರಿಸುವ ಆಹಾರ ಉದ್ಯಮಿಗಳ ಸಹಕಾರ ಪಡೆಯಬೇಕು.

### ಪಶು ಮತ್ತು ಮೀನು ಸಾಕಾಣಿಕೆ

ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಸಮುದ್ರವಾಸಿ ಹಾಗೂ ಒಳನಾಡಿನ ಮತ್ಸ್ಯೋದ್ಯಮದಲ್ಲಿ ತೊಡಗಿಸಿಕೊಂಡವರಿಗೂ ನೀಡುವುದಲ್ಲದೆ, ಇತರ ಸೌಲಭ್ಯಗಳನ್ನು ಒದಗಿಸಬೇಕು. ಮೇಕೆ, ಕುರಿ ಸಾಕಾಣಿಕೆಯಂಥ ಪಶು ಸಂಗೋಪನೆ ಮತ್ತು ಕುಕ್ಕುಟೋದ್ಯಮದ ಉತ್ಪನ್ನಗಳು ರೈತರಿಗೆ ಪೂರಕವಾದ ಹೆಚ್ಚುವರಿ ಆದಾಯವನ್ನು ಕೊಡಬಲ್ಲವು. ಇವು ಮೀನುಗಾರ ಕುಟುಂಬಗಳಿಗೂ, ಮೀನುಗಳ ಪುನರುತ್ಪಾದನೆ ವೇಳೆ ಮೀನುಗಾರಿಕೆಗೆ ವಿಧಿಸಲಾಗುವ ನಿಷೇಧದ ಸಂದರ್ಭದಲ್ಲಿ ಸಾಕಷ್ಟು ಆದಾಯ ತಂದುಕೊಡಬಲ್ಲವು.

### ಅಕ್ಕಿ ಜೈವಿಕ ಉದ್ಯಾನ

ಅಕ್ಕಿಯ ಜೈವಿಕ ಉದ್ಯಾನವು ರೈತರಿಗೆ ಜೀವರಾಶಿಯ ಸದುಪಯೋಗದ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಬಗ್ಗೆ ಮಾಹಿತಿ ನೀಡುತ್ತದೆ. ಈ ಉದ್ಯಾನದಲ್ಲಿ ಭತ್ತದಿಂದ ಹೊಟ್ಟು, ತಿರುಳು ಮತ್ತು ಕಾಳು ಮುಂತಾದ ಮೌಲ್ಯ ವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಬಹುದು. ಇಂಥದೇ ಜೈವಿಕ ಉದ್ಯಾನಗಳನ್ನು ದ್ವಿದಳ ಧಾನ್ಯಗಳಿಗೂ ನಿರ್ಮಿಸಬಹುದು. ಇವು ಪ್ರತಿಯೊಂದು ಜೀವರಾಶಿಯಿಂದ ಆದಾಯ ಮತ್ತು ಉದ್ಯೋಗಗಳನ್ನು ಸೃಷ್ಟಿಸಲು ರೈತರಿಗೆ ನೆರವಾಗುತ್ತವೆ.

### ರೈತ ಶಾಲೆಗಳ ಸ್ಥಾಪನೆ

ರೈತರಿಂದ ರೈತರಿಗೆ ಕಲಿಸಲು ಯಶಸ್ವಿ ರೈತರ ಜಮೀನುಗಳಲ್ಲಿ ರೈತ ಶಾಲೆಗಳನ್ನು ಸ್ಥಾಪಿಸಲಾಗಿದೆ. ಕೃಷಿಯಲ್ಲಿ ನುರಿತ ಕಾರ್ಯಶೈಲಿಯನ್ನು ವೃದ್ಧಿಸುವುದು ಈ ಭೂಮಿಯಿಂದ ಭೂಮಿಗೆ ಕಾರ್ಯಕ್ರಮದ ಉದ್ದೇಶ.



### ನಗರ ಕೇಂದ್ರಿತ ತೋಟಗಾರಿಕೆ ಕ್ರಾಂತಿ

ನಗರೀಕರಣ ಶರವೇಗದಲ್ಲಿ ಬೆಳೆಯುತ್ತಿರುವ ಭಾರತದ ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ–ಪೂರೈಕೆಯ ಮಧ್ಯೆ ಉಂಟಾಗಿರುವ ಅಂತರದಿಂದ ಆಹಾರ ದುಬ್ಬರ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಇಂಥ ಸಂದರ್ಭದಲ್ಲಿ ನಗರ ಪ್ರದೇಶಗಳಲ್ಲಿ ತರಕಾರಿ ಮತ್ತು ಹಣ್ಣುಗಳ ಬೆಲೆಯಲ್ಲಿ ಸ್ಥಿರತೆ ಸಾಧಿಸಲು ನಗರಕೇಂದ್ರಿತ ತೋಟಗಾರಿಕೆ ಒಂದು ಉತ್ತಮ ಉಪಾಯ ಆಗಿದೆ. ಈ ತೋಟಗಾರಿಕೆಗೆ ತಾಂತ್ರಿಕ ಮತ್ತು ಮಾರುಕಟ್ಟೆ ಬೆಂಬಲ ನೀಡುವುದರ ಮೂಲಕ ಉತ್ತೇಜಿಸುವ ಕೆಲಸ ನಡೆಯಬೇಕಿದೆ. ಇಸ್ರೇಲ್‌ನಲ್ಲಿ ಯಶಸ್ವಿಯಾಗಿರುವ ವಿಕೇಂದ್ರೀಕೃತ ಉತ್ಪಾದನೆಯನ್ನು ಸಹಕಾರ ಮಾರುಕಟ್ಟೆಯ ಮೂಲಕ ಬೆಂಬಲಿಸಬೇಕಿದೆ. ನಗರ ಮತ್ತು ನಗರಕೇಂದ್ರಿತ 'ತೋಟಗಾರಿಕೆ ಕ್ರಾಂತಿ' ಯಿಂದಾಗಿ ಬಳಕೆದಾರನಿಗೆ ಸ್ಥಿರವಾದ ಬೆಲೆಯಲ್ಲಿ ತರಕಾರಿ–ಹಣ್ಣುಗಳನ್ನು ಪೂರೈಸಬಹುದು. ಇದೇ ವೇಳೆ ಆಹಾರದ ಗುಣಮಟ್ಟ ಉತ್ತಮವಾಗಿದೆ ಮತ್ತು ವಿಷಯುಕ್ತ ರಾಸಾಯನಿಕಗಳಿಂದ ಮುಕ್ತವಾಗಿದೆ ಎಂಬುದನ್ನೂ ನಾವು ಖಚಿತಪಡಿಸಿಕೊಳ್ಳಬಹುದು. ಇಂದಿನ ನಗರ ಪ್ರದೇಶದ ಜನತೆ ಹಣ್ಣು ಮತ್ತು ತರಕಾರಿಯಂಥ ವಿಶೇಷ ಆಹಾರಗಳನ್ನು ಬೇಡುತ್ತಿರುವುದರಿಂದ ನಗರ–ಕೇಂದ್ರಿತ ಕೃಷಿ ಕಾರ್ಯಕ್ರಮವನ್ನು ಆರಂಭಿಸಲು ಈಗ ಕಾಲ ಕೂಡಿ ಬಂದಿದೆ.

ರಾಷ್ಟ್ರೀಯ ಆಹಾರ ಸುರಕ್ಷತೆ ಕಾಯಿದೆ – 2003 ಪ್ರಕಾರ ಸಿರಿಧಾನ್ಯ ಮತ್ತಿತರ ಧಾನ್ಯಗಳನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ (ಪಿ.ಡಿ.ಎಸ್.) ಸೇರಿಸಬಹುದು. ಇತ್ತೀಚಿನ ಮಾಧ್ಯಮ ವರದಿ ಪ್ರಕಾರ ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ರಾಗಿ ಹಾಗೂ ಇತರ ಧಾನ್ಯಗಳ ಎಕರೆವಾರು ಇಳುವರಿ ವೃದ್ಧಿಸಬಹುದಾಗಿದೆ. ಸಮರ್ಪಕ ಬೆಲೆ ನಿಗದಿ ಹಾಗೂ ಪರಿಣಾಮಕಾರಿ ಹರಾಜುಗಳಿಂದ ಇಂಥ ಬೆಳೆಗಳನ್ನು ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸಬಹುದು. ಕರ್ನಾಟಕ ಸರ್ಕಾರ ಪ್ರತಿಕ್ವಿಂಟಲ್‌ಗೆ ರೂ. 2,000ಗಳಂತೆ ಒಂದು ಲಕ್ಷಟನ್‌ಗೂ ಹೆಚ್ಚಿನ ಪ್ರಮಾಣದ ರಾಗಿಯನ್ನು ಖರೀದಿಸಿದೆ. ಈ ಖರೀದಿ ಮತ್ತು ಬಳಕೆ ಹೆಚ್ಚಿದರೆ ರೈತರು ಮತ್ತಷ್ಟು ಪ್ರಮಾಣದ ರಾಗಿಯನ್ನು ಬೆಳೆದೇ ಬೆಳೆಯುತ್ತಾರೆ. 1992 ರಿಂದಲೂ ಎಂ.ಎಸ್.ಎಸ್.ಆರ್. ಎಫ್., ತಮಿಳುನಾಡಿನ ಕೊಲ್ಲಿ ಪರ್ವತ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ಒಡಿಶಾ ಕೋರಾಪುಟ್‌ನಲ್ಲಿ ವಾಣಿಜ್ಯೀಕರಣದ ಅವಕಾಶಗಳ ಮೂಲಕ ಕಿರುಧಾನ್ಯಗಳ ಸಂರಕ್ಷಣೆಯನ್ನು ಉತ್ತೇಜಿಸುತ್ತಿದೆ. ಆಹಾರ ಭದ್ರತೆ ಕಾಯಿದೆ–2013 ಕೂಡರಾಗಿ, ಜೋಳ, ಸಜ್ಜೆಯಂಥ ಸಿರಿಧಾನ್ಯಗಳನ್ನು ಪಿ.ಡಿ.ಎಸ್.ನ ವ್ಯಾಪ್ತಿಗೆ ಸೇರಿಸಿದೆ. ಈ ಸಿರಿಧಾನ್ಯಗಳು ಪೌಷ್ಟಿಕವಾಗಿ ಸಮೃದ್ಧವಾಗಿರುವುದಲ್ಲದೇ ಹವಾಮಾನ ಸೂಕ್ಷ್ಮತೆಯನ್ನು ಅಂದರೆ ಮಳೆ ಬೀಳುವ ಪ್ರಮಾಣದಲ್ಲಿ ಉಂಟಾಗುವ ವ್ಯತ್ಯಾಸಕ್ಕೆ ಹೊಂದಿಕೊಳ್ಳಬಲ್ಲ ಬೆಳೆಗಳಾಗಿವೆ. ಇಂಥ ಪೌಷ್ಟಿಕವಾದ, ಹವಾಮಾನ ಸ್ನೇಹಿ ಬೆಳೆಗಳನ್ನು ಒಣ ಕೃಷಿ ಭೂಮಿಯಲ್ಲಿ ಬೆಳೆಯುವಂತೆ ರೈತರನ್ನು ಪ್ರೋತ್ಸಾಹಿಸಬೇಕಾದರೆ ಅಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಬೇಕು. ಸುದೈವದ ಸಂಗತಿ ಎಂದರೆ ರಾಗಿ, ಸಜ್ಜೆ, ಜೋಳ ಮತ್ತು ಹಲವು ಕಿರುಧಾನ್ಯಗಳನ್ನೇ ಆಧರಿಸಿ ಅನೇಕ ಆಹಾರ ಸಂಸ್ಕರಣಾ ಕಂಪನಿಗಳು ಈಗ ತಲೆ ಎತ್ತುತ್ತಿವೆ. ಈ ಹಂತದಲ್ಲಿ ನಾವು ಆಹಾರ ಭದ್ರತಾ ಕಾಯಿದೆ ಮತ್ತು ಶಾಲೆಯ ಮಧ್ಯಾಹ್ನದ

ಊಟದಲ್ಲಿ ಈ ಪೌಷ್ಟಿಕ ಸಿರಿಧಾನ್ಯಗಳ ಬಳಕೆ ಆಗುವಂತೆ ನೋಡಿಕೊಳ್ಳಬೇಕಿದೆ. ಇಂಥ ಬೆಳೆಗಳನ್ನು 'ಉರುಟು ಕಾಳುಗಳು' ಎಂದು ಪರಿಗಣಿಸುವುದನ್ನು ಸರ್ಕಾರ ಕೈ ಬಿಡಬೇಕು. ಬದಲಿಗೆ ಇವುಗಳನ್ನು 'ಹವಾಮಾನ ಸ್ನೇಹಿ ಪೌಷ್ಟಿಕ ಸಿರಿಧಾನ್ಯಗಳು' ಎಂದು ಉಲ್ಲೇಖಿಸಬೇಕು. ಜೊತೆಗೆ ಈ ದಶಕದ ಒಂದು ವರ್ಷವನ್ನು 'ಅಂತಾರಾಷ್ಟ್ರೀಯ ಕಡಿಮೆ ಬಳಸಿದ ಮತ್ತು ಜೈವಿಕ ರಕ್ಷಣೆ ಬೆಳೆಗಳ ವರ್ಷ' ಎಂದು ಘೋಷಿಸಲು ವಿಶ್ವಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಬೇಕು. ಮುಂದಿನ ವರ್ಷವನ್ನು ಈಗಾಗಲೇ ಅಂತಾರಾಷ್ಟ್ರೀಯ ದ್ವಿದಳ ಧಾನ್ಯಗಳ ವರ್ಷವೆಂದು ನಿರ್ಧರಿಸಲಾಗಿದೆ. ಈ ದ್ವಿದಳ ಧಾನ್ಯಗಳು ಕೂಡ ಹವಾಮಾನ ಸ್ನೇಹಿ ಮತ್ತು ಪ್ರೊಟೀನ್ ಸಮೃದ್ಧಿ ಬೆಳೆಗಳಾಗಿವೆ. ಇಂಥ ಬೆಳೆಗಳನ್ನು ಬೆಳೆಯುವುದು ಮತ್ತು ಬಳಸುವುದನ್ನು ಸಮರ್ಪಕ ಯೋಜನೆಗಳ ಮೂಲಕ ಉತ್ತೇಜಿಸಿದರೆ ನಮ್ಮ ದೇಶವನ್ನು 'ಅತಿ ಹೆಚ್ಚು ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಮತ್ತು ಮಹಿಳೆಯರ ದೇಶ' ಎಂಬ ಅಪಕೀರ್ತಿಯಿಂದ ದೂರ ಮಾಡಬಹುದು. ತುರ್ತಾಗಿ ಆಗಬೇಕಿರುವ ಇನ್ನೊಂದು ಕೆಲಸವೆಂದರೆ ಈ 'ಅನಾಥ ಬೆಳೆಗಳ' ಇಳುವರಿ ಸಾಮರ್ಥ್ಯವನ್ನು ವೃದ್ಧಿಸಲು



ಸಂಶೋಧನೆಯ ಮೇಲೆ ಹೆಚ್ಚಿನ ಹೂಡಿಕೆ ಮಾಡಬೇಕಿದೆ. ಹೆಚ್ಚಿನ ಇಳುವರಿ ಮತ್ತು ಖಚಿತ ಮಾರುಕಟ್ಟೆಯ ವ್ಯವಸ್ಥೆಯಿಂದ ಚಿಕ್ಕ ರೈತರನ್ನು ಈ ಬೆಳೆಗಳನ್ನು ಬೆಳೆಯಲು ಆಕರ್ಷಿಸಬಹುದು. ಬೆಳೆಗಳ ಕೊಯ್ಲಿನ ನಂತರದ ನಿರ್ವಹಣೆ ಕೂಡ ಮತ್ತೊಂದು ಗಮನಹರಿಸಬೇಕಿರುವ ವಿಷಯವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಉತ್ಪಾದನೆ ಮತ್ತು ಕೊಯ್ಲೋತ್ತರ ನಿರ್ವಹಣೆ ಹೊಂದಾಣಿಕೆಯೇ ಇಲ್ಲ. ಈಗಿನ ಕೊಯ್ಲೋತ್ತರ ತಂತ್ರಜ್ಞಾನಗಳು ಉತ್ಪಾದಕರಿಗೆ ಮತ್ತು ಗ್ರಾಹಕರಿಗೆ ಸಾಕಷ್ಟು ಆರ್ಥಿಕ ಹೊರೆಯನ್ನು ಹೇರುತ್ತಿವೆ. ಹಾಗಾಗಿ ಆಹಾರ ಸಂಸ್ಕರಣಾ ಉದ್ಯಮಗಳು ಅತ್ಯವಶ್ಯವಾಗಿ ಬೇಕಾಗಿವೆ. ಸಂತಸದ ಸಂಗತಿ ಎಂದರೆ 2018–19ರ ಬಜೆಟ್‌ನಲ್ಲಿ ಆಹಾರ ಭದ್ರತೆ ಮತ್ತು ಆಹಾರ ಸಂಸ್ಕರಣಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದೆ. ಕೊಯ್ಲೋತ್ತರ ತಂತ್ರಜ್ಞಾನದಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಲು ಮೌಲ್ಯವರ್ಧಿತ ಉತ್ಪನ್ನಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಇದಕ್ಕಾಗಿ ಶೈತ್ಯಾಗಾರ ಮತ್ತು ಶೈತ್ಯ ಸರಪಳಿಗಳನ್ನು ಸ್ಥಾಪಿಸಬೇಕಾಗುತ್ತದೆ. ಪಂಜಾಬ್ ಮತ್ತು ಹರ್ಯಾಣಾ ಪ್ರದೇಶದಲ್ಲಿರುವಂತೆ ಶೈತ್ಯಾಗಾರಗಳು ಇದ್ದಿದ್ದರೆ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಇತ್ತೀಚಿನ ಆಲೂಗಡ್ಡೆ ಸಂಕಷ್ಟವನ್ನು ತಪ್ಪಿಸಬಹುದಿತ್ತು. ಕೊಳೆಯುವ ಪದಾರ್ಥಗಳ ಸಂರಕ್ಷಣೆಯಲ್ಲಿ ತಂತ್ರಜ್ಞಾನ ಮತ್ತು ಸಾರ್ವಜನಿಕ ನೀತಿ ಹಾಗೂ ರೈತರ ಪಾಲ್ಗೊಳ್ಳುವಿಕೆಯಿಂದ ಈ ಅಸಮತೋಲನವನ್ನು ಹೋಗಲಾಡಿಸಬಹುದು. ನ್ಯಾಷನಲ್ ಜಿಯೊಗ್ರಾಫಿಕ್ ಮ್ಯಾಗಜಿನ್‌ನ ಇತ್ತೀಚಿನ ಸಂಚಿಕೆ (ಫೆಬ್ರವರಿ 2018) 'ಚೀನಾಗೆ ಉಣಿಸುವವರು ಯಾರು?' ಎಂಬ ಪ್ರಶ್ನೆಯನ್ನು ಎತ್ತಿದೆ. ದಿನೇ ದಿನೇ ಕಡಿಮೆಯಾಗುತ್ತಿರುವ ಕೃಷಿ ಭೂಮಿಯಿಂದ ಏರುತ್ತಿರುವ ಜನಸಂಖ್ಯೆಗೆ ನಾವು ಆಹಾರ ಒದಗಿಸಬೇಕಾಗಿರುವುದರಿಂದ ನಾವು 'ಭಾರತಕ್ಕೆ ಉಣಿಸುವವರು ಯಾರು?' ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಸದ್ಯದ ಬಜೆಟ್ ಈ ಅಸಮತೋಲನವನ್ನು ಕೊನೆಗಾಣಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ. ❑

## ಹಣಕಾಸು ವ್ಯವಸ್ಥೆಯ ಪುನಶ್ಚೇತನ

(9ನೇ ಪುಟದಿಂದ)

**ಸಾರಾಂಶ**

ವಿತ್ತ ಸಚಿವರು ಅತ್ಯುತ್ತಮವಾದ ಬಜೆಟನ್ನೇ ಮಂಡಿಸಿದ್ದಾರೆ. ಮಾರುಕಟ್ಟೆ ಆಧರಿತ ಆರ್ಥಿಕ ವ್ಯವಸ್ಥೆಯಿಂದ ಸಾಮಾಜಿಕ ಕಲ್ಯಾಣ ಆಧರಿತ ಬಜೆಟ್ ನತ್ತ ಹೆಚ್ಚು ಗಮನ ಹರಿಸಿದ್ದಾರೆ. ಈ ಮೂಲಕ ಸರ್ಕಾರ ಶೇ.80 ರಷ್ಟು ದೇಶದ ಜನಸಂಖ್ಯೆಗೆ ಬೇಕಾದ ಎಲ್ಲಾ ಅಗತ್ಯತೆಗಳು, ಅವಶ್ಯಕತೆಗಳು ಮತ್ತು ಅವರ ಇಷ್ಟಗಳಿಗೆ ಬೇಕಾದ ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

2018–19ರ ಬಜೆಟ್ ಜನಪರ, ಪ್ರಗತಿದಾಯಕ, ಸಮತೋಲಿತ ಮತ್ತು ವಿಶಿಷ್ಟವಾದದ್ದಾಗಿದೆ. ಇದು ಎಲ್ಲಾ ಜನರ ಅಗತ್ಯತೆಗಳನ್ನು ಈಡೇರಿಸುವಂಥದ್ದಾಗಿದೆ. ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಉದ್ಯೋಗ ಮತ್ತು ಹೂಡಿಕೆ ಮೇಲೆ ಹೆಚ್ಚು ಗಮನಹರಿಸಿರುವುದರಿಂದ ಇದು ಪ್ರಗತಿದಾಯಕ ಬಜೆಟ್ ಎಂಬುದನ್ನು ಸಾಬೀತು ಮಾಡುತ್ತದೆ. ಕಡಿಮೆ ದರದಲ್ಲಿ ವಸತಿ ನೀಡುವ ಯೋಜನೆಯಿಂದಾಗಿ ರಿಯಲ್ ಎಸ್ಟೇಟ್ ವಲಯಕ್ಕೆ ಶಕ್ತಿ ಬಂದಂತಾಗಿದೆ. ಉತ್ತೇಜಿತ ಪ್ರಗತಿ, ಡಿಜಿಟಲ್ ಆರ್ಥಿಕತೆಗೆ ಪ್ರೋತ್ಸಾಹ ಮತ್ತು ಎಲ್ಲಾ ರೀತಿಯ ಅಡ್ಡಿಗಳನ್ನು ನಿವಾರಿಸಿ ಸುಲಭವಾಗಿ ಉದ್ಯಮ ನಡೆಸಲು ದಾರಿ ಮಾಡಿಕೊಡಲಾಗಿದೆ. ಕೃಷಿ ಮತ್ತು ಕೈಗಾರಿಕೆಗಳ ಮೇಲೆ ಹೆಚ್ಚಿನ ಹೂಡಿಕೆ ಪ್ರಗತಿಗೆ ಆಶಾದಾಯಕವಾಗಿದೆ.

ರೈತರ ಆದಾಯ ಹೆಚ್ಚಿಸಲು ನಾವೀನ್ಯ ತಾಂತ್ರಿಕತೆಯ ಮೊರೆ ಹೋಗಬೇಕಾಗಿದೆ. ಇದರ ಜತೆಯಲ್ಲೇ ರಚನಾತ್ಮಕ ಸುಧಾರಣೆ ಮತ್ತು ಕೃಷಿಯ ಆಮೂಲಾಗ್ರ ಬದಲಾವಣೆ ಆಗಬೇಕಿದೆ. ಆದರೆ, ಇದು ಬಜೆಟ್ ಪ್ರಸ್ತಾಪದ ಭಾಗವಾಗಲು ಸಾಧ್ಯವಿಲ್ಲ. ಅಂತೆಯೇ, ಎಲ್ಲಾ ಹಂತಗಳಲ್ಲೂ ಶಿಕ್ಷಣ ಮತ್ತು ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ರಚನಾತ್ಮಕ ಸುಧಾರಣೆಗೆ ಒತ್ತು ನೀಡಬೇಕಾಗಿದೆ. ಈಗಿನ ವ್ಯವಸ್ಥೆ ಆರ್ಥಿಕತೆ ಮತ್ತು ಜನರ ಆಶೋತ್ತರಗಳಿಗೆ ಬೇಕಾದಂತೆ ವರ್ತಿಸುತ್ತಿಲ್ಲ. ನೀತಿ ಆಯೋಗ ಸಮಸ್ಯೆಗಳಿಗೆ ನಿರ್ದಿಷ್ಟ ಪರಿಹಾರ ನೀಡುವ ಕೆಲಸ ಮಾಡಬೇಕು. ಇದು ಸದ್ಯದ ವ್ಯವಸ್ಥೆಯ ಸುಧಾರಣೆಗೆ ಸಹಾಯವಾಗುವುದಲ್ಲದೇ, ಅಂದುಕೊಂಡ ರೀತಿಯಲ್ಲೇ ಫಲಿತಾಂಶವೂ ಹೊರಬರುತ್ತದೆ.

2018–19ರ ಕೇಂದ್ರ ಬಜೆಟ್ ಒಂದು ಹರೀಬಿ ಹಟಾವೊ, ಕಿಸಾನ್ ಬಚಾವೊ ಬಜೆಟ್ ಆಗಿದೆ. ❑

# ಆರೋಗ್ಯ ಉಪಚಾರಕ್ಕೆ ಒತ್ತು

* ಕೆ. ಶ್ರೀನಾಥ್ ರೆಡ್ಡಿ



**ಕೇಂದ್ರ ಬಜೆಟ್‌ನಲ್ಲಿ ಆರೋಗ್ಯ ಪ್ರಮುಖ ವಿಷಯವಾಗಿ ಪರಿಗಣಿಸಲ್ಪಟ್ಟಿದ್ದರೂ, ರಾಜ್ಯ ಬಜೆಟ್‌ನಲ್ಲಿ ಒದಗಿಸಲಾಗುವ ಅನುದಾನದ ಮೇಲೆ ಅದರ ಯಶಸ್ಸು ನಿಂತಿದೆ. ಆರೋಗ್ಯ ಕ್ಷೇತ್ರಕ್ಕೆ ನೀಡಲಾಗುವ ಅನುದಾನದಲ್ಲಿ 2020ರೊಳಗೆ ರಾಜ್ಯಗಳು ತಮ್ಮ ಆರೋಗ್ಯ ಬಜೆಟ್‌ನಲ್ಲಿ ಶೇ. 8ರಷ್ಟು ಹೆಚ್ಚಳ ಮಾಡಬೇಕು ಎಂದು ಎನ್‌ಎಚ್‌ಪಿ ಕರೆ ನೀಡಿದೆ.**

ಬಜೆಟ್ 2018, ಹಿಂದಿನ ಎಲ್ಲ ಬಜೆಟ್‌ಗಳಿಗಿಂತ ಆರೋಗ್ಯ ದೃಷ್ಟಿಯಲ್ಲಿ ವಿಭಿನ್ನ ಎಂಬುದನ್ನು ಸಾಬೀತು ಮಾಡಿದೆ. ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಮೊತ್ತದ ಹಣ ಬಿಡುಗಡೆ ಮಾಡುವ ಮೂಲಕ ಆರೋಗ್ಯ ವೃತ್ತಿಪರರು, ಮಾಧ್ಯಮ ಮತ್ತು ಸಾರ್ವಜನಿಕರಲ್ಲಿ ಉತ್ಸಾಹ ತುಂಬಿಸಿದೆ. ಈ ಮಹತ್ವಾಕಾಂಕ್ಷೆಯ ಪ್ರಸ್ತಾವನೆಗಳಿಂದ ಯಾವ ರೀತಿ ಒಟ್ಟಾರೆ ಆರೋಗ್ಯ ಕ್ಷೇತ್ರ ಲಾಭ ಪಡೆಯಲಿದೆ ಎಂಬ ಚರ್ಚೆಗೆ ಕೂಡ ಇದು ಅವಕಾಶ ಮಾಡಿಕೊಟ್ಟಿದೆ.

ಕಳೆದ ಬಜೆಟ್‌ನ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ) ಮತ್ತು ಕಾರ್ಮಿಕ ಸಚಿವಾಲಯದಿಂದ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ (ಆರ್‌ಎಸ್‌ಬಿವೈ) ಯೋಜನೆಗಳ ಜೊತೆಗೆ ಸಮಗ್ರ ಪ್ರಾಥಮಿಕ ಆರೋಗ್ಯ ಕಾಳಜಿಯನ್ನು (ಸಿಪಿಎಚ್‌ಸಿ) ಉತ್ತೇಜಿಸುವ ಆಯುಷ್ಮಾನ್ ಭಾರತ್ ಯೋಜನೆಯು ಸರ್ಕಾರವು ಆರೋಗ್ಯ ಕ್ಷೇತ್ರದತ್ತ ಹೆಚ್ಚಿನ ಗಮನ ಹರಿಸಿರುವುದನ್ನು ಎತ್ತಿ ತೋರಿಸಿದೆ. ಇದರಡಿಯಲ್ಲಿ 1,50,000 ಆರೋಗ್ಯ ಉಪ ಕೇಂದ್ರಗಳನ್ನು ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ (ಎಚ್‌ಡಬ್ಲ್ಯೂಸಿಗಳು)ಳನ್ನಾಗಿ ಪರಿವರ್ತಿಸುವ ಉದ್ದೇಶವಿದೆ. ಇದರಲ್ಲಿರುವ ಉಳಿದ ಎರಡು ಯೋಜನೆಗಳೆಂದರೆ 10 ಕೋಟಿ ಬಡ ಮತ್ತು ದುರ್ಬಲ ವರ್ಗದ ಸಮುದಾಯಗಳಿಗೆ ಆಸ್ಪತ್ರೆ ವೆಚ್ಚವನ್ನು ಭರಿಸಲು ವಾರ್ಷಿಕ 5,00,000 ಲಕ್ಷ ರೂ. ಹಣಕಾಸು ರಕ್ಷಣೆ ಒದಗಿಸುವ ರಾಷ್ಟ್ರೀಯ ಆರೋಗ್ಯ ಸಂರಕ್ಷಣೆ ಯೋಜನೆ (ಎನ್‌ಎಚ್‌ಪಿಎಸ್).

ಎನ್‌ಆರ್‌ಎಚ್‌ಎಂನ ಅಡಿಯಲ್ಲಿ ಸಿಪಿಎಚ್‌ಸಿಗಳನ್ನು ರಚಿಸಲಾಗುತ್ತದೆ. ಇವು ಪ್ರಾಥಮಿಕ ಆರೋಗ್ಯ ಸೇವಾ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವ ಗುರಿಯನ್ನು ಹೊಂದಿವೆ. ಎನ್‌ಆರ್‌ಎಚ್‌ಎಂ, ಹೆರಿಗೆ ಮತ್ತು ಮಕ್ಕಳ ಆರೋಗ್ಯ ಸೇವೆಯತ್ತ ಗಮನಹರಿಸಿದರೆ, 2017ರ ರಾಷ್ಟ್ರೀಯ ಆರೋಗ್ಯ ನೀತಿ (ಎನ್‌ಎಚ್‌ಪಿ) ನಿರಂತರ ಪ್ರಾಥಮಿಕ ಆರೋಗ್ಯ ಕಾಳಜಿಯನ್ನು ಒದಗಿಸಲು ರಾಷ್ಟ್ರೀಯ ಆರೋಗ್ಯ ಮಿಶನ್ ಸ್ಥಾಪನೆಯ ಗುರಿ ಹೊಂದಿದೆ. ಈ ಯೋಜನೆಯನ್ನು ಈಗಾಗಲೇ ಗಮನ ಹರಿಸದಿರುವ ಒಬ್ಬರಿಂದೊಬ್ಬರಿಗೆ ಹರಡಲಾರದ ರೋಗಗಳು (ಎನ್‌ಸಿಡಿಗಳು) ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳ ವಿಭಾಗಕ್ಕೂ ವಿಸ್ತರಿಸಬೇಕಾದ ಅವಶ್ಯಕತೆ ಇದೆ. ಎನ್‌ಎಚ್‌ಎಂ, ಮಾನಸಿಕ, ಮಕ್ಕಳ ಆರೋಗ್ಯ, ಸಂವಹನ ರೋಗಗಳು ಮತ್ತು ಸಂವಹನೇತರ ರೋಗಗಳ ವಿಭಾಗದ ಪ್ರಾಮಿಥಮಿಕ ಆರೋಗ್ಯ ಸೇವೆಗೆ ಏಕರೂಪದ ವೇದಿಕೆಯಾಗಿ ಮಾರ್ಪಡಬೇಕಾಗಿದೆ. ಜೊತೆಗೆ ಸಮುದಾಯಗಳಲ್ಲಿ ಆರೋಗ್ಯ ಸುಧಾರಣೆಗೆ ಉತ್ತೇಜನ ನೀಡುವ ಕೆಲಸವೂ ಆಗಬೇಕಿದೆ.

ಎರಡನೇ ಮತ್ತು ಮೂರನೇ ಹಂತಗಳಲ್ಲಿ ಸುಧಾರಿತ ಚಿಕಿತ್ಸೆ ನೀಡಬೇಕಾದ ಗಂಭೀರ ರೋಗಗಳಿಗೆ ಪ್ರಾಥಮಿಕ ಹಂತದಿಂದ ಆರಂಭಿಸಿ ದ್ವಿಮುಖವಾದ ನಿರಂತರ ಚಿಕಿತ್ಸೆ ಅಗತ್ಯವಿರುತ್ತದೆ. ಕ್ಷಯ ಮತ್ತು ಎಚ್‌ಐವಿ-ಏಡ್ಸ್‌ನಂತಹ ಮಾರಕ ರೋಗಗಳಿಗೆ ನಿರಂತರವಾಗಿ ಆಸ್ಪತ್ರೆಗಳಿಗೆ ಭೇಟಿ ನೀಡುವ ಮೂಲಕ ಕಾಳಜಿ

* ಅಧ್ಯಕ್ಷರು, ಭಾರತದ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನ. E-mail : ksrinath.reddy@phfi.org

ತೆಗೆದುಕೊಳ್ಳಬೇಕಾಗುತ್ತದೆ. ಅಧಿಕ ಒತ್ತಡ, ಮಾಸಿಕ ಅಸ್ವಾಸ್ಥ್ಯದಂತಹ ಗಂಭೀರ ರೋಗಗಳಿಗೆ ದೀರ್ಘ ಕಾಲ ಚಿಕಿತ್ಸೆ ನೀಡುವ ಅಗತ್ಯ ಹೆಚ್ಚುತ್ತಿದ್ದು, ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರಂತರ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಪುನರ್ ರಚಿಸಬೇಕಾಗಿದೆ. ಸಮುದಾಯ ಹಂತದಲ್ಲಿ ಆರೋಗ್ಯ ಕುರಿತ ತಿಳಿವಳಿಕೆ, ವೈಯಕ್ತಿಕ ಸಲಹೆಗಳ ಮೂಲಕ ಆರೋಗ್ಯಕ್ಕೆ ಉತ್ತೇಜನ ನೀಡುವುದು ಮಹತ್ವದ್ದಾಗಿದೆ. ಇದುವರೆಗೆ ಪ್ರಾಥಮಿಕ ಆರೋಗ್ಯ ಕಾಳಜಿ ಕ್ಷೇತ್ರದಲ್ಲಿ ಇಂತಹ ಪ್ರಮುಖ ಚಟುವಟಿಕೆ ಬಹುತೇಕ ಇಲ್ಲ ಎಂದೇ ಹೇಳಬಹುದು. ಆರೋಗ್ಯಕರ ಆಹಾರ ಪದ್ಧತಿ ಅನುಸರಣೆ, ವ್ಯಾಯಾಮ ಮೊದಲಾದ ವಿಷಯಗಳ ಬಗ್ಗೆ ಸಮುದಾಯಗಳಲ್ಲಿ ಜಾಗೃತಿ ಮೂಡಿಸಬೇಕು.

ಉಪ ಕೇಂದ್ರಗಳನ್ನು ಎಚ್‌ಡಬ್ಲ್ಯೂಸಿಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸಮಗ್ರ ಆರೋಗ್ಯ ಕಾಳಜಿಯ ಸ್ವರೂಪವನ್ನು ಪಡೆದುಕೊಂಡು ಅದು ನಿರಂತರವಾಗಿ ಮುಂದುವರಿಯುವಂತೆ ಮಾಡಲಿದೆ. ಗ್ರಾಮೀಣ ಜನರಿಗೆ ಬೇಕಾದ ಮೂಲಭೂತ ಆರೋಗ್ಯ ಸೇವೆಯನ್ನು ಇದು ಒದಗಿಸಲಿದೆ. ಸೇವೆ ಆಧರಿತ ಚಿಕಿತ್ಸೆಯ ಹೊರತಾಗಿ ಸಮುದಾಯಗಳ ಆರೋಗ್ಯ ಉತ್ತೇಜನಾ ವ್ಯವಸ್ಥೆಯನ್ನು ಬಲಪಡಿಸಬೇಕು ಮತ್ತು ರೋಗವನ್ನು ಕೂಡ ತಡೆಯಲು ಕ್ರಮ ಕೈಗೊಳ್ಳಬೇಕು. ವೈದ್ಯೇತರ ಸಿಬ್ಬಂದಿಗಳಾದ ಶುಶ್ರೂಷಕಿಯರನ್ನು ಈಗಿರುವ ಸಿಬ್ಬಂದಿಗೆ ಹೆಚ್ಚುವರಿಯಾಗಿ ನೇಮಕ ಮಾಡಿದರೆ ಎಚ್‌ಡಬ್ಲ್ಯೂಸಿಗಳಲ್ಲಿ ಅವಶ್ಯಕವಾದ ಔಷಧ ಮತ್ತು ಮೂಲಭೂತ ರೋಗ ಪತ್ತೆಯನ್ನು ಉಚಿತವಾಗಿ ಮಾಡಬಹುದಾಗಿದೆ.

ಎಚ್‌ಡಬ್ಲ್ಯೂಸಿ ಸಕ್ರಿಯಗೊಳಿಸುವಿಕೆ ಸ್ವಾಗತಾರ್ಹ ನಿರ್ಧಾರವಾಗಿದ್ದರೂ ಪ್ರಾಥಮಿಕ ಆರೋಗ್ಯ ಸೇವೆಯನ್ನು ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ವಿಸ್ತರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಬಜೆಟ್‌ನಲ್ಲಿ ಒದಗಿಸಲಾದ ಅನುದಾನ ಈ ಬದ್ಧತೆಯನ್ನು ಪ್ರತಿಬಿಂಬಿಸುತ್ತಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅನುದಾನದಲ್ಲಿ ಶೇ. 2.1ರಷ್ಟು ಕಡಿಮೆಯಾಗಿದೆ. ಇನ್ನು ಎನ್‌ಎಚ್‌ಎಂನ ನಗರ ಆರೋಗ್ಯ ಮಿಶನ್ ವಿಭಾಗವನ್ನು ಬಜೆಟ್‌ನಲ್ಲಿ ನಿರ್ಲಕ್ಷ್ಯ ಮಾಡಿದ್ದು ತುಂಬಾ ನಿರಾಶಾದಾಯಕ. ವಿನ್ಯಾಸ ಮತ್ತು ಸೇವೆ ಪೂರೈಕೆಯನ್ನು ಗಮನದಲ್ಲಿಟ್ಟುಕೊಂಡರೆ ನಗರ ಪ್ರಾಥಮಿಕ ಆರೋಗ್ಯ ಕ್ಷೇತ್ರ ಬಹಳ ಹಿಂದಿನಿಂದಲೇ ನಿರ್ಲಕ್ಷ್ಯಕ್ಕೆ ಒಳಗಾಗುತ್ತಲೇ ಬಂದಿದೆ. ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಪ್ರಮಾಣ ಹೆಚ್ಚುತ್ತಿರುವುದರಿಂದ ನಗರಗಳಲ್ಲಿ ಕೊಳೆಗೇರಿ ಮತ್ತು ಕಡಿಮೆ ಆದಾಯ ವರ್ಗದ ಸಮುದಾಯಗಳು ಹೆಚ್ಚುತ್ತಿವೆ. ಇದರಿಂದ ನಗರ ಮತ್ತು ಪಟ್ಟಣಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಯ ಲಭ್ಯತೆ ತುರ್ತು ಅಗತ್ಯವಾಗಿದೆ. ನಗರದ ಜನರಿಗೂ ಎಚ್‌ಡಬ್ಲ್ಯೂಸಿಗಳು ಅವಶ್ಯಕವಾಗಿವೆ. ಆದ್ದರಿಂದ ಈ ಪ್ರಯತ್ನವನ್ನು ಇನ್ನಷ್ಟು ಬಲಗೊಳಿಸಲು ಎಚ್‌ಡಬ್ಲ್ಯೂಸಿಗಳಿಗೆ ಒದಗಿಸಲಾದ 1,2000 ಕೋಟಿ ರೂ. ನಿಧಿಯನ್ನು ಹೆಚ್ಚಿಸಬೇಕಾದ ಅವಶ್ಯಕತೆಯಿದೆ.

ಎಚ್‌ಡಬ್ಲ್ಯೂಸಿಗಳ ಕಾರ್ಯ ನಿರ್ವಹಣೆಗೆ ಇರುವ ಅತಿ ದೊಡ್ಡ ಸವಾಲು ಎಂದರೆ ಮಾನವ ಸಂಪನ್ಮೂಲದ ಕೊರತೆ. ಪಿಎಚ್‌ಸಿಗಳು ವೈದ್ಯರ ಕೊರತೆಯಿಂದ ಬಳಲುತ್ತಿದ್ದರೆ, ಎಚ್‌ಡಬ್ಲ್ಯೂಸಿಗಳಲ್ಲಿ ವೈದ್ಯೇತರ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ. ಆದಾಗ್ಯೂ ಮಧ್ಯಮ ಹಂತದ ಆರೋಗ್ಯ ಚಿಕಿತ್ಸಕರಾದ ಶುಶ್ರೂಷಕಿಯರು ಮತ್ತು ಸಮುದಾಯ ಆರೋಗ್ಯ ಸಹಾಯಕರಂತಹ ಮೂರು ವರ್ಷಗಳ ಪ್ರಾಥಮಿಕ ಆರೋಗ್ಯ ಕ್ಷೇತ್ರ ಶಿಕ್ಷಣ ಪದವಿ ಹೊಂದಿದವರನ್ನು ನಿಯೋಜಿಸಬೇಕಾದ ಅವಶ್ಯಕತೆ ಇದೆ. ಆಯುಷ್ ಪದವೀಧರರನ್ನು ನಿಯೋಜಿಸುವ (ಸಾಂಪ್ರದಾಯಿಕ ವೈದ್ಯಕೀಯ ವ್ಯವಸ್ಥೆಯಲ್ಲಿ ತರಬೇತಿ ಹೊಂದಿದವರು)ರನ್ನು ನಿಯೋಜಿಸುವ ಪ್ರಸ್ತಾವನೆ ಮುಂದಿದೆ. ಅಲೋಪತಿ ವೈದ್ಯ ಪದ್ಧತಿಯಲ್ಲಿ ತರಬೇತಿ ಹೊಂದಿರುವವರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದ್ದರೂ, ಇದು ವಿವಾದಕ್ಕೆ ಕಾರಣವಾಗಿದೆ. ಸಾಮಾನ್ಯವಾಗಿ ಎಚ್‌ಡಬ್ಲ್ಯೂಸಿಯಗಳಲ್ಲಿ ನಿಯೋಜಿತರಾಗುವ ಆಯುಷ್ ವೈದ್ಯರು ಸಾಂಪ್ರದಾಯಿಕ ಚಿಕಿತ್ಸೆ ಮತ್ತು ಆರೋಗ್ಯ ಸುಧಾರಣೆಯ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಕುರಿತಂತೆ ಸಾಕಷ್ಟು ತರಬೇತಿ ಹೊಂದಿದವರು ಇರಬೇಕಾಗುತ್ತದೆ. ಇಬ್ಬರು ಸಹಾಯಕ ಶುಶ್ರೂಷಕಿಯರ ಜೊತೆಗೆ ಒಬ್ಬ ಬಹು ಕೆಲಸ ಮಾಡುವ ಪುರುಷ ಉದ್ಯೋಗಿಯ ಅವಶ್ಯಕತೆಯಿದೆ. ಪ್ರಯೋಗಾಲಯ ಪರಿಣತ ಹಾಗೂ ಔಷಧ ನೀಡುವ ತಜ್ಞರ ಅವಶ್ಯಕತೆಯೂ ಇದೆ.

ಆರ್‌ಎಸ್‌ಬಿವೈನಿಂದ ಬಡ ಜನರು ಎರಡನೇ ಆರೋಗ್ಯ ಕೇಂದ್ರಗಳ ಲಾಭವನ್ನು ಪಡೆಯುವ ಪ್ರಮಾಣ ಹೆಚ್ಚಿದ್ದು, ಇದು



ಪ್ರತಿ ಕುಟುಂಬಕ್ಕೆ 30,000 ರೂ.ಗಳಿಗೆ ಸೀಮಿತವಾಗಿದೆ. ಕೆಲವು ರಾಜ್ಯಗಳಲ್ಲಿ ಆಯಾ ರಾಜ್ಯ ಸರ್ಕಾರಗಳು ಒದಗಿಸುವ 1–3 ಲಕ್ಷ ರೂ.ಗಳ ಆರೋಗ್ಯ ವಿಮೆಯ ಜೊತೆ ಇದು ಸ್ಪರ್ಧೆ ಮಾಡಬೇಕಾಗುತ್ತದೆ. ಇದಕ್ಕಿಂತಲೂ ಮುಖ್ಯವಾಗಿ ಹೆಚ್ಚಿನ ಹಣಕಾಸು ಸೌಲಭ್ಯ ಒದಗಿಸಲು ವಿಫಲವಾಗಿದೆ. ಆರ್‌ಎಸ್‌ಬಿವೈ ಅನುಭವದಿಂದ ಬಲಿಷ್ಠ ತಂತ್ರಜ್ಞಾನ ತಳಹದಿಯನ್ನು ನಿರ್ಮಿಸಿಕೊಂಡು ಸಾರ್ವಜನಿಕ ಮತ್ತು ಖಾಸಗಿ ಆರೋಗ್ಯ ಹಣಕಾಸು ಸೌಲಭ್ಯ ಒದಗಿಸುವವರನ್ನು ಕಂಡುಕೊಳ್ಳಬೇಕಾಗಿದೆ.

ಆಸ್ಪತ್ರೆಯ ಖರ್ಚಿಗಾಗಿ ವಾರ್ಷಿಕ 10 ಕೋಟಿ ಬಡ ಮತ್ತು ದುರ್ಬಲ ವರ್ಗದ ಜನರಿಗೆ 5,00,000 ರೂ. ಹಣಕಾಸು ನೆರವನ್ನು ಎನ್‌ಎಚ್‌ಪಿಎಸ್ ಒದಗಿಸುತ್ತದೆ. ಇದು ಆರ್‌ಎಸ್‌ಬಿವೈಗೆ ಹೋಲಿಸಿದರೆ ಗಣನೀಯ ಹೆಚ್ಚಿನ ನೆರವಾಗಿದೆ. ಈ ಮೂಲಕ ದೊಡ್ಡ ಮೊತ್ತದ ಆಸ್ಪತ್ರೆ ಖರ್ಚನ್ನು ಭರಿಸಲು ನೆರವಾದರೂ, ಹೊರ ರೋಗಿಗಳು ಇದರ ವ್ಯಾಪ್ತಿಗೆ ಬರುವುದಿಲ್ಲ.

ಎಚ್‌ಡಬ್ಲ್ಯೂಸಿಗಳು ಮತ್ತು ಇತರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲ ಪಡಿಸುವ ಕ್ರಮವು ಈ ಕ್ಷೇತ್ರದಲ್ಲಿ ನಿರಾಳತೆಯನ್ನು ಉಂಟು ಮಾಡಲಿದೆ. ಪರಿಣಾಮಕಾರಿ ಪ್ರಾಥಮಿಕ ಆರೋಗ್ಯ ಸೇವೆಯಿಂದ ಎರಡು ಮತ್ತು ಮೂರನೇ ಹಂತದ ಆರೋಗ್ಯ ಸೇವೆಗಳ ಅವಶ್ಯಕತೆಯು ಕಡಿಮೆಯಾಗಲಿದೆ. ಪರಿಣಾಮಕಾರಿ ಪ್ರಾಥಮಿಕ ಆರೋಗ್ಯ ಸೇವೆಗಳ ಕೊರತೆಯಿಂದ ಎನ್‌ಎಚ್‌ಪಿಎಸ್‌ಗಳ

ಅನಿಯಂತ್ರಿತ ಬೇಡಿಕೆ ಆರೋಗ್ಯ ಬಜೆಟ್‌ನಲ್ಲಿ ವ್ಯರ್ಥವಾಗಲಿದೆ. ಇದರ ಬದಲಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ಅನುದಾನ ಮತ್ತು ಸಾರ್ವಜನಿಕ ವಲಯದ ಆಸ್ಪತ್ರೆಗಳ ಸಲಬಲೀಕರಣ ಉತ್ತಮ ಪರಿಹಾರವಾಗಲಿದೆ.

ಯೋಜನೆಗೆ ಸದ್ಯ 2,000 ಕೋಟಿ ರೂ.ಮಾತ್ರ ಒದಗಿಸಲಾಗಿದ್ದು ಯೋಜನೆಯು 2018ರ ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ. ಎನ್‌ಎಚ್‌ಪಿಎಸ್‌ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಸನ್ನಿವೇಶದಲ್ಲಿ ಈ ಮೊತ್ತವನ್ನು ಇನ್ನೂ ಐದು ಅಥವಾ ಆರು ಪಟ್ಟು ಹೆಚ್ಚಿಸಬೇಕಾಗುತ್ತದೆ. ರಾಜ್ಯ ಸರ್ಕಾರಗಳು ಒಟ್ಟು ವೆಚ್ಚದ ಶೇ. 40ರಷ್ಟು ಭರಿಸುವ ನಿರೀಕ್ಷೆಯಿದ್ದು, ಎನ್‌ಎಚ್‌ಪಿಎಸ್‌ಗಳ ಜೊತೆ ರಾಜ್ಯ ಆರೋಗ್ಯ ವಿಮೆ ಯೋಜನೆಗಳನ್ನು ವಿಲೀನಗೊಳಿಸುವ ಸಾಧ್ಯತೆಯಿದೆ.



ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಸೇವಾ ಸಂಸ್ಥೆಗಳಿಂದ ಕಡಿಮೆ ಬೆಲೆಗೆ ಔಷಧಿಗಳನ್ನು ಖರೀದಿ ಮಾಡುವ ನಿಟ್ಟಿನಲ್ಲಿ ಎನ್‌ಎಚ್‌ಪಿಎಸ್ ಪ್ರಸ್ತಾವನೆ ಮುಂದಿಟ್ಟಿದೆ. ಇದು ರೋಗ, ಪರೀಕ್ಷೆ ಮತ್ತು ಚಿಕಿತ್ಸೆ, ಸಾಕ್ಷ್ಯ ಆಧರಿತ ರೋಗ ನಿರ್ವಹಣೆಯ ಮಾರ್ಗದರ್ಶಿ ಸೂತ್ರಗಳು, ವೆಚ್ಚದ ಮೇಲಿನ ನಿಗಾ ಮತ್ತು ಚಿಕಿತ್ಸೆಯ ಗುಣಮಟ್ಟವನ್ನು ತುಂಬಾ ಕಾಳಜಿಯಿಂದ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಒಳಗೊಳ್ಳಬೇಕಾಗಿದೆ.

ಎನ್‌ಎಚ್‌ಪಿಎಸ್‌ಗಳ ಆಡಳಿತವು ವಿಮಾ ಸಂಸ್ಥೆ ಅಥವಾ ಪ್ರತಿಷ್ಠಾನದ ಮೂಲಕ ನಡೆಯಬೇಕು. ಈ ನಿಟ್ಟಿನಲ್ಲಿ ಮಧ್ಯವರ್ತಿಯ ಆಯ್ಕೆ ರಾಜ್ಯ ಸರ್ಕಾರದ ಕೆಲಸವಾಗಿದೆ. ಒಂದೊಮ್ಮೆ ಪ್ರತಿಷ್ಠಾನವನ್ನು ಸರ್ಕಾರ ರಚಿಸಿದರೆ ಅದಕ್ಕೆ ಹೆಚ್ಚಿನ ಉತ್ತರದಾಯಿತ್ವ ಇರುತ್ತದೆ. ವಿಮಾ ಕಂಪನಿಗಳು ಅನುಭವ ಹೊಂದಿದ್ದರೂ ಹೆಚ್ಚು ದುಬಾರಿಯಾಗುವ ಸಾಧ್ಯತೆ ಇರುತ್ತದೆ.

ಜಿಲ್ಲಾವಾರು ಆಸ್ಪತ್ರೆಗಳ ಬಲವರ್ಧನೆಯ ನಿಟ್ಟಿನಲ್ಲಿ ಹೆಚ್ಚು ವೈದ್ಯರು ಮತ್ತು ತಜ್ಞರನ್ನು ಗುರುತಿಸುವ ಅವಶ್ಯಕತೆ ಇದೆ. ಬಜೆಟ್‌ನಲ್ಲಿ 24 ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಯನ್ನು ಘೋಷಿಸಲಾಗಿದ್ದು, ಜಿಲ್ಲಾ ಆಸ್ಪತ್ರೆಗಳನ್ನು ಉನ್ನತೀಕರಣಗೊಳಿಸುವ ಪ್ರಸ್ತಾವನೆಯನ್ನು ಮುಂದಿಡಲಾಗಿದೆ. ಪ್ರತಿ ಮೂರು ಸಂಸತ್ ಕ್ಷೇತ್ರಕ್ಕೆ ಒಂದು ವೈದ್ಯಕೀಯ ಕಾಲೇಜು ಸ್ಥಾಪನೆಯ ಪ್ರಸ್ತಾವನೆ ಸ್ವಾಗತಾರ್ಹ. ಇದಕ್ಕೆ ಸರ್ಕಾರದಿಂದ ಹೆಚ್ಚಿನ ನಿಧಿ ಪೂರೈಕೆ ಮಾಡುವ ಅವಶ್ಯಕತೆ ಇದೆ. ಏಕೆಂದರೆ ಖಾಸಗಿ ಹೂಡಿಕೆಯು ಈ ಕ್ಷೇತ್ರದಲ್ಲಿ ಕೆಲವು ರಾಜ್ಯಗಳಲ್ಲಿ ತುಂಬಾ ಸೀಮಿತವಾಗಿದೆ. ಒಟ್ಟಾರೆ ಆರೋಗ್ಯ ಬಜೆಟ್ ಅನುದಾನ ಹೆಚ್ಚಳವಾಗಿದ್ದರೂ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 2.8ರಷ್ಟು ಮಾತ್ರ ಅನುದಾನ ಏರಿಕೆ ಕಂಡಿದೆ. ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಅನುದಾನ ಶೇ. 12.5ರಷ್ಟು ಇಳಿಕೆ ಕಂಡಿದೆ. ವರ್ಷದಿಂದ ವರ್ಷಕ್ಕೆ ಆರೋಗ್ಯ ಕ್ಷೇತ್ರಕ್ಕೆ ನೀಡುತ್ತಿರುವ ಹಣಕಾಸು ನೆರವಿನ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ, ಎನ್‌ಎಚ್‌ಪಿಗೆ ಸರ್ಕಾರದ ಕೊಡುಗೆ 2025ರೊಳಗೆ ಶೇ. 2.5ರಷ್ಟನ್ನು ತಲುಪುವುದು ಸಾಧ್ಯ ಎಂದು ಅನ್ನಿಸುವುದಿಲ್ಲ.

ಈ ಬಾರಿಯ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸುವ ಕೆಲವು ಸಾಮಾಜಿಕ ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನ ಹರಿಸಲಾಗಿದೆ. ಕ್ಷಯ ರೋಗಿಗಳಲ್ಲಿ ಪೌಷ್ಠಿಕತೆ ಹೆಚ್ಚಿಸುವ ನಿಟ್ಟಿನಲ್ಲಿ ಮಾಸಿಕ 500 ಸ್ಟೈಪೆಂಡ್ ಆಧಾರದಲ್ಲಿ ಸಹಾಯ ಮಾಡುವ ಕುರಿತಂತೆ 600 ಕೋಟಿ ರೂ. ನೀಡಲಾಗಿದೆ. ಇದು ರೋಗಿಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಚಿಕಿತ್ಸೆಗೆ ಅವರು ಹೆಚ್ಚು ಸ್ಪಂದಿಸುವಂತೆ ಮಾಡಲಿದೆ. ನೈರ್ಮಲ್ಯ ವಿಚಾರಕ್ಕೆ ಬಂದರೆ ಸ್ವಚ್ಛ ಭಾರತ್ ಆಂದೋಲನದ ಮೂಲಕ ಹೆಚ್ಚು ಶೌಚಾಲಯಗಳನ್ನು ಕಟ್ಟುವ ಗುರಿ ಹೊಂದಲಾಗಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಎರಡನೇ ಅತಿ ದೊಡ್ಡ ಅಂಶವಾದ ಹೊರ ಭಾಗ ಮತ್ತು ಮನೆಯ ಒಳ ಭಾಗದಲ್ಲಿನ ವಾಯು ಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಕ್ರಮ



ಕೈಗೊಳ್ಳುವ ಭರವಸೆ ನೀಡಲಾಗಿದೆ. ದೆಹಲಿ ನೆರೆಹೊರೆಯ ರಾಜ್ಯಗಳಲ್ಲಿ ತ್ಯಾಜ್ಯವನ್ನು ಉರಿಸದೆ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಹಣಕಾಸು ನೆರವು ನೀಡಲಾಗಿದೆ. ಉಜ್ವಲ ಯೋಜನೆಯಡಿ ಬಡ ಮಹಿಳೆಯರಿಗೆ ಇನ್ನಷ್ಟು ಹೆಚ್ಚು ಅಡುಗೆ ಅನಿಲ ಒದಗಿಸುವ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಅಡುಗೆ ಮನೆಯಲ್ಲಿ ಕಟ್ಟಿಗೆ ಸುಡುವುದರಿಂದ ಆಗುವ ವಾಯು ಮಾಲಿನ್ಯ ತಪ್ಪಿಸಲು ನೆರವಾಗಲಿದೆ. ಈ ಮೂಲಕ ಉಸಿರಾಟದ ಸಮಸ್ಯೆ, ಹೃದಯ ಸಮಸ್ಯೆ, ಕ್ಯಾನ್ಸರ್, ಬಾಲ್ಯದಲ್ಲೇ ಅಸ್ತಮಾ, ಶ್ವಾಸಕೋಶದ ಸೋಂಕು ಮಾತ್ರವಲ್ಲ ಮಧುಮೇಹವನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗಲಿದೆ.

2018ರ ಕೇಂದ್ರ ಬಜೆಟ್‌ನಲ್ಲಿ ಆರೋಗ್ಯ ಪ್ರಮುಖ ವಿಷಯವಾಗಿ ಪರಿಗಣಿಸಲ್ಪಟ್ಟಿದ್ದರೂ, ಅದಕ್ಕೆ ಕೇಂದ್ರ ಮತ್ತು ರಾಜ್ಯ ಬಜೆಟ್‌ನಲ್ಲಿ ಒದಗಿಸಲಾಗುವ ಅನುದಾನದ ಮೇಲೆ ಅದರ ಯಶಸ್ಸು ನಿಂತಿದೆ. ಆರೋಗ್ಯ ಕ್ಷೇತ್ರಕ್ಕೆ ನೀಡಲಾಗುವ ಅನುದಾನದಲ್ಲಿ 2020ರೊಳಗೆ ರಾಜ್ಯಗಳು ತಮ್ಮ ಆರೋಗ್ಯ ಬಜೆಟ್‌ನಲ್ಲಿ ಶೇ. 8ರಷ್ಟು ಹೆಚ್ಚಳ ಮಾಡಬೇಕು ಎಂದು ಎನ್‌ಎಚ್‌ಪಿ ಕರೆ ನೀಡಿದೆ.

ಕೇಂದ್ರ ಸರ್ಕಾರವು ಈಗಾಗಲೇ ಈ ನಿಟ್ಟಿನಲ್ಲಿ ಭರವಸೆಯನ್ನು ನೀಡಿದೆ. ಇದರ ಜೊತೆಗೆ ಆರೋಗ್ಯ ಕ್ಷೇತ್ರದ ಸುಧಾರಣೆಗೆ ಬಹು ಹಂತದ ಹೂಡಿಕೆ, ಬಹು ಕೌಶಲ್ಯದ ಉದ್ಯೋಗಿಗಳು ಮತ್ತು ಉತ್ತಮ ಗುಣಮಟ್ಟದ ಸೇವೆ ಒದಗಿಸುವುದು ಅವಶ್ಯಕವಾಗಿದೆ. ಇನ್ನು ನಿಯಂತ್ರಣ ಮತ್ತು ಉಸ್ತುವಾರಿಗಾಗಿ ಪ್ರಬಲ ವ್ಯವಸ್ಥೆಯನ್ನು ಸ್ಥಾಪಿಸುವುದು ಕೂಡ ಅಗತ್ಯವಾಗಿದೆ. ಇದರಿಂದ ಮಾತ್ರ ಭಾರತದಲ್ಲಿ ಎಲ್ಲರಿಗೂ ಅತ್ಯುತ್ತಮ ಆರೋಗ್ಯ ಸೇವೆ ಸಿಗಲು ಸಾಧ್ಯ. ಈ ನಿಟ್ಟಿನಲ್ಲಿ ಈ ಬಾರಿಯ ಬಜೆಟ್ ಕಹಳೆ ಮೊಳಗಿಸಿದ್ದು, ಈಗ ಪಯಣ ಆರಂಭವಾಗಿದೆ. ❑

# ಭಾರತದ ಆಶೋತ್ತರ ಜಿಲ್ಲೆಗಳ ಪರಿವರ್ತನೆ; ಅಭಿವೃದ್ಧಿ ಯಾನ

* ಅಮಿತಾಬ್ ಕಾಂತ್



ಈ ಕಾರ್ಯಕ್ರಮದ ಗಮನಾರ್ಹ ಅಂಶಗಳಲ್ಲಿ ಒಂದೆಂದರೆ, ಇದರ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಹೆಚ್ಚುವರಿ/ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು 'ಪ್ರಭಾರಿ' ಮತ್ತು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗುತ್ತದೆ. ಈ ಅಧಿಕಾರಿಗಳು ತಮ್ಮ ಅಗಾಧ ಅನುಭವದ ಮೂಲಕ ಕೇವಲ ಜಿಲ್ಲಾಡಳಿತಕ್ಕೆ ಮಾರ್ಗದರ್ಶನ ನೀಡಲು ಮಾತ್ರವಲ್ಲದೆ, ಜಿಲ್ಲಾಡಳಿತ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾರೆ.

ಭಾರತ ಒಂದು ದಿಟ್ಟ ಪ್ರಗತಿ ಪಥದಲ್ಲಿದೆ ಮತ್ತು ವಿಶ್ವಬ್ಯಾಂಕ್, 'ಮೂಡಿಸ್ ಇನ್‌ವೆಸ್ಟರ್ ಸರ್ವೀಸ್' ಮುಂತಾದ ಅಂತಾರಾಷ್ಟ್ರೀಯ ಸಂಸ್ಥೆಗಳು 2018ರಲ್ಲೂ ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಮುನ್ನೋಟ ಒದಗಿಸಿವೆ. 'ಸುಲಭ ವ್ಯವಹಾರ ವಾತಾವರಣ'ಕ್ಕೆ ಸಂಬಂಧಿಸಿದಂತೆ ಇತ್ತೀಚಿಗಿನ ವಿಶ್ವಬ್ಯಾಂಕ್ ವರದಿಯಲ್ಲಿ ಭಾರತವು ಭರ್ಜರಿ 42 ರ್ಯಾಂಕ್‌ಗಳ ಜಿಗಿತ ಕಂಡಿದ್ದು, ಈ ಮಟ್ಟದ ಏರಿಕೆ ಕಂಡ ವಿಶ್ವದ ಏಕೈಕ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ.

ಆರ್ಥಿಕ ಪ್ರಗತಿ ನಿರೀಕ್ಷೆಗಳು ಸಕಾರಾತ್ಮಕವಾಗಿದ್ದರೂ, ನಮ್ಮ ಸಾಮಾಜಿಕ ವಲಯವು ಹಲವು ಸವಾಲುಗಳನ್ನು ಎದುರಿಸುತ್ತಿದೆ. 'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ'ದ (ಯುಎನ್‌ಡಿಪಿ) 2016ನೇ ಸಾಲಿನ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ 188 ದೇಶಗಳಲ್ಲಿ 131ನೇ ಸ್ಥಾನದಲ್ಲಿ ನಿಂತಿದೆ. 'ಜಾಗತಿಕ ಹಸಿವಿನ ಸೂಚ್ಯಂಕ'ದಲ್ಲಿ 119 ದೇಶಗಳ ಪೈಕಿ ಭಾರತದ ಪಡೆದ ಶ್ರೇಣಿ 100. ಇತ್ತೀಚೆಗಿನ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ವರದಿಯಲ್ಲಿ ಬಹಿರಂಗವಾಗಿರುವಂತೆ, ದೇಶದಲ್ಲಿ ಪ್ರತಿ ಇಬ್ಬರು ಮಹಿಳೆಯರ ಪೈಕಿ ಒಬ್ಬರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ; ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ಕುಂಠಿತ ಬೆಳವಣಿಗೆಗೆ ಗುರಿಯಾಗಿದೆ; ಪ್ರತಿ ನಾಲ್ಕರಲ್ಲಿ ಒಂದು ಮಗು ಪೌಷ್ಟಿಕಾಂಶಕೊರತೆಯಿಂದ ಬಳಲುತ್ತಿದೆ ಮತ್ತು ಪ್ರತಿ ಐವರು ಮಕ್ಕಳಲ್ಲಿ ಒಂದು ಮಗು ಕೃಶವಾಗುತ್ತಿದೆ. ಇತರ ವಿವಿಧ ಸಮೀಕ್ಷೆಗಳಿಂದ ತಿಳಿದುಬಂದ ಅಂಶಗಳೂ ಸಾಮಾಜಿಕ ಕ್ಷೇತ್ರದ ಬಗ್ಗೆ ಬಹುತೇಕ ಭಯಾನಕ ಚಿತ್ರಣವನ್ನು ಮುಂದಿಡುತ್ತವೆ. ಆದರೆ, ಈ ದತ್ತಾಂಶದ ಆಳ ಅಧ್ಯಯನವು ವಿಭಿನ್ನ ಚಿತ್ರಣವನ್ನು ನೀಡುತ್ತದೆ. ಈ ಸೂಚ್ಯಂಕಗಳ ವಿಚಾರದಲ್ಲಿ ದೇಶದ ಸ್ಥಿತಿಗತಿಯು ರಾಷ್ಟ್ರೀಯ ಮಟ್ಟದಲ್ಲಿ ಕಂಡು ಬರುವಷ್ಟು ಕಳವಳಕಾರಿಯಾಗಿಲ್ಲ.

ಉದಾಹರಣೆಗೆ, ಕೃಶವಾದ ಮಕ್ಕಳ ಶೇಕಡಾವಾರು ಮಕ್ಕಳ ಸಂಖ್ಯೆ – ಕೇರಳ (19.7) ಮತ್ತು ಬಿಹಾರ (48.3); ಕಡಿಮೆ ತೂಕದ ಮಕ್ಕಳ ಶೇಕಡಾವಾರು ಪ್ರಮಾಣ – ಮಿಜೊರಾಂ (11.9) ಮತ್ತು ಜಾರ್ಖಂಡ್ (47.8); ಪ್ರತಿ 1000 ಜನನಗಳಿಗೆ, ಶಿಶು ಮರಣ ಪ್ರಮಾಣ – ಅಂಡಮಾನ್ ಮತ್ತು ನಿಕೋಬಾರ್ (10) ಮತ್ತು ಉತ್ತರ ಪ್ರದೇಶ (64); ಪ್ರತಿ 1 ಲಕ್ಷ ಸಜೀವ ಮಕ್ಕಳ ಜನನ ಪ್ರಕರಣಗಳಲ್ಲಿ ತಾಯಿ ಮರಣ ಪ್ರಮಾಣ – ಕೇರಳ (61) ಮತ್ತು ಅಸ್ಸಾಂ (300); ರಾಷ್ಟ್ರೀಯ ಸಾಧನೆ ಸಮೀಕ್ಷೆ (ಎನ್‌ಎಎಸ್) 5ನೇ ತರಗತಿ ಗಣಿತದಲ್ಲಿ ಮಕ್ಕಳ ಸ್ಕೋರ್ – ತಮಿಳುನಾಡು (56%) ಮತ್ತು ಛತ್ತೀಸ್‌ಗಢ (32%); ಅದೇ ರೀತಿ, ಓದಿನ ಗ್ರಹಣಶಕ್ತಿ ಸ್ಕೋರ್ – ತಮಿಳುನಾಡು (54%) ಮತ್ತು ಬಿಹಾರ (29%); ಸ್ವಂತ ಸೂರು – ಐದು ರಾಜ್ಯಗಳು ಶೇ. 100ರಷ್ಟು ಸಾಧನೆ ಮಾಡಿವೆ ಮತ್ತು ಜಾರ್ಖಂಡ್ (40%). ಒಟ್ಟಾರೆಯಾಗಿ ಸುಮಾರು 200 ಜಿಲ್ಲೆಗಳು ರಾಷ್ಟ್ರೀಯ ಸರಾಸರಿಯನ್ನು ವಿರೂಪಗೊಳಿಸಿವೆ.

ಮುಂದುವರಿದು ಹೇಳುವುದಾದರೆ, ವಿವಿಧ ಸರ್ಕಾರಿ ಯೋಜನೆಗಳನ್ನು

* ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ನೀತಿ ಆಯೋಗ. E-mail : amitabh.kant@nic.in

ನಿರ್ದಿಷ್ಟ ಗುರಿಗಳೊಂದಿಗೆ ಕೇಂದ್ರೀಕೃತವಾಗಿ, ಒಮ್ಮುಖವಾಗಿ, ನಿಜಕಾಲ (ರಿಯಲ್–ಟೈಮ್) ಮೇಲ್ವಿಚಾರಣೆ ವ್ಯವಸ್ಥೆಯೊಂದಿಗೆ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಿದಲ್ಲಿ, ಈ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಪರಿವರ್ತನೆ ತರಬಹುದೆಂದು ಮತ್ತು ಮುಂದಿನ 3–5 ವರ್ಷಗಳಲ್ಲಿ ಅವಧಿಯಲ್ಲಿ ದೇಶದಲ್ಲಿ ಅತ್ಯುತ್ತಮ ಸೂಚ್ಯಂಕಗಳನ್ನು ಪಡೆಯಬಹುದೆಂದು ನಿರೀಕ್ಷಿಸಲಾಗಿದೆ.

ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸೂಚ್ಯಂಕಗಳೆರಡರಲ್ಲೂ ದೇಶದ ವಿವಿಧ ಪ್ರದೇಶಗಳಲ್ಲಿ ವ್ಯಾಪಕವಾಗಿದ್ದ ಅಸಮಾನತೆಯು 1960ರ ದಶಕದಲ್ಲೇ ನೀತಿ ರೂಪಕರ ಗಮನ ಸೆಳೆದಿತ್ತು. ಹೀಗೆ ಹಿಂದೆ ಗುರುತಿಸಲಾದ ಬಹುತೇಕ ಹಿಂದುಳಿದ ಜಿಲ್ಲೆಗಳು ಅವಿಭಜಿತ ಬಿಹಾರ, ಮಧ್ಯ ಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನದಂತಹ ರಾಜ್ಯಗಳಲ್ಲೇ ಇದ್ದವು. ವಿವಿಧ ಸಮಿತಿಗಳ ಪ್ರತಿಯೊಂದು ಶಿಫಾರಸುಗಳಂತೆ ಕ್ಷೇತ್ರವಾರು ಅಥವಾ ನಿರ್ದಿಷ್ಟ ಪ್ರದೇಶವನ್ನು ಗುರಿಯಾಗಿಸಿಕೊಂಡು ಯೋಜನೆ / ಕಾರ್ಯಕ್ರಮಗಳನ್ನು ರೂಪಿಸಲಾಯಿತಾದರೂ, ಒಮ್ಮುಖತೆ ಮತ್ತು ಕೇಂದ್ರೀಕೃತ ಉಸ್ತುವಾರಿ ವ್ಯವಸ್ಥೆ ಕೊರತೆ ಇಲ್ಲಿ ಎದುರಾಯಿತು. ಈ ಜಿಲ್ಲೆಗಳಿಗೆ ನೀಡಲಾದ ಅನುದಾನದಲ್ಲಿ ಕೇವಲ ಒಂದು ಸಣ್ಣ ತುಣುಕು ಮಾತ್ರವೇ ಅಲ್ಲಿಗೆ ತಲುಪುತ್ತಿತ್ತು ಎಂದು ವರದಿಗಳಿಂದ ತಿಳಿದುಬಂದಿದೆ. ವಿಶ್ವಾಸಾರ್ಹ ಮತ್ತು ನಿಜಕಾಲ ದತ್ತಾಂಶ ಸಹ ಒಂದು ದೊಡ್ಡ ಸವಾಲಾಗಿತ್ತು.

ನೀತಿ ರೂಪಣೆಯಲ್ಲಿ ಕಂಡುಬಂದ ಮತ್ತೊಂದು ಸಮಸ್ಯೆಯೆಂದರೆ, 'ಒಂದೇ ಗಾತ್ರ, ಸರ್ವತ್ರ ಅಂಗೀಕೃತ' ವಿಧಾನದ ಅನುಸರಣೆ. ಭೌಗೋಳಿಕ, ಸಾಂಸ್ಕೃತಿಕ ಮತ್ತು ನಂಬಿಕೆಗಳಲ್ಲಿ ಅಗಾಧ ವೈವಿಧ್ಯತೆಯನ್ನು ಹೊಂದಿರುವೆಡೆ, ಪ್ರಕರಣದಿಂದ ಪ್ರಕರಣಕ್ಕೆ ನಿರ್ದಿಷ್ಟ ನೀತಿಗಳನ್ನು ರೂಪಿಸುವುದರಿಂದ ಮಾತ್ರ ಪರಿಹಾರ ಸಾಧ್ಯ. ಕೊನೆಯದಾಗಿ, ಪೋಲಿಯೊ ನಿರ್ಮೂಲನೆಯಂತಹ ಯಶಸ್ವಿ ಯೋಜನೆಗಳಿಂದ ತಿಳಿದು ಬಂದ ಅಂಶವನ್ನು ಆಧರಿಸಿ ಹೇಳುವುದಾದರೆ, ಈ ಹಿಂದುಳಿದ ಜಿಲ್ಲೆಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಇಲ್ಲದೆ ಪರಿವರ್ತನೆ ಸಾಧ್ಯವಿಲ್ಲ. ಮತ್ತೊಂದು ವಿಧದಲ್ಲಿ ಹೇಳುವುದಾದರೆ, ಸಾಮೂಹಿಕ




ಚಳವಳಿ ಮೂಲಕ ಮಾತ್ರವೇ ಪರಿವರ್ತನೆ ಸಾಧ್ಯ.

ಅಭಿವೃದ್ಧಿಯ ಯಾನದಲ್ಲಿ ಕಲಿತ ಪಾಠಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಭಾರತ ಸರ್ಕಾರವು ಆಶೋತ್ತರ ಜಿಲ್ಲೆಗಳ ಪರಿವರ್ತನೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. 'ಭಾರತ ಬಿಟ್ಟು ತೊಲಗಿ' ಚಳವಳಿಯ 75ನೇ ವಾರ್ಷಿಕೋತ್ಸವದ ಅಂಗವಾಗಿ, ಪ್ರಧಾನ ಮಂತ್ರಿಯವರು 2017ರ ಆಗಸ್ಟ್ 9ರಂದು ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಧಾನಿ ಅವರು "ಅತ್ಯಂತ ಹಿಂದುಳಿದ 100 ಜಿಲ್ಲೆಗಳಲ್ಲಿ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಸುಧಾರಿಸಿದರೆ, ಅದರಿಂದ ದೇಶದ ಸಮಗ್ರ ಪ್ರಗತಿಗೆ ದೊಡ್ಡ ಉತ್ತೇಜನ ದೊರೆಯುತ್ತದೆ," ಎಂದು ಹೇಳಿದರು. ಈ ಕಾರ್ಯಕ್ರಮದ ಸಮಗ್ರ ಅಂಶಗಳೆಂದರೆ – ಕೇಂದ್ರ ಮತ್ತು ರಾಜ್ಯ ಯೋಜನೆಗಳ ಸಂಯೋಜನೆ, ಕೇಂದ್ರ ಮತ್ತು ರಾಜ್ಯಮಟ್ಟದ 'ಪ್ರಭಾರಿ' ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಸಹಯೋಗ, ರಾಜ್ಯಗಳಿಗೆ ಚಾಲಕ ಸ್ಥಾನಮಾನ, ಯೋಜನೆಗಳ ಹೊಂದಾಣಿಕೆ, ನಿಜಕಾಲ ದತ್ತಾಂಶ, ಜಿಲ್ಲೆ–ಜಿಲೆಗಳ ನಡುವೆ ಸ್ಪರ್ಧೆ ಮತ್ತು ಸಾಮಾಜಿಕ ಚಳವಳಿಯ ಮುಂದಾಳತ್ವ.

28 ರಾಜ್ಯಗಳ ಪೈಕಿ ಪ್ರತಿ ರಾಜ್ಯಕ್ಕೆ ಕನಿಷ್ಠ ಒಂದರಂತೆ ಒಟ್ಟು 115 ಜಿಲ್ಲೆಗಳನ್ನು ಗುರುತಿಸಲಾಯಿತು, ಈ ಪೈಕಿ 30 ಜಿಲ್ಲೆಗಳನ್ನು ನೀತಿ ಆಯೋಗ ಆಯ್ಕೆ ಮಾಡಿದರೆ, ಇನ್ನೂ 50 ಜಿಲ್ಲೆಗಳನ್ನು ಕೇಂದ್ರ ಸಚಿವಾಲಯಗಳು ಆಯ್ಕೆ ಮಾಡಿದವು. ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ–ಅಂಶಗಳಿಂದ ಪಡೆಯಲಾದ ಸೂಚ್ಯಂಕಗಳ ಮಾನದಂಡಗಳ ಆಧಾರದ ಮೇಲೆ ಈ ಜಿಲ್ಲೆಗಳನ್ನು ಸಚಿವಾಲಯಗಳು ಆಯ್ಕೆ ಮಾಡಿದವು. ಉಳಿದ 35 ಜಿಲ್ಲೆಗಳನ್ನು 'ಎಡ ಪಂಥೀಯ ತೀವ್ರಗಾಮಿ' ಜಿಲ್ಲೆಗಳೆಂದು ಗೃಹ ಸಚಿವಾಲಯ ಗುರುತಿಸಿತು. ನೀತಿ ಆಯೋಗವು ಈ ಕಾರ್ಯಕ್ರಮದ ಮೂಲಾಧಾರವಾಗಲಿದೆ. ಈ ಯೋಜನೆಯ ಮುಂದಾಳತ್ವವನ್ನು ರಾಜ್ಯ ಸರ್ಕಾರಗಳೇ ವಹಿಸುವುದರಿಂದ, ಜಿಲ್ಲೆಗಳ ಆಯ್ಕೆ ವೇಳೆ ರಾಜ್ಯಗಳ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. 2022ರ ವೇಳೆಗೆ ಈ ಜಿಲ್ಲೆಗಳಲ್ಲಿ ಪ್ರಮುಖ ಮಾನದಂಡಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸಂಯೋಜಿತ ಪ್ರಯತ್ನಗಳನ್ನು ಮಾಡಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳಿಗೆ ಬೆಂಬಲವಾಗಿ ನಿಲ್ಲುತ್ತದೆ. ನೀತಿ ಆಯೋಗವು ಇಂತಹ ನೆರವನ್ನು ರಾಜ್ಯಗಳಿಗೆ ತಲುಪಿಸಲು ಸಮನ್ವಯಕಾರನಂತೆ ಕಾರ್ಯ ನಿರ್ವಹಿಸುತ್ತದೆ. ಮತ್ತು ಈ ಜಿಲ್ಲೆಗಳಲ್ಲಿ ಸಾಧನೆಯನ್ನು ಅಳೆಯಲು ಉತ್ಕೃಷ್ಟ 'ಮಾಹಿತಿ ನಿರ್ವಹಣೆ ವ್ಯವಸ್ಥೆ'ಯನ್ನು (ಎಂಐಎಸ್) ಆಯೋಗ ರಚಿಸುತ್ತದೆ.

ಈ ಜಿಲ್ಲೆಗಳ ಪರಿವರ್ತನೆಗಾಗಿ ರೂಪಿಸಲಾದ ಕಾರ್ಯತಂತ್ರದ ಪ್ರಮುಖ ಮೂಲಾಂಶಗಳಲ್ಲಿ ಒಂದೆಂದರೆ, ಆಯ್ದ 'ಪ್ರಮುಖ ಸಾಧನೆ ಸೂಚ್ಯಂಕ'ಗಳನ್ನು (ಕೆಪಿಐ) ಗುರುತಿಸುವುದು ಮತ್ತು ಈ ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಆದ ಪ್ರಗತಿಯ ಮೇಲ್ವಿಚಾರಣೆ ಮಾಡುವುದು ಹಾಗೂ ಹೆಚ್ಚಿನ ಪ್ರಗತಿ ಸಾಧನೆ ಆಧಾರದ ಮೇಲೆ ವಾರ್ಷಿಕ ರ್‍ಯಾಂಕಿಂಗ್ ನೀಡುವುದು. ಕಾರ್ಯಕ್ರಮ ಅನುಷ್ಠಾನಕ್ಕೆ ಗುರುತಿಸಲಾದ ಜಿಲ್ಲೆಗಳಲ್ಲಿ ಸಾಮಾಜಿಕ ಸೂಚ್ಯಂಕಗಳು ಮತ್ತು ಅತ್ಯಗತ್ಯ ಮೂಲಭೂತ



ಸೌಕರ್ಯವನ್ನು ಸುಧಾರಿಸುವ ಮೂಲಕ ಜೀವನ ಗುಣಮಟ್ಟವನ್ನು ಹೆಚ್ಚಿಸುವುದು ಹಾಗೂ ಅಲ್ಲಿನ ನಾಗರಿಕರ ಆದಾಯ ಹೆಚ್ಚಿಸುವುದು ಈ ಯೋಜನೆಯ ಮೂಲ ಆಶಯವಾಗಿದೆ. ಇದರಂತೆ, ಐದು – ಆರೋಗ್ಯ ಮತ್ತು ಪೌಷ್ಟಿಕತೆ, ಶಿಕ್ಷಣ, ಕೃಷಿ ಮತ್ತು ಜಲ ಸಂಪನ್ಮೂಲ, ಅತ್ಯಗತ್ಯ ಮೂಲ ಸೌಕರ್ಯ ಮತ್ತು ಆರ್ಥಿಕ ಒಳಗೊಳ್ಳುವಿಕೆ ಹಾಗೂ ಕೌಶಲ್ಯ ವೃದ್ಧಿ–ಕ್ಷೇತ್ರಗಳನ್ನು ಆರಿಸಿಕೊಳ್ಳಲಾಗಿದೆ.

# 115 ಆಶೋತ್ತರ ಜಿಲ್ಲೆಗಳ ಪಟ್ಟಿ

| ರಾಜ್ಯಗಳು | ನೀತಿ ಆಯೋಗದ 30 ಜಿಲ್ಲೆಗಳು | ವಿವಿಧ ಸಚಿವಾಲಯಗಳ 50 ಜಿಲ್ಲೆಗಳು | ಗೃಹ ಸಚಿವಾಲಯದ 'ಎಲ್‌ಡಬ್ಲ್ಯೂಇ' ಜಿಲ್ಲೆಗಳು | ಒಟ್ಟು |
|---|---|---|---|---|
| ಆಂಧ್ರ ಪ್ರದೇಶ | | 1. ವಿಜಯನಗರಂ<br>2. ಕಡಪ | 1. ವಿಶಾಖಪಟ್ಟಣಂ | 3 |
| ಅರುಣಾಚಕಲ ಪ್ರದೇಶ | | 1. ನಾಮ್‌ಸಾಯಿ | | 1 |
| ಅಸ್ಸಾಂ | 1. ಡಾರ್‍ರೆಂಗ್<br>2. ಧುಬ್ರಿ<br>3. ಬಾರ್ಪೆಟಾ<br>4. ಗೋಲ್ಪಾರಾ<br>5. ಬಕ್ಸಾ | 1. ಉದಲ್‌ಗುರಿ<br>2. ಹೈಲಾಕಂಡಿ | | 7 |
| ಬಿಹಾರ | 1. ಕತಿಹಾರ್<br>2. ಬೆಗುಸರಾಯ್<br>3. ಶೇಖ್ಪುರಾ<br>4. ಅರರಿಯಾ<br>5. ಸಿತಾಮಾರ್ಹಿ | 1. ಖಗೇರಿಯಾ<br>2. ಪೂರ್ನಿಯಾ | 1. ಔರಂಗಾಬಾದ್<br>2. ಬಂಕಾ<br>3. ಗಯಾ<br>4. ಜಾಮೂಯಿ<br>5. ಮುಜಫರ್ಪುರ್<br>6. ನವಾಡಾ | 13 |
| ಛತ್ತೀಸ್ಗಢ | | 1. ಕೊರ್ಬಾ<br>2. ಮಹಾಸಮುಂದ್ | 1. ಬಸ್ತಾರ್<br>2. ಬಿಜಾಪುರ್<br>3. ದಂತೇವಾಡಾ<br>4. ಕಂಕರ್<br>5. ಕೊಂಡಗಾಂವ್<br>6. ನಾರಾಯಣಪುರ್<br>7. ರಾಜ್ನಂದ್ಗಾಂವ್<br>8. ಸುಕ್ಮಾ | 10 |
| ಗುಜರಾತ್ | | 1. ನರ್ಮದಾ<br>2. ದಾಹೊದ್ | | 2 |
| ಹರಿಯಾಣ | | 1. ಮೇವತ್ | | 1 |
| ಹಿಮಾಚಲ ಪ್ರದೇಶ | | 1. ಚಂಬಾ | | 1 |
| ಜಮ್ಮು ಮತ್ತು ಕಾಶ್ಮೀರ | | 1. ಕುಪ್ವಾರ<br>2. ಬಾರಾಮುಲ್ಲಾ | | 2 |
| ಜಾರ್ಖಂಡ್ | 1. ಸಾಹೇಬ್‌ಗಂಜ್<br>2. ಪಕೌರ್ | 1. ಗೊಡ್ಡಾ | 1. ಲಥೇಹರ್<br>2. ಲೊಹಾರ್ದಗಾ<br>3. ಪಲಾಮು<br>4. ಪುರ್ಬಿಸಿಂಗ್ಭುಮ್<br>6. ಅಂಚಿ<br>7. ಸಿಮ್ಡೆಗಾ<br>8. ಪಶ್ಚಿಮ ಸಿಂಗ್ಭುಮ್<br>9. ಬೊಕೊರೊ<br>10. ಚತ್ರಾ<br>11. ದುಮ್ಕಾ<br>12. ಗರ್ವಾ<br>13. ಗಿರ್ಡಿಹ್<br>14. ಗುಮ್ಲಾ<br>15. ಹಜಾರಿಬಾಗ್<br>16. ಖುಂತಿ | 19 |
| ಕರ್ನಾಟಕ | | 1.ಯಾದಗಿರಿ<br>2. ರಾಯಚೂರು | | 2 |
| ಕೇರಳ | | 1. ವಯನಾಡ್ | | 1 |
| ಮಧ್ಯ ಪ್ರದೇಶ | 1. ದಮೋಹ್<br>2. ಸಿಂಗ್ರೌಲಿ<br>3. ಬರ್ವಾನಿ<br>4. ವಿದಿಶಾ<br>5. ಖಾಂಡ್ವಾ | 1. ಛತ್ತರ್ಪುರ್<br>2. ರಾಜಗಢ<br>3. ಗುನ | | 8 |
| ಮಹಾರಾಷ್ಟ್ರ | 1. ನಂದೂರ್ಬರ್ | 1. ವಾಶಿಮ್<br>2. ಉಸ್ಮಾಬಾದ್ | 1. ಗಡಿಚಿರೋಲಿ | 4 |
| ಮಣಿಪುರ | | 1. ಚಂದೇಲ್ | | 1 |
| ಮೇಘಾಲಯ | | 1. ರಿಬೋಯಿ | | 1 |
| ಮಿಜೊರಾಂ | | 1. ಮಮಿತ್ | | 1 |
| ನಾಗಾಲ್ಯಾಂಡ್ | | 1. ಕಿಫೈರ್ | | 1 |
| ಒಡಿಶಾ | 1.ರಾಯಗಢ<br>2. ಕಾಳಹಂಡಿ | 1. ಕಂಧಮಾಲ್<br>2. ಗಜಪತಿ<br>3. ಧೆನ್ಕನಲ್<br>4. ಬಲಂಗಿರ್ | 1. ಕೊರಾಪುಟ್<br>2. ಮಲ್ಕನ್ಗಿರಿ | 8 |
| ಪಂಜಾಬ್ | | 1.ಫಿರೋಜ್ಪುರ್<br>2. ಮೊಗಾ | | 2 |
| ರಾಜಸ್ಥಾನ | 1.ಬರನ್<br>2. ಜೈಸಲ್ಮೇರ್ | 1. ಧೋಲ್ಪುರ್<br>2. ಕರೌಲಿ<br>3. ಸಿರೋಹಿ | | 5 |
| ಸಿಕ್ಕಿಂ | | 1. ಪಶ್ಚಿಮಸಿಕ್ಕಿಂ | | 1 |
| ತಮಿಳುನಾಡು | | 1. ರಾಮನಾಥಪುರಂ<br>2. ವಿರುಧ್ನಗರ್ | | 2 |
| ತೆಲಂಗಾಣ | | 1. ಭೋಪಾಲ್ಪಲ್ಲಿ<br>2. ಅಸಿಫಾಬಾದ್ | 1. ಖಮ್ಮಮ್ | 3 |
| ತ್ರಿಪುರ | | 1. ಧಲಾಯ್ | | 1 |
| ಉತ್ತರ ಪ್ರದೇಶ | 1. ಚಿತ್ರಕೂಟ್<br>2. ಬಲ್ರಾಂಪುರ್<br>3. ಬಹ್ರಾಯಿಚ್<br>4. ಸೊನ್ಭದ್ರಾ<br>5. ಶರ್ವಾಸ್ತಿ | 1. ಚಂದೌಲಿ<br>2. ಸಿದ್ದಾರ್ಥ್‌ನಗರ್<br>3. ಫತೇಫುರ್ | | 8 |
| ಉತ್ತರಾಖಂಡ್ | | 1. ಹರಿದ್ವಾರ<br>2. ಉಧಮ್ ಸಿಂಗ್ ನಗರ | | 2 |
| ಪಶ್ಚಿಮ ಬಂಗಾಳ | 1. ಮುರ್ಷಿದಾಬಾದ್<br>2. ಮಾಲ್ಡಾಹ್<br>3. ಬಿಭುಮ್ | 1. ನಾದಿಯಾ<br>2.ದಕ್ಷಿಣ್ ದಿಂಜಾಪುರ್ | | 5 |
| ಒಟ್ಟು | 30 | 50 | 35 | 115 |

| ಪ್ರತಿ ವಿಷಯಾಧರಿತ ಕ್ಷೇತ್ರಕ್ಕೆ ಸೂಚ್ಯಂಕಗಳ ಪಟ್ಟಿ | | | | |
|---|---|---|---|---|
| ಆರೋಗ್ಯ ಮತ್ತು ಪೌಷ್ಟಿಕತೆ | | | | |
| ಕ್ರಮ ಸಂಖ್ಯೆ | ಸೂಚಕಗಳು | ಆರೋಗ್ಯ ಮತ್ತು ಪೌಷ್ಟಿಕಾಂಶದಲ್ಲಿ ಮೌಲ್ಯಾಂಕ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಮೌಲ್ಯಾಂಕ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
| 1 | ಪ್ರಸವಪೂರ್ವ ಆರೈಕೆಗಾಗಿ ನೊಂದಾಯಿತಗೊಂಡ ಗರ್ಭಿಣಿಯರಲ್ಲಿ 4 ಅಥವಾ ಅದಕ್ಕಿಂತ ಹೆಚ್ಚಿನ ಪ್ರಸವಪೂರ್ವ ಆರೈಕೆ ಚೆಕ್–ಅಪ್‌ಗಳನ್ನು ಮಾಡಿಸಿಕೊಂಡ ಗರ್ಭಿಣಿಯರ ಶೇಕಡಾವಾರು ಪ್ರಮಾಣ | 8 | 2.4 | ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ (ಹೆಚ್‌ಎಂಐಎಸ್), ಆ.ಮ.ಕು. ಕಲ್ಯಾಣ ಇಲಾಖೆ 2016–17 / ಮಾಸಿಕ |
| 2 | ಐಸಿಡಿಎಸ್ ಕಾರ್ಯಕ್ರಮದ ಅಡಿಯಲ್ಲಿ ನಿಯಮಿತವಾಗಿ ಪೂರಕ ಪೌಷ್ಟಿಕಾಂಶವನ್ನು ತೆಗೆದುಕೊಳ್ಳುತ್ತಿರುವ ಗರ್ಭಿಣಿಯರ ಶೇಕಡಾವಾರು ಪ್ರಮಾಣ. | 3 | 0.9 | ಜಿಲ್ಲಾಧಿಕಾರಿ (ಡಿಸಿ) / ಮಾಸಿಕ |
| 3 | ಪ್ರಸವಪೂರ್ವ ಆರೈಕೆಗಾಗಿ ನೋಂದಾಯಿತ ಮಹಿಳೆಯರಲ್ಲಿ ತೀವ್ರ ರಕ್ತಹೀನತೆ (ಹೆಮೋಗ್ಲೋಬಿನ್ 7ಜಿ / ಡಿಎಲ್) ಹೊಂದಿರುವ ಗರ್ಭಿಣಿಯರ ಶೇಕಡಾವಾರುಪ್ರಮಾಣ | 9 | 2.7 | ಎಚ್‌ಎಂಐಎಸ್ / ಮಾಸಿಕ |
| 4 | ವರದಿಯಾದ ಒಟ್ಟು ಹೆರಿಗೆಗಳ ಪೈಕಿ ಸಾಂಸ್ಥಿಕ ಹೆರಿಗೆಗಳ ಶೇಕಡಾವಾರು ಪ್ರಮಾಣ | 7 | 2.1 | ಎಚ್‌ಎಂಐಎಸ್/ ಮಾಸಿಕ |
| 5 | ವರದಿಯಾದ ಒಟ್ಟು ಹೆರಿಗೆಗಳ ಪೈಕಿ 'ಎಸ್‌ಬಿಎ' (ಕುಶಲ ಜನನ ಸಹವರ್ತಿ) ತರಬೇತಿ ಪಡೆದ ಆರೋಗ್ಯ ಕಾರ್ಯಕರ್ತರು ಭಾಗವಹಿಸಿದ ಶೇಕಡಾವಾರುಹೆರಿಗೆಗಳ ಸಂಖ್ಯೆ | 3 | 0.9 | ಎಚ್‌ಎಂಐಎಸ್/ ಮಾಸಿಕ |
| 6 | ಜನಿಸಿದ ಒಂದು ಗಂಟೆಯೊಳಗೆ ಸ್ತನಪಾನ ಮಾಡಿದ ಶೇಕಡಾವಾರು ಶಿಶುಗಳ ಸಂಖ್ಯೆ | 10 | 3.0 | ಎಚ್‌ಎಂಐಎಸ್/ ಮಾಸಿಕ |
| 7 | 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಕಡಿಮೆ ತೂಕವರಿಲುವ ಶೇಕಡಾವಾರು ಮಕ್ಕಳು | 7 | 2.1 | ಸಮೀಕ್ಷೆ |
| 8 | 5 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಬೆಳವಣಿಗೆ ಕುಂಠಿತಗೊಂಡ ಶೇಕಡಾವಾರುಮಕ್ಕಳ | 8 | 2.4 | ಸಮೀಕ್ಷೆ |
| 9 | ತೀವ್ರವಾದ ಅಪೌಷ್ಟಿಕತೆ | 5 | 1.5 | ಸಮೀಕ್ಷೆ |
| 10 | ಸಾಕಷ್ಟು ಆಹಾರವನ್ನು (ತಾಯಿ ಹಾಲು+ ಪೂರಕ ಆಹಾರ)ಪಡೆಯುತ್ತಿರುವ 6–23 ತಿಂಗಳ ವಯಸ್ಸಿನ ಶಿಶುಗಳ ಶೇಕಡಾವಾರು ಪ್ರಮಾಣ | 5 | 1.5 | ಸಮೀಕ್ಷೆ |
| 11 | ಸಂಪೂರ್ಣವಾಗಿ ಪ್ರತಿರಕ್ಷಿತವಾದ ಮಕ್ಕಳ ಶೇಕಡಾವಾರು ಪ್ರಮಾಣ (9–11 ತಿಂಗಳುಗಳು) (BCG+ DPT3 + OPV3 + Measles1) | 10 | 3.0 | ಎಚ್‌ಎಂಐಎಸ್/ ಮಾಸಿಕ |
| 12 | 100,000 ಜನರಲ್ಲಿ ಕಂಡು ಬಂದ ಕ್ಷಯ (ಟಿಬಿ) ಪ್ರಕರಣಗಳು | 5 | 1.5 | ಡಿಸಿ/ಆರ್‌ಎನ್‌ಟಿಪಿಸಿ ಎಂಐಎಸ್ / ಮಾಸಿಕ |
| 13 | ಆರೋಗ್ಯ ಮೂಲಸೌಕರ್ಯ ಸೂಚ್ಯಂಕಗಳು | 20 | 6.0 | |
| 13ಎ | ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿ ಕೇಂದ್ರಗಳಾಗಿ (ಎಚ್‌ಡಬ್ಲ್ಯೂಸಿ) ಪರಿವರ್ತಿಸಲಾದ ಉಪ ಕೇಂದ್ರಗಳು/ಪಿಎಚ್‌ಸಿಗಳ ಪ್ರಮಾಣ | 6 | 1.8 | ಡಿಸಿ |
| 13ಬಿ | ಭಾರತೀಯ ಆರೋಗ್ಯ ಮಾನದಂಡಗಳಿಗೆ ಅನುಗುಣವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಮಾಣ | 5 | 1.5 | ಎಚ್‌ಎಂಐಎಸ್ / ಮಾಸಿಕ |
| 13ಸಿ | ಪ್ರತಿ 500,000 ಜನಸಂಖ್ಯೆಗೆ 1 ರಂತೆ (ಬೆಟ್ಟಗುಡ್ಡ ಪ್ರದೇಶದಲ್ಲಿ ಪ್ರತಿ 300,00 ಜನಸಂಖ್ಯೆಗೆ 1) ಕಾರ್ಯನಿರ್ವಹಣೆಯಲ್ಲಿರುವ ಫಸ್ಟ್‌ರೆಫರಲ್‌ಯೂನಿಟ್‌ಗಳ (ಎಫ್‌ಆರ್‌ಯು) ಸಂಖ್ಯೆ. | 3 | 0.9 | ಎಚ್‌ಎಂಐಎಸ್/ ಮಾಸಿಕ |
| 13ಡಿ | ಐಪಿಎಚ್‌ಎಸ್‌ನಿಯಮಗಳಿಗೆ ಅನುಗುಣವಾಗಿ ಜಿಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಿರುವ ವಿಶೇಷ ಸೇವೆಗಳ ಪ್ರಮಾಣ | 2 | 0.6 | ಎಚ್‌ಎಂಐಎಸ್/ ಮಾಸಿಕ |
| 13ಇ | ಕಳೆದ ಒಂದು ತಿಂಗಳಲ್ಲಿ, ಕನಿಷ್ಠ ಒಂದು ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಠಿಕಾಂಶ ದಿನ/ ನಗರ ಆರೋಗ್ಯದ ನೈರ್ಮಲ್ಯ ಮತ್ತು ಪೋಷಣೆ ದಿನ / ಹೊರಹೋಗುವಿಕೆ ನಿರ್ವಹಿಸಿದ ಅಂಗನವಾಡಿ ಕೇಂದ್ರಗಳು / ಯುಪಿಎಚ್‌ಸಿಗಳ ಪ್ರಮಾಣ | 2 | 0.6 | ಎಚ್‌ಎಂಐಎಸ್/ ಮಾಸಿಕ |
| 13ಎಫ್ | ಸ್ವಂತ ಕಟ್ಟಡಗಳನ್ನು ಹೊಂದಿರುವ ಅಂಗನವಾಡಿಗಳ ಪ್ರಮಾಣ | 2 | 0.6 | ಸಂಬಂಧಪಟ್ಟ ಅಧಿಕಾರಿ – ಡಿಸಿ / ಮಾಸಿಕ |
| | ಒಟ್ಟು | 100% | 30% | |

* ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015–16

I ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ –2016–17

II ಅತ್ಯುತ್ತಮ ಜಿಲ್ಲೆಯನ್ನು ಸೂಚಿಸಲು ತೆಗೆದುಕೊಂಡ ರಕ್ತಹೀನತೆಗಾಗಿ ಮೌಲ್ಯ (ಹೆಚ್‌ಬಿ < 11 ಜಿ. / ಡಿಎಲ್)

ಆರ್‌ಎನ್‌ಟಿಸಿಪಿ ವಾರ್ಷಿಕ ವರದಿ 2017

| ಶಿಕ್ಷಣ | | | | |
|---|---|---|---|---|
| ಕ್ರಮ ಸಂ. | ಸೂಚಕಗಳು | ಶಿಕ್ಷಣ ಸೂಚ್ಯಂಕದಲ್ಲಿ ಮೌಲ್ಯಾಂಕ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಮೌಲ್ಯಾಂಕ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
| 1. | ಎನ್ಇಆರ್ (ಎ) ಪ್ರಾಥಮಿಕಹಂತ | 14 | 4.2 | ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (ಎಂಎಚ್ಆರ್‌ಡಿ)–ಯುಡಿಐಎಸ್ಇ / ವಾರ್ಷಿಕ |
| | (ಬಿ) ಪ್ರೌಢ ಹಂತ | 6 | 1.8 | ಎಂಎಚ್ಆರ್‌ಡಿಯುಡಿಐಎಸ್ಇ /ವಾರ್ಷಿಕ |
| 2. | ಶೌಚಾಲಯ ಸೌಲಭ್ಯ: ಬಾಲಕಿಯರ ಸಕ್ರಿಯ ಶೌಚಾಲಯಗಳನ್ನು ಹೊಂದಿರುವ ಶಾಲೆಗಳ ಶೇಕಡಾವಾರು ಪ್ರಮಾಣ | 5 | 1.5 | ಸಮೀಕ್ಷೆ / ಮಾಸಿಕ |
| 3. | ಕಲಿಕೆಯಫಲಿತಾಂಶಗಳು (ಎಲ್ಲಾ, ಬಾಲಕರು, ಬಾಲಕಿಯರು, ಪ.ಜಾ, ಪ.ಪಂ, ಅಲ್ಪಸಂಖ್ಯಾತರು) | 50 | 15 | ಮೂರನೇ ವ್ಯಕ್ತಿಗಳು ಶಾಲೆಯಲ್ಲಿ ನಡೆಸಿದ ವರ್ಗೀಕೃತ ಯಾದೃಚ್ಛಿಕ ಮಾದರಿಯ ಮೂಲಕ ಆಯ್ಕೆ ಮಾಡಲಾದ ಮಾಸಿಕ ಪರೀಕ್ಷೆಗಳು |
| | (ಎ) 3ನೇ ತರಗತಿಯಲ್ಲಿ ಗಣಿತ ಕಾರ್ಯಕ್ಷಮತೆ | | | |
| | (ಬಿ) 3ನೇ ತರಗತಿಯಲ್ಲಿ ಭಾಷಾ ಕಾರ್ಯಕ್ಷಮತೆ | | | |
| | (ಸಿ) 5ನೇ ತರಗತಿಯಲ್ಲಿ ಗಣಿತ ಕಾರ್ಯಕ್ಷಮತೆ | | | |
| | (ಡಿ) 5ನೇ ತರಗತಿಯಲ್ಲಿ ಭಾಷಾ ಕಾರ್ಯಕ್ಷಮತೆ | | | |
| | (ಇ) 8ನೇ ತರಗತಿಯಲ್ಲಿ ಗಣಿತ ಸಾಧನೆ | | | |
| 4. | ಮಹಿಳೆಯರ ಸಾಕ್ಷರತೆ ದರ (15+ ವಯೋಮಾನದವರು) | 8 | 2.4 | ಸಮೀಕ್ಷೆ / ತ್ರೈಮಾಸಿಕ |
| 5. | ಕುಡಿಯವ ನೀರಿನ ಸೌಲಭ್ಯ ಹೊಂದಿರುವ ಶಾಲೆಗಳ ಶೇಕಡಾವಾರು ಪ್ರಮಾಣ | 4 | 1.2 | ಸಂಬಂಧಪಟ್ಟ ಅಧಿಕಾರಿ–ಡಿಸಿ/ಮಾಸಿಕ+ಸಮೀಕ್ಷೆ/ ತ್ರೈಮಾಸಿಕ |
| 6. | ಸಕ್ರಿಯ ವಿದ್ಯುತ್‌ಸಂಪರ್ಕ ಹೊಂದಿರುವ ಪ್ರೌಢ ಹಂತದಶಾಲೆಗಳ ಶೇಕಡಾವಾರು ಪ್ರಮಾಣ | 1 | 0.3 | ಸಂಬಂಧಪಟ್ಟ ಅಧಿಕಾರಿ– ಡಿಸಿ/ ಮಾಸಿಕ + ಸರ್ವೆ / ತ್ರೈಮಾಸಿಕ |
| 7. | 'ಆರ್‌ಟಿಇ' ನಿಗದಿ ಪಡಿಸಿದ ಮಟ್ಟದಲ್ಲಿ ಶಿಕ್ಷಕರು–ಮಕ್ಕಳ ಅನುಪಾತ ಹೊಂದಿರುವ ಶೇಕಡಾವಾರು ಪ್ರಾಥಮಿಕ ಶಾಲೆಗಳ ಪ್ರಮಾಣ | 8 | 2.4 | ಸಂಬಂಧಪಟ್ಟ ಅಧಿಕಾರಿ–ಡಿಸಿ/ 'ಎಂಎಚ್ಆರ್‌ಡಿ'ಯಿಂದ ಮಾಸಿಕ/ 'ಯುಡಿಐಎಸ್ಇ'ನಿಂದ ವಾರ್ಷಿಕವಾಗಿ ಮೌಲ್ಯೀಕರಿಸುವುದು |
| 8. | ಶೈಕ್ಷಣಿಕ ವರ್ಷದ ಆರಂಭದ 3 ತಿಂಗಳ ಒಳಗಾಗಿ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ವಿತರಿಸುತ್ತಿರುವ ಶೇಕಡಾವಾರು ಶಾಲೆಗಳು | 4 | 1.2 | ಎಂಎಚ್ಆರ್‌ಡಿ / ವಾರ್ಷಿಕ |
| | ಒಟ್ಟು | 100% | 30% | |

| ಕೃಷಿ ಮತ್ತು ಜಲ ಸಂಪನ್ಮೂಲಗಳು | | | | |
|---|---|---|---|---|
| ಕ್ರಮ. ಸಂ. | ಸೂಚಕಗಳು | ಕೃಷಿ ಸೂಚ್ಯಂಕದಲ್ಲಿ ಮೌಲ್ಯಾಂಕ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಮೌಲ್ಯಾಂಕ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
| 1. | ನೀರಿನ ಧನಾತ್ಮಕ ಹೂಡಿಕೆಗಳು ಮತ್ತು ಉದ್ಯೋಗ | 30 | 6 | |
| | (ಎ) ಸಣ್ಣ ನೀರಾವರಿ ಅಡಿಯಲ್ಲಿ ನಿವ್ವಳ ಬಿತ್ತನೆಯ ಪ್ರದೇಶದ ಶೇಕಡಾವಾರು ಪ್ರಮಾಣ | 17.5 | 3.5 | ಸಂಬಂಧಪಟ್ಟ ಅಧಿಕಾರಿ, ಡಿಸಿ&ಸಮೀಕ್ಷೆ/ ಮಾಸಿಕ |
| | (ಬಿ) 'ಎಂಜಿಎನ್‌ಆರ್‌ಇಜಿಎ' ಅಡಿಯಲ್ಲಿ ಪುನಶ್ಚೇತನ ಮಾಡಲಾದ ಜಲಮೂಲಗಳ ಶೇಕಡಾವಾರು ಹೆಚ್ಚಳ | 12.5 | 2.5 | ಸಂಬಂಧಪಟ್ಟ ಅಧಿಕಾರಿ, ಡಿಸಿ&ಸಮೀಕ್ಷೆ/ ಅರೆ ವಾರ್ಷಿಕ |
| 2. | ಬೆಳೆ ವಿಮೆ– ಪ್ರಧಾನ್ ಮಂತ್ರಿ ಫಸಲ್‌ಬಿಮಾ ಯೋಜನಾ (ಪಿಎಂಎಫ್‌ಬಿವೈ) ಅಡಿಯಲ್ಲಿ ನಿವ್ವಳ ಬಿತ್ತನೆಯ ಶೇಕಡಾವಾರು ಪ್ರದೇಶದ | 15 | 3 | ಸಂಬಂಧಪಟ್ಟ ಅಧಿಕಾರಿ, ಡಿಸಿ/ಅರೆ ವಾರ್ಷಿಕ |
| 3. | ಪ್ರಮುಖ ಪದಾರ್ಥಗಳ ಬಳಕೆ ಮತ್ತು ಪೂರೈಕೆಯಲ್ಲಿ ಹೆಚ್ಚಳ | 17.5 | 3.5 | |
| | (ಎ) ಕೃಷಿ ಸಾಲದಲ್ಲಿ ಶೇಕಡಾವಾರು ಹೆಚ್ಚಳ | 7.5 | 1.5 | ಸಂಬಂಧಪಟ್ಟ ಅಧಿಕಾರಿ, ಡಿಸಿ&ಸಮೀಕ್ಷೆ/ ಮಾಸಿಕ |
| | (ಬಿ) ಪ್ರಮಾಣೀಕೃತ ಗುಣಮಟ್ಟ ಬೀಜ ವಿತರಣೆ | 7.5 | 1.5 | ಸಂಬಂಧಪಟ್ಟ ಅಧಿಕಾರಿ, ಡಿಸಿ&ಸಮೀಕ್ಷೆ/ಅರೆ ವಾರ್ಷಿಕ |
| | (ಸಿ) ರಸಗೊಬ್ಬರ ಬಳಕೆಯಲ್ಲಿ ಹೆಚ್ಚಳ | 2.5 | 0.5 | ಸಂಬಂಧಪಟ್ಟ ಅಧಿಕಾರಿ, ಡಿಸಿ/ ತ್ರೈಮಾಸಿಕ |
| 4. | 'ಇ–ಎನ್‌ಎಎಂ' ಸಂಪರ್ಕ ಹೊಂದಿರುವ ಜಿಲ್ಲಾ ಮಂಡಿಯಲ್ಲಿ ವಹಿವಾಟುಗಳ ಸಂಖ್ಯೆ | 10 | 2 | ಸಂಬಂಧಪಟ್ಟ ಅಧಿಕಾರಿ, ಡಿಸಿ, ಸಮೀಕ್ಷೆ/ ಮಾಸಿಕ |
| 5. | ಬೆಲೆ ಪಡೆಯುವಲ್ಲಿ ಶೇಕಡಾವಾರು ಬದಲಾವಣೆ (ಕೃಷಿ ಬಿತ್ತನೆ ಬೆಲೆ (ಎಫ್‌ಎಚ್‌ಪಿ) ಮತ್ತು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಡುವಿನ ವ್ಯತ್ಯಾಸ) | 5 | 1 | ಸಂಬಂಧಪಟ್ಟ ಅಧಿಕಾರಿ, ಡಿಸಿ, ಸಮೀಕ್ಷೆ/ ಮಾಸಿಕ |
| 6. | ಜಿಲ್ಲೆಯ ಒಟ್ಟು ಬಿತ್ತನೆಯ ಪ್ರದೇಶದಲ್ಲಿ ಅಧಿಕ ಮೌಲ್ಯದ ಬೆಳೆಗಳ ಶೇಕಡಾವಾರು ಪಾಲು | 2.5 | 0.5 | ಸಂಬಂಧಪಟ್ಟ ಅಧಿಕಾರಿ, ಡಿಸಿ/ಅರೆ ವಾರ್ಷಿಕ |
| 7. | ಅಕ್ಕಿ ಮತ್ತು ಗೋಧಿಯ ಕೃಷಿ ಉತ್ಪಾದಕತೆ | 5 | 1 | ಸಂಬಂಧಪಟ್ಟ ಅಧಿಕಾರಿ, ಡಿಸಿ&ಸಮೀಕ್ಷೆ /ಅರೆ ವಾರ್ಷಿಕ |
| 8. | ಪ್ರಾಣಿಗಳ ಶೇಕಡಾವಾರು ಲಸಿಕೆ | 7.5 | 1.5 | ಸಂಬಂಧಪಟ್ಟ ಅಧಿಕಾರಿ–ಡಿಸಿ / ಮಾಸಿಕ |
| 9. | ಕೃತಕ ಗರ್ಭಧಾರಣೆಯ ಪ್ರಮಾಣ | 5 | 1 | ಸಂಬಂಧಪಟ್ಟ ಅಧಿಕಾರಿ, ಡಿಸಿ &ಸಮೀಕ್ಷೆ / ಮಾಸಿಕ |
| 10. | ಒಂದನೇ ಬೆಳೆ ಅವಧಿಗೆ ಹೋಲಿಸಿದರೆ, 2ನೇ ಬೆಳೆ ಅವಧಿಯಲ್ಲಿ ವಿತರಿಸಲಾದ ಮಣ್ಣಿನ ಆರೋಗ್ಯ ಕಾರ್ಡುಗಳ ಸಂಖ್ಯೆ | 2.5 | 0.5 | ಸಂಬಂಧಪಟ್ಟ ಅಧಿಕಾರಿ, ಡಿಸಿ/ಮಾಸಿಕ |
| | ಒಟ್ಟು | 100% | 20% | |

## ಆರ್ಥಿಕ ಒಳಗೊಳ್ಳುವಿಕೆ ಮತ್ತು ಕೌಶಲ್ಯ ವೃದ್ಧಿ

| ಕ್ರ. ಸಂ. | ಸೂಚಕಗಳು | ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಮೌಲ್ಯಾಂಕ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಮೌಲ್ಯಾಂಕ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
|---|---|---|---|---|
| | ಆರ್ಥಿಕ ಒಳಗೊಳ್ಳುವಿಕೆ | | | |
| 1 | 1 ಲಕ್ಷ ಜನಸಂಖ್ಯೆಗೆ ಒಟ್ಟು 'ಮುದ್ರಾ'ಸಾಲ ವಿತರಣೆ (ರೂಪಾಯಿಗಳಲ್ಲಿ) | 20 | 1 | ಹಣಕಾಸು ಸೇವೆ ಇಲಾಖೆ (ಡಿಎಫ್ಎಸ್)/ಮಾಸಿಕ |
| 2 | ಪ್ರಧಾನ್ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಪಿಎಂಜೆಜೆಬಿವೈ): 1 ಲಕ್ಷ ಜನಸಂಖ್ಯೆಗೆ ದಾಖಲಾತಿಗಳ ಸಂಖ್ಯೆ | 20 | 1 | ಡಿಎಫ್ಎಸ್/ಮಾಸಿಕ |
| 3 | ಪ್ರಧಾನ್ ಮಂತ್ರಿ ಸುರಕ್ಷಾ ಬಿಮಾ ಯೋಜನೆ (ಪಿಎಂಎಸ್‌ಬಿವೈ): 1 ಲಕ್ಷ ಜನಸಂಖ್ಯೆಗೆ ದಾಖಲಾತಿಗಳ ಸಂಖ್ಯೆ | 20 | 1 | ಡಿಎಫ್ಎಸ್/ಮಾಸಿಕ |
| 4 | ಅಟಲ್ ಪಿಂಚಣಿ ಯೋಜನೆ (ಎಪಿವೈ): 1 ಲಕ್ಷ ಜನರಿಗೆ ಫಲಾನುಭವಿಗಳ ಸಂಖ್ಯೆ | 20 | 1 | ಡಿಎಫ್ಎಸ್/ಮಾಸಿಕ |
| 5 | ಒಟ್ಟು ಬ್ಯಾಂಕ್‌ಖಾತೆಗಳ ಪೈಕಿ ಆಧಾರ್ ಜೊತೆ ಜೋಡಿಸಲಾದ ಖಾತೆಗಳ ಶೇಕಡಾವಾರು ಪ್ರಮಾಣ | 20 | 1 | ಡಿಎಫ್ಎಸ್/ಮಾಸಿಕ |
| | ಒಟ್ಟು | 100% | 5% | |

## ಕೌಶಲ್ಯ ವೃದ್ಧಿ

| ಕ್ರಮ ಸಂಖ್ಯೆ | ಸೂಚಕಗಳು | ಆರೋಗ್ಯ ಮತ್ತು ಪೌಷ್ಟಿಕಾಂಶದಲ್ಲಿ ಪ್ರಾಧಾನ್ಯ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಪ್ರಾಧಾನ್ಯತೆ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
|---|---|---|---|---|
| 1 | ಅಲ್ಪಾವಧಿಯ ಮತ್ತು ದೀರ್ಘಾವಧಿಯ ತರಬೇತಿ# ಯೋಜನೆಗಳಲ್ಲಿ ಪ್ರಮಾಣ ಪತ್ರ ಪಡೆದ ಯುವಕರ ಸಂಖ್ಯೆ /ಜಿಲ್ಲೆಯಲ್ಲಿರುವ 15–29 ವಯೋಮಾನದ ಯುವಕರ ಸಂಖ್ಯೆ* | 25 | 1.25 | ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (ಎಂಎಸ್‌ಡಿಇ) &ಲೈನ್ ಸಚಿವಾಲಯ / ಮಾಸಿಕ |
| 2 | ಉದ್ಯೋಗ ಪಡೆದ ಪ್ರಮಾಣೀಕೃತ ಯುವಕರು/ ಅಲ್ಪಾವಧಿಯ ಮತ್ತು ದೀರ್ಘಕಾಲೀನ ತರಬೇತಿಯ ಅಡಿಯಲ್ಲಿ ತರಬೇತಿ ಪಡೆದ ಯುವಕರ ಸಂಖ್ಯೆ | 15 | 0.75 | ಎಂಎಸ್‌ಡಿಇ& ಲೈನ್ ಸಚಿವಾಲಯ / ಮಾಸಿಕ |
| 3 | ಅಪ್ರೆಂಟೈಸಿಸ್‌ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ / ಪೋರ್ಟ್‌ನಲ್ಲಿ ನೋಂದಾಯಿಸಿಕೊಂಡ ಒಟ್ಟು ಶಿಕ್ಷಾರ್ಥಿಗಳ ಸಂಖ್ಯೆ | 25 | 1.25 | ತರಬೇತಿ ನಿರ್ದೇಶನಾಲಯ (ಡಿಜಿಟಿ) / ಮಾಸಿಕ |
| 4 | ಪೂರ್ವ ಕಲಿಕೆ#/ ಅನೌಪಚಾರಿಕ ಕುಶಲ ಕಾರ್ಮಿಕರ ಅಡಿಯಲ್ಲಿ ಅಡಿಯಲ್ಲಿ ಪ್ರಮಾಣೀಕರಣ ಪಡೆದವರಸಂಖ್ಯೆ ** | 25 | 1.25 | ಎಂಎಸ್‌ಡಿಇ & ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ (ಎನ್‌ಎಸ್‌ಡಿಸಿ) / ಮಾಸಿಕ |
| 5 | ಅಲ್ಪಾವಧಿಯ ಮತ್ತು ದೀರ್ಘಾವಧಿಯ ತರಬೇತಿಯ ಅಡಿಯಲ್ಲಿ ತರಬೇತಿ ಪಡೆದ ದುರ್ಬಲ / ಮುಖ್ಯವಾಹಿನಿಯಿಂದ ಹೊರಗುಳಿದ ಯುವಕರ ಸಂಖ್ಯೆ#( | | | |
| | ಎ) ಮಹಿಳಾ ಪ್ರಮಾಣೀಕೃತ ತರಬೇತಿ ಪಡೆದ,<br>ಬಿ) ಪ.ಜಾ. – ಪ್ರಮಾಣೀಕೃತ ತರಬೇತಿ ಪಡೆದ<br>ಸಿ) ಪ.ಪಂ – ಪ್ರಮಾಣೀಕೃತ ತರಬೇತಿ ಪಡೆದ<br>ಡಿ) ಒಬಿಸಿ – ಪ್ರಮಾಣೀಕೃತ ತರಬೇತಿ ಪಡೆದ<br>ಇ) ಅಲ್ಪಸಂಖ್ಯಾತರು – ಪ್ರಮಾಣೀಕೃತ ತರಬೇತಿ ಪಡೆದವರು<br>ಎಫ್) ವಿಕಲಚೇತನರು – ಪ್ರಮಾಣೀಕೃತ ತರಬೇತಿ ಪಡೆದವರು) / ಪ್ರಮಾಣೀಕೃತ ತರಬೇತಿ ಪಡೆದ ಯುವಕರ ಒಟ್ಟು ಸಂಖ್ಯೆ | 10 | 0.5 | ಎಂಎಸ್‌ಡಿಇ &ಎನ್‌ಎಸ್‌ಡಿಸಿಮಾಸಿಕ |
| | ಒಟ್ಟು | 100% | 5% | |

[1]ಕೇವಲ ಪಿಎಂಕೆವಿವೈ(2016–20) ನಿಂದ ಪಡೆದ ದತ್ತಾಂಶವನ್ನು ಇಲ್ಲಿ ಉಲ್ಲೇಖಿಸಲಾಗಿದೆ

* ಇತರ ಮಾನದಂಡಗಳನ್ನು ಲೆಕ್ಕಹಾಕಲು ನೀತಿ ಆಯೋಗ ಬಳಸಿದ ಮೂಲದಿಂದಲೇ '15–29 ವಯೋಮಾನದ ಯುವಕರ ಸಂಖ್ಯೆ'ಯ ದತ್ತಾಂಶವನ್ನು ಬಳಸಲಾಗಿದೆ.

** ಔಪಚಾರಿಕವಾಗಿ ನುರಿತ ನೌಕರರ ಮಾಹಿತಿಗಾಗಿ 2011–12ರ ಎನ್‌ಎಸ್‌ಎಸ್‌ಒ ಇಯುಎಸ್‌ಸಮೀಕ್ಷೆ ಮತ್ತು 2011ರಜನಗಣತಿ ಆಧಾರದ ಮೇಲೆ ಅಂದಾಜಿಸಲಾಗಿದೆ.

| ಅಗತ್ಯ ಮೂಲಸೌಕರ್ಯ | | | | |
|---|---|---|---|---|
| ಕ್ರಮ ಸಂಖ್ಯೆ | ಸೂಚಕಗಳು | ಅಗತ್ಯ ಮೂಲಸೌಕರ್ಯದಲ್ಲಿ ಮೌಲ್ಯಾಂಕ | ಒಟ್ಟಾರೆ ಸಂಯೋಜಿತ ಸೂಚ್ಯಂಕದಲ್ಲಿ ಪ್ರಾಧಾನ್ಯತೆ | ಮೂಲ/ಅವಧಿ (ಎಲ್ಲಾ ಸೂಚ್ಯಂಕಗಳನ್ನೂ ಸಮೀಕ್ಷೆಗಳ ಮೂಲಕ ದೃಢೀಕರಿಸಬೇಕು) |
| 1 | ವಿದ್ಯುತ್ ಸಂಪರ್ಕ ಹೊಂದಿರುವ ಶೇಕಡಾವಾರು ಕುಟುಂಬಗಳು | 20 | 2 | ಸಂಬಂಧಪಟ್ಟ ಅಧಿಕಾರಿ–ಡಿಸಿ & ಸಮೀಕ್ಷೆ/ಮಾಸಿಕ |
| 2 | ಅಂತರ್ಜಾಲ ಸಂಪರ್ಕ ಹೊಂದಿರುವ ಶೇಕಡಾವಾರು ಮನೆಗಳು | 5 | 0.5 | ಸಂಬಂಧಪಟ್ಟ ಅಧಿಕಾರಿ–ಡಿಸಿ & ಸಮೀಕ್ಷೆ/ಮಾಸಿಕ |
| 3 | 3 ಕಿ.ಮೀ. ವ್ಯಾಪ್ತಿಯಲ್ಲಿ,ಎಲ್ಲಾ ಋತುಮಾನಗಳಲ್ಲೂ ಬಳಸಬಹುದಾದ ರಸ್ತೆಗಳೊಂದಿಗೆ ಸಂಪರ್ಕ ಹೊಂದಿರುವ ಶೇಕಡಾವಾರು ವಾಸಸ್ಥಾನಗಳು | 15 | 1.5 | ಸಂಬಂಧಪಟ್ಟ ಅಧಿಕಾರಿ –ಡಿಸಿ &ಸಮೀಕ್ಷೆ/ ಮಾಸಿಕ |
| 4 | ಪ್ರತ್ಯೇಕ ಶೌಚಾಲಯವನ್ನು ಹೊಂದಿರುವ ಕುಟುಂಬಗಳ ಶೇಕಡಾವಾರು ಪ್ರಮಾಣ | 15 | 1.5 | ಸಂಬಂಧಪಟ್ಟ ಅಧಿಕಾರಿ –ಡಿಸಿ &ಸಮೀಕ್ಷೆ/ ಮಾಸಿಕ |
| 5 | ಸಾಕಷ್ಟು ಪ್ರಮಾಣದ ಕುಡಿಯುವ ನೀರಿನ ಪ್ರಮಾಣವನ್ನು– – ಗ್ರಾಮೀಣ ಪ್ರದೇಶಗಳಲ್ಲಿ 40 ಎಲ್‌ಪಿಸಿಡಿ ಮತ್ತು ನಗರ ಪ್ರದೇಶಗಳಲ್ಲಿ135 ಎಲ್‌ಪಿಸಿಡಿ (ಮನೆಯಿಂದ 100 ಮೀಟರ್ ದೂರದಲ್ಲಿ ಅಥವಾ 10 ಮೀಟರ್ ಎತ್ತರದೊಳಗೆ) ಹೊಂದಿರುವ ಶೇಕಡಾವಾರು ಕುಟುಂಬಗಳು | 20 | 2 | ಸಂಬಂಧಪಟ್ಟ ಅಧಿಕಾರಿ –ಡಿಸಿ &ಸಮೀಕ್ಷೆ/ ಮಾಸಿಕ |
| 6 | ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಾಮಾನ್ಯ ಸೇವಾ ಕೇಂದ್ರಗಳ ಸ್ಥಾಪನೆ | 5 | 0.5 | ಸಂಬಂಧಪಟ್ಟ ಅಧಿಕಾರಿ –ಡಿಸಿ &ಸಮೀಕ್ಷೆ/ ಮಾಸಿಕ |
| 7 | ಅಸ್ಥಿರ ಗೋಡೆ ಮತ್ತು ಮೇಲ್ಛಾವಣಿಯೊಂದಿಗೆ ಒಂದು ಕೋಣೆ ಹೊಂದಿರುವ ಅಥವಾ ಅಸ್ಥಿರ ಗೋಡೆ ಮತ್ತು ಮೇಲ್ಛಾವಣಿಯೊಂದಿಗೆ 2 ಕೋಣೆಗಳನ್ನು ಹೊಂದಿರುವ ವಸತಿರಹಿತರರಿಗಾಗಿ ನಿರ್ಮಿಸಲಾದಸುಸ್ಥಿರ ಮನೆಗಳ ಸಂಖ್ಯೆ | 20 | 2 | ಸಂಬಂಧಪಟ್ಟ ಅಧಿಕಾರಿ –ಡಿಸಿ &ಸಮೀಕ್ಷೆ/ ಮಾಸಿಕ |
| | ಒಟ್ಟು | 100% | 10% | |

ಅವಕಾಶಗಳ ಲಭ್ಯತೆಯಲ್ಲಿನ ಅಗಾಧ ವ್ಯತ್ಯಾಸ ಮತ್ತು ಜಿಲ್ಲೆಯೊಂದು ಎದುರಿಸುತ್ತಿರುವ ಸವಾಲುಗಳ ಹಿನ್ನೆಲೆಯಲ್ಲಿ, ಕೆಲವೊಂದು ಜಿಲ್ಲಾ–ನಿರ್ದಿಷ್ಟ 'ಕೆಪಿಐ'ಗಳನ್ನು ಆಯ್ಕೆ ಮಾಡಲಾಗಿದೆ. ಇವುಗಳ ಮೂಲಕ ಜಿಲ್ಲೆಯ ಪರಿವರ್ತನೆಗಾಗಿ ಸಂಬಂಧಪಟ್ಟವರು ಮಾಡಿದ ಪ್ರಯತ್ನಗಳು, ಅವರು ತೋರಿದ ಬದ್ಧತೆ ಮತ್ತು ಸಾಧಿಸಲಾದ ಪ್ರಗತಿಯನ್ನು ತಿಳಿಯಲಾಗುತ್ತದೆ.

| ಆಶೋತ್ತರ ಜಿಲ್ಲೆಗಳಲ್ಲಿ ಪ್ರಗತಿಯನ್ನು ಸೆರೆಹಿಡಿಯಲು ಸೂಚಕಗಳು | |
|---|---|
| ಸಂಯೋಜಿತ ಸೂಚ್ಯಂಕಗಳ ಮೌಲ್ಯಾಂಕ | |
| ವಿಷಯಾಧಾರಿತ ಕ್ಷೇತ್ರ | ಮೌಲ್ಯಾಂಕ |
| ಆರೋಗ್ಯ ಮತ್ತು ಪೋಷಣೆ | 30% |
| ಶಿಕ್ಷಣ | 30% |
| ಕೃಷಿ ಮತ್ತು ಜಲ ಸಂಪನ್ಮೂಲಗಳು | 20% |
| ಹಣಕಾಸು ಸೇರ್ಪಡೆ ಮತ್ತು ಕೌಶಲ್ಯ ರಚನೆ | 10% |
| ಮೂಲಭೂತ ಸೌಕರ್ಯ | 10% |
| ಸಂಯೋಜಿತ ಸೂಚ್ಯಂಕ | 100% |

'ಕೆಪಿಐ'ಗಳು– ಈ ಐದು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ದತ್ತಾಂಶ ಒದಗಣೆ ಮತ್ತು ಅದರಿಂದ ಹೊರಬರುವ ಫಲಿತಾಂಶ ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಗ್ರಹಿಸಲಾದ ನಿಜಕಾಲ ದತ್ತಾಂಶ ಮಾಹಿತಿಯ ಸಂಯೋಜನೆಯಾಗಿವೆ. ಆರೋಗ್ಯ ಮತ್ತು ಪೌಷ್ಟಿಕಾಂಶದ ವಿಚಾರದಲ್ಲಿ 'ಕೆಪಿಐ'ಗಳು– ತಾಯಿ ಮತ್ತು ಮಗುವಿನ ಆರೋಗ್ಯ; ಮಕ್ಕಳ ಪೌಷ್ಟಿಕತೆ; ಜನನಪೂರ್ವ ಆರೈಕೆ ಮತ್ತು ಪೌಷ್ಟಿಕತೆ; ಸೋಂಕಿನಿಂದ ರಕ್ಷಣೆ; ಭೌತಿಕ ಮೂಲಸೌಕರ್ಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾನವ ಸಂಪನ್ಮೂಲವನ್ನು ಒಳಗೊಂಡಿರುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ 'ಕೆಪಿಐ'ಗಳಲ್ಲಿ – ನಿವ್ವಳ ಶಾಲಾ ದಾಖಲು ಅನುಪಾತ; ಭೌತಿಕ ಮೂಲಸೌಕರ್ಯ; ಕಲಿಕೆಯ ಫಲಿತಾಂಶಗಳು; ಸಾಕ್ಷರತೆ ಪ್ರಮಾಣ ಮತ್ತು ಶಿಕ್ಷಣ ಹಕ್ಕು (ಆರ್‌ಟಿಇ) ಅನುಸರಣೆಗಳು ಸೇರಿವೆ. ಕೃಷಿಗೆ ಸಂಬಂಧಿಸಿದ 'ಕೆಪಿಐ'ಗಳು – ನೀರಿಗಾಗಿ ಮಾಡಿದ ಹೂಡಿಕೆ ಮತ್ತು ಉದ್ಯೋಗ; 'ಪಿಎಂಎಫ್‌ಬಿಐ' ಅಡಿಯಲ್ಲಿ ಬೆಳೆ ವಿಮೆ; ಪ್ರಮುಖ ಸಾಮಗ್ರಿಗಳ ಬಳಕೆ ಮತ್ತು ಪೂರೈಕೆ. ಅಗತ್ಯ ಮೂಲಸೌಕರ್ಯದ ಅಡಿಯಲ್ಲಿ ರಸ್ತೆ, ನೀರು, ಶೌಚಾಲಯಗಳು, ವಸತಿ, ವಿದ್ಯುತ್ ಮತ್ತು ಅಂತರ್ಜಾಲ ಸಂಪರ್ಕಗಳು ಸೇರುತ್ತವೆ. ಇದರೆ ಜೊತೆಗೆ, ಇತರ ಎರಡು ಏಜೆನ್ಸಿಗಳಾದ 'ಟಾಟಾ ಟ್ರಸ್ಟ್ ಮತ್ತು 'ಬಿಲ್ ಆ್ಯಂಡ್ ಮಿಲಿಂದಾ ಗೇಟ್ಸ್ ಪ್ರತಿಷ್ಠಾನ'ಗಳು ಶ್ರೇಣೀಕೃತ ಯಾದೃಚ್ಛಿಕ ಮಾದರಿ ತಂತ್ರದ ಮೂಲಕ ತ್ರೈಮಾಸಿಕವಾಗಿ ಮನೆ–ಮನೆ ಸಮೀಕ್ಷೆಗಳನ್ನು ನಡೆಸುತ್ತಿವೆ.



ಈ ಕಾರ್ಯಕ್ರಮದ ಗಮನಾರ್ಹ ಅಂಶಗಳಲ್ಲಿ ಒಂದೆಂದರೆ, ಇದರ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಹೆಚ್ಚುವರಿ/ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು 'ಪ್ರಭಾರಿ' ಮತ್ತು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗುತ್ತದೆ. ಈ ಅಧಿಕಾರಿಗಳು ತಮ್ಮ ಅಘಾದ ಅನುಭವದ ಮೂಲಕ ಕೇವಲ ಜಿಲ್ಲಾಡಳಿತಕ್ಕೆ ಮಾರ್ಗದರ್ಶನ ನೀಡಲು ಮಾತ್ರವಲ್ಲದೆ,

**(29ನೇ ಪುಟಕ್ಕೆ)**

# ಆರ್ಥಿಕ ಸಮೀಕ್ಷೆ – ಕ್ಷೇತ್ರವಾರು ಸಾಧನೆ

ಭಾರತದ ಒಟ್ಟು ಮೌಲ್ಯ ವರ್ಧನೆಯಲ್ಲಿ ಶೇ. 55.2 ರ ಪಾಲು ಹೊಂದಿರುವ ಸೇವಾ ರಂಗ 2017–18ರಲ್ಲಿ ಒಟ್ಟು ಮೌಲ್ಯ ವರ್ಧನೆಗೆ ಶೇ. 72.5 ರ ಬೆಳವಣಿಗೆ ಕೊಡುಗೆ ನೀಡುವ ಮೂಲಕ ಆರ್ಥಿಕ ಬೆಳವಣಿಗೆಯ ಚಾಲಕ ಶಕ್ತಿ ಎನಿಸಿದೆ.



2017–18ರ ಆರ್ಥಿಕ ಸಮೀಕ್ಷೆ ಪ್ರಕಾರ ಸೇವಾ ರಂಗದ ಬೆಳವಣಿಗೆ ಒಂದು ಪೂರ್ತಿ ಕ್ಷೇತ್ರವಾಗಿ ಶೇ. 8.3 ರಷ್ಟಿರುವ ನಿರೀಕ್ಷೆ ಇದೆ. ಕಳೆದ ವರ್ಷದ ಮೊದಲಾರ್ಧದಲ್ಲಿ ಸೇವಾ ರಫ್ತಿನ ಬೆಳವಣಿಗೆ ಶೇ. 16.2 ರಷ್ಟಿದೆ. ಪ್ರಮುಖ ಸೇವಾ ರಂಗಗಳ ಸಾಧನೆ ಮುಂದಿನಂತಿದೆ.

**ಪ್ರವಾಸೋದ್ದಿಮೆ** : ವಿದೇಶಿ ಪ್ರವಾಸಿಗರ ಆಗಮನ ಶೇ. 9.7 ರಷ್ಟು ಹೆಚ್ಚಳವಾಗಿ 8.8. ದಶಲಕ್ಷಕ್ಕೇರಿದೆ. ವಿದೇಶಿ ವಿನಿಮಯ ಗಳಿಕೆ ಶೇ. 8.8. ರಷ್ಟು ಏರಿ 22.9 ಶತಕೋಟಿ (ಅ) ಡಾಲರ್ ತಲುಪಿದೆ. ದೇಶೀ ಪ್ರವಾಸಿಗರ ಸಂಖ್ಯೆ 2015ರ 1432 ದಶಲಕ್ಷದಿಂದ 2016ರಲ್ಲಿ ಶೇ. 12.7 ರಷ್ಟು ಬೆಳವಣಿಗೆಯಾಗಿ 1614 ದಶಲಕ್ಷಕ್ಕೇರಿತು. 2016ರಲ್ಲಿ ತಮಿಳುನಾಡು, ಉತ್ತರ ಪ್ರದೇಶ, ಆಂಧ್ರ ಪ್ರದೇಶ, ಮಧ್ಯ ಪ್ರದೇಶ, ಕರ್ನಾಟಕ ಪ್ರವಾಸಿಗರ ಮೊದಲ ಐದು ಆಯ್ಕೆ ತಾಣಗಳಾಗಿದ್ದವು.

**ಮಾಹಿತಿ ತಂತ್ರಜ್ಞಾನ** : ಮಾಹಿತಿ ತಂತ್ರಜ್ಞಾನ – ವ್ಯಾಪಾರ ಪ್ರಕ್ರಿಯೆ ನಿರ್ವಹಣೆ ಉದ್ದಿಮೆ 2016–17 ರಲ್ಲಿ ಶೇ. 8.1 ರಷ್ಟು ಪ್ರಗತಿ ಹೊಂದಿ 139.9 ಶತಕೋಟಿ (ಅ) ಡಾಲರ್ (ಇ–ಕಾಮರ್ಸ್ ಮತ್ತು ಹಾರ್ಡ್‌ವೇರ್ ಹೊರತು ಪಡಿಸಿ) ಗಳಿಗೇರಿದೆ. ಐಟಿ–ಬಿಪಿಎಂ ರಫ್ತು ಪ್ರಮಾಣ ಇದೇ ವೇಳೆಯಲ್ಲಿ ಶೇ. 7.6 ರಷ್ಟು ವೃದ್ಧಿಯಾಗಿ 116.1 ಶತಕೋಟಿ ತಲುಪಿತು.

ರಿಯಲ್ ಎಸ್ಟೇಟ್ – ಭಾರತೀಯ ರಿಯಲ್ ಎಸ್ಟೇಟ್ ಕ್ಷೇತ್ರ 2017ರ ಮೊದಲಾರ್ಧದಲ್ಲಿ 257 ಮಿಲಿಯನ್ ವಿದೇಶಿ ನೇರ ಬಂಡವಾಳ ಹೂಡಿಕೆಯೊಂದಿಗೆ ವೃದ್ಧಿಸಿದ್ದು, ಇದು 2016ರ ಪೂರ್ಣಾವಧಿ ಸಾಲಿಗಿಂತ ದುಪ್ಪಟ್ಟಾಗಿದೆ.

**ಸಂಶೋಧನೆ ಮತ್ತು ಅಭಿವೃದ್ಧಿ** : ಸಂಶೋಧನೆ ಮತ್ತು ಅಭಿವೃದ್ಧಿ ಸೇವೆ ಒಳಗೊಂಡ ವೃತ್ತಿಪರ ವೈಜ್ಞಾನಿಕ ಮತ್ತು ತಾಂತ್ರಿಕ ಚಟುವಟಿಕೆಗಳು 2014–15 ಮತ್ತು 2015–16ರಲ್ಲಿ ಅನುಕ್ರಮವಾಗಿ ಶೇ. 17.5 ಮತ್ತು ಶೇ. 41.1ರ ಬೆಳವಣಿಗೆ ದಾಖಲಿಸಿದ್ದವು. ಜಾಗತಿಕ ಮಾರುಕಟ್ಟೆಯ ಶೇ. 22 ರಷ್ಟಿರುವ, ಭಾರತದಲ್ಲಿರುವ ಸಂಶೋಧನಾ ಕಂಪನಿಗಳು ಶೇ. 12.7ರ ಬೆಳವಣಿಗೆ ಸಾಧಿಸಿವೆ. ಆದರೆ ಈ ಕ್ಷೇತ್ರಕ್ಕೆ ಭಾರತದ ಹೂಡಿಕೆ ಒಟ್ಟಾರೆ ವೆಚ್ಚ ಒಟ್ಟು ದೇಶೀಯ ಉತ್ಪನ್ನದ ಶೇ. ಒಂದರಷ್ಟಿದೆ. ಜಾಗತಿಕ ಆವಿಷ್ಕಾರ ಸೂಚ್ಯಂಕದ 127 ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ 2016 ರ 66 ರಿಂದ 2017ರಲ್ಲಿ 60ನೇ ಸ್ಥಾನಕ್ಕೆ ಉತ್ತಮಗೊಂಡಿದೆ.

**ಬಾಹ್ಯಾಕಾಶ ಸಾಧನೆ** : 2017 ಮಾರ್ಚ್‌ವರೆಗೆ ಭಾರತ 254 ಉಪಗ್ರಹಗಳನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ. ಉಪಗ್ರಹ ಉಡಾವಣಾ ಸೇವೆ ರಫ್ತಿನಿಂದ ಬಂದ ವಿದೇಶಿ ವಿನಿಮಯ ಗಳಿಕೆ (2014–15 ರಲ್ಲಿ 149 ಕೋಟಿ ರೂ. 2015–16 ರಲ್ಲಿ 275 ಕೋಟಿ ರೂ.) 2016–17ರಲ್ಲಿ ಗಮನಾರ್ಹವಾಗಿ ರೂ. 394 ಕೋಟಿ ರೂ. ಗಳಿಗೇರಿದೆ. ಜಾಗತಿಕ ಉಪಗ್ರಹ ಉಡಾವಣಾ ಸೇವೆಯ ಆದಾಯ 2014–15ರ ಶೇ. 0.3 ರಿಂದ 2015–16 ರಲ್ಲಿ ಶೇ. 1.1 ಕ್ಕೇರಿದೆ. ಭಾರತದ ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿ ಮತ್ತು ಜಿಎಸ್‌ಎಲ್‌ವಿ ಎಂಕೆ – III ಉಡಾವಣಾ ಸೇವೆಗಳನ್ನು ಅಂತಾರಾಷ್ಟ್ರೀಯ ಸಮುದಾಯಗಳು ತಮ್ಮ ತಳ ಭೂ ಕಕ್ಷೆಯ ಉಪಗ್ರಹ ಹಾರಿಬಿಡಲು ಬಳಸಿಕೊಳ್ಳುವ ಸಾಧ್ಯತೆಗಳಿವೆ.




**ಹೆಣ್ಣು ಮಗುವಿಗಾಗಿ ಯೋಜನೆ** : ಸೂಕ್ತ ದಿಸೆಯಲ್ಲಿ, ಹಣಕಾಸು ಸಚಿವರು ಜನವರಿ 29 ರಂದು ಮಂಡಿಸಿದ 'ಗುಲಾಬಿ ಬಣ್ಣ' ಸಮೀಕ್ಷೆ – ಇತರ ಆರ್ಥಿಕತೆಗಳೊಂದಿಗೆ ವಿವಿಧ ಕೋನಗಳಲ್ಲಿ ತುಲನೆ ಮಾಡಿಕೊಂಡು ಭಾರತ ನೀಡಿದ ಆದ್ಯತೆಯ ಪರಿಣಾಮ ವಿವರಿಸಿದೆ.

ಲಿಂಗ ಸಮಾನತೆಗೆ ಬಹುಮುಖ ಆಯಾಮವಿದೆ. ಈ ಹಿನ್ನೆಲೆಯಲ್ಲಿ ಮೂರು ನಿರ್ದಿಷ್ಟ ಅಂಶಗಳನ್ನು ಸಮೀಕ್ಷೆ ಪರಿಗಣಿಸಿದೆ. ಏಜೆನ್ಸಿ (ಪ್ರಜನನ ವಿಷಯ ನಿರ್ಧಾರ ಕೈಗೊಳ್ಳುವ ಮಹಿಳಾ ಸಾಮರ್ಥ್ಯ, ಕುಟುಂಬಕ್ಕೆ ಮತ್ತು ತಮ್ಮ ಆರೋಗ್ಯಕ್ಕಾಗಿ ಮಾಡುವ ವೆಚ್ಚ) ಭಾವನೆ (ಮಹಿಳೆ/ ಪತ್ನಿಯರ ವಿರುದ್ಧದ ದೌರ್ಜನ್ಯಕ್ಕೆ ಸಂಬಂಧಿಸಿದ ಭಾವನೆ, ಗಂಡು ಮಗುವಿಗೆ ಹೋಲಿಸಿದಲ್ಲಿ ಹೆಣ್ಣು ಮಗು ಹೊಂದಲು ತಾಳುವ ಭಾವನೆ) ಫಲಿತಾಂಶ (ಮಗನಿಗೆ ಆದ್ಯತೆ – ಕೊನೆ ಮಗುವಿನ ಲಿಂಗ ಅನುಪಾತ, ಮಹಿಳಾ ಉದ್ಯೋಗಿಗೆ ಗರ್ಭನಿರೋಧಕ ಬಳಕೆ ಆಯ್ಕೆ, ಶಿಕ್ಷಣ ಮಟ್ಟ, ಮದುವೆಯ ವಯಸ್ಸು, ಯಾವ ವಯಸ್ಸಿಗೆ ಮೊದಲ ಮಗು, ದೈಹಿಕ ಅಥವಾ ಲೈಂಗಿಕ ದೌರ್ಜನ್ಯ – ವರದಿ ಇತ್ಯಾದಿ) ಮೊದಲಾದವು ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಪರಿಗಣನೆಗೆ ತೆಗೆದುಕೊಳ್ಳಲಾಗುವ ಅಂಶಗಳಾಗಿವೆ.ಲಿಂಗ ಸಮಾನತೆಯ ಸಮಸ್ಯೆ ಅನಾದಿ ಕಾಲದ್ದು, ಇದರ ನಿವಾರಣೆ ಸಂಬಂಧಪಟ್ಟವರೆಲ್ಲರ ಜವಾಬ್ದಾರಿ ಎಂದು ಸಮೀಕ್ಷೆ ತಿಳಿಸಿದೆ. ಗಂಡು ಮಗುವೇ ಬೇಕೆಂಬ ಆದ್ಯತೆ ಅಭಿವೃದ್ಧಿಗೆ ಮಾರಕವಾಗಿದೆ. ಇದು ಲಿಂಗಾನುಪಾತದಲ್ಲಿ ಕಾಣುತ್ತಿದ್ದು ಹೆಣ್ಣಿನ ಅಸ್ಮಿತೆ ಕಾಣೆಯಾಗಿದೆ. ಗಂಡು ಮಗು, ಕೊನೆಯ ಮಗು ಎನ್ನುವ ರೂಢಿ, ಬಯಸದ ಹುಡುಗಿಯರನ್ನು (ಅಂದಾಜು 21 ದಶಲಕ್ಷ) ಹುಟ್ಟು ಹಾಕಿದೆ. ಇಂತಹ ಭಾವನೆಗಳನ್ನು ಇತಿಹಾಸಕ್ಕೇ ಸಮಾಪ್ತಿಗೊಳಿಸಬೇಕೆನ್ನುವ ದೃಢ ಸಂಕಲ್ಪವನ್ನು ಸಮಾಜ ತೆಗೆದುಕೊಳ್ಳಬೇಕೆಂದು ಆರ್ಥಿಕ ಸಮೀಕ್ಷೆ ಅಭಿಪ್ರಾಯ ಪಟ್ಟಿದೆ.

ಸರ್ಕಾರದ ಬೇಟಿ ಬಚಾವೊ ಬೇಟಿ ಪಢಾವೊ, ಸುಕನ್ಯಾ ಸಮೃದ್ಧಿ ಯೋಜನೆ, ಕಡ್ಡಾಯ ಹೆರಿಗೆ ರಜೆ ನಿಯಮ – ಎಲ್ಲವೂ ಈ ನಿಟ್ಟಿನಲ್ಲಿ ಸೂಕ್ತವಾಗಿ ಕೈಗೊಳ್ಳಲಾದ ಕಾರ್ಯಕ್ರಮಗಳೆಂದು ಸಮೀಕ್ಷೆ ಹೇಳಿದೆ. ❑

## ಭಾರತದ ಆಶೋತ್ತರ ಜಿಲ್ಲೆಗಳ ಪರಿವರ್ತನೆ; ಅಭಿವೃದ್ಧಿ ಯಾನ

(27ನೇ ಪುಟದಿಂದ)

ಜಿಲ್ಲಾಡಳಿತ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾರೆ. ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ದಂಡಾಧಿಕಾರಿಗಳು ಅಥವಾ ಕಲೆಕ್ಟರ್ ಪ್ರಧಾನ ಅಧಿಕಾರಿಗಳಾಗಿರುತ್ತಾರೆ. ಅಧಿಕಾರಯುಕ್ತ ಕಾರ್ಯದರ್ಶಿಗಳ ಸಮಿತಿಯು (ಇಸಿಎಸ್) ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ವಹಿಸುವುದಲ್ಲದೆ, ಜಿಲ್ಲಾ ಮಟ್ಟದ ತಂಡದಿಂದ ಈ ಜಿಲ್ಲೆಗಳಲ್ಲಿ ಗಳಿಸಿದ ಅನುಭವದ ಆಧಾರದ ಮೇಲೆ ಅಗತ್ಯ ನೀತಿ ಹೊಂದಾಣಿಕೆಯನ್ನು ಮಾಡುತ್ತದೆ. ಅದೇ ರೀತಿ, ರಾಜ್ಯ ಸರ್ಕಾರಗಳು ರಾಜ್ಯ ಮಟ್ಟದಲ್ಲಿ ಯೋಜನೆ ಅನುಷ್ಠಾನದ ಉಸ್ತುವಾರಿಗಾಗಿ ಮತ್ತು ಅಗತ್ಯ ನೀತಿ ಹೊಂದಾಣಿಕೆಗಳನ್ನು ಮಾಡಲು ಮುಖ್ಯ ಕಾರ್ಯದರ್ಶಿ ಮತ್ತು ಹಣಕಾಸು/ ಯೋಜನಾ ಕಾರ್ಯದರ್ಶಿಯವರನ್ನು ಒಳಗೊಂಡ ತಂಡವನ್ನು ರಚಿಸುತ್ತವೆ.

ಜಿಲ್ಲಾ ಮಟ್ಟದ ತಂಡಗಳು ವಿವಿಧ ಸೂಚ್ಯಂಕಗಳ ಹಾಲಿ ಸ್ಥಿತಿಗತಿಯ ಬಗ್ಗೆ ಮೂಲ ವರದಿಯನ್ನು ಸಿದ್ಧಪಡಿಸುತ್ತವೆ ಮತ್ತು ಅಗತ್ಯವಿರುವ ಸಂಪನ್ಮೂಲಗಳ ಆಧಾರದ ಮೇಲೆ ವಾರ್ಷಿಕ ಗುರಿಗಳನ್ನು ಸಿದ್ಧಪಡಿಸುತ್ತವೆ. ಇದರಿಂದ ಜಿಲ್ಲೆಗಳು ಪ್ರತಿ ಸೂಚ್ಯಂಕದ ವಿಚಾರದಲ್ಲೂ ನಿರೀಕ್ಷಿತ ಮಟ್ಟವನ್ನು ಸಾಧಿಸಲು ಸಾಧ್ಯವಾಗಲಿದೆ. ಕನಿಷ್ಠ ಪ್ರತಿ ಎರಡು ತಿಂಗಳಿಗೊಮ್ಮೆ ಜಿಲ್ಲೆಗಳಿಗೆ ಭೇಟಿ ನೀಡುವ ಕೇಂದ್ರದ ಪ್ರತಿನಿಧಿಗಳು, ನೀತಿ ಆಯೋಗಕ್ಕಾಗಿ ಈ ಬಗ್ಗೆ ಒಂದು ವರದಿಯನ್ನೂ ಸಿದ್ಧಪಡಿಸಿ ಸಲ್ಲಿಸುತ್ತಾರೆ. ನಂತರ ನೀತಿ ಆಯೋಗವು, ಈ ವರದಿಯನ್ನು ವಿಶ್ಲೇಷಣೆ ಮಾಡಿ, ವಿಚಾರಗಳ ಪರಿಗಣನೆಗಾಗಿ ಅದನ್ನು ಕಾರ್ಯದರ್ಶಿಗಳ ಅಧಿಕಾರಯುಕ್ತ ಸಮಿತಿಯ ಮುಂದಿಡುತ್ತದೆ. 115 ಜಿಲ್ಲೆಗಳ ಪೈಕಿ, ನೀತಿ ಆಯೋಗ 30 ಜಿಲ್ಲೆಗಳು, ಗೃಹ ಸಚಿವಾಲಯ 35 ಜಿಲ್ಲೆಗಳನ್ನು ಮುನ್ನಡೆಸಿದರೆ, ಉಳಿದ 55 ಜಿಲ್ಲೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ; ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ; ಪಂಚಾಯತ್ ರಾಜ್; ಕೃಷಿ ಮತ್ತು ರೈತ ಕಲ್ಯಾಣ; ಮಾನವ ಸಂಪನ್ಮೂಲ ಇಲಾಖೆ; ಗ್ರಾಮೀಣಾಭಿವೃದ್ಧಿ; ಕುಡಿಯುವ ನೀರು ಮತ್ತು ನೈರ್ಮಲ್ಯ; ವಸತಿ ಮತ್ತು ನಗರ ವ್ಯವಹಾರ; ಜಲ ಸಂಪನ್ಮೂಲ; ವಿದ್ಯುತ್; ಸಾಮಾಜಿಕ ನ್ಯಾಯ ಮತ್ತು ಬುಡಕಟ್ಟು ವ್ಯವಹಾರಗಳ ಸಚಿವಾಲಯಗಳ ನಡುವೆ ಹಂಚಲಾಗಿದೆ.

ಮೂಲ ದತ್ತಾಂಶ ಸಂಗ್ರಹ ಮತ್ತು ನಿಜಕಾಲ ನಿಗಾ 2018ರ ಏಪ್ರಿಲ್ 1ರಿಂದ ಆರಂಭವಾಗಲಿದೆ. ಈ ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಜನರ ಯೋಗಕ್ಷೇಮವನ್ನು ಹೆಚ್ಚಿಸುವ ಸಂಬಂಧ ರಾಜ್ಯಗಳ ನಡುವೆ ಸ್ಪರ್ಧೆಯೂ ಇದೇ ದಿನಾಂಕದಿಂದ ಆರಂಭವಾಗಲಿದೆ. ಹಿಂದುಳಿದ ಜಿಲ್ಲೆಗಳಲ್ಲಿ ಪರಿವರ್ತನೆ ತರುವುದು ವಿಭಿನ್ನ ಆಲೋಚನೆಯೇನೂ ಅಲ್ಲವಾದರೂ, ಸರ್ಕಾರ ಈ ಬಾರಿ ಇದನ್ನು ವಿಭಿನ್ನ ರೀತಿಯಲ್ಲಿ ಅನುಷ್ಠಾನಗೊಳಿಸುತ್ತಿದೆ. “ಯಶಸ್ಸು ಸಾಧಿಸಿದವರು ವಿಭಿನ್ನ ಕೆಲಸಗಳನ್ನು ಮಾಡುವುದಿಲ್ಲ, ಅವರು ಮಾಡುವ ಕೆಲಸವನ್ನೇ ವಿಭಿನ್ನವಾಗಿ ಮಾಡುತ್ತಾರೆ” ಎಂಬ ಜನಪ್ರಿಯ ನಾಣ್ಣುಡಿಯು ಆಶೋತ್ತರ ಜಿಲ್ಲೆಗಳ ವಿಚಾರದಲ್ಲಿ ಸಾಕಾರಗೊಳ್ಳಲಿದೆ. ❑

# ಉದ್ಯೋಗ ಸೃಷ್ಟಿಗೆ ಆದ್ಯತೆ

* ರಂಜಿತ್ ಮೆಹ್ತಾ



ಸರ್ಕಾರ ತೆಗೆದುಕೊಳ್ಳುವ ಒಂದು ಸಣ್ಣ ನಿರ್ಣಯವೂ ಕೂಡಾ ಇಂದಿನ ಜಗತ್ತಿನಲ್ಲಿ ವಿವಿಧ ಆಯಾಮ ಹಾಗೂ ದೂರಗಾಮಿ ಪರಿಣಾಮಗಳನ್ನು ಹೊಂದಿರುತ್ತದೆ. ಅಂದ ಮೇಲೆ ಬಜೆಟ್‌ನಂತಹ ಪ್ರಮುಖ ಹೆಜ್ಜೆ ಆರ್ಥಿಕತೆ ಮೇಲೆ ಗಾಢ ಪರಿಣಾಮ ಬೀರುವುದು ಸಹಜ. ಆದ್ದರಿಂದ ಸರ್ಕಾರ ತಾನು ತೆಗೆದುಕೊಳ್ಳುವ ಆಯ್ಕೆಯ ಹಿಂದೆ ಪರಿಣಾಮಗಳನ್ನು ಮೌಲ್ಯೀಕರಿಸಿರುತ್ತದೆ.

2018–19 ನೇ ಸಾಲಿನ ಕೇಂದ್ರ ಆಯವ್ಯಯವನ್ನು ವಿತ್ತ ಸಚಿವ ಶ್ರೀ ಅರುಣ್ ಜೇಟ್ಲಿ ಫೆ.1 ರಂದು ಮಂಡಿಸಿದರು. ಜಿಎಸ್‌ಟಿ ಜಾರಿಗೆ (2017 ಜುಲೈ) ಬಂದ ನಂತರದ ಮೊದಲ ಬಜೆಟ್ ಇದಾಗಿದ್ದರಿಂದ ಇದು ಬಹು ಮಹತ್ವ ಪಡೆದಿತ್ತು. ಆರ್ಥಿಕ ಸುಧಾರಣೆಯ ಬಹುಕಾಲದ ನಂತರ, ಆರ್ಥಿಕ ಸಂಕಷ್ಟ, ಕೃಷಿ ಕ್ಷೇತ್ರದಲ್ಲಿನ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಬಜೆಟ್ ಮಂಡಿಸಲಾಗಿದೆ. ಬಡತನ, ಗ್ರಾಮೀಣ ಆರ್ಥಿಕತೆ, ಆರೋಗ್ಯ ಸುರಕ್ಷೆ, ಶಿಕ್ಷಣ, ಉತ್ತಮ ಪರಿಸರ ಹಾಗೂ ಆಧುನಿಕತೆಯತ್ತ ದಾಪುಗಾಲು ಹಾಕಲು ಅಗತ್ಯವಾದ ಡಿಜಿಟಲೀಕರಣ ಮತ್ತು ಬಲಶಾಲಿ ಹಾಗೂ ಆತ್ಮವಿಶ್ವಾಸದ ಭಾರತ ನಿರ್ಮಾಣದ ಕನಸುಗಳು ಬಜೆಟ್‌ನ ಜೀವಾಳವಾಗಿವೆ. ಪ್ರಸ್ತುತ ವರ್ಷ ಬಹು ಗಮನಾರ್ಹ ನೀತಿ ಹಾಗೂ ರಚನಾತ್ಮಕ ಸುಧಾರಣೆಗಳಿಗೆ ಸಾಕ್ಷಿಯಾಯಿತು. ಸಾರ್ವಜನಿಕ ವಲಯದ ಬ್ಯಾಂಕುಗಳ ಪುನರುಜ್ಜೀವನ ಮತ್ತು ಭಾರತದ ಬ್ಯಾಂಕಿಂಗ್‌ಗಳ ದೌರ್ಬಲ್ಯಗಳನ್ನು ಪರಿಹರಿಸುವ ಪರಿಣಾಮಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇವೆಲ್ಲದಕ್ಕೆ ಸಾಕ್ಷಿ ಎಂಬಂತೆ ಅಂತಾರಾಷ್ಟ್ರೀಯ ಸಂಸ್ಥೆ ಮೂಡೀ'ಸ್ ನೀಡುವ ಕ್ರೆಡಿಟ್ ರೇಟಿಂಗ್ 13 ವರ್ಷದಲ್ಲಿ ಉತ್ತಮಗೊಂಡಿದೆ.

2022 ರ ವೇಳೆಗೆ ಗ್ರಾಮೀಣಾಭಿವೃದ್ಧಿ ಹಾಗೂ ರೈತರ ಆದಾಯ ದ್ವಿಗುಣವಾಗಿರಬೇಕೆಂಬ ಕನಸು ಈ ಬಜೆಟ್‌ನದು. ರೈತರಿಗೆ ಬೆಂಬಲವಾಗಿ ನಿಲ್ಲುವುದು ಮತ್ತು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದು, ಬೆಳವಣಿಗೆಗೆ ಪ್ರೋತ್ಸಾಹ, ಉದ್ಯೋಗ ಹಾಗೂ ಖಾಸಗಿ ಬಂಡವಾಳ ಹೂಡುವ ಮೂಲಕ ಬೆಂಬಲಿಸುವುದು, ರೈತರ ಆದಾಯಕ್ಕೆ ಸಂಬಂಧಿಸಿದ ತೆರಿಗೆ ವಿಶೇಷ ವಿಸ್ತರಿತ ಸವಲತ್ತು, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ಉತ್ತೇಜನ ನೀಡಿರುವುದು, ಸರ್ಕಾರದ ಆರ್ಥಿಕ ಸುಧಾರಣೆಗೆ ಆದ್ಯತೆ ಹಾಗೂ ದೂರಗಾಮಿ ಚಿಂತನೆಗೆ ಸಾಕ್ಷಿ. ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ, ಸರ್ವರಿಗೂ ಅನ್ವಯವಾಗುವ ಆರೋಗ್ಯ ಸುರಕ್ಷಾ ಯೋಜನೆ 'ಆಯುಷ್ಮಾನ್', ಸರ್ವರಿಗೂ ಸೂರು, ಶೈಕ್ಷಣಿಕ ಕ್ರಾಂತಿ ಮತ್ತು ಸಾಂಪ್ರದಾಯಿಕ ವೃತ್ತಿಗಳಾದ, ಮೀನುಗಾರಿಕೆ, ಆಹಾರ ಉತ್ಪಾದನಾ ಪ್ರಕ್ರಿಯೆ ಮತ್ತು ಜವಳಿ ಬಲವರ್ಧನೆ ಆರ್ಥಿಕ ಸಬಲೀಕರಣ ಸಾಧಿಸುವುದು, ಉದ್ಯೋಗಾವಕಾಶವನ್ನು ಹೆಚ್ಚಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಜೀವನೋಪಾಯಕ್ಕೆ (14.24 ಲಕ್ಷ ಕೋಟಿ ಖರ್ಚು) ಪ್ರಧಾನ ಮಾರ್ಗ ಒದಗಿಸುವುದೇ ಬಜೆಟ್‌ನ ಇತರ ಮುಖ್ಯ ಅಂಶಗಳು. ಇದೇ ರೀತಿ ಕೃಷಿ ಸಾಲ ವೃದ್ಧಿಗೊಂಡು 11 ಲಕ್ಷ ಕೋಟಿ ರೂ. ತಲುಪುತ್ತಿದೆ.

ಅಂದಾಜು 500 ಮಿಲಿಯನ್ ಫಲಾನುಭವಿಗಳನ್ನು ಒಳಗೊಂಡ 100

**ನಿರೀಕ್ಷೆಯಂತೆ ಈ ಬಾರಿಯ ಬಜೆಟ್ ಉದ್ಯೋಗ ಸೃಷ್ಟಿ, ಗ್ರಾಮೀಣ ಕೃಷಿ ಮತ್ತು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮ ವಲಯಗಳ ಅಭಿವೃದ್ಧಿಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡಿದೆ.**

* ಪ್ರಧಾನ ನಿರ್ದೇಶಕರು, ಪಿ.ಹೆಚ್.ಡಿ. ವಾಣಿಜ್ಯೋದ್ಯಮ ಸಂಘಟನೆ. E-mail : ranjeetmehta@gmail.com



ಮಿಲಿಯನ್ ಕುಟುಂಬಗಳಿಗಾಗಿ ವರ್ಷಕ್ಕೆ 5 ಲಕ್ಷದ ವಿಮೆಯನ್ನು ಪರಿಚಯಿಸುವ ರಾಷ್ಟ್ರೀಯ ಜೀವ ವಿಮಾ ಯೋಜನೆ ಜಗತ್ತಿನ ಅತಿದೊಡ್ಡ ಆರೋಗ್ಯ ವಿಮಾ ಯೋಜನೆ ಎಂಬ ಹಿರಿಮೆಗೆ ಪಾತ್ರವಾಗಿದ್ದು ವಿಶೇಷ. ಹಾಗೆಯೇ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳಿಗೆ ಉತ್ತೇಜನ ನೀಡುವ ದೃಷ್ಟಿಕೋನದಿಂದ ಕಾರ್ಪೊರೇಟ್ ತೆರಿಗೆಯಲ್ಲಿ ವಿನಾಯಿತಿಯನ್ನು ನೀಡಲಾಗಿದೆ. 250 ಕೋಟಿ ರೂ.ವರೆಗೂ ವ್ಯವಹರಿಸುವ ಕಂಪನಿಗಳು ಈ ಲಾಭ ಪಡೆಯಬಹುದು. ಇದು ಕೇವಲ ಲಾಭವಷ್ಟೇ ಅಲ್ಲ, ಅವುಗಳ ವ್ಯವಹಾರವನ್ನು ವಿಸ್ತರಿಸಿಕೊಳ್ಳುವ ಸಾಮರ್ಥ್ಯ ಲಭಿಸುತ್ತದೆ.

ಕಾರ್ಪೊರೇಟ್ ಬಾಂಡ್‌ಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಅಲ್ಲದೇ, ಸರ್ಕಾರ ಅದನ್ನು ಕಡ್ಡಾಯಗೊಳಿಸುತ್ತಿದೆ. ಬಹುದೊಡ್ಡ ಕಂಪನಿಗಳು ತಮ್ಮ ಹಣಕಾಸಿನ ಅಗತ್ಯತೆಯ ಒಟ್ಟು 25% ರಷ್ಟನ್ನು ಬಾಂಡ್ ಮಾರ್ಕೆಟ್ ಮೂಲಕ ಪಡೆಯಬೇಕಿದೆ. ಕಾರ್ಪೊರೇಟ್ ಮಾರುಕಟ್ಟೆಯಲ್ಲಿ ಬಾಂಡ್‌ಗಳ ಬೇಡಿಕೆ ಹೆಚ್ಚುವಲ್ಲಿ ಇದೊಂದು ಪ್ರಮುಖ ಹೆಜ್ಜೆ ಎನ್ನಬಹುದು. ವ್ಯಾಪಾರ ಕ್ಷೇತ್ರದಲ್ಲಿ ಇದರ ಬೇಡಿಕೆ ಹೆಚ್ಚಿದಂತೆ, ಹೂಡಿಕೆದಾರರಿಗೂ ಇದು ಅನುಕೂಲಕರ.

ಭಾರತದ ಅನಿವಾಸಿಗಳಿಂದ ಎಲ್ಲಿ ಆಸ್ತಿಗಳ ವರ್ಗಾವಣೆ ಮತ್ತು ಕೆಲ ನಿರ್ದಿಷ್ಟ ಭದ್ರತೆಗಳ ಮೇಲೆ ಕ್ಯಾಪಿಟಲ್ ಗೇನ್ ಟ್ಯಾಕ್ಸ್‌ನಿಂದ ವಿನಾಯಿತಿ ಇದೆಯೊ ಅಲ್ಲಿ, 'ಗಿಫ್ಟ್ ಸಿಟಿ' (ಗುಜರಾತ್ ಇಂಟರ್‌ನ್ಯಾಶನಲ್ ಫೈನಾನ್ಸ್ ಟೆಕ್ ಸಿಟಿ) ಮಟ್ಟದಲ್ಲಿ ಐಎಫ್‌ಎಸ್‌ಸಿ ಅನ್ನು ಅಭಿವೃದ್ಧಿಗೊಳಿಸಲು ಅನೇಕ ನಿಬಂಧನೆಗಳನ್ನು ರೂಪಿಸಲಾಗಿದೆ. ಸಾಗರದಾಚೆಯ ವ್ಯಾಪಾರ ವಹಿವಾಟು ಹಾಗೂ ಸಿಂಗಾಪುರ, ಹಾಂಗ್‌ಕಾಂಗ್, ದುಬೈ ಇತ್ಯಾದಿ ದೇಶಗಳೊಂದಿಗೆ ಭಾರತವನ್ನು ಸ್ಪರ್ಧಾತ್ಮಕವಾಗಿಸುವಲ್ಲಿ ಬೆಲೆ ಸಂಶೋಧನೆಗೂ ಇದು ಸಹಕಾರಿ. ಆದ್ದರಿಂದ ಇದನ್ನು ಸ್ವಾಗತಾರ್ಹ ಹೆಜ್ಜೆ ಎನ್ನಬಹುದು. ಅಲ್ಲದೇ ಗಿಫ್ಟ್ ಸಿಟಿಗಳು ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಏಕ ಗವಾಕ್ಷಿ (ಸಿಂಗಲ್ ವಿಂಡೊ) ಯೋಜನೆ ಒದಗಿಸಿದ್ದು ಅನೇಕ ಅನುಕೂಲಗಳನ್ನು ಹೊಂದುವಂತಾಗಿದೆ.

### ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಪ್ರಮುಖ ಬೆಳವಣಿಗೆಗಳು

ಉದ್ಯೋಗ ಸೃಷ್ಟಿ ಹಾಗೂ ಉದ್ಯಮಗಳಿಗೆ ನೆರವು ನೀಡುವುದೇ ಸರ್ಕಾರದ ನೀತಿಯಾಗಿದೆ ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಅದರಲ್ಲೂ ವಿಶೇಷವಾಗಿ ಜವಳಿ, ಚರ್ಮ, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳನ್ನು ಒಳಗೊಂಡಂತೆ ಕಾರ್ಮಿಕ ಕ್ಷೇತ್ರದ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಈ ಮೂಲಕ ಉದ್ಯೋಗ ಸೃಷ್ಟಿಗೆ ದಾರಿ ಮಾಡುವುದು ಪ್ರಸ್ತುತ ಬಜೆಟ್‌ನ ಧ್ಯೇಯ.

ಭಾರತ ಅಂದಾಜು 18 ಮಿಲಿಯನ್‌ಗಳಿಗಿಂತಲೂ ಹೆಚ್ಚು ಉದ್ಯೋಗಾಕಾಂಕ್ಷಿಗಳನ್ನು ಹೊಂದಿದ ದೇಶ. ಭಾರತದ ಜನಸಂಖ್ಯೆಯ ಶೇ.30 ರಷ್ಟು ಜನ 15 ರಿಂದ 29 ವರ್ಷ ವಯಸ್ಸಿನವರಿದ್ದು, ಅವರು ಸೂಕ್ತ ಶಿಕ್ಷಣ ಅಥವಾ ಯಾವುದೇ ತರಬೇತಿ ಹೊಂದಿಲ್ಲ ಎಂದು ಜಾಗತಿಕ ಬ್ಯಾಂಕ್‌ನ ಇತ್ತೀಚಿನ ವರದಿಯೊಂದು ಹೇಳಿದೆ. ಇವೆಲ್ಲ ನೋಡಿದಾಗ, ಒಂದು ದೇಶದ ಅಭಿವೃದ್ಧಿಯಲ್ಲಿ ಉದ್ಯೋಗದ ಪಾತ್ರ ಬಹುಮಹತ್ವದ್ದು ಎನಿಸುತ್ತದೆ. ಒಟ್ಟಾರೆ ಭಾರತದಲ್ಲಿ ಅಂದಾಜು 3.5% ನಿರುದ್ಯೋಗ ಸಮಸ್ಯೆ ಇದೆ, ಆದರೆ ಇಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿ ಎಂದರೆ, ಈ ನಿರುದ್ಯೋಗ ಸಮಸ್ಯೆಯು 15–24 ವಯಸ್ಸಿನವರಲ್ಲಿದೆ ಎಂಬುದು. ಪ್ರತಿ ತಿಂಗಳೂ ಒಂದು ಮಿಲಿಯನ್ ಜನ ದೇಶದ ಉದ್ಯೋಗಾಕಾಂಕ್ಷಿಗಳ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತಾರೆ. ಆದರೆ ಈ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಉದ್ಯೋಗ ಸೃಷ್ಟಿಯನ್ನು ಮಾಡಲಾಗದು. 30,475 ಕಂಪನಿಗಳಲ್ಲಿ ಅಂದಾಜು 2,164,575 ನೌಕರರು ಪ್ರಧಾನ ಮಂತ್ರಿ ರೋಜಗಾರ್ ಪ್ರೋತ್ಸಾಹ ಧನ ಯೋಜನಾ ಅಡಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ (2016 ರಿಂದ). ಆದರೆ ಈ ಯೋಜನೆಯಡಿಯಲ್ಲಿ ನಿಖರವಾಗಿ ಎಷ್ಟು ಜನ ನಿಯೋಜನೆಗೊಂಡಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

ಭಾರತದಲ್ಲಿ ಕೃಷಿ ಕ್ಷೇತ್ರದ ನಂತರ ಬೃಹತ್ ಉದ್ಯೋಗಾವಕಾಶವನ್ನು ನೀಡುವ ಕ್ಷೇತ್ರವೆಂದರೆ ಅದು ಕಟ್ಟಡ ನಿರ್ಮಾಣ ಕ್ಷೇತ್ರ. ಏನಿಲ್ಲವೆಂದರೂ ಅಂದಾಜು 45 ಮಿಲಿಯನ್‌ಗಿಂತಲೂ ಹೆಚ್ಚು ಜನರಿಗೆ ನೇರ ಅಥವಾ ಅಪರೋಕ್ಷವಾಗಿ ಉದ್ಯೋಗ ಸೃಷ್ಟಿ ಮಾಡಬಲ್ಲ ಕ್ಷೇತ್ರವಿದು. 2018–19 ನೇ ಸಾಲಿನ ಬಜೆಟ್, ಮೂಲಭೂತ ಸೌಕರ್ಯ, ಕೃಷಿ ಕೇತ್ರದ ಆರ್ಥಿಕ ಸಂಕಷ್ಟ ಹಾಗೂ ಉದ್ಯೋಗ ಸೃಷ್ಟಿಯ ಕುರಿತೇ ಪ್ರಧಾನವಾಗಿದೆ.

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ, ಗ್ರಾಮೀಣ ಭಾಗದಲ್ಲಿ ಸಂಪರ್ಕ ರಸ್ತೆಗಳು, ಗ್ರಾಮೀಣ ಮಾರುಕಟ್ಟೆ, ಕೃಷಿ–ಪ್ರಕ್ರಿಯಾ ಕೇಂದ್ರಗಳು, ಆಹಾರ ಮಳಿಗೆ, ಸಣ್ಣ ನೀರಾವರಿ, ವೈಫೈ ಹಾಟ್‌ಸ್ಪಾಟ್ಸ್, ಶೌಚಾಲಯಗಳು, ಕೈಗೆಟಕುವ ದರದಲ್ಲಿರುವ ವಾಸಯೋಗ್ಯ ಮನೆಗಳು, ಆರೋಗ್ಯ ಹಾಗೂ ನೆಮ್ಮದಿ ಕೇಂದ್ರಗಳು, ಜಿಲ್ಲಾ ಆಸ್ಪತ್ರೆಯ ಮೇಲ್ದರ್ಜೇಕರಣ, ಜಿಲ್ಲಾ ಮಟ್ಟದಲ್ಲಿ ಕೌಶಲ ಕೇಂದ್ರಗಳು ಮತ್ತು ಮೀನುಗಾರಿಕೆ ಹಾಗೂ ಪಶುಸಂಗೋಪನೆ ಇತ್ಯಾದಿಗಳಿಗೆ ಅವಶ್ಯಕ ಅನುದಾನ ಮೀಸಲಿರಿಸಲಾಗಿದ್ದು ಸ್ವಾಗತಾರ್ಹ.

ಇದುವರೆಗೂ ಯಾವುದೇ ಬಜೆಟ್ ಈ ಮಟ್ಟಿಗೆ, ಗ್ರಾಮೀಣ ಭಾಗದ ಏಳ್ಗೆಗೆ ಆದ್ಯತೆ ನೀಡಿದ ಉದಾಹರಣೆಯಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಜೀವನೋಪಾಯ ಸೃಷ್ಟಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವುದಕ್ಕಾಗಿ 2018–19 ರ ಬಜೆಟ್‌ನಲ್ಲಿ ವಿತ್ತ ಸಚಿವರು ವಿವಿಧ ಸಚಿವಾಲಯಗಳಡಿ 14.34 ಲಕ್ಷ ಕೋಟಿ ರೂ. ಹಣ ಮೀಸಲಿರಿಸಿದ್ದಾರೆ. ಕೃಷಿ ಚಟುವಟಿಕೆ ಹಾಗೂ ಸ್ವಯಂ ಉದ್ಯೋಗ ಹೊರತುಪಡಿಸಿ, ಈ ಹೂಡಿಕೆ ದಿನಕ್ಕೆ 321 ಕೋಟಿ ವ್ಯಕ್ತಿಗಳಿಗೆ ಉದ್ಯೋಗ ಸೃಷ್ಟಿಸಬಲ್ಲದು ಎಂದು ಸಚಿವರು ಹೇಳಿದ್ದಾರೆ.

ನಿಗದಿತ ಅವಧಿಯ ಗುತ್ತಿಗೆಯ ಪದ್ಧತಿಯಿಂದ ಎಲ್ಲ ಕ್ಷೇತ್ರಗಳಲ್ಲೂ ತಕ್ಷಣಕ್ಕೆ ಉದ್ಯೋಗ ಒದಗಿಸುವಲ್ಲಿ ಸಫಲವಾಗಬಹುದು. ಇದರಿಂದ ಉದ್ಯೋಗದಾತನು ನಿರ್ದಿಷ್ಟ ಕೆಲಸಕ್ಕಾಗಿ

ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳಬಹುದು ಹಾಗೂ ಕೆಲಸ ಮುಕ್ತಾಯದ ನಂತರ ಗುತ್ತಿಗೆಯು ಸಮಾಪನಗೊಳ್ಳಬಹುದು. ಸ್ಥಿರ ಗುತ್ತಿಗೆ ಪದ್ಧತಿಯು ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ ನೀಡಬಲ್ಲದು. ಇದು ಋತುಮಾನವನ್ನು ಅವಲಂಬಿಸಿದ ಉದ್ಯೋಗವೂ ಆಗಿರಬಹುದು. ಉದ್ಯೋಗ ಸೃಷ್ಟಿಗೆ ಪ್ರಧಾನ ಕಾರಣವಾಗಿರುವ ಮೂಲಸೌಕರ್ಯ ಉದ್ಯಮದ ಬಲವರ್ಧನೆಗೆ ಪ್ರೋತ್ಸಾಹ ನೀಡಲಾಗಿದೆ. ಉದ್ಯೋಗ ಸೃಷ್ಟಿ ಹಾಗೂ ಬೆಳವಣಿಗೆಗೆ ಸಂಬಂಧಿಸಿದಂತೆ ಸರ್ಕಾರ ಮೀಸಲಿಟ್ಟ ಅಂದಾಜು ಬಜೆಟ್ ಮೊತ್ತದಲ್ಲಿ ಹೆಚ್ಚಳವಾಗಿದೆ. 2017-18 ರ ಸಾಲಿನಲ್ಲಿ 4.94 ಲಕ್ಷ ಕೋಟಿ ಅಂದಾಜು ವೆಚ್ಚವೆಂದು ಪರಿಗಣಿಸಿದ್ದು, ಪ್ರಸ್ತುತ 2018-19 ರ ಸಾಲಿನ ಬಜೆಟ್‌ನಲ್ಲಿ ಅದನ್ನು 5.97 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ.

250 ಕೋಟಿ ರೂಪಾಯಿಯ ವ್ಯಾಪಾರ ವಹಿವಾಟನ್ನು ತೋರಿಸಿದ ಕಂಪನಿಗಳಿಗೆ ಶೇ.25% ರಷ್ಟು ಕಾರ್ಪೊರೇಟ್ ತೆರಿಗೆ ವಿನಾಯಿತಿ ನೀಡಲಾಗಿದೆ. ಕಳೆದ ಸಾಲಿನ ಬಜೆಟ್‌ನಲ್ಲಿ, ಈ ತೆರಿಗೆಯು 50 ಕೋಟಿಗಿಂತ ಕಡಿಮೆ ವಹಿವಾಟು ಮಾಡಿದ ಕಂಪನಿಗಳಿಗೆ ಅನ್ವಯಿಸುವಂತೆ ಹೇಳಿತ್ತು. ಆದರೆ ಈಗ 99% ಕಂಪನಿಗಳು ತೆರಿಗೆಯನ್ನು ಸಲ್ಲಿಸುತ್ತವೆ ಹಾಗೂ ಹೆಚ್ಚುವರಿ ಬಂಡವಾಳವನ್ನು ಹೂಡುವ ಮೂಲಕ ಉದ್ಯೋಗ ಸೃಷ್ಟಿಗೂ ಕಾರಣವಾಗುತ್ತವೆ ಎಂದು ಹಣಕಾಸು ಸಚಿವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಸ್ತುತ ಬಜೆಟ್‌ನ ಇನ್ನೊಂದು ಮುಖ್ಯ ಅಂಶವೆಂದರೆ, ಅಧಿನಿಯಮ ನೌಕರರ ಭವಿಷ್ಯ ನಿಧಿ ಅಧಿನಿಯಮದ ತಿದ್ದುಪಡಿಗೆ ಪ್ರಸ್ತಾವಿಸಿದ್ದು, ಈ ಮೂಲಕ ಮಹಿಳೆ ಕೆಲಸಕ್ಕೆ ಸೇರಿದ ಮೊದಲ 3 ವರ್ಷ ಅವಳು ಕೇವಲ 8% ರಷ್ಟು ತನ್ನ ಪಾಲು ಭರಿಸಿದರೆ ಸಾಕು, ಕಂಪನಿಯು ಎಂದಿನಂತೆ 12% ಭರಿಸುತ್ತದೆ. ಇದು ಮಹಿಳೆಯರೂ ಕಾರ್ಪೊರೇಟ್ ಔದ್ಯಮಿಕ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಪ್ರೋತ್ಸಾಹ ನೀಡುವ ಹೆಜ್ಜೆ. ಪ್ರಧಾನ ಮಂತ್ರಿ ಕೌಶಲ ಕೇಂದ್ರ ಕಾರ್ಯಕ್ರಮದಡಿಯಲ್ಲಿ, ಪ್ರತಿ ಜಿಲ್ಲೆಯಲ್ಲಿಯೂ ಕೌಶಲ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ವಿತ್ತ ಸಚಿವರು ಹೇಳಿದ್ದಾರೆ. ನೂತನವಾಗಿ ಪರಿಚಯಿಸಿರುವ ಆಯುಷ್ಮಾನ್ ಭಾರತ್ ಯೋಜನೆಯು ಸಮಗ್ರ ಆರೋಗ್ಯ ದೃಷ್ಟಿಕೋನವನ್ನು ಇಟ್ಟುಕೊಂಡಿದೆ. ಇದು ಲಕ್ಷಾನುಗಟ್ಟಲೇ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ. ಅದರಲ್ಲೂ ಮಹಿಳೆಯರಿಗೆ ಇದು ಅಮೂಲ್ಯ ಅವಕಾಶ ಒದಗಿಸುತ್ತದೆ.



2017-18 ರ ಬಜೆಟ್‌ನ ಅಂದಾಜನ್ನು (500 ಕೋಟಿ) ಪರಿಷ್ಕರಿಸುವ ಮೂಲಕ, ಪ್ರಧಾನಮಂತ್ರಿ ರೋಜಗಾರ್ ಪ್ರೋತ್ಸಾಹನ್ ಯೋಜನಾ ಅಡಿಯಲ್ಲಿ 2018-19 ರ ಬಜೆಟ್‌ನಲ್ಲಿ 1,652 ಕೋಟಿ ಮೀಸಲಿರಿಸಲಾಗಿದೆ. ಚರ್ಮೋದ್ಯಮವು ಕಾರ್ಮಿಕ ಪ್ರಧಾನವಾಗಿದ್ದು ಇದು ಉತ್ತಮ ಬೆಳವಣಿಗೆಯ ಸಾಮರ್ಥ್ಯವನ್ನೂ ಹೊಂದಿದೆ. ಈಗಾಗಲೇ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಸಾವಿರಾರು ನಿರುದ್ಯೋಗಿಗಳು (ಉದ್ಯೋಗಾಕಾಂಕ್ಷಿಗಳು) ತರಬೇತಿಯನ್ನು ಪಡೆದಿದ್ದೂ ಅಲ್ಲದೇ, ಚರ್ಮೋದ್ಯಮದಲ್ಲಿ ಉದ್ಯೋಗವನ್ನು ಗಿಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಯೋಜನೆಯು ಚರ್ಮ ಹಾಗೂ ಪಾದರಕ್ಷೆಗಳ ಉದ್ಯಮದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಒದಗಿಸುತ್ತದೆ. ಜವಳಿ ಕ್ಷೇತ್ರಕ್ಕೂ ಸರ್ಕಾರವು ಸಾಕಷ್ಟು ಪ್ರಯೋಜಕ ಪ್ಯಾಕೇಜ್ ನೀಡಿದೆ. 2016 ರಲ್ಲಿ 6,000 ಕೋಟಿ ನೀಡಿದ್ದರೆ ಪ್ರಸ್ತುತ 2018-19 ರ ಬಜೆಟ್‌ನಲ್ಲಿ 7,148 ಕೋಟಿ ನೀಡಲಾಗಿದೆ.

ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮ ಕ್ಷೇತ್ರ ಭಾರತದ ಅಭಿವೃದ್ಧಿಯಲ್ಲಿ ಬಹುಮಹತ್ವದ ಪಾತ್ರವಹಿಸುತ್ತದೆ. ಆದ್ದರಿಂದ ಉದ್ಯೋಗ ಸೃಷ್ಟಿಸಲು, 3,794 ಕೋಟಿ ಸಣ್ಣ ಹಾಗೂ ಮಧ್ಯಮ ಉದ್ಯಮ ಕ್ಷೇತ್ರಕ್ಕೆ ಬಂಡವಾಳ, ಆರ್ಥಿಕ ಬೆಂಬಲ ಹಾಗೂ ರಿಯಾಯ್ತಿ ರೂಪದಲ್ಲಿ ಹಂಚಿಕೆ ಮಾಡಲಾಗಿದೆ.

ಮಹಿಳಾ ನೌಕರರಿಗೆ ಪಿಎಫ್ ಪಾಲು ಸಲ್ಲಿಸುವಲ್ಲಿ ರಿಯಾಯ್ತಿ ನೀಡಲಾಗಿದ್ದು, ಕೇವಲ 8% ನೀಡಿದರೆ ಸಾಕು, ಕಂಪನಿಯು 12% ಪಾಲನ್ನು ಭರಿಸುತ್ತದೆ. ಇದರಿಂದ ಮಹಿಳೆಯು ಮನೆಗೆ ತೆಗೆದುಕೊಂಡು ಹೋಗುವ ಹಣದ ಮೊತ್ತ ಹೆಚ್ಚಾಗುತ್ತದೆ. ಪರಿಣಾಮ ಮಹಿಳಾ ನೌಕರರಿಗೆ ಉದ್ಯಮದಲ್ಲಿ ಕೆಲಸಕ್ಕೆ ಸೇರಲು ಪ್ರೋತ್ಸಾಹಿಸಿದಂತೆಯೂ ಆಗುತ್ತದೆ. ಜಾಗತಿಕವಾಗಿ ಮಹಿಳೆಯರ ಔದ್ಯಮಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆಯು ಶೇ.40 ರಷ್ಟಿದ್ದರೆ ಭಾರತದಲ್ಲಿ ಇದು ಶೇ.25 ಕ್ಕಿಂತಲೂ ಕಡಿಮೆ ಇದೆ. ತಜ್ಞರು ಹಾಗೂ ಔದ್ಯಮಿಕ ಕ್ಷೇತ್ರದ ಪರಿಣಿತರು ಕಂಡಂತೆ, ಮಹಿಳೆಯರ ಭಾಗೀದಾರಿಕೆಯು ಆರ್ಥಿಕ ಉನ್ನತಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

ಕೃಷಿವಲಯದಲ್ಲಿನ ಉತ್ಪಾದಕ ಉದ್ಯೋಗಗಳ ಕುರಿತು ವಿತ್ತ ಸಚಿವರು ಮಾತನಾಡಿದ್ದಾರೆ. ಭೂ ರಹಿತ ಹಾಗೂ ಭೂಮಿವುಳ್ಳ ರೈತರ ಕುಟುಂಬಗಳಿಗೆ, ಉತ್ಪಾದಕ ಮತ್ತು ಲಾಭದಾಯಕ ಕೃಷಿ ಹಾಗೂ ಕೃಷಿಯೇತರ ಉದ್ಯೋಗಗಳನ್ನು ಕಲ್ಪಿಸುವುದರ ಮೇಲೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ. ಅಲ್ಲದೇ ಸ್ವಯಂ-ಉದ್ಯೋಗ ಹಾಗೂ ಉದ್ಯಮಶೀಲತೆಯ ಕುರಿತೂ ಈ ಬಜೆಟ್‌ನಲ್ಲಿ ಹೇಳಲಾಗಿದ್ದು, ಉದ್ಯೋಗ ಸೃಷ್ಟಿಯಲ್ಲಿ ಇವೂ ಪ್ರಧಾನ ಪಾತ್ರನಿರ್ವಹಿಸುತ್ತವೆ. 2015ರ ಏಪ್ರಿಲ್‌ನಲ್ಲಿ ಮುದ್ರಾ ಯೋಜನೆ ಜಾರಿಗೆ ಬಂದಿದೆ. ಇದರಡಿಯಲ್ಲಿ 103 ಮಿಲಿಯನ್‌ಗೂ ಹೆಚ್ಚು ಮುದ್ರಾ ಸಾಲ ನೀಡಲಾಗಿದ್ದು, 4.6 ಲಕ್ಷ ಕೋಟಿ ರೂ ಬಿಡುಗಡೆ ಮಾಡಲಾಗಿತ್ತು. ಇದರಲ್ಲಿ ಮೂರಕ್ಕಿಂತಲೂ ಹೆಚ್ಚು ಪಾಲು ಸಾಲದ ಖಾತೆಗಳನ್ನು ಮಹಿಳೆಯರೇ ಹೊಂದಿದ್ದು, ಉಳಿದ ಖಾತೆಗಳು ದುರ್ಬಲ ವರ್ಗದ ಜನರು ಹೊಂದಿದ್ದಾರೆ. ಕಳೆದ ವರ್ಷಗಳಲ್ಲಿ ನಿಗದಿತ ಗುರಿಯನ್ನು ಯಶಸ್ವಿಯಾಗಿ ತಲುಪಿದ್ದು, 2018-19 ರ ಸಾಲಿನಲ್ಲಿ 3 ಲಕ್ಷ ಕೋಟಿ ಸಾಲವನ್ನು ಮುದ್ರಾ ಅಡಿಯಲ್ಲಿ ನೀಡುವುದಾಗಿ ತಿಳಿಸಲಾಗಿದೆ. ಇದರಿಂದ ಸಣ್ಣ ಉದ್ಯಮಗಳಲ್ಲಿ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಹೆಚ್ಚಿದೆ.

2018-19 ರ ಸಾಲಿನ ಬಜೆಟ್‌ನಲ್ಲಿ ಕೃಷಿ ವಲಯದ ಅಭಿವೃದ್ಧಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಕೃಷಿಯನ್ನು ಕೇವಲ ವ್ಯವಸಾಯವಾಗಿ ನೋಡದೇ, ಅದನ್ನೊಂದು

ಉದ್ಯಮವಾಗಿಯೂ ನೋಡಬೇಕಿದ್ದು, ಕೃಷಿ ಕಡೆಗೆ ಸಮಗ್ರ ದೃಷ್ಟಿಕೋನದ ಅವಶ್ಯಕತೆ ಇದೆ. ಕೃಷಿ ಸಂಬಂಧಿತ ನೀತಿಗಳು ಸಂಪೂರ್ಣವಾಗಿ ಉತ್ಪಾದನಾ ಕೇಂದ್ರಿತವಾಗಿರದೇ, ಸಂಪೂರ್ಣ ಕೃಷಿಯ ಮೌಲಿಕ ವ್ಯವಸ್ಥೆ – ಸಂಪೂರ್ಣ ಪೂರೈಕೆ ಸರಪಳಿ, ಉತ್ಪಾದನೆಗೂ ಮೊದಲು ಹಾಗೂ ಉತ್ಪಾದನಾ ನಂತರ ಮತ್ತು ಮಾರುಕಟ್ಟೆಯ ಅವಶ್ಯಕತೆಗಳು ಮುಂತಾದವನ್ನು ಒಳಗೊಂಡಿರುತ್ತವೆ. ಸಮತೆಯನ್ನು ಕಾಪಾಡಿಕೊಳ್ಳುವುದು, ಕೃಷಿವಲಯದ ದುರ್ಬಲ ಕ್ಷೇತ್ರಗಳನ್ನು ಸರಿಪಡಿಸುವುದು, ಕೃಷಿ, ಸಂಚಾರ, ಪ್ರಕ್ರಿಯೆ ಹಾಗೂ ಮಾರುಕಟ್ಟೆಯ ಮೂಲಸೌಕರ್ಯಗಳಿಗೆ ಈ ಬಜೆಟ್‌ನಲ್ಲಿ ಹೆಚ್ಚು ಆದ್ಯತೆ ನೀಡಲಾಗಿದೆ. ಇವೆಲ್ಲ ಅಂಶಗಳೂ ಉದ್ಯೋಗ, ಸುಗ್ಗಿಯ ಪೂರ್ವ ಹಾಗೂ ನಂತರದ ನಿರ್ವಹಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತವೆ. ಈ ಕುರಿತಾದ ಕೆಲವು ಮಹತ್ವ ಹೆಜ್ಜೆಗಳು ಈ ಮುಂದಿನಂತಿವೆ.

* ಕೃಷಿ ಉತ್ಪಾದಕರ ಸಂಘಟನೆ (ಎಫ್‌ಪಿಓ) 100 ಕೋಟಿಗೂ ಕಡಿಮೆ ವ್ಯಾಪಾರ ವಹಿವಾಟು ಹೊಂದಿದಲ್ಲಿ, ಸುಗ್ಗಿಯ ಮೌಲ್ಯವನ್ನು ವೃದ್ಧಿಸಲು ಮೊದಲ 5 ವರ್ಷ ಆದಾಯ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ. ಇಪಿಓ ಅಥವಾ ವಿಪಿಓಗಳು ತೋಟಗಾರಿಕಾ ಉತ್ಪನ್ನಗಳ ಪೂರೈಕೆಯ ಸರಪಳಿಯಲ್ಲಿ ಆರ್ಥಿಕ ಸಬಲತೆ ಕಾಣಲು ಕ್ಲಸ್ಟರ್ ಆಧರಿತ ಕೃಷಿ ಹಾಗೂ ಅಭಿವೃದ್ಧಿಗೆ ಆದ್ಯತೆ ನೀಡುವುದು ಅವಶ್ಯಕ.

* ಗ್ರಾಮೀಣ ವಲಯದಲ್ಲಿ ಉದ್ಯೋಗ ಸೃಷ್ಟಿಸಲು ಪೂರಕವಾಗಿ ರೂ. 500 ಕೋಟಿ ಹಂಚಲಾಗಿದೆ. ಗ್ರಾಮೀಣ ಮಟ್ಟದ ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸುವ



ಉದ್ದೇಶದಿಂದ ಕೃಷಿ ಮಾರುಕಟ್ಟೆಯ ಮೂಲಸೌಕರ್ಯ ನಿಧಿ ಎಂದು 2000 ಕೋಟಿ ಮೀಸಲಿಡಲಾಗಿದೆ.

* ಮುಂಗಾರಿ ಬೆಳೆಗಳಿಗೆ ಬೆಂಬಲ ಬೆಲೆಯಾಗಿ ಒಟ್ಟು ಉತ್ಪಾದನೆಯ ವೆಚ್ಚದಲ್ಲಿ 1.5 ರಷ್ಟು ನಿಗದಿಪಡಿಸಲಾಗಿದೆ.

* ಪರಿವರ್ತಿತ ಬಿದಿರು–ಬೆತ್ತ ಮಿಷನ್ 'ಗ್ರೀನ್ ಗೋಲ್ಡ್', ಬಿದಿರು ವಲಯದ ಪ್ರೋತ್ಸಾಹಕ್ಕೆಂದು 1290 ಕೋಟಿ ಮೀಸಲಿರಿಸಲಾಗಿದೆ.

* ನೀರಾವರಿ ಅಭಿವೃದ್ಧಿಗಾಗಿ 2,600 ಕೋಟಿಗೆ ಅನುದಾನ ಹೆಚ್ಚಿಸಲಾಗಿದೆ. 96 ಜಿಲ್ಲೆಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದ್ದು, ಅಲ್ಲಿ 30% ಕ್ಕಿಂತಲೂ ಕಡಿಮೆ ಭೂ ಹಿಡುವಳಿ ನೀರಾವರಿ ಭರವಸೆಯ ಪ್ರದೇಶಗಳಿವೆ.

* ಮೀನುಗಾರಿಕೆ ಮತ್ತು ಜಲಚರ ಸಾಕಣೆಗಾಗಿ ಮೂಲಸೌಕರ್ಯ ಹಾಗೂ ಪಶುಸಂಗೋಪನೆಯ ಅಭಿವೃದ್ಧಿಗೆ 10 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ.

* ಕೃಷಿ ಸಂಸ್ಕರಣಾ ಹಣಕಾಸು ಸಂಸ್ಥೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಆಹಾರ ಸಂಸ್ಕರಣಾ ಉದ್ಯಮಗಳ ಸಚಿವಾಲಯಕ್ಕೆ 1400 ಕೋಟಿ ಮೀಸಲಿರಿಸಲಾಗಿದೆ.

**ಉಪ ಸಂಹಾರ**

ನಿರೀಕ್ಷೆಯಂತೆ ಈ ಬಾರಿಯ ಬಜೆಟ್ ಉದ್ಯೋಗ ಸೃಷ್ಟಿ, ಗ್ರಾಮೀಣ ಕೃಷಿ ಮತ್ತು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮ ವಲಯಗಳ ಅಭಿವೃದ್ಧಿಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡಿದೆ. ಅಲ್ಲದೇ ಈ ಮೂಲಕ ರೈತರ ಆದಾಯ ಹೆಚ್ಚಿಸುವುದು, ಗರಿಷ್ಠ ಮಟ್ಟದಲ್ಲಿ ಆರೋಗ್ಯ ಸುರಕ್ಷತೆ ಒದಗಿಸುವುದು, ಉದ್ಯಮಗಳಿಗೆ ಸಾಲ ಸೌಲಭ್ಯ ಹಾಗೂ ಮುದ್ರಾ ಯೋಜನೆಯಡಿ ಇನ್ನೂ ಹೆಚ್ಚಿನ ಗುರಿಯನ್ನು ಹೊಂದಿರುವುದು ಬಜೆಟ್‌ನ ಜೀವಾಳ ಎನ್ನಬಹುದು. ಅಂತೆಯೇ ಮೂಲಸೌಕರ್ಯಗಳತ್ತಲೂ ಇಲ್ಲಿ ಗಮನಹರಿಸಲಾಗಿದೆ. ಮೂಲ ಸೌಕರ್ಯ ಕ್ಷೇತ್ರಗಳಲ್ಲಿ ಹಣ ಹೂಡಿಕೆಯ ಪ್ರಮಾಣ ಹೆಚ್ಚಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಹಣಕಾಸು ಸಚಿವರು ಅತ್ಯುತ್ತಮ ಬಜೆಟ್ ಮಂಡಿಸಿದ್ದಾರೆ. ಕೃಷಿ, ಆರೋಗ್ಯ ಕ್ಷೇತ್ರ, ಶೈಕ್ಷಣಿಕ ಮೂಲಸೌಕರ್ಯಗಳು ಮತ್ತು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಆರ್ಥಿಕ ಸಬಲತೆ ಸಾಧಿಸುವ ನಿಟ್ಟಿನಲ್ಲಿ, ಉತ್ಪಾದನಾ ವಲಯದ ಉತ್ತೇಜನ, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಬಲವರ್ಧನೆ, ಆರೋಗ್ಯ ಮತ್ತು ಕೌಶಲ ಅಭಿವೃದ್ಧಿ ಮುಂತಾದವುಗಳ ಮೇಲೆ ಬೆಳಕು ಚೆಲ್ಲಿದ್ದು ಪ್ರಸ್ತುತ ಬಜೆಟ್‌ನ ವಿಶೇಷ. ನವ ಭಾರತ ನಿರ್ಮಾಣದ ಕನಸನ್ನು ಪ್ರಧಾನವಾಗಿಟ್ಟುಕೊಂಡಿರುವ ಬಜೆಟ್, ಮುಖ್ಯವಾಗಿ ದೇಶದ ಆರ್ಥಿಕತೆಯನ್ನು ಬಲಪಡಿಸುವ ಶ್ರದ್ಧೆ ಹೊಂದಿದೆ. ಲಕ್ಷಾಂತರ ಜನರಿಗೆ ಉದ್ಯೋಗ ಹಾಗೂ ನಿರೀಕ್ಷಿತ 8% ಬೆಳವಣಿಗೆಯನ್ನು ಸಾಧಿಸಲು ಬಜೆಟ್ ತುಂಬಾ ಸಹಕಾರಿ ಎಂಬುದು ಮಾತ್ರ ಸ್ಪಷ್ಟವಾಗಿದೆ. ❑


# ಯೋಜನಾ

## ಏಪ್ರಿಲ್ 2018 ಸಂಚಿಕೆಯ ವಿಷಯ

# ಈಶಾನ್ಯ ರಾಜ್ಯಗಳು


# FORM IV

**Statement about ownership and other particulars about Yojana (Kannada)**

| | | | |
|---|---|---|---|
| 1. | Place of Publication | : | Bengaluru |
| 2. | Periodicity of Publication | : | Monthly |
| 3. | Printer's Name | : | Dr. Sadhana Rout |
| | Nationality | : | Indian |
| | Address | : | Publications Division,<br>Soochna Bhavan,<br>New Delhi - 110 003. |
| 4. | Publisher's Name | : | Dr. Sadhana Rout |
| | Nationality | : | Indian |
| | Address | : | Publications Division,<br>Soochna Bhavan,<br>New Delhi - 110 003. |
| 5. | Editor's Name | : | B.K. Kiranmai |
| | Nationality | : | Indian |
| | Address | : | Publications Division,<br>1st Floor, 'F' Wing,<br>Kendriya Sadan, Koramangala,<br>Bengaluru - 560 034. |
| 6. | Name & Address of Individual who own the newspaper and Partner or shareholder holding more than one Percent of the total capital. | : | Wholly owned by Ministry of Information & Broadcasting,<br>Government of India,<br>New Delhi - 110 003. |

I, Sadhana Rout, hereby declare that the particular given above are true to the best of my knowledge and belief.

Date : 13.02.2018



**(Dr. Sadhana Rout)**
Signature of Publisher

# ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ-ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ-ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಎಲ್‌ಪಿಜಿ ಪಂಚಾಯತ್



ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯು ಬಡ ಕುಟುಂಬಗಳಿಗೆ ಸೇರಿದ ಮಹಿಳೆಯರ ಸಬಲೀಕರಣಕ್ಕೆ ನೆರವಾಗುತ್ತಿದೆ ಎಂದು ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ ಅವರು ಹೇಳಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಫೆಬ್ರವರಿ 13 ರಂದು ನಡೆದ ಎಲ್‌ಪಿಜಿ ಪಂಚಾಯತ್ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಮಹಿಳೆಯರ ಆರೋಗ್ಯ, ಕಲ್ಯಾಣ ಮತ್ತು ಸಬಲೀಕರಣದ ಮೂಲಕ ಸಾಮಾಜಿಕ ನ್ಯಾಯ ಒದಗಿಸಲು ಶ್ರಮಿಸುತ್ತಿರುವ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಪ್ರಯತ್ನಗಳನ್ನು ಅವರು ಪ್ರಶಂಸಿಸಿದರು.

'ಮಾಲಿನ್ಯಕಾರಕ ಇಂಧನಗಳ ಬಳಕೆಯಿಂದ ಗ್ರಾಮೀಣ ಭಾಗದ ಬಡ ಕುಟುಂಬಗಳ ಮಹಿಳೆಯರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಈ ಯೋಜನೆಯು ಅವರನ್ನು ಇಂತಹ ತೊಂದರೆಗಳಿಂದ ಪಾರು ಮಾಡಿ ಆರೋಗ್ಯಕರ ಬದುಕು ನಡೆಸಲು ನೆರವಾಗುತ್ತಿದೆ' ಎಂದರು.

ಯೋಜನೆ ಜಾರಿಗೆ ಬಂದ 21 ತಿಂಗಳಲ್ಲಿ 3.4 ಕೋಟಿ ಮಹಿಳೆಯರು ಈ ಯೋಜನೆಗೆ ನೊಂದಾವಣೆಗೊಂಡಿರುವುದಕ್ಕೆ ಅವರು ಹರ್ಷ ವ್ಯಕ್ತಪಡಿಸಿದರು. 'ಸ್ವಚ್ಛ ಮತ್ತು ಆರೋಗ್ಯಕರ ಅಡುಗೆ ಮನೆ, ಆರ್ಥಿಕ ಮತ್ತು ಸಾಮಾಜಿಕವಾಗಿ ಮಹಿಳೆಯರ ಸೇರ್ಪಡೆ ಮತ್ತು ಸಮಯ ಉಳಿತಾಯವು ಈ ಯೋಜನೆಯ ಇತರ ಪ್ರಯೋಜನಗಳಾಗಿವೆ' ಎಂದರು.

'ಅಡುಗೆ ಅನಿಲ (ಎಲ್‌ಪಿಜಿ) ಸೌಲಭ್ಯದ ಸಂಪರ್ಕ ಕಲ್ಪಿಸುವುದಷ್ಟೇ ಅಲ್ಲ; ಅಡುಗೆಗೆ ಸಾಂಪ್ರದಾಯಿಕ ಇಂಧನಗಳನ್ನು ಬಳಸುವುದರಿಂದ ಮಹಿಳೆಯರು ಎದುರಿಸುವ ಆರೋಗ್ಯ ಸಮಸ್ಯೆಗಳನ್ನು ದೂರ ಮಾಡುವುದೂ ಇದರ ಪ್ರಮುಖ ಆಶಯವಾಗಿದೆ' ಎಂದು ಪೆಟ್ರೋಲಿಯಂ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್ ಹೇಳಿದರು.

ಯೋಜನೆಯ ಫಲಾನುಭವಿಗಳಾದ ಕರ್ನಾಟಕ ಸೇರಿದಂತೆ 27 ರಾಜ್ಯಗಳ ಬಡಕುಟುಂಬಗಳಿಗೆ ಸೇರಿದ 104 ಮಹಿಳೆಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಪ್ರತಿ ಎಲ್‌ಪಿಜಿ ಪಂಚಾಯತ್, ಸುತ್ತಮುತ್ತಲಿನ ಪ್ರದೇಶಕ್ಕೆ ಸೇರಿದ 100 ಗ್ರಾಹಕರನ್ನು ಒಳಗೊಂಡಿರುತ್ತದೆ. ಎಲ್‌ಪಿಜಿಯ ಸುರಕ್ಷಿತ ಬಳಕೆ, ಶುದ್ಧ ಇಂಧನ ಬಳಕೆ, ತನ್ಮೂಲಕ ಮಹಿಳಾ ಸಶಕ್ತೀಕರಣಕ್ಕೆ ಒತ್ತು ನೀಡುವುದು ಎಲ್‌ಪಿಜಿ ಪಂಚಾಯತ್‌ನ ಉದ್ದೇಶ. ❑

# ರೈಲು ಸೇವೆ ಲೋಕಾರ್ಪಣೆ




ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಬೆಂಗಳೂರು–ಮೈಸೂರು ನಡುವಿನ ವಿದ್ಯುದೀಕೃತ ಮಾರ್ಗವನ್ನು ಮೈಸೂರಿನಲ್ಲಿ, ಫೆಬ್ರವರಿ 19 ರಂದು ಲೋಕಾರ್ಪಣೆ ಮಾಡಿದರು. ಬೆಂಗಳೂರು–ಮೈಸೂರು ನಡುವಿನ 138 ಕಿ.ಮೀ. ದೂರದ ವಿದ್ಯುದೀಕೃತ ಮಾರ್ಗ ನಾಲ್ಕು ಜಿಲ್ಲೆಗಳ ಐದು ಸಂಸದೀಯ ಕ್ಷೇತ್ರಗಳಲ್ಲಿ ಹಾದು ಹೋಗುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮ ಪಾಲಿನ 218 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದೆ.

ವಿದ್ಯುದೀಕೃತ ಮಾರ್ಗದಿಂದಾಗಿ ವಾರ್ಷಿಕ 20 ಕೋಟಿ ರೂ. ಇಂಧನ ಉಳಿತಾಯವಾಗಲಿದೆ. ಡಿಸೈಲ್ ಬಳಕೆ ವಾರ್ಷಿಕ 1.2 ಕೋಟಿ ಲೀಟರ್‌ಗಳಷ್ಟು ಕಡಿಮೆಯಾಗಿ, ಪರಿಸರ ಸೇರುತ್ತಿದ್ದ ಇಂಗಾಲಾಮ್ಲ ಪ್ರಮಾಣ ಐದು ಮಿಲಿಯನ್ ಟನ್‌ಗಳಷ್ಟು ಕಡಿಮೆಯಾಗುತ್ತದೆ.

ವಿದ್ಯುದೀಕೃತ ಮಾರ್ಗ, ರೈಲು ನಿರ್ವಹಣೆಯ ಅನೇಕ ತಾಂತ್ರಿಕ ಅವಶ್ಯಕತೆಗಳನ್ನು ಸುಲಭಗೊಳಿಸಲಿದ್ದು, ಪ್ರಯಾಣಿಕರಿಗೆ ಪ್ರಯೋಜನವಾಗಲಿದೆ.



ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಮೈಸೂರು ಹಾಗೂ ಉದಯಪುರ ನಡುವಿನ 'ಪ್ಯಾಲೆಸ್ ಕ್ವೀನ್' ಹೊಸ ಹಮ್ ಸಫರ್ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಿ, ಪ್ರಯಾಣಿಕರಿಗೆ ಶುಭ ಕೋರಿದರು.

ಪ್ಯಾಲೇಸ್ ಕ್ವೀನ್ ಸಾಪ್ತಾಹಿಕ ರೈಲು ಕರ್ನಾಟಕದ 11 ಜಿಲ್ಲೆಗಳ ಮೂಲಕ ಹಾದು ಹೋಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ತಾನ ಹೀಗೆ ಪಶ್ಚಿಮ ಭಾರತದ ಐದು ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ.


ಮೈಸೂರಿನಿಂದ ಪ್ರತಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಹೊರಡುವ 3 ಟೈರ್ ಎಸಿ ಕೋಚ್ ಹೊಂದಿರುವ ಈ ರೈಲು 2250 ಕಿ.ಮೀ. ದೂರ ಸಂಚರಿಸಿ, ಆ ವಾರದ ಶನಿವಾರ ಬೆಳಗಿನ ಜಾವ 4.55ಕ್ಕೆ ಉದಯಪುರ ತಲುಪುತ್ತದೆ.

ಉದಯ್‌ಪುರದಿಂದ ಪ್ರತಿ ಸೋಮವಾರ ರಾತ್ರಿ 9 ಗಂಟೆಗೆ ಹೊರಡುವ ಉದಯಪುರ–ಮೈಸೂರು ರೈಲು, ಅದೇ ವಾರದ ಬುಧವಾರದಂದು ಮಧ್ಯಾಹ್ನ 4.25ಕ್ಕೆ ಮೈಸೂರು ತಲುಪುತ್ತದೆ.

ಈ ಕಾರ್ಯಕ್ರಮಗಳಲ್ಲಿ ಕರ್ನಾಟಕದ ರಾಜ್ಯಪಾಲ ಶ್ರೀ ವಾಜುಬಾಯಿ ವಾಲಾ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕೇಂದ್ರ ಸಚಿವರುಗಳಾದ ಶ್ರೀ. ಪಿಯೂಷ್ ಗೋಯಲ್, ಶ್ರೀ ಸದಾನಂದ ಗೌಡ, ಶ್ರೀ ಅನಂತ ಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಆದ್ಯತೆ

# ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ




ಈಶಾನ್ಯ ರಾಜ್ಯಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಕಾರ್ಯ ಪ್ರವೃತ್ತ ಪೂರ್ವ ನೀತಿ ರೂಪಿಸಲಾಗಿದೆ ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಹೇಳಿದ್ದಾರೆ.

ಫೆಬ್ರವರಿ 3–4 ರಂದು ಗುವಾಹತಿಯಲ್ಲಿ ವ್ಯವಸ್ಥೆಯಾಗಿದ್ದ, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು ಕಾರ್ಯಪ್ರವೃತ್ತ ಪೂರ್ವ ನೀತಿ, ಆಸಿಯಾನ್ ದೇಶಗಳೊಂದಿಗೆ ಸಂಪರ್ಕ, ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಬಲಪಡಿಸಿಕೊಳ್ಳಲು ಆದ್ಯತೆ ನೀಡುತ್ತದೆ.

ರಾಷ್ಟ್ರೀಯ ಬಿದಿರು – ಬೆತ್ತ ಮಿಷನ್ ಪುನಾರಚನೆ, ಈಶಾನ್ಯ ರಾಜ್ಯಗಳ ಆರ್ಥಿಕ ಸ್ಥಿತಿ ಉತ್ತಮ ಪಡಿಸುವಲ್ಲಿ ಕೊಡುಗೆ ನೀಡಲಿದೆ ಎಂದರು.

ಎರಡು ದಿನಗಳ ಈ ಸಮಾವೇಶದಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗೂ ಮೀರಿದ ಬಂಡವಾಳ ಹೂಡಿಕೆಯ ಸುಮಾರು 200 ತಿಳಿವಳಿಕೆ ಪತ್ರಗಳಿಗೆ ಸಹಿಹಾಕಲಾಗಿದೆ.

ದಕ್ಷಿಣ ಮತ್ತು ಈಶಾನ್ಯ ಏಶಿಯಾಗಳ ಅಭಿವೃದ್ಧಿ ಪರ ಆರ್ಥಿಕತೆಗಳಿಗೆ ತಯಾರಿಕೆ ಮತ್ತು ಸೇವೆ ಪೂರೈಸುವ ನಿಟ್ಟಿನಲ್ಲಿ ಇರುವ ಅವಕಾಶಗಳನ್ನು ಸಮಾವೇಶದಲ್ಲಿ ಸಾದರಪಡಿಸಲಾಗಿತ್ತು. ❑

# ಮಹಿಳಾ ಸಶಕ್ತೀಕರಣದ ದಿಸೆಯಲ್ಲಿ

* ಡಾ. ಶಹೀನ್ ರಾಝಿ



ಮುಂಗಡ ಪತ್ರದ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ವಿಶೇಷವಾಗಿ ಕೃಷಿ, ಆರೋಗ್ಯ, ಶಿಕ್ಷಣ, ಉದ್ಯೋಗ, ಮಹಿಳೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ಮತ್ತು ಮೂಲಭೂತ ಸೌಕರ್ಯ ಈ ವಲಯಗಳನ್ನು ಸಶಕ್ತಗೊಳಿಸಲು ನಮಗೆ ನಮ್ಮ ಧ್ಯೇಯಗಳು ಮಾರ್ಗದರ್ಶಿಗಳಾಗಿವೆ.

– ಅರುಣ್ ಜೇಟ್ಲಿ

ಸ್ವಾತಂತ್ರ್ಯ ನಂತರದಲ್ಲಿ ಮತ್ತು ವಿಶೇಷವಾಗಿ 1990 ರಿಂದಲೂ ಸರ್ಕಾರ ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ. ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆ – ಈ ಎರಡೂ ರೀತಿಯ ಕ್ಷೇತ್ರಗಳೂ ಮಹಿಳೆಯರಿಗೆ ಶಿಕ್ಷಣ ನೀಡುವಿಕೆ, ಉತ್ತಮ ಅರೋಗ್ಯ ರಕ್ಷಣೆ, ಜೀವನೋಪಾಯ ಒದಗಿಸುವುದು, ಮನೆ ಮತ್ತು ಸಮಾಜದಲ್ಲಿ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ನೀಡುವುದು ಮುಂತಾದವುಗಳನ್ನು ಗುರಿಯಾಗಿಸಿಕೊಂಡು ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಹೆಣ್ಣು ಮಕ್ಕಳು ಬದುಕುಳಿಯುವ ಮತ್ತು ತೃಪ್ತಿಕರವಾಗಿ ಜೀವನ ನಡೆಸುವ ಉತ್ತಮ ಅವಕಾಶಗಳನ್ನು ಸುಧಾರಿಸುವತ್ತ ವಿಶೇಷ ಗಮನ ಹರಿಸಲಾಗುತ್ತಿದೆ.

ನಮ್ಮ ಸಂವಿಧಾನಕ್ಕೆ 1993 ರಲ್ಲಿ ಮಾಡಿದ 73 ನೇ ತಿದ್ದುಪಡಿಯು ಈ ನಿಟ್ಟಿನಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ. ಈ ತಿದ್ದುಪಡಿಯು ಪಂಚಾಯತಿ ಪ್ರದೇಶಗಳಲ್ಲಿ ಇರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಅವರ ಜನಸಂಖ್ಯೆಯ ಅನುಪಾತದಲ್ಲಿ ಮೀಸಲಾತಿ ನೀಡಲು ಅವಕಾಶ ಮಾಡಿಕೊಟ್ಟಿತು. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಾಗಿಟ್ಟ ಪರಿಣಾಮ ಫಲಕೊಟ್ಟು ಮಹಿಳೆಯರನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಶಕ್ತರನ್ನಾಗಿ ಮಾಡಿತು. ಪ್ರಸ್ತುತ ಭಾರತದಲ್ಲಿ ಇರುವ ಸುಮಾರು 2,00,000 ಪಂಚಾಯತಿ ಪ್ರತಿನಿಧಿಗಳಲ್ಲಿ ಸುಮಾರು 75,000 ರಷ್ಟು ಮಹಿಳೆಯರಿದ್ದು, ಇದು ಪ್ರಪಂಚದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತ ಮಹಿಳೆಯರನ್ನು ಹೊಂದಿರುವ ಪಂಚಾಯತಿ ವ್ಯವಸ್ಥೆಯಾಗಿದೆ.

ಪಂಚಾಯಿತಿ ಮತ್ತು ಸಂಸತ್ತಿನಲ್ಲಿ ಮೀಸಲಾತಿ ಎಷ್ಟು ಮುಖ್ಯವೋ ಅದೇ ರೀತಿ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಒಳಗೊಳ್ಳುವಂತೆ ಮಾಡುವುದು ಸಹ ಅಷ್ಟೇ ಮುಖ್ಯ ಹಾಗೂ ಅದು ನಿಜವಾಗಿಯೂ ಒಂದು ಸವಾಲಾಗಿದೆ. ಜೊತೆಗೆ ಅವರು ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸುವಂತೆ ಅವರ ಸಾಮರ್ಥ್ಯವನ್ನು ವೃದ್ಧಿಗೊಳಿಸುವುದು ಸಹ ಒಂದು ಸವಾಲಾಗಿದೆ.

ಆದರೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಮಹಿಳೆಯರ ಕಾಲಿಗೆ ತೊಡಿಸಿರುವ ಶೃಂಖಲೆಗಳು ಬಿಗಿಯಾಗಿಯೇ ಇವೆ. ಇದು ಹುಟ್ಟಿನಿಂದಲೇ ಆರಂಭವಾಗಿದ್ದು, ಶ್ರೀಮಂತ ರಾಜ್ಯಗಳಾದ ಪಂಜಾಬ್, ದೆಹಲಿ ಮತ್ತು ಹರಿಯಾಣದಲ್ಲಿ ನಡೆಯುವ ಹೆಣ್ಣು ಭ್ರೂಣಹತ್ಯೆ ಮತ್ತು ಲಿಂಗಭೇದಭಾವ ಇದಕ್ಕೆ ಸಾಕ್ಷಿಯಾಗಿದೆ. ಗ್ರಾಮಸ್ಥರು ಮತ್ತು ನಗರದ ಸುಸಂಸ್ಕೃತರೂ ಸಹ ಇದರಿಂದ ಹೊರತಾಗಿಲ್ಲ. ಇಂತಹ ದುರುದ್ದೇಶಪೂರಿತ ಜೀವನದ ಆರಂಭದಿಂದಲೇ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಮತ್ತು ಸಾವುಗಳು, ಆರೋಗ್ಯ ಪಕ್ಷಪಾತ, ಕಡಿಮೆ ಸಾಕ್ಷರತೆ, ಕೆಲಸದ ಸ್ಥಳದಲ್ಲಿ ತಾರತಮ್ಯ ಇಂತಹ ನಿರುತ್ಸಾಹದಾಯಕವಾದ ಪಟ್ಟಿ ಅಂತ್ಯವಿಲ್ಲದಂತೆ ಬೆಳೆಯುತ್ತಿದೆ ಮತ್ತು ಇದರಿಂದ ತಪ್ಪಿಸಿಕೊಳ್ಳುವುದು ಸಹ ಕಷ್ಟವಾಗುತ್ತಿದೆ. ಆದ್ದರಿಂದ ಮಹಿಳೆಯರನ್ನು ಸಶಕ್ತಗೊಳಿಸಲು ಸರ್ಕಾರವು ವಿವಿಧ ಯೋಜನೆಗಳನ್ನು ಪ್ರಾರಂಭಿಸಿದೆ.

* ಅರ್ಥಶಾಸ್ತ್ರಜ್ಞರು. E-mail : shahin.razi@gmail.com

* ಪ್ರಧಾನಮಂತ್ರಿಗಳ ಉಜ್ವಲಾ ಯೋಜನೆ – ಈ ಯೋಜನೆಯ ಅಡಿಯಲ್ಲಿ ಬಡ ಮಹಿಳೆಯರಿಗೆ ನೀಡಿರುವ 50 ಮಿಲಿಯನ್ ಉಚಿತ ಎಲ್‌ಪಿಜಿ ಸಂಪರ್ಕದ ಗುರಿಯನ್ನು 80 ಮಿಲಿಯನ್‌ಗೆ ಹೆಚ್ಚಿಸಲಾಗಿದೆ.

ಬಡ ಕುಟುಂಬದ ಮಹಿಳಾ ಸದಸ್ಯರ ಹೆಸರಿನಲ್ಲಿ ಎಲ್‌ಪಿಜಿ ಸಂಪರ್ಕವನ್ನು ಒದಗಿಸುವ ವಿಶೇಷ ಮಿಷನ್‌ನ ಪ್ರಕಟಣೆ, ಬಜೆಟ್ ಮಹಿಳೆಯ ಪರವಾಗಿರುವುದನ್ನು ತೋರಿಸುತ್ತದೆ.

ಈ ಉಪಕ್ರಮದ ಮೂಲಕ ಸರ್ಕಾರವು ಎರಡು ನಿರ್ಣಾಯಕ ಸಮಸ್ಯೆಗಳನ್ನು ಪರಿಹರಿಸುವ ಗುರಿ ಹೊಂದಿದೆ. ಮೊದಲನೆಯದು – ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಯಾರು ಸಾಂಪ್ರದಾಯಿಕ ಇಂಧನವಾದ ಸೌದೆ, ಬೆರಣಿ ಅಥವಾ ಕೃಷಿ ತ್ಯಾಜ್ಯಗಳನ್ನು ಪ್ರತಿದಿನ ಅಡುಗೆ ಮಾಡಲು ಬಳಸುತ್ತಾರೊ ಅಂತಹ ಮಹಿಳೆಯರ ಆರೋಗ್ಯದ ಬಗ್ಗೆ ಕಾಳಜಿ ಮತ್ತು ಎರಡನೆಯದು – ಪ್ರಸ್ತುತ ಇರುವ ಮನೆಯ ಒಳಗಿನ ಮಾಲಿನ್ಯವನ್ನು ಕಡಿಮೆ ಮಾಡುವುದು.

ಈ ಕ್ರಮವು ಮಹಿಳೆಯರನ್ನು ಸಶಕ್ತಗೊಳಿಸಿ ಅವರ ಆರೋಗ್ಯವನ್ನು ಸಹ ಕಾಪಾಡುತ್ತದೆ. ಇದು ಮಂದಗತಿಯಲ್ಲಿ ನಡೆಯುವ ಅಡುಗೆಯ ಪ್ರಕ್ರಿಯೆಯಲ್ಲಿ ಸಮಯವನ್ನು ಕಡಿಮೆ ಮಾಡುತ್ತದೆ. ಜೊತೆಗೆ ಇದು ಗ್ರಾಮೀಣ ಯುವಕರಿಗೆ ಅಡುಗೆ ಅನಿಲದ ಸರಬರಾಜು ಮಾಡುವಲ್ಲಿ ಉದ್ಯೋಗವನ್ನು ಸಹ ದೊರಕಿಸಿಕೊಡುತ್ತದೆ.

ಭಾರತದಲ್ಲಿ ಪ್ರತಿವರ್ಷ ಸಂಭವಿಸುವ ಸುಮಾರು 5 ಲಕ್ಷ ಜನರ ಸಾವುಗಳಿಗೆ ಮನೆಯೊಳಗಿನ ವಾಯು ಮಾಲಿನ್ಯವು ಕಾರಣ ಎಂಬುದನ್ನು ವಿವಿಧ ಅಧ್ಯಯನಗಳು ತೋರಿಸಿಕೊಟ್ಟಿವೆ. ಇಲ್ಲಿಯವರೆಗೂ ಇದನ್ನು ರಾಜ್ಯದ ಇಂಧನ ಚಿಲ್ಲರೆ ವ್ಯಾಪಾರಿಗಳ ಸಾಮಾಜಿಕ ಜವಾಬ್ದಾರಿಗಳಡಿ (ಸಿಎಸ್‌ಆರ್) ಇದರ ಹಣದಿಂದ ಮಾಡಲಾಗುತ್ತಿತ್ತು. ಬಿಪಿಎಲ್ ಮನೆಗಳಿಗೆ ಹೊಸ ಸಂಪರ್ಕಗಳನ್ನು ಕಲ್ಪಿಸುವಾಗ ಇದರ ವ್ಯಾಪ್ತಿ ಕಡಿಮೆ ಇರುವ ರಾಜ್ಯಗಳಿಗೆ ಆದ್ಯತೆ ನೀಡಲಾಗುವುದು.

* ಪ್ರಧಾನಮಂತ್ರಿಗಳ 'ಸೌಭಾಗ್ಯ ಯೋಜನೆ' ಅಡಿಯಲ್ಲಿ ಎಲ್ಲಾ ಮನೆಗಳಿಗೂ



ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರವು 160 ಬಿಲಿಯನ್ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ.

* ಮಹಿಳೆಯರ ರಕ್ಷಣೆಗೆ 19.75 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಉದಾ: ನಿರ್ಭಯ ಫಂಡ್

* 2019 ಮಾರ್ಚ್ ವರೆಗೆ 75,000 ಕೋಟಿ ರೂಪಾಯಿಗಳನ್ನು ಮಹಿಳಾ ಸ್ವ ಸಹಾಯ ಸಂಘಗಳಿಗೆ ಸಾಲವಾಗಿ ನೀಡಲಾಗುವುದು.

* ಸಾವಯುವ ಕೃಷಿಗೆ ಮಹಿಳಾ ಸ್ವ ಸಹಾಯ ಸಂಘಗಳಿಗೆ ಸಾಲ ಕೊಡಲಾಗುವುದು ಮತ್ತು ಅವರ ಸಾಹಸೋದ್ಯಮಕ್ಕೆ ಪ್ರೋತ್ಸಾಹ ನೀಡಲಾಗುವುದು.

* ಮಹಿಳೆಯರು ತಮ್ಮ ಚಿನ್ನವನ್ನು ಬ್ಯಾಂಕ್‌ಗಳಲ್ಲಿ ಇಟ್ಟು 2.5%ರ ವರೆಗೆ ಬಡ್ಡಿಯನ್ನು ಪಡೆಯಲು ಅನುಕೂಲವಾಗುವ ಒಂದು ಹೊಸ ಚಿನ್ನ ನೀತಿ ತರಲು ಉದ್ದೇಶಿಸಲಾಗಿದೆ.

* ಮಹಿಳಾ ಉದ್ಯೋಗಿಗಳಿಗೆ ಅವರ ಇ.ಪಿ.ಎಫ್. ಕೊಡುಗೆಯನ್ನು 12%ನಿಂದ 8%ಗೆ ಇಳಿಸಲಾಗಿದೆ. ಆದರೆ ಉದ್ಯೋಗದಾತರ ಕೊಡುಗೆಯಲ್ಲಿ ಯಾವುದೇ ಬದಲಾವಣೆಗಳಿಲ್ಲ.

* ಮಹಿಳಾ ಉದ್ಯೋಗಿಗಳಿಗೆ ಪೂರ್ತಿ ವೇತನ ಸಹಿತ 6 ತಿಂಗಳ ಹೆರಿಗೆ ರಜೆಯನ್ನು ನೀಡಲಾಗುವುದು. ಬಾಡಿಗೆ ತಾಯ್ತನದಿಂದ ಮಗು ಪಡೆಯುವ ಯಾವುದೇ ಮಹಿಳಾ ಉದ್ಯೋಗಿಗಳಿಗೆ ಮಾತೃತ್ವ ರಜೆ ನೀಡಲು ಅನುಕೂಲವಾಗುವಂತೆ 2015ರ ದೆಹಲಿ ಹೈಕೋರ್ಟ್‌ನ ಆದೇಶವನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಸೂಚನೆ ನೀಡಿದೆ.

* ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ರೂ. 24 ಕೋಟಿ ಅನುದಾನ ನೀಡಲಾಗಿದೆ.

* ಸ್ವಚ್ಛ ಭಾರತ್ ಮಿಷನ್ ನೇತೃತ್ವದಲ್ಲಿ 20 ಮಿಲಿಯನ್ ಹೊಸ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಇದು ಮಹಿಳೆಯರ ಘನತೆ, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಕುಟುಂಬದ ಒಟ್ಟಾರೆ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ.

* 'ಬೇಟಿ ಬಚಾವೊ ಬೇಟಿ ಪಢಾವೊ' ಕಾರ್ಯಕ್ರಮಕ್ಕೆ 280 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. 'ಬೇಟಿ ಬಚಾವೊ ಬೇಟಿ ಪಢಾವೊ' ಎನ್ನುವುದು ಹೆಣ್ಣುಮಕ್ಕಳ ಕಲ್ಯಾಣ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಿ, ಸೇವೆಗಳ ದಕ್ಷತೆಯನ್ನು ಹೆಚ್ಚಿಸುವ ಗುರಿ ಹೊಂದಿರುವ ಭಾರತ ಸರ್ಕಾರದ ಮತ್ತೊಂದು ಸಾಮಾಜಿಕ ಕಳಕಳಿಯ ಕಾರ್ಯಕ್ರಮವಾಗಿದೆ. ಈ ಯೋಜನೆಯು 100 ಕೋಟಿ ರೂಪಾಯಿ ಪ್ರಾರಂಭಿಕ ನಿಧಿಯೊಂದಿಗೆ ಆರಂಭಗೊಂಡಿತು. ಅನಕ್ಷರತೆ, ಅಸಮಾನತೆ, ಲೈಂಗಿಕ ಕಿರುಕುಳ ಮತ್ತು ಸ್ತ್ರೀ ಶಿಶುಹತ್ಯೆ ಮುಂತಾದ ಸಮಸ್ಯೆಗಳನ್ನು ಸರಿಯಾಗಿ ಎದುರಿಸದಿದ್ದರೆ ಮಹಿಳಾ ಉನ್ನತೀಕರಣವು ಸಾಧ್ಯವಾಗುವುದಿಲ್ಲ.

'ಬೇಟಿ ಬಚಾವೊ ಬೇಟಿ ಪಢಾವೊ' ಕಾರ್ಯಕ್ರಮವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ಅರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವಾಲಯ ಇವೆಲ್ಲವುಗಳ ಸಹಕಾರಿ ಉಪಕ್ರಮ. ಇದು ಎಲ್ಲಾ ಭಾರತದ ರಾಜ್ಯಗಳೂ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ. ಈ ಪ್ರಮುಖ ಯೋಜನೆಯನ್ನು 2015 ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯು ಮೂರು ಪ್ರಾಥಮಿಕ ಉದ್ದೇಶಗಳನ್ನು ಹೊಂದಿದೆ:

* ಹೆಣ್ಣು ಶಿಶುಹತ್ಯೆಯನ್ನು ತಡೆಯುವುದು

* ಪ್ರತಿ ಹೆಣ್ಣುಮಗುವಿನ ಸುರಕ್ಷತೆ ಮತ್ತು ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಹೊಸ ಯೋಜನೆಗಳನ್ನು ರೂಪಿಸಿ ಸಂಘಟನಾತ್ಮಕವಾಗಿ ಕೆಲಸ ಮಾಡುವುದು

**(56ನೇ ಪುಟಕ್ಕೆ)**

# ಕಪ್ಪುಹಣಕ್ಕೆ ಬಜೆಟ್ ಕಡಿವಾಣ

* ರಮೇಶ್ ಯಾದವ್





**ಕಪ್ಪುಹಣದ ವಿರುದ್ಧದ ಸಮರವು ಸುಸ್ಥಿರವಾಗಿ ವರ್ಷಾಂತರಗಳವರೆಗೂ ನಡೆಯಬೇಕಿದೆ. ಸರ್ಕಾರವು ಇದೇ ಉದ್ದೇಶದಿಂದ 'ಸ್ವಚ್ಛ ಧನ ಅಭಿಯಾನ'ವನ್ನು ಮಾಡುತ್ತಿದ್ದು ನಾವೆಲ್ಲರೂ ಇದರೊಡನೆ ಕೈಜೋಡಿಸಿ 'ಪ್ರಾಮಾಣಿಕತೆಯ ಉತ್ಸವ'ವಾಗಿ ಮಾಡಬೇಕಿದೆ.**

ಕಪ್ಪುಹಣ ಮತ್ತು ಭ್ರಷ್ಟಾಚಾರದ ವಿರುದ್ಧ ಸಮರ ಸರ್ಕಾರದ ಪ್ರಮುಖ ಆದ್ಯತೆಗಳಲ್ಲೊಂದಾಗಿದೆ. ನ್ಯಾಯಮೂರ್ತಿ ಎಂ.ಬಿ ಷಾ ನೇತೃತ್ವದಲ್ಲಿ ರಚಿಸಲಾದ ವಿಶೇಷ ತನಿಖಾ ತಂಡದ ರಚನೆಯೊಂದಿಗೆ ಆರಂಭವಾದ ಪಯಣವು ಅವಿರತವಾಗಿ ಸಾಗುತ್ತಿದೆ.

ಕಪ್ಪುಹಣವು ಬೊಕ್ಕಸಕ್ಕೆ ನಷ್ಟ ಉಂಟುಮಾಡುವುದಲ್ಲದೆ ಸಮಾಜದ ನೈತಿಕತೆಯನ್ನು ಹಾಳುಮಾಡುತ್ತದೆ. ಕಪ್ಪುಹಣವು ಭ್ರಷ್ಟಾಚಾರವನ್ನು ಹುಟ್ಟುಹಾಕುತ್ತದೆ. ಭ್ರಷ್ಟಾಚಾರವು ಸಮಾಜಕ್ಕೆ ಕ್ಯಾನ್ಸರ್ ಇದ್ದಂತೆ. ಇದು ಪ್ರಜಾಪ್ರಭುತ್ವದ ಬಗೆಗಿನ ನಾಗರಿಕರ ನಂಬಿಕೆಯನ್ನು ನಾಶಮಾಡುತ್ತದೆ. ಸೃಜನಶೀಲತೆಯನ್ನು ಮತ್ತು ಹೊಸತನದ ಅನ್ವೇಷಣೆಯನ್ನು ಹಾಳುಗೆಡುವುತ್ತದೆ. ಆ ಮೂಲಕ ದೇಶದ ಪ್ರತಿಭೆಯನ್ನು ವ್ಯರ್ಥಗೊಳಿಸುತ್ತದೆ. ಬಜೆಟ್ 2018 ಕಪ್ಪುಹಣದ ನಿರ್ಮೂಲನೆ ಮತ್ತು ಪಾರದರ್ಶಕ ತೆರಿಗೆ ಆಡಳಿತವನ್ನು ಮತ್ತೊಂದು ಹಂತಕ್ಕೆ ಏರಿಸುವ ಕಾರ್ಯಸೂಚಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಸರ್ಕಾರವು ಪಾರದರ್ಶಕ ಮತ್ತು ನ್ಯಾಯಯುತ ವ್ಯವಸ್ಥೆಯ ಪ್ರಯತ್ನವು ಭಾರತವನ್ನು ಎತ್ತರಕ್ಕೆ ಒಯ್ದಿದೆ.

ವಿಶ್ವಬ್ಯಾಂಕು ಪ್ರಕಟಿಸಿರುವ ಸುಲಭ ವ್ಯವಹಾರ ಸೂಚ್ಯಂಕ ಪಟ್ಟಿಯಲ್ಲಿ ಭಾರತ ಮೇಲೇರಿದೆ. 100 ದೇಶಗಳ ಅಗ್ರ ಪಟ್ಟಿಯಲ್ಲಿ 30 ಸ್ಥಾನಗಳಷ್ಟು ಮುಂದಕ್ಕೆ ಜಿಗಿತ ಕಂಡಿದೆ. ಹತ್ತು ಉಪ ಸೂಚ್ಯಂಕಗಳಲ್ಲೂ ಇತ್ಯಾತ್ಮಕ ಬದಲಾವಣೆಯಾಗಿದೆ. ಅದರಲ್ಲೂ ಗರಿಷ್ಠ ಬದಲಾವಣೆ ಕಂಡುಬಂದಿರುವುದು 'ತೆರಿಗೆ ಪಾವತಿ'ಯಲ್ಲಿ. ಇದರಲ್ಲಿ ಭಾರತವು 172 ರಿಂದ 119ನೇ ಸ್ಥಾನಕ್ಕೆ ಜಿಗಿದಿದೆ.

**ವಹಿವಾಟು ನಡೆಸುವ ವಿಷಯಗಳ ಬಗೆಗೆ – ಭಾರತ**





(ಗುರಿಯ ನಡುವಿನ ಅಂತರ **The distance to frontier (DTF)** ಎನ್ನುವುದು ಪ್ರತಿ ಆರ್ಥಿಕತೆಯು ತಲುಪಬೇಕಾಗಿರುವ 'ಗುರಿ'ಗೂ ಆರ್ಥಿಕತೆಗೂ ನಡುವಿನ ಅಂತರವನ್ನು ಪ್ರತಿನಿಧಿಸುತ್ತದೆ. ಇದನ್ನು ಸೂಚ್ಯಂಕದಲ್ಲಿ ಹೇಳಲಾಗುವ ವಿಷಯಗಳಲ್ಲಿ ಆಯಾ ದೇಶಗಳ ಪ್ರದರ್ಶನವನ್ನು ಗಮನಿಸಿ ನಿರ್ಧರಿಸಲಾಗುತ್ತದೆ)

* ಪ್ರಧಾನ ನಿರ್ದೇಶಕರು, ಆದಾಯ ತೆರಿಗೆ (ವಿ), ದೆಹಲಿ. E-mail : rky1961@gmail.com

#### ಭರವಸೆಯ ಚಿಗುರುಗಳು

ಐತಿಹಾಸಿಕ ನಿರ್ಧಾರಗಳಾದ ನೋಟುರದ್ದತಿ, ಜಿಎಸ್‌ಟಿ ಅನುಷ್ಠಾನ ಇತ್ಯಾದಿಗಳ ಫಲಿತಾಂಶ ಮೊಳಕೆಯೊಡಲು ಆರಂಭಿಸಿವೆ. 2017–18ರ ಆರ್ಥಿಕ ಸಮೀಕ್ಷೆ ಪ್ರಕಾರ ಜಿಎಸ್‌ಟಿಯಡಿಯಲ್ಲಿ ಅಪರೋಕ್ಷ ತೆರಿಗೆಪಾವತಿದಾರರ ಸಂಖ್ಯೆ ಜಿಎಸ್‌ಟಿ ಅನುಷ್ಠಾನಕ್ಕೆ ಮೊದಲಿಗಿಂತ ಶೇ.50ರಷ್ಟು ಹೆಚ್ಚಿದೆ. ನೇರತೆರಿಗೆ ಪಾವತಿಸುವವರಲ್ಲಿ ಸುಮಾರು 1.8ಮಿಲಿಯನ್ ಮಂದಿ ಆದಾಯ ವಿವರ ಸಲ್ಲಿಸುತ್ತಿದ್ದಾರೆ.




ನೋಟುರದ್ದತಿಯ ಹಿಂದಿನ ವರ್ಷ 66.26 ಲಕ್ಷವಿದ್ದ ತೆರಿಗೆಪಾವತಿದಾರರ ಸಂಖ್ಯೆ ನಂತರ 85.51 ಲಕ್ಷದಷ್ಟು ಹೆಚ್ಚಳವಾಯಿತು. ಇಂದು ಪರಿಣಾಮಕಾರಿ ತೆರಿಗೆ ಪಾವತಿದಾರರ ಸಂಖ್ಯೆ 8.27 ಕೋಟಿಯಷ್ಟಾಗಿದೆ. ಆದಾಯತೆರಿಗೆ ಇಲಾಖೆಯು ಕೈಗೊಂಡ ಕ್ರಮಗಳಿಂದಾಗಿ ವೈಯುಕ್ತಿಕ ತೆರಿಗೆ ಸಂಗ್ರಹದಲ್ಲಿ ಸರಾಸರಿ ಹೆಚ್ಚಳವಾಗಿದೆ. ಕಳೆದ ಎರಡು ವರ್ಷಗಳಿಗಿಂತ ಇದು ಸರಾಸರಿ 1.1ರಷ್ಟು ಹೆಚ್ಚಳವಾಗಿದೆ. ಅದೇನೆ ಇರಲಿ ವೈಯಕ್ತಿಕ ತೆರಿಗೆಯ ಈ ಹೆಚ್ಚಳ 2016–17 ಮತ್ತು 2017–18ರ ಆರ್ಥಿಕ ವರ್ಷಗಳಲ್ಲಿ 1.95 ಮತ್ತು 2.11ರಷ್ಟಾಗಿದೆ.

ನೋಟುರದ್ದತಿಯ ನಂತರ ಕೇಂದ್ರ ನೇರ ತೆರಿಗೆ ಮಂಡಳಿಯು ಸ್ವಚ್ಛ ಧನ ಅಭಿಯಾನವನ್ನು ನಡೆಸಿತು. ಇದರಡಿಯಲ್ಲಿ ಅನುಮಾನಾಸ್ಪದ ವಹಿವಾಟು ನಡೆಸುತ್ತಿರುವವರನ್ನು ಸುಧಾರಿತ ದತ್ತಾಂಶವನ್ನು ಬಳಸಿ, ಮಾಹಿತಿ ಮೂಲಗಳ ವಿಚಾರಣೆ ಮೂಲಕ, ಅವುಗಳ ಅಂತರ ಸಂಬಂಧ, ತನಿಖೆಯ ಅನುಕೂಲಕ್ಕಾಗಿ ಹಣದ ವಹಿವಾಟಿನ ಮೇಲೆ ನಿಗಾ ಇಡಲಾಗಿದೆ. ಈ ಅಭಿಯಾನದ ಆಧಾರ ಸ್ತಂಭಗಳು 'ಪ್ರಾಮಾಣಿಕ ತೆರಿಗೆ ಪಾವತಿದಾರರು', 'ನಾಗರಿಕ ದೇಣಿಗೆ' ಮತ್ತು 'ಇತ್ಯಾತ್ಮಕ ಫಲಿತಾಂಶಗಳಿಗೆ ನಿರಂತರ ಪ್ರತಿಕ್ರಿಯೆ'. ತೆರಿಗೆದಾರರಿಗೆ ಹೆಚ್ಚು ತೊಂದರೆಯಾಗದಂತೆ ಠೇವಣಿಗಳನ್ನು ಪರಿಶೀಲಿಸಲು ಐಟಿಡಿ ಎನ್ನುವ ವ್ಯವಸ್ಥೆಯ ಮೂಲಕ ಈ–ಪರಿಶೀಲನೆ ನಡೆಸುತ್ತಿದೆ.

ಪತ್ರಿಕಾ ಪ್ರಕಟಣೆ ನೀಡಿರುವ ಪ್ರಕಾರ ನೋಟುರದ್ದತಿಯಾದ ನಂತರ ಕೈಗೊಂಡ ಕ್ರಮಗಳಲ್ಲಿ ಶೋಧನೆಯಲ್ಲಿ 158% (447ರಿಂದ 1175 ಗುಂಪುಗಳು), ಜಪ್ತಿಯಲ್ಲಿ 106% ಹೆಚ್ಚಳ (ರೂ.712 ಕೋಟಿಯಿಂದ ರೂ.1469 ಕೋಟಿ), ಸರ್ವೇಯಲ್ಲಿ 183% ಹೆಚ್ಚಳ (4422 ರಿಂದ 12520), ಸರ್ವೇಯಲ್ಲಿ ಕಂಡುಹಿಡಿದ ಬಹಿರಂಗಪಡಿಸದ ಆದಾಯದಲ್ಲಿ 44% ಹೆಚ್ಚಳ (ರೂ.9654 ಕೋಟಿಯಿಂದ ರೂ.13920 ಕೋಟಿ)ವಾಗಿದೆ.

#### ಬೇನಾಮಿ ವಹಿವಾಟು

ಬೇನಾಮಿ ಆಸ್ತಿ ವಹಿವಾಟು ನಿಷೇಧ ಕಾಯ್ದೆ 1988 ಅನ್ನು ಬೇನಾಮಿ ವಹಿವಾಟು (ನಿಷೇಧ) ತಿದ್ದುಪಡಿ ಕಾಯ್ದೆ 2016 ಎಂದು ಬದಲಿಸಲಾಯಿತು. ಇದು ಬೇನಾಮಿ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಅಗತ್ಯವಾದ ಅವಕಾಶಗಳನ್ನು ಕಲ್ಪಿಸುತ್ತದೆ. ಜೊತೆಗೆ 7 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ. ಈ ತಿದ್ದುಪಡಿಯೊಂದಿಗೆ ಕಾಯ್ದೆಯ ವಿವರಣೆಯು ಬೇನಾಮಿ ವಹಿವಾಟುಗಳ ಬಗ್ಗೆ ಇನ್ನಷ್ಟು ವಿಸ್ತರಣೆಗೊಂಡಿದೆ. ದೇಶದಾದ್ಯಂತ ತೆರಿಗೆ ಇಲಾಖೆ 24 ಬೇನಾಮಿ ನಿಷೇಧ ಘಟಕಗಳನ್ನು ಸ್ಥಾಪಿಸಿದೆ. ಇಲಾಖೆಯ ಪರಿಶ್ರಮದಿಂದಾಗಿ ರೂ.3,500 ಕೋಟಿಗೂ ಹೆಚ್ಚು ಆಸ್ತಿಗಳನ್ನು 900 ಕೇಸುಗಳಡಿಯಲ್ಲಿ ಜಪ್ತಿಮಾಡಲಾಗಿದೆ.

#### ವಿದೇಶಿ ಬ್ಯಾಂಕುಗಳಲ್ಲಿನ ಕಪ್ಪುಹಣದ ಅಪಾಯ ತಡೆಗಟ್ಟುವಿಕೆ

ಕಪ್ಪುಹಣ (ತೆರಿಗೆಗೆ ಒಳಗಾಗದ ಬಹಿರಂಗಪಡಿಸದ ಆದಾಯ ಮತ್ತು ಆಸ್ತಿ) ಮತ್ತು ತೆರಿಗೆ ಹೇರಿಕೆ ಕಾಯ್ದೆ 2015 ಇದರಡಿಯಲ್ಲಿ ದಂಡ ವಿಧಿಸಲು ಮತ್ತು 3–10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ. ಇದನ್ನು ವಿದೇಶಗಳಲ್ಲಿ ಅಡಗಿಸಿಟ್ಟ ಕಪ್ಪುಹಣದ ವಿರುದ್ಧ ಪರಿಣಾಮಕಾರಿಯಾಗಿ ಬಳಸಬಹುದು. ಅರ್ಥಶೋಧನಾ ನಿವಾರಣಾ ಕಾಯ್ದೆ (ಹಣ ನಗದೀಕರಣ ನಿವಾರಣಾ ಕಾಯ್ದೆ) 2002 ಇದರನ್ವಯ ತೆರಿಗೆ ತಪ್ಪಿಸುವಿಕೆಯು ಶಿಕ್ಷಾರ್ಹ ಅಪರಾಧವಾಗಿದೆ. ಪನಾಮ ಮತ್ತು ಪ್ಯಾರಡೈಸ್ ಪೇಪರ್ ಹಗರಣಗಳ ತನಿಖೆಗಾಗಿ ಸಿಬಿಡಿಟಿ ಅಧ್ಯಕ್ಷರ ನೇತೃತ್ವದಲ್ಲಿ ಮ್ಯಾಗ್ ಎನ್ನುವ ವಿಶೇಷ ತಂಡವನ್ನು ರಚಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿದೇಶಿ ಬ್ಯಾಂಕುಗಳಲ್ಲಿ ಭಾರತೀಯರು ಅಕ್ರಮವಾಗಿ ಇಟ್ಟಿದ್ದ ಸಾವಿರಾರು ಕೋಟಿ ರೂಪಾಯಿಗಳನ್ನು ಹಲವು ಅಡೆತಡೆಗಳ ನಡುವೆಯೂ ತೆರಿಗೆ ವ್ಯಾಪ್ತಿಯಡಿಯಲ್ಲಿ ತರಲಾಗಿದೆ. ಭಾರತವು ತೆರಿಗೆ ಮಾಹಿತಿ ವಿನಿಮಯಕ್ಕೆ ಸಂಬಂಧಿಸಿದಂತೆ 148 ದೇಶಗಳೊಡನೆ ಒಪ್ಪಂದವನ್ನು ಮಾಡಿಕೊಂಡಿದೆ. ಅಪರಾಧ ವಿಷಯಗಳಿಗೆ ಸಂಬಂಧಿಸಿದಂತೆ 39 ದೇಶಗಳೊಡನೆ ಪರಸ್ಪರ ಕಾನೂನು ಸಹಾಯ ಒಪ್ಪಂದವನ್ನು ಮಾಡಿಕೊಂಡಿದೆ. ಈ ಒಪ್ಪಂದಗಳ ಜಾಲವು ನಿರಂತರವಾಗಿ ವಿಸ್ತೃತಗೊಳ್ಳುತ್ತಿದೆ ಮತ್ತು ಬಲಗೊಳ್ಳುತ್ತಿದೆ.

#### ನಕಲಿ ಕಂಪನಿಗಳ (ಶೆಲ್ ಕಂಪನಿಗಳ) ವಿರುದ್ಧ ಕ್ರಮ

ನಕಲಿ ಕಂಪನಿಗಳ ದುರಪಯೋಗವನ್ನು ತಡೆಗಟ್ಟುವುದು ಆದಾಯತೆರಿಗೆ ಇಲಾಖೆಯ ಮುಖ್ಯಕಾಳಜಿಯಾಗಿದೆ.


ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ನಕಲಿ ಕಂಪನಿಗಳ ವಿರುದ್ಧ ತೀವ್ರ ಕ್ರಮಗಳನ್ನು ಕೈಗೊಂಡಿವೆ. 2017ರಲ್ಲಿ ಸುಮಾರು 2.24 ಲಕ್ಷ ಕಂಪನಿಗಳನ್ನು ಮುಚ್ಚಲಾಗಿದೆ. 1.20 ಲಕ್ಷ ಕಂಪನಿಗಳ ವಿರುದ್ಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಂತಹ ಕಂಪನಿಗಳ ಬ್ಯಾಂಕ್ ಖಾತೆಗಳು, ಸ್ಥಿರ ಹಾಗೂ ಚರಾಸ್ಥಿಗಳ ಮೇಲೆ ನಿರ್ಬಂಧ ಹೇರಲಾಗಿದೆ. ತನಿಖೆಯಿಂದ ತಿಳಿದುಬಂದಿದ್ದೇನೆಂದರೆ ಸುಮಾರು 3,000 ಮಂದಿ 20ಕ್ಕೂ ಕಂಪನಿಗಳ ನಿರ್ದೇಶಕರಾಗಿದ್ದಾರೆ. ಇದು ಕಾನೂನಿಗೆ ವಿರುದ್ಧವಾದದ್ದು. ಇಂತಹ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಇವರಲ್ಲಿ ಮೋಸಗಾರರು, ತಪ್ಪಿತಸ್ಥರು ಎಂದು ತಿಳಿದು ಬಂದವರ ಮೇಲೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದ್ದು ಇದು ಲೆಕ್ಕಪತ್ರದ ಮಾನದಂಡಗಳನ್ನು ನಿರ್ಧರಿಸಿದ್ದು ಕಂಪನಿಗಳ ಲೆಕ್ಕಪತ್ರಗಳು ಅದಕ್ಕನುಗುಣವಾಗಿ ಇದೆಯೇ ಎಂದು ಪರಿಶೀಲಿಸುತ್ತದೆ. ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮಗಳನ್ನು ಕೈಗೊಳ್ಳುತ್ತದೆ.

ಪಿಎಮ್ಎಲ್ಎಗೆ 2002ಕ್ಕೆ ತಿದ್ದುಪಡಿ ತರಲೆಂದು ಸರ್ಕಾರವು 2018ರ ಹಣಕಾಸು ಕಾಯ್ದೆಯಡಿ ಬಿಲ್ ಮಂಡಿಸಿದ್ದು ಕಾರ್ಪೊರೇಟ್ ಮೋಸಗಾರರನ್ನು ಕಂಪನಿಗಳ ಕಾಯ್ದೆ 447ನೇ ಸೆಕ್ಷನ್ ಅಡಿಯಲ್ಲಿ ಸೇರಿಸಲಾಗಿದೆ. ಇದರಿಂದ ನೋಂದಾಯಿತ ಕಂಪನಿಗಳವರು ಈ ತರಹದ ಕೇಸುಗಳನ್ನು ಕಾರ್ಯಮಂಡಳಿಗೆ ಕ್ರಮಕೈಗೊಳ್ಳಲು ಸಲ್ಲಿಸಬಹುದಾಗಿದೆ.

## ಇನ್‌ಸೈಟ್ ಯೋಜನೆ

ಸರ್ಕಾರವು ಆದಾಯ ವಂಚನೆ ಮತ್ತು ಹೆಚ್ಚಿನ ಆದಾಯಗಳ ಕುರಿತಾದ ಮಾಹಿತಿ ಸಂಗ್ರಹಣೆ ಮತ್ತು ವಹಿವಾಟು ವಿಶ್ಲೇಷಣೆಯನ್ನು ನಡೆಸಲು ಮಾಹಿತಿ ತಂತ್ರಜ್ಞಾನ ಆಧರಿತವಾದ ತೆರಿಗೆ ಆಡಳಿತವನ್ನು ಆರಂಭಿಸಿದೆ. ಸಿಬಿಡಿಟಿಯ ಇನ್‌ಸೈಟ್ ಯೋಜನೆಯು ದೇಶದ ಬಹುದೊಡ್ಡ ಮಾಹಿತಿ ಸಂಗ್ರಹಣೆ ಮತ್ತು ವಹಿವಾಟು ವಿಶ್ಲೇಷಣೆಯ ಯೋಜನೆ. ಇದು 2018–19ರ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ.




ಈ ಯೋಜನೆಯು ತೆರಿಗೆ ಸಲ್ಲಿಸಿದವರು, ಮರುಪಾವತಿ ವಂಚನೆಮಾಡುವವರು, ಸುಳ್ಳು ಮಾಹಿತಿ ನೀಡಿ ತೆರಿಗೆ ತಪ್ಪಿಸುವವರು ಮತ್ತು ಸ್ವಯಂಪ್ರೇರಿತವಾಗಿ ದೂರು ಸಲ್ಲಿಕೆ ಈ ವಿಷಯಗಳ ಕುರಿತು ಗಮನಕೇಂದ್ರೀಕರಿಸಿದೆ. ಈ ಯೋಜನೆಯು ಈಗಾಗಲೇ ಆದಾಯ ವಿವರ ಸಲ್ಲಿಸದ 60 ಲಕ್ಷ ಮಂದಿಯನ್ನು ಗುರುತಿಸಿದ್ದು ಇದರಿಂದಾಗಿ ರೂ.26,425 ಕೋಟಿ ತೆರಿಗೆ ಸಂಗ್ರಹವಾಗಿದೆ.

## ಬಜೆಟ್ 2018–19

ಈ ಬಾರಿಯ ಪ್ರಸ್ತಾವನೆಯು ನೇರ ತೆರಿಗೆಗಳು ಸರ್ಕಾರದ ಮುಖ್ಯ ಕಾರ್ಯಸೂಚಿಯಾದ ಸ್ವಚ್ಛ ಧನಕ್ಕೆ ಪೂರಕವಾಗಿ ಮಹತ್ವದ ಬದಲಾವಣೆಯನ್ನು ತರುವುದು ಎನ್ನುವುದಾಗಿತ್ತು. ಬಜೆಟ್ ಪ್ರಸ್ತಾವನೆಯು ಒಳ ಒಪ್ಪಂದಗಳು, 'ದೀರ್ಘಾವಧಿ ಬಂಡವಾಳ ಗಳಿಕೆ', ವ್ಯವಸ್ಥೆ ಹಾಗೂ ಕಂಪನಿಗಳು ಕಡ್ಡಾಯವಾಗಿ ಐಟಿಆರ್ ಸಲ್ಲಿಸಬೇಕೆಂಬುದನ್ನು ಒಳಗೊಂಡಿತ್ತು.

## ತೆರಿಗೆ ಅನುಸರಣೆ

ಬಜೆಟ್‌ನಲ್ಲಿ ತೆರಿಗೆ ಅನುಸರಣೆಯ ಮೇಲೆ ವಿಶೇಷ ಒತ್ತು ನೀಡಲಾಗಿದೆ. ಹಣಕಾಸು ಮಸೂದೆಯ ತಿದ್ದುಪಡಿಯು ಆದಾಯ ವಿವರ ಸಲ್ಲಿಸದ ಕಂಪನಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಿಯಮಗಳನ್ನು ಸೇರಿಸಿದೆ. ಪ್ರಸ್ತುತ ನಿಯಮಾನುಸಾರ ರೂ.3000ದವರೆಗೆ ತೆರಿಗೆ ಸಲ್ಲಿಸಬಹುದಾದ ವ್ಯಕ್ತಿಯ ಮೇಲೆ ಕಾನೂನು ಕ್ರಮಕೈಗೊಳ್ಳಬಹುದಾಗಿತ್ತು. ಈಗ ಕಂಪನಿಯು ತೆರಿಗೆ ಸಲ್ಲಿಸುತ್ತದೆಯೊ ಇಲ್ಲವೊ ಆದಾಯ ತೆರಿಗೆ ರಿಟರ್ನ್ ಸಲ್ಲಿಸಲೇಬೇಕು ಇಲ್ಲವಾದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಇದರಿಂದ ಕಂಪನಿಗಳ ತೆರಿಗೆ ಅನುಸರಣೆ ಹೆಚ್ಚಾಗುತ್ತದೆ. ಈ ಕ್ರಮದಿಂದ ನಾಯಿಕೊಡೆಗಳಂತೆ ತಲೆಎತ್ತುವ ನಕಲಿ ಕಂಪನಿಗಳನ್ನು ಪರಿಣಾಮಕಾರಿಯಾಗಿ ತಡೆಯಬಹುದಾಗಿದೆ.

## ದೀರ್ಘಾವಧಿ ಬಂಡವಾಳ ಗಳಿಕೆಯ (LTCG) ತರ್ಕಬದ್ಧಗೊಳಿಸುವಿಕೆ

ಆದಾಯ ತೆರಿಗೆ ಇಲಾಖೆಯ ಇತಿಹಾಸದಲ್ಲಿ ಎಲ್‌ಟಿಸಿಜಿಯ ಮೇಲೆ ತೆರಿಗೆ ವಿನಾಯ್ತಿ ನೀಡಿದ್ದು ಅತಿಹೆಚ್ಚು ವಿಶ್ಲೇಷಣೆಗೊಳಗಾಯಿತು. ಸಾವಿರಾರು ಕೋಟಿ ರೂಪಾಯಿ ಕಪ್ಪುಹಣದ ಮೇಲೆ ಆದಾಯ ತೆರಿಗೆ ತಪ್ಪಿಸಲು ಸ್ಟಾಕ್‌ನಲ್ಲಿ ಹೂಡಿ ಅದನ್ನು ಎಲ್‌ಟಿಸಿಜಿ ಎಂದು ಹೇಳಲಾಯಿತು. ಹಲವು ಮಂದಿ ಕೆಲವು ದಲ್ಲಾಳಿಗಳ ಮೂಲಕ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಈ ರೀತಿಯ ಸ್ಟಾಕ್ ಖರೀದಿ ಮತ್ತು ಮಾರಾಟಗಳಲ್ಲಿ ಹಣಹೂಡಿದ್ದಾರೆ.

ವಿತ್ತಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುವ ಪ್ರಕಾರ ಎಲ್‌ಟಿಸಿಜಿ ರಿಯಾಯ್ತಿಯು ಉತ್ಪಾದಕತೆ ವಿರುದ್ಧವಾಗಿದ್ದು ಹಣಕಾಸು ಸ್ವತ್ತುಗಳಲ್ಲಿ ಹೂಡಿಕೆಯನ್ನು ಹೆಚ್ಚಿಸಿದೆ. ಆರ್ಥಿಕ ವರ್ಷ 16–17ರಲ್ಲಿ ಬಂಡವಾಳ ಗಳಿಕೆಯ ರಿಯಾಯ್ತಿ ಅಡಿಯಲ್ಲಿ ಪಟ್ಟಿ ಮಾಡಲಾಗಿರುವ ಶೇರುಗಳು ಮತ್ತು ಘಟಕಗಳ ಮೊತ್ತ ರೂ.3,67,000 ಕೋಟಿ. ಇದು ಆದಾಯ ನಷ್ಟಕ್ಕೂ ಕಾರಣವಾಗಿದೆ. ಈ ವಿನಾಯ್ತಿಯಿಂದ ತೆರಿಗೆ ತಪ್ಪಿಸುವ ಅವಕಾಶಗಳಿಗೂ ಕಾರಣವಾಗಿದೆ ಎಂದು ನಿಂದನೆಗೊಳಗಾಗಿದೆ.

ಈ ಶೇರುಗಳನ್ನು ಸಾಮಾನ್ಯವಾಗಿ ಖಾಸಗಿಯಾಗಿ ಹಂಚಲಾಗುತ್ತಿತ್ತು. ಅಕ್ರಮ ಎಲ್‌ಟಿಸಿಜಿಯನ್ನು ತಡೆಗಟ್ಟುವ ಸಲುವಾಗಿ 2017–18ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ಭದ್ರತಾ ವಹಿವಾಟು ತೆರಿಗೆ ಪಾವತಿಸಿದವರಿಗೆ ಮಾತ್ರ ತೆರಿಗೆ ವಿನಾಯ್ತಿ ಘೋಷಿಸಿತು. ಎಲ್‌ಟಿಸಿಜಿ ತೆರಿಗೆ ಇನ್ನಷ್ಟು ತರ್ಕಬದ್ಧಗೊಳಿಸಲು ವಿತ್ತ ಸಚಿವರು ರೂ.1 ಲಕ್ಷಕ್ಕೂ ಮೇಲ್ಪಟ್ಟ ಗಳಿಕೆಗೆ 10% ತೆರಿಗೆ ಎಂದು ಹೇಳಿದರು. ಜನವರಿ 31,2018ರವರೆಗಿನ ಗಳಿಕೆಗೆ ವಿನಾಯ್ತಿ ಇದೆ.

## ಚಹರೆ ರಹಿತ ಇ–ಮೌಲ್ಯಮಾಪನ

ಪಾರದರ್ಶಕ ಹಾಗೂ ಜವಾಬ್ದಾರಿಯುತ ಬದಲಾವಣೆಯ ಆಡಳಿತ ವ್ಯವಸ್ಥೆಯಲ್ಲಿ ತರಲು ಸೂಕ್ತ ವಿವೇಚನೆ ಅಗತ್ಯ. ಇ–ಆಡಳಿತವು ಹೆಚ್ಚು ಪರಿಣಾಮಕಾರಿ ದಕ್ಷ ವ್ಯವಸ್ಥೆಯಾಗಿದ್ದು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತದೆ. ಆದಾಯ ತೆರಿಗೆ ಇಲಾಖೆಯು ತನ್ನ ಸೇವೆಗಳಲ್ಲಿ

ಇ–ಆಡಳಿತವನ್ನು ಅಳವಡಿಸಿಕೊಂಡ ಮೊದಲ ಇಲಾಖೆಯಾಗಿದೆ. ಇ–ಟಿಡಿಎಸ್, ಇ–ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ, ಬ್ಯಾಂಕರ್ ಮರುಪಾವತಿ, ಇ–ತೆರಿಗೆ ಸಲ್ಲಿಕೆ, ಕೇಂದ್ರೀಕೃತ ಪರಿಶೀಲನಾ ಕೇಂದ್ರ, ಇ–ಮೌಲ್ಯಮಾಪನ ಇವುಗಳ ಅಳವಡಿಕೆಯ ಮೂಲಕ ಇಲಾಖೆಯ ತೆರಿಗೆ ಆಡಳಿತದ ವೆಚ್ಚ ಕಡಿಮೆಯಾಗಿರುವುದಲ್ಲದೆ ಬಳಕೆದಾರ ಸ್ನೇಹಿ, ಪಾರದರ್ಶಕ ಹಾಗೂ ಪ್ರಾಮಾಣಿಕ ತೆರಿಗೆ ಆಡಳಿತವನ್ನು ನೀಡಲು ನೆರವಾಗಿದೆ.

ವಿತ್ತಸಚಿವರು ಆರ್ಥಿಕ ಸಚಿವಾಲಯದ ಸಲಹಾ ಸಮಿತಿಯ ಸಭೆಯಲ್ಲಿ ಕಳೆದ ವರ್ಷ 97% ಆದಾಯ ತೆರಿಗೆ ರಿಟರ್ನ್‌ಗಳನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ಸಲ್ಲಿಸಲಾಗಿದೆ. ಇದರಲ್ಲಿ 92% ರಿಟರ್ನ್‌ಗಳನ್ನು 60 ದಿನಗಳೊಳಗೆ ಪರಿಶೀಲಿಸಲಾಗಿದೆ ಮತ್ತು 90% ಮರುಪಾವತಿಯನ್ನು 60 ದಿನಗಳೊಳಗಾಗಿ ಮಾಡಲಾಗಿದೆ. ಇದು ಆದಾಯ ತೆರಿಗೆ ಇಲಾಖೆಯು ಈ–ಸಲಕರಣೆಗಳ ಅಳವಡಿಕೆಯ ಯಶಸ್ಸನ್ನು ತೋರಿಸುತ್ತದೆ.

### ಟ್ರಸ್ಟ್/ಸಂಸ್ಥೆಗಳ ದುರುಪಯೋಗ ನಿಗ್ರಹ

ಭಾರತದ ಸಿಎಜಿ 2012–13 ರಿಂದ 2015–16ರವರೆಗಿನ ಖಾಸಗಿ ಆರೋಗ್ಯ ವಲಯದ ಆಡಿಟ್ ಮೌಲ್ಯಮಾಪನ ನಡೆಸಿತು. ಜುಲೈ 2016 ರಿಂದ ನವಂಬರ್ 2016ರವರೆಗೆ ಟ್ರಸ್ಟ್‌ಗಳು ತೆರಿಗೆ ವಿನಾಯ್ತಿಯನ್ನು ದುರುಪಯೋಗ ಪಡಿಸಿಕೊಂಡಿರುವುದನ್ನು ಕಂಡುಹಿಡಿಯಿತು. ಪ್ರಸ್ತುತ ಚಾಲ್ತಿಯಲ್ಲಿರುವ ತೆರಿಗೆ ವ್ಯವಸ್ಥೆಯ ಅನ್ವಯ ಟ್ರಸ್ಟ್‌ಗಳು ಹಾಗೂ ಇತರ ಸೇವಾಸಂಸ್ಥೆಗಳ ಆದಾಯವು ಅವು ಘೋಷಿಸಿರುವ ಉದ್ದೇಶಕ್ಕೆ ಬಳಕೆಯಾಗುತ್ತಿದ್ದಲ್ಲಿ ಅವುಗಳಿಗೆ ತೆರಿಗೆ ವಿನಾಯ್ತಿ ಇದೆ.



ಕಳೆದ ಬಜೆಟ್ ಸೇವಾಸಂಸ್ಥೆಗಳು ನಗದು ರೂಪದಲ್ಲಿ ಪಡೆಯಬಹುದಾದ ದೇಣಿಗೆಯನ್ನು ರೂ.10,000 ದಿಂದ ರೂ.2,000ಕ್ಕೆ ಇಳಿಸಿತು. ಆದರೆ ಈ ಟ್ರಸ್ಟ್‌ಗಳು ಮಾಡುವ ನಗದುವೆಚ್ಚದ ಮೇಲೆ ಯಾವುದೇ ರೀತಿಯ ಕಡಿವಾಣವಿಲ್ಲ. ಈ ನಿಯಮವನ್ನು ಟ್ರಸ್ಟ್‌ಗಳವರು ದುರುಪಯೋಗಪಡಿಸಿಕೊಂಡರು. ನಗದು ವೆಚ್ಚದ ಮೇಲೆ ಆಡಿಟ್ ವಿಚಾರಣೆ ನಡೆಸುವುದು ಕಷ್ಟ. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ ಈ ಸಾರಿಯ ಬಜೆಟ್‌ನಲ್ಲಿ ಹತ್ತುಸಾವಿರಕ್ಕೂ ಮೇಲ್ಪಟ್ಟ ನಗದು ಪಾವತಿಗಳನ್ನು ಮಾಡುವಂತಿಲ್ಲ ಮತ್ತು ಆ ರೀತಿ ಹೆಚ್ಚುವರಿ ಪಾವತಿ ಮಾಡಿದ್ದಕ್ಕೆ ತೆರಿಗೆ ವಿಧಿಸಲಾಗುವುದು ಎಂದು ಹೇಳಲಾಯಿತು. ಅದೇ ರೀತಿ ಟಿಡಿಎಸ್ ಕಡಿತಗೊಳಿಸದ ನಿಯಮದಲ್ಲಿ ಕೂಡ ಬದಲಾವಣೆ ತಂದಿದ್ದು 30% ಮೊತ್ತಕ್ಕೆ ತೆರಿಗೆ ವಿಧಿಸಲಾಗುವುದು ಎಂದು ಹೇಳಿದೆ.

ಹಲವು ಸೇವಾಸಂಘಸಂಸ್ಥೆಗಳು ಪ್ಯಾನ್ ಸಂಖ್ಯೆಯನ್ನು ಹೊಂದಿಲ್ಲ. ಆ ಕಛೇರಿಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಕೂಡ ಪ್ಯಾನ್ ಸಂಖ್ಯೆಯನ್ನು ಹೊಂದಿಲ್ಲ. ಹೀಗಾಗಿ ಅವರ ಆದಾಯ ಮತ್ತು ವೆಚ್ಚಗಳು ಆದಾಯ ತೆರಿಗೆ ಇಲಾಖೆಯಿಂದ ಹೊರಗುಳಿಯುತ್ತದೆ. ಇದನ್ನು ಇಲಾಖೆಯ ಕೆಳಗೆ ತರುವಸಲುವಾಗಿ ಪ್ರತಿ ಘಟಕದ ಹಣಕಾಸು ವಹಿವಾಟು ರೂ.2,50 ಲಕ್ಷಕ್ಕೆ ಮೇಲ್ಪಟ್ಟಿದ್ದಲ್ಲಿ ಅವುಗಳಿಗೆ ಪ್ಯಾನ್ ಸಂಖ್ಯೆಯನ್ನು ಹೊಂದುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರೊಂದಿಗೆ ಇಂತಹ ಸಂಸ್ಥೆಗಳ ನಿರ್ದೇಶಕರು, ಪಾಲುದಾರರು, ಕಛೇರಿ ಸಿಬ್ಬಂದಿ ವರ್ಗದವರು ಅಥವ ಇವರ ಪರವಾಗಿ ಕೆಲಸ ಮಾಡುವ ಯಾರೇ ವ್ಯಕ್ತಿಯಾದರು ಸಹ ಅವರೆಲ್ಲರೂ ಪ್ಯಾನ್ ಸಂಖ್ಯೆಯನ್ನು ಹೊಂದಿರಬೇಕು.

### ಕ್ರಮಿಸಬೇಕಾದ ಹಾದಿ ಇನ್ನೂ ದೂರವಿದೆ

ಆದಾಯ ತೆರಿಗೆ ಕಾಯ್ದೆ 1961ನ್ನು ಪರಾಮರ್ಶಿಸಲು ಪ್ರಧಾನಮಂತ್ರಿಗಳ ಸೂಚನೆಯ ಮೇರೆಗೆ ಕಳೆದ ವರ್ಷ ನವಂಬರ್‌ನಲ್ಲಿ ಆರು ಸದಸ್ಯರ ಕಾರ್ಯಪಡೆ ಸಿಬಿಡಿಟಿ ಅನ್ನು ನಿಯೋಜಿಸಲಾಗಿದೆ. ಈ ತಂಡವು ದೇಶದ ಆರ್ಥಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಸ ನೇರ ತೆರಿಗೆ ಕಾನೂನನ್ನು ಜಾರಿಗೆ ತರಲು ವಿವಿಧ ದೇಶಗಳಲ್ಲಿನ ತೆರಿಗೆ ವ್ಯವಸ್ಥೆಗಳನ್ನು ಮತ್ತು ಅಂತಾರಾಷ್ಟ್ರೀಯವಾಗಿ ಬಳಕೆಯಲ್ಲಿರುವ ವಿಧಾನಗಳನ್ನು ಅಭ್ಯಸಿಸಿ ಆರು ತಿಂಗಳೊಳಗಾಗಿ ತಮ್ಮ ವರದಿಯನ್ನು ಸಲ್ಲಿಸಬೇಕಾಗಿದೆ.

ಕಪ್ಪುಹಣದ ವಿರುದ್ಧದ ಸಮರವು ಸುಸ್ಥಿರವಾಗಿ ವರ್ಷಾಂತರಗಳವರೆಗೂ ನಡೆಯಬೇಕಿದೆ. ಸರ್ಕಾರವು ಇದೇ ಉದ್ದೇಶದಿಂದ 'ಸ್ವಚ್ಛ ಧನ ಅಭಿಯಾನ'ವನ್ನು ಮಾಡುತ್ತಿದ್ದು ನಾವೆಲ್ಲರೂ ಇದರೊಡನೆ ಕೈಜೋಡಿಸಿ 'ಪ್ರಾಮಾಣಿಕತೆಯ ಉತ್ಸವ'ವಾಗಿ ಮಾಡಬೇಕಿದೆ. ಮಾಹಿತಿ ತಂತ್ರಜ್ಞಾನದ ಸಮರ್ಥ ಬಳಕೆ ಹಾಗೂ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಟ್ಟಲ್ಲಿ ತೆರಿಗೆ ಇಲಾಖೆಯು ಕಪ್ಪುಹಣದ ವಿರುದ್ಧದ ಸಮರದಲ್ಲಿ ಸುಸ್ಥಿರ ಯಶಸ್ಸನ್ನು ಕಾಣಬಹುದಾಗಿದೆ. ❑

## ಸುದ್ದಿ – ತುಣುಕು

ಮಹಿಳೆಯರ ಸುರಕ್ಷತೆಗಾಗಿ ದೇಶದ 8 ಪ್ರಮುಖ ನಗರಗಳಲ್ಲಿ ನಿರ್ಭಯ ನಿಧಿಯಡಿ ರೂಪಿಸಲಾದ 2 ಸಾವಿರದ 900 ಕೋಟಿ ರೂಪಾಯಿ ಮೌಲ್ಯದ ಯೋಜನೆಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಅನುಮೋದನೆ ನೀಡಿದೆ. ಆ ನಗರಗಳೆಂದರೆ ದೆಹಲಿ, ಮುಂಬೈ, ಕೊಲ್ಕೊತ್ತ, ಚೆನ್ನೈ, ಬೆಂಗಳೂರು, ಹೈದ್ರಾಬಾದ್, ಅಹಮದಾಬಾದ್ ಮತ್ತು ಲಖನೌ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

# ಕೇಂದ್ರ ಬಜೆಟ್‌ನಲ್ಲಿ ಹಿರಿಯರಿಗೆಷ್ಟು ಲಾಭ?

* ಸುಮತಿ ಕುಲಕರ್ಣಿ



**ಬಹುತೇಕ ಹಿರಿಯ ನಾಗರಿಕರಿಗೆ "ಆಯುಷ್ಮಾನ್ ಯೋಜನೆ" ಹೆಚ್ಚು ಉಪಯುಕ್ತವಾಗಿ ಪ್ರಸ್ತುತವಾಗುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಎಲ್ಲರಿಗೆ ಮತ್ತು ಹಿರಿಯರಿಗೇ ಎಂದು ನಿರ್ದಿಷ್ಟವಾಗಿರದ ಈ ಸಾಮಾನ್ಯ ಯೋಜನೆಯು ಅರ್ಥವತ್ತಾಗಿ ಜಾರಿಯಾದರೆ ಹಿರಿಯ ನಾಗರಿಕರಿಗೆ ಅನುಕೂಲವಾಗುತ್ತದೆ.**

ತನ್ನ ಸೀಮಿತ ಸಂಪನ್ಮೂಲದಲ್ಲಿ ರಾಜಕೀಯ ಮತ್ತು ಇತರೆ ಕ್ಷೇತ್ರಗಳ ಒತ್ತಡಗಳ ನಡುವೆ ವಾಸ್ತವ ನೆಲೆಗಟ್ಟಿನ ಆಧಾರದಲ್ಲಿ ನಿರ್ಲಕ್ಷಕ್ಕೊಳಗಾದವರ ಜೀವನ ಮಟ್ಟವನ್ನು ಸುಧಾರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ನಡುವೆ ಸಮತೋಲನ ಸಾಧಿಸುವುದು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಎಷ್ಟು ಕಷ್ಟ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈ ನಿಟ್ಟಿನಲ್ಲಿ ಬಂಡವಾಳ ಹೂಡಿಕೆ ಮತ್ತು ಹಣದುಬ್ಬರದ ಒತ್ತಡಗಳ ಮೇಲೆ ನೇರ ತೆರಿಗೆಯು ಬೀರುವ ಪ್ರಭಾವದಿಂದ ಹೆಚ್ಚು ವೆಚ್ಚ ಮಾಡುವುದನ್ನು ತಪ್ಪಿಸಬೇಕಾದ ಸವಾಲುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮಕ್ಕಳು ಮತ್ತು ಯುವ ಜನತೆಯು ದೇಶದ ಭವಿಷ್ಯವನ್ನು ರೂಪಿಸುವವರಾಗಿರುವುದರಿಂದ ಮತ್ತು ದೇಶ ಈ ವರ್ಗಗಳ ಜನರನ್ನು ಅಪಾರವಾಗಿ ಹೊಂದಿದ್ದು ಅದರ ಸದುಪಯೋಗ ಪಡೆದುಕೊಳ್ಳುವ ದೃಷ್ಟಿಯಿಂದಲೂ ಈ ವರ್ಗಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಇದರ ಜೊತೆಗೆ ಯಾವುದೇ ಯೋಜನೆಯನ್ನು ರೂಪಿಸುವಾಗ ದೇಶದ ಜನಸಂಖ್ಯೆಯ ಶೇಕಡಾ 9 ರಷ್ಟಿರುವ ಹಾಗೂ ದಿನೇ ದಿನೇ ಈ ಸಂಖ್ಯೆ ಹೆಚ್ಚಾಗುತ್ತಿರುವ ಹಿರಿಯ ನಾಗರಿಕರು, 60 ವರ್ಷ ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನ ನಾಗರಿಕರ ಕಡೆಗೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಈ ವಯಸ್ಸಿನ ಜನಸಂಖ್ಯೆ ದೇಶದಲ್ಲಿ 2001ರಲ್ಲಿ 706 ಲಕ್ಷ ಇದ್ದದ್ದು 2011 ರಲ್ಲಿ 1040 ಲಕ್ಷಕ್ಕೆ ಹೆಚ್ಚಿದ್ದು, 2026 ರ ವೇಳೆಗೆ 1730 ಲಕ್ಷ ದಾಟುವ ಸಾಧ್ಯತೆಗಳಿವೆ. ಸಾಕಷ್ಟು ಸಂಖ್ಯೆಯಲ್ಲಿರುವ ಈ ವಯೋಮಾನದ ಜನಸಂಖ್ಯೆಯಲ್ಲಿ ವಿವಿಧ ಆರ್ಥಿಕ/ಸಾಮಾಜಿಕ ವರ್ಗಗಳಿಗೆ ಸೇರಿದವರಿದ್ದು, ಅವರಲ್ಲಿ ಶೇಕಡಾ 45 ರಷ್ಟು ಬಿಪಿಎಸ್/ಅಂತ್ಯೋದಯ ವರ್ಗಕ್ಕೆ ಸೇರಿದ್ದು, ಶೇಕಡಾ 23 ರಷ್ಟು ಜನರು ಯಾವುದೇ ಆಸ್ತಿ ಹೊಂದಿರುವುದಿಲ್ಲ, ಶೇಕಡಾ 43 ರಷ್ಟು ಜನರಿಗೆ ಯಾವುದೇ ಆದಾಯವಿಲ್ಲ, ಶೇಕಡಾ 50 ರಷ್ಟು ಜನರು ಸಂಪೂರ್ಣವಾಗಿ ಇನ್ನೊಬ್ಬರ ಮೇಲೆ ಅವಲಂಬಿಸಿದ್ದಾರೆ, ಶೇಕಡಾ 27 ರಷ್ಟಿರುವ ಎಸ್‌ಸಿ/ಎಸ್‌ಟಿರಲ್ಲಿ ಮೂರನೇ ಒಂದು ಭಾಗ ಮಾಸಿಕ 1000 ರೂಪಾಯಿಗಿಂತ ಕಡಿಮೆ ಖರ್ಚು ಮಾಡುತ್ತಾರೆ. ಈ ಎಲ್ಲ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಈ ವರ್ಗಗಳ ನಾಗರಿಕರಿಗೆ 2018-19 ನೇ ಸಾಲಿನ ಕೇಂದ್ರ ಸರ್ಕಾರದ ಬಜೆಟ್‌ನಿಂದ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

### ಆದಾಯ ತೆರಿಗೆ ಕಟ್ಟುತ್ತಿರುವ ಹಿರಿಯ ನಾಗರಿಕರಿಗೆ ದೊರೆತಿರುವ ಅನುಕೂಲಗಳು

ಹಿರಿಯ ನಾಗರಿಕರಿಗೆ ಆದಾಯ ತೆರಿಗೆ ಹಂತಗಳಲ್ಲಿ ಯಾವುದೇ ಬದಲಾವಣೆ ಆಗದಿದ್ದರೂ, ಮುಂದೆ ನಮೂದಿಸಿರುವ ಕೆಲವು ಅವಕಾಶಗಳಿಂದ ಅನುಕೂಲವಾಗುತ್ತದೆ.

1) ಬಡ್ಡಿಯಿಂದ ಬರುವ ಆದಾಯಕ್ಕೆ ತೆರಿಗೆಯಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ರೂಪಾಯಿ 10,000 ದಿಂದ 50,000

* ಜನಸಂಖ್ಯಾ ಗುಂಪು ಅಧ್ಯಯನ ತಜ್ಞರು. E-mail : sumati2610@gmail.com

ದವರೆಗೆ ಸೆಕ್ಷನ್ 80 ಟಿಟಿಎ ಅಡಿಯಲ್ಲಿ ಹೆಚ್ಚಿಸಲಾಗಿದೆ. ಈ ರಿಯಾಯಿತಿ ಕೇವಲ, ಬ್ಯಾಂಕ್ ಠೇವಣಿಯ ಮೇಲಿನ, ಅಂಚೆ ಕಛೇರಿ ಯೋಜನೆಗಳ ಜೊತೆಗೆ ಈಗ ನಿಶ್ಚಿತ ಠೇವಣಿ ಮತ್ತು ಪುನರಾವರ್ತಿತ ಠೇವಣಿಗಳಿಂದ ಬರುವ ಬಡ್ಡಿಗೂ ಅನ್ವಯಿಸುತ್ತದೆ. ಆದ್ದರಿಂದ ಹಿರಿಯ ನಾಗರಿಕರು ಗಳಿಸುವ ಬಡ್ಡಿಯನ್ನು, ಇನ್ನು ಮುಂದೆ ಬಡ್ಡಿ ಮೂಲದಲ್ಲಿ ಆದಾಯ ತೆರಿಗೆಗೆ ಕಡಿತ ಮಾಡುವಂತಿಲ್ಲ. ಬಿಕೆಪಿಎಐ ಸಮೀಕ್ಷೆ ಪ್ರಕಾರ ಹಿರಿಯರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ 21 ರಷ್ಟು ಮಂದಿ ನಗರ ಪ್ರದೇಶದಲ್ಲಿ ಶೇಕಡಾ 28 ರಷ್ಟು ಮಂದಿ ಬ್ಯಾಂಕ್‌ಗಳಲ್ಲಿ ಮತ್ತು ಅಂಚೆ ಕಛೇರಿಯಲ್ಲಿ ಹಣವನ್ನು ಠೇವಣಿ ಇಡುತ್ತಾರೆ. ಬಹಳ ಕಡಿಮೆ ಜನ ಷೇರುಗಳು, ಬಾಂಡ್‌ಗಳು ಮತ್ತಿತರ ರೂಪದಲ್ಲಿ ಹೂಡಿಕೆ ಮಾಡುತ್ತಾರೆ.

2) ಸೆಕ್ಷನ್ 80 ಡಿ. ರ ಅಡಿಯಲ್ಲಿ ಆರೋಗ್ಯ ವಿಮೆ ಪ್ರೀಮಿಯಂ ಕಡಿತದ ಮಿತಿಯನ್ನು ರೂಪಾಯಿ 30,000 ದಿಂದ 50,000 ಕ್ಕೆ ಹೆಚ್ಚಿಸಲಾಗಿದೆ.

3) ವೈದ್ಯಕೀಯ ವೆಚ್ಚದಲ್ಲಿ ತೀವ್ರತರವಾದ ಕಾಯಿಲೆಗಳಿಗೆ ಖರ್ಚು ಮಾಡುವ ಹಣದ ಕಡಿತದ ಕನಿಷ್ಠ ಮಿತಿಯನ್ನು ಹಿರಿಯ ನಾಗರಿಕರಿಗೆ ರೂಪಾಯಿ 60,000 ದಿಂದ ಮತ್ತು 80 ಕ್ಕೂ ಹೆಚ್ಚು ವಯಸ್ಸಾದವರಿಗೆ 80,000 ದಿಂದ ಒಂದು ಲಕ್ಷದ ರೂ ವರೆಗೆ ಹೆಚ್ಚಿಸಲಾಗಿದೆ.

4)ವೇತನ ಪಡೆಯುವವರಿಗೆ ಪ್ರಸಕ್ತ ಪ್ರವಾಸ ಭತ್ಯ ಮತ್ತು ವೈದ್ಯಕೀಯ ಭತ್ಯಗಳಿಗೆ ಪ್ರತ್ಯೇಕವಾಗಿ ನೀಡುತ್ತಿದ್ದ 40,000 ರೂಪಾಯಿಗಳ ರಿಯಾಯಿತಿಯನ್ನು ಈಗ "ವೇತನದಿಂದ ಬಂದ ಆದಾಯ" ದ ಅಡಿಯಲ್ಲಿ ಸೇರಿಸಿರುವುದಿಂದ ಆದಾಯ ತೆರಿಗೆಯ ಕೆಳ ಹಂತದ ಸ್ಲ್ಯಾಬ್‌ನಲ್ಲಿರುವ ಹಿರಿಯ ನಾಗರಿಕರಿಗೆ ಇದರಿಂದ ಅನುಕೂಲವಾಗಿದೆ. ಈ ಕ್ರಮ ಹೆಚ್ಚಿನ ಮೊತ್ತದ ಆರೋಗ್ಯ ವಿಮೆ ಮಾಡಿಸಲು ಮತ್ತು ಹೆಚ್ಚಿನ ಹಣವನ್ನು ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ಸಹಾಯಕವಾಗುತ್ತದೆ.

### ಪ್ರಧಾನ ಮಂತ್ರಿ ವಯವಂದನ ಯೋಜನೆಯಿಂದ ದೊರಕುವ ಲಾಭಗಳು

ಈ ಯೋಜನೆಯನ್ನು ಒಂದು ವರ್ಷದ ಅವಧಿಗಾಗಿ 2017ರ ಮೇ



ತಿಂಗಳಲ್ಲಿ ಪ್ರಾರಂಭಿಸಲಾಗಿತ್ತು, ಈ ಬಜೆಟ್‌ನಲ್ಲಿ ಅದನ್ನು 2020 ರ ಮೇ ತಿಂಗಳವರೆಗೆ ವಿಸ್ತರಿಸಲಾಗಿದೆ. ಈ ಯೋಜನೆಯಡಿ ಈಗಿರುವ 7.5 ಲಕ್ಷ ರೂಪಾಯಿಗಳ ಹೂಡಿಕೆ ಪ್ರಮಾಣವನ್ನು 15 ಲಕ್ಷದ ವರೆಗೆ ಹೆಚ್ಚಿಸಲಾಗಿದೆ. ಈ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುತ್ತಿದ್ದು 60 ವರ್ಷ ವಯಸ್ಸಾದವರಿಗೆ ಅನ್ವಯಿಸುತ್ತದೆ. ಈ ಯೋಜನೆಯಲ್ಲಿ ಹೂಡಿದ ಹಣಕ್ಕೆ ಪಾಲಿಸಿ ಪಡೆದಿರುವ ವ್ಯಕ್ತಿಗೆ 10 ವರ್ಷಗಳವರೆಗೆ ನಿಗದಿತ ಹಣವನ್ನು ಪಾಲಿಸಿದಾರ ಆಯ್ಕೆ ಮಾಡಿಕೊಂಡ ರೂಪದಲ್ಲಿ ಪಾವತಿಸಲಾಗುತ್ತದೆ. ಈ 10 ವರ್ಷಗಳ ಅವಧಿಯೊಳಗೆ ಪಾಲಿಸಿದಾರ ಮೃತಪಟ್ಟರೆ ಪಾಲಿಸಿಗೆ ಕಟ್ಟಿದ ಹಣವನ್ನು ಸಂಪೂರ್ಣವಾಗಿ ಹಿಂದಕ್ಕೆ ಕೊಡಲಾಗುತ್ತದೆ. ಪಾಲಿಸಿದಾರ 10 ವರ್ಷಗಳವರೆಗೆ ಬದುಕಿದ್ದರೆ ಆತನಿಗೆ ಪಾಲಿಸಿಯ ಮೊತ್ತ ಮತ್ತು ಕೊನೆಯಲ್ಲಿ ಕೊಡಬೇಕಾಗಿರುವ ಪಿಂಚಣಿ ಕಂತುಗಳನ್ನು ಕೊಡಲಾಗುತ್ತದೆ.

ಪಾಲಿಸಿ ಮೆಚುರಿಟಿ ಆದಾಗ ಪಡೆಯುವ ಹಣದ ಮೇಲೆ ಆದಾಯ ತೆರಿಗೆ ಅನ್ವಯವಾದರೂ ಈ ಯೋಜನೆ ಹಿರಿಯ ನಾಗರಿಕರಿಗೆ 10 ವರ್ಷಗಳವರೆಗೆ ಶೇಕಡಾ 8 ರಷ್ಟು ಪ್ರತಿಫಲದ ಆದಾಯ ತಂದುಕೊಡುವ ಆಕರ್ಷಣೀಯವಾದ ಯೋಜನೆಯಾಗಿದೆ.

### ಒಟ್ಟಾರೆ ಪರಿಣಾಮ

ಈ ಅವಕಾಶಗಳು ಹಿರಿಯ ನಾಗರಿಕರಲ್ಲಿ ಕೆಲವರಿಗೆ ಮಾತ್ರ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರುವ ಹಿರಿಯರಲ್ಲಿ ಬಹುತೇಕರು ಕೃಷಿ ಕ್ಷೇತ್ರಕ್ಕೆ ಸೇರಿದವರಾಗಿದ್ದು ಅವರಿಗೆ ಆದಾಯ ತೆರಿಗೆಯ ಈ ಕ್ರಮಗಳಿಂದ ಅನುಕೂಲವಾಗುವುದಿಲ್ಲ. ಬಿಕೆಪಿಎಐ ಸಮೀಕ್ಷೆ ಪ್ರಕಾರ ಗ್ರಾಮಾಂತರ ಪ್ರದೇಶದ ಶೇಕಡಾ 10 ಮತ್ತು ನಗರ ಪ್ರದೇಶದ ಶೇಕಡಾ 16 ರಷ್ಟು ಹಿರಿಯರು ಉದ್ಯೋಗದಾತರ ಪಿಂಚಣಿ ಪಡೆಯುತ್ತಾರೆ. ಗ್ರಾಮಾಂತರ ಪ್ರದೇಶದ ಶೇಕಡಾ 42 ಮತ್ತು ನಗರ ಪ್ರದೇಶದ ಶೇಕಡಾ 47 ರಷ್ಟು ಹಿರಿಯರಿಗೆ ಯಾವುದೇ ರೀತಿಯ ಆದಾಯ ಇರುವುದಿಲ್ಲ. ಗ್ರಾಮಾಂತರ ಪ್ರದೇಶದ ಶೇಕಡಾ 12.5 ಮತ್ತು ನಗರ ಪ್ರದೇಶದ ಶೇಕಡಾ 17 ರಷ್ಟು ಹಿರಿಯರ ವಾರ್ಷಿಕ ಆದಾಯ ರೂಪಾಯಿ 50,000 ಆಸು ಪಾಸಿನಲ್ಲಿ ಇರುತ್ತದೆ. ಆದಾಯ ತೆರಿಗೆಯಲ್ಲಿ ನೀಡಿರುವ ಮೇಲಿನ ಎಲ್ಲ ರಿಯಾಯಿತಿಗಳು ಹೆಚ್ಚು ಆದಾಯದ ಮೇಲುಸ್ತರದಲ್ಲಿರುವ ಕೆಲವೇ ಜನರಿಗೆ ಮಾತ್ರ ಅನ್ವಯವಾಗುತ್ತದೆ.

### ಮಹಾತ್ವಾಕಾಂಕ್ಷೆಯ ರಾಷ್ಟ್ರೀಯ ಆರೋಗ್ಯ ಸಂರಕ್ಷಣಾ ಯೋಜನೆಯಿಂದ ಹೆಚ್ಚು ಅನುಕೂಲ

ಸರ್ಕಾರ ಹಣ ಒದಗಿಸುವ ರಾಷ್ಟ್ರೀಯ ಆರೋಗ್ಯ ಸಂರಕ್ಷಣಾ ಯೋಜನೆ– "ಆಯುಷ್ಮಾನ್ ಯೋಜನೆ" ಬಹುತೇಕ ಹಿರಿಯ ನಾಗರಿಕರಿಗೆ ಹೆಚ್ಚು ಉಪಯುಕ್ತವಾಗಿ ಬಡತನ ರೇಖೆಗಿಂತ ಕೆಳಗಿರುವ ಎಲ್ಲರಿಗೆ ಮತ್ತು ಹಿರಿಯರಿಗೇ ಎಂದು ನಿರ್ದಿಷ್ಟವಾಗಿರದ ಈ ಸಾಮಾನ್ಯ ಯೋಜನೆಯು ಯಶಸ್ವಿಯಾದರೆ ಹಿರಿಯ ನಾಗರಿಕರ ಮೇಲೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆರ್ಥಿಕಾವಲಂಬನೆಯ ಹೊರತಾಗಿ ದೈಹಿಕವಾಗಿ ಪರಾವಲಂಬನೆಗೆ ಒಳಗಾಗುವ ಹಿರಿಯ ನಾಗರಿಕರು ಕೊನೆಗೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ ಅಥವಾ ಸಂಪೂರ್ಣ ಅಂಗವಿಕಲತೆಗೆ ಈಡಾಗುತ್ತಾರೆ. ಬಿಕೆಪಿಎಐ ಸಮೀಕ್ಷೆ ಪ್ರಕಾರ ಶೇಕಡಾ 50 ರಷ್ಟು ಹಿರಿಯರು ತಮಗೆ ಉತ್ತಮವಾದ ಆರೋಗ್ಯವಿಲ್ಲ ಎಂದು ಹೇಳಿದ್ದಾರೆ. ಈ ರೀತಿ ಹೇಳಿಕೊಂಡವರಲ್ಲಿ ಶೇಕಡಾ 20 ರಷ್ಟು ಮಂದಿ ತಾವು ತೀರಾ ಅನಾರೋಗ್ಯದಿಂದ ನರಳುತ್ತಿದ್ದೇವೆ ಎಂದು ಹೇಳಿದ್ದಾರೆ. ಇವರಲ್ಲಿ ಶೇಕಡಾ 8 ರಷ್ಟು ಮಂದಿಯ ಆರೋಗ್ಯ ತೀರಾ ಉತ್ತಮವಾಗಿರುವುದಿಲ್ಲ. ಶೇಕಡಾ 60 ರಷ್ಟು ಮಂದಿ ಪೂರ್ಣ ಪ್ರಮಾಣದಲ್ಲಿ ಕುರುಡುತನ ಅಥವಾ ಅರೆ ಪ್ರಮಾಣದ ಕುರುಡುತನದಿಂದ ನರಳುತ್ತಿರುತ್ತಾರೆ. ಇದರ ಜೊತೆಗೆ ಶೇಕಡಾ 25 ರಷ್ಟು ಮಂದಿ ಪೂರ್ಣ ಪ್ರಮಾಣದ ಅಥವಾ ಅರೆ ಪ್ರಮಾಣದಲ್ಲಿ

ನೆನಪಿನ ಸಮಸ್ಯೆಯಿಂದ ನರಳುತ್ತಾರೆ. ಈ ಎಲ್ಲ ಸಮಸ್ಯೆಗಳಿಂದ ಆಸ್ಪತ್ರೆಗಳಿಗೆ ದಾಖಲಾಗುವ ವ್ಯಕ್ತಿಗಳಿಗೆ ರೂಪಾಯಿ ಐದು ಲಕ್ಷದ ವರೆಗಿನ ಖರ್ಚನ್ನು ಸರ್ಕಾರವೇ ಭರಿಸುತ್ತದೆ. ಈ ಯೋಜನೆಯನ್ನು 10 ಕೋಟಿ ಕುಟುಂಬಗಳಿಗೆ ವಿಸ್ತರಿಸಲಾಗುತ್ತದೆ. ಈ ಯೋಜನೆ ಪ್ರಸಕ್ತ ಜಾರಿಯಲ್ಲಿರುವ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯ ಬದಲಿಗೆ ಜಾರಿಗೆ ಬರಲಿದೆ. ಪ್ರಸಕ್ತ ಯೋಜನೆಗೆ 1000 ಕೋಟಿ ಒದಗಿಸಲಾಗಿದ್ದು, 18 ಕೋಟಿ ಜನ ಮತ್ತು 3.6 ಕೋಟಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿವಿಧ ರೀತಿಯ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹೊಸ ಯೋಜನೆಗೆ 2000 ಕೋಟಿ ತೆಗೆದಿರಿಸಲಾಗಿದ್ದು ಈ ಮೊತ್ತವನ್ನು ಈ ವರ್ಷದ ಕೊನೆ ವೇಳೆಗೆ 12,000 ಕೋಟಿಗೆ ಹೆಚ್ಚಿಸುವ ಸಾಧ್ಯತೆಯಿದೆ. ಇದಕ್ಕೆ ಒದಗಿಸುವ ಹಣವನ್ನು ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ಸಂಗ್ರಹಿಸುತ್ತಿರುವ ಶೇಕಡಾ 3 ರಷ್ಟು ಸೆಸ್‌ನ್ನು ಶೇಕಡಾ 4ಕ್ಕೆ ಏರಿಸುವುದರ ಮೂಲಕ ಸಂಗ್ರಹಿಸಲಾಗುತ್ತದೆ. ರಾಜ್ಯ ಸರ್ಕಾರಗಳು ಈ ಯೋಜನೆಯ ಶೇಕಡಾ 40 ಹಣವನ್ನು ಅಂದರೆ 8000 ಕೋಟಿ ರೂ. ಒದಗಿಸುವುದರ ಮೂಲಕ ಜಾರಿಗೊಳಿಸಲಾಗುತ್ತದೆ.

**ಇತಿಮಿತಿಗಳು**

ವಿಶ್ವದಲ್ಲೇ ಅತ್ಯಂತ ಬೃಹತ್ ಪ್ರಮಾಣದ ಆರೋಗ್ಯ ಯೋಜನೆ ಎಂದು ಹೇಳಿಕೊಳ್ಳಬಹುದಾದರೂ ಇದರ ಬಗ್ಗೆ ಕೆಲವು ಪ್ರಮುಖ ಟೀಕೆಗಳು ಈ ರೀತಿ ಇವೆ:–

* ಹಿಂದಿನ ಯೋಜನೆಯ ಅನುಭವದ ಆಧಾರದ ಮೇಲೆ ಈ ವರ್ಷ ಈ ಯೋಜನೆಗೆ 2000 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಹೆಚ್ಚು ಜನರನ್ನು ಈ ಯೋಜನೆಗೆ ಒಳಪಡಿಸಿರುವುದರಿಂದ ಇದಕ್ಕೆ ಕನಿಷ್ಠ 30,000 ಕೋಟಿ ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

* ಸೀಮಿತ ಸಂಪನ್ಮೂಲವನ್ನು ಹೊಂದಿರುವ ರಾಜ್ಯ ಸರ್ಕಾರಗಳು ಶೇಕಡಾ 40 ರಷ್ಟು ಪಾಲು ಭರಿಸಿ ಕಾರ್ಯರೂಪಕ್ಕೆ ತರುತ್ತವೆಯೇ ಎಂಬುದು ಅನುಮಾನಸ್ಪದವಾಗಿದೆ.

* ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಕ್ರಿಯಾ ಯೋಜನೆಯ ಬಗ್ಗೆ ಸಾಕಷ್ಟು ಸ್ಪಷ್ಟತೆ ಇಲ್ಲ. ಆದರೆ ವಿಮಾ ಕಂಪನಿಗಳ ಮೂಲಕ ಅಥವಾ ಸ್ವಾಯತ್ತ ಸಂಸ್ಥೆಗಳಿಗೆ ಹಣ ಒದಗಿಸುವುದರ ಮೂಲಕ ಜಾರಿಗೊಳಿಸಲು ರಾಜ್ಯ ಸರ್ಕಾರಗಳ ನಿರ್ಧಾರಕ್ಕೆ ಬಿಡುವ ಸಾಧ್ಯತೆ ಹೆಚ್ಚಾಗಿದೆ. ಈ ಯೋಜನೆಯಡಿ ನೊಂದಾಯಿಸಿಕೊಳ್ಳುವ ಕುಟುಂಬದಿಂದ ವಾರ್ಷಿಕ 1082 ರೂಪಾಯಿಗಳ ವಂತಿಕೆ ಸಂಗ್ರಹಿಸುವುದು ಸಾಕಾಗುತ್ತದೆಯೇ ಎಂಬ ಸಂದೇಹವನ್ನು ವ್ಯಕ್ತಪಡಿಸಲಾಗುತ್ತದೆ. ವಿಮಾ ಕಂಪನಿಗಳಿಗೆ ಈ ಯೋಜನೆಯು ಈಗಿರುವ ಮಾದರಿಯಲ್ಲಿ ಹೆಚ್ಚು ಆಕರ್ಷಕವಾಗಿಲ್ಲ.

* ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯ ಜಾರಿಯ ನಂತರ ನಡೆಸಿದ ರಾಷ್ಟ್ರೀಯ ಮಾದರಿ ಸಮೀಕ್ಷೆ ಅಂಕಿ ಅಂಶಗಳ ಪ್ರಕಾರ ಗ್ರಾಮಾಂತರ ಪ್ರದೇಶದ ಶೇಕಡಾ 1.2 ಮತ್ತು ನಗರ ಪ್ರದೇಶದ ಶೇಕಡಾ 6.2 ಕುಟುಂಬಗಳಿಗೆ ಮಾತ್ರ ಈ ಯೋಜನೆಯ ಸೌಲಭ್ಯ ಅನುಕೂಲವಾಗಿದ್ದು, ಫಲಾನುಭವಿಗಳು ತಮ್ಮ ಜೇಬಿನಿಂದ ಕೊಡಬೇಕಾದ ಹಣದ ಪ್ರಮಾಣದ ಹೊರೆಯನ್ನು ಕಡಿಮೆ ಮಾಡಿಲ್ಲ.

* ಹೊಸ ಯೋಜನೆ ಆಸ್ಪತ್ರೆಯ ಖರ್ಚನ್ನು ಮಾತ್ರ ಭರಿಸುತ್ತದೆ. ಆದರೆ ಮೂರನೇ ಎರಡರಷ್ಟು ವೆಚ್ಚ ಆಸ್ಪತ್ರೆಯ ವೆಚ್ಚದ ಹೊರತಾಗಿ ಇತರೆ ವೆಚ್ಚಗಳು ಸೇರಿರುತ್ತವೆ.

* ಬಿಕೆಪಿಎಐ ಸಮೀಕ್ಷೆ ಪ್ರಕಾರ, ಈ ಯೋಜನೆ ಕಾರ್ಯ ರೂಪಕ್ಕೆ ಬರುವುದಕ್ಕೆ ಮುಂಚಿನ ಒಂದು ವರ್ಷದಲ್ಲಿ ಶೇಕಡಾ 10 ಮಾತ್ರ ಹಿರಿಯ ನಾಗರಿಕರು ಆಸ್ಪತ್ರೆಗೆ ದಾಖಲಾಗಿದ್ದರು, ಮುಖ್ಯವಾಗಿ ದಾಖಲಾದವರಲ್ಲಿ ಬಹುತೇಕ ಮಂದಿ ತಮ್ಮ ಕಾಯಿಲೆಯ ಕೊನೆ ಹಂತದಲ್ಲಿ ಆಸ್ಪತ್ರೆ ಸೇರಿದ್ದರು. ಹೊಸ ಯೋಜನೆ ಸರಿಯಾದ ಸಮಯದಲ್ಲಿ ಹಿರಿಯರು ಆಸ್ಪತ್ರೆಗೆ ದಾಖಲಾಗಲು ಉತ್ತೇಜನ ನೀಡುತ್ತದೆ.

* ಈ ಯೋಜನೆ ಆಸ್ಪತ್ರೆಗೆ ದಾಖಲಾದ ಮೇಲಿನ ಖರ್ಚನ್ನು ಬರಿಸುತ್ತದೆ. ಆದರೆ ಬಹುತೇಕ ಹಿರಿಯ ನಾಗರಿಕರು ವಯಸ್ಸಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಾದ ಕಿಲು ನೋವು, ಮಧುಮೇಹ, ಹೈಪರ್‌ಟೆನ್ಷನ್ ನಂತಹ ಕಾಯಿಲೆಗಳಂತಹ ಹಲವಾರು ಕಾಯಿಲೆಗಳಿಂದ ನರಳುತ್ತಿರುತ್ತಾರೆ. ಅವರಿಗೆ ಸರಿಯಾದ ಸಮಯದಲ್ಲಿ ಕಾಯಿಲೆಯನ್ನು ಉಪಚರಿಸುವ ಆಗಾಗ್ಗೆ ಚಿಕಿತ್ಸೆಯ ಮೇಲ್ವಿಚಾರಣೆಯ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ದೂರದ ಸ್ಥಳಗಳಲ್ಲಿ ಸರಿಯಾದ ಆರೋಗ್ಯ ಸೌಲಭ್ಯಗಳನ್ನು ಬಲಗೊಳಿಸಬೇಕಿದೆ. ವೈದ್ಯಕೀಯ ಕ್ಷೇತ್ರದಲ್ಲಿರುವ ಮಾನವ ಸಂಪನ್ಮೂಲದ



ಕೊರತೆಯು ಈ ಸ್ಥಳಗಳಲ್ಲಿ ಸರಿಯಾದ ವೈದ್ಯಕೀಯ ಸೇವೆಗಳನ್ನು ಒದಗಿಸುವಲ್ಲಿ ಬಹಳ ಸಮಸ್ಯೆಯಾಗಿ ಪರಿಣಮಿಸಿದೆ. ಸ್ವಾಸ್ಥ್ಯ ಆರೋಗ್ಯ ಕೇಂದ್ರಗಳು ಮತ್ತು ಹೊಸ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಈ ಬಜೆಟ್‌ನಲ್ಲಿ ಅವಕಾಶ ಮಾಡಿಕೊಡಲಾಗಿದೆ. ಕ್ಷಯ ರೋಗಿಗಳಿಗೆ ಪೌಷ್ಟಿಕಾಂಶ ಆಹಾರ ಒದಗಿಸುವುದು ಉತ್ತಮವಾದ ಹೆಜ್ಜೆಯಾಗಿದ್ದು, ಇದರಿಂದ ಹಿರಿಯ ನಾಗರಿಕರಿಗೆ ಪರೋಕ್ಷವಾಗಿ ಅನುಕೂಲವಾಗಲಿದೆ. ಅಂತಿಮವಾಗಿ ಒಟ್ಟಾರೆ ಆರೋಗ್ಯ ಕ್ಷೇತ್ರಕ್ಕೆ ಸರ್ಕಾರ ಖಾಸಗಿ ಸಹಯೋಗದೊಂದಿಗೆ ಹೆಚ್ಚು ಹಣ ಖರ್ಚು ಮಾಡಬೇಕು.

ಈ ಎಲ್ಲಾ ಸಂಕಷ್ಟಗಳ ನಡುವೆಯೂ ಆರೋಗ್ಯ ಕ್ಷೇತ್ರವನ್ನು ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಮಂಚೂಣಿಗೆ ತಂದಿರುವುದು ಮೆಚ್ಚಲೇಬೇಕಾದ ಅಂಶ. ಈ ಪ್ರಯತ್ನದಿಂದ ದೇಶದ ಹಿರಿಯ ನಾಗರಿಕರ ಜೀವನದ ಗುಣಮಟವನ್ನು ಸುಧಾರಿಸುವಲ್ಲಿ ಒಂದು ಮಹತ್ತರವಾದ ಹೆಜ್ಜೆಯನ್ನು ಇಟ್ಟಂತಾಗುತ್ತದೆ. ❒

# ಕಪ್ಪು ಹಲಗೆಯಿಂದ ಡಿಜಿಟಲ್ ಬೋರ್ಡ್‌ವರೆಗೆ

* ಕಿರಣ್ ಭಟ್ಟಿ



> ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟ ಹೆಚ್ಚಳಕ್ಕೆ ತಂತ್ರಜ್ಞಾನದ ಬಳಕೆಗೆ ಒತ್ತು ನೀಡಿರುವುದು ಕೂಡ ಒಂದು ಪರಿವರ್ತನೆಯಾಗಿದ್ದು, ಇದರಿಂದ ಕಲಿಕೆಯ ಮೇಲೆ ಯಾವ ಪರಿಣಾಮ ಉಂಟಾಗಲಿದೆ ಎನ್ನುವ ಕುರಿತು ಚರ್ಚೆ ಆಗಬೇಕಿದೆ.

ಪ್ರತಿ ವರ್ಷ ಆಯವ್ಯಯದ ಸಮಯದಲ್ಲಿ ಹಲವು ನಿರೀಕ್ಷೆಗಳು ಇರುತ್ತವೆ. ಆಯವ್ಯಯದಲ್ಲಿ ಏನಾದರೂ ಪ್ರಮುಖ ಯೋಜನೆಗಳನ್ನು ಘೋಷಿಸಲಾಗುವುದೇ ಎಂದು ಜನ ಅದನ್ನು ಎದುರು ನೋಡುತ್ತಾರೆ. 2019ರಲ್ಲಿ ಲೋಕಸಭೆ ಚುನಾವಣೆ ನಡೆಯಲಿದ್ದು, ಅದಕ್ಕಿಂತ ಮುಂಚಿನ ಪೂರ್ಣ ಪ್ರಮಾಣದ ಬಜೆಟ್ ಆದ್ದರಿಂದ ಸರ್ಕಾರವು ಆರ್ಥಿಕತೆಯ ಕೆಲವು ವಿಭಾಗಗಳಿಗೆ ಇಲ್ಲವೇ ಕೆಲವು ವರ್ಗದವರಿಗೆ ವಿಶೇಷ ರಿಯಾಯಿತಿಗಳನ್ನು ಘೋಷಿಸುವ ಮೂಲಕ, ಜನಪ್ರಿಯ ಬಜೆಟ್‌ನ್ನು ಮಂಡಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಈ ವರ್ಷದ ಆಯವ್ಯಯದಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕ್ಷೇತ್ರಗಳು ಕೇಂದ್ರ ಬಿಂದು ಆಗಿರುವುದು ಆಶ್ಚರ್ಯಕರವೇನೂ ಅಲ್ಲ.

ಆದರೆ, ಆಶ್ಚರ್ಯಕ್ಕೆ ಕಾರಣವಾಗಿದ್ದು ಏನೆಂದರೆ, ವಿತ್ತ ಸಚಿವರ ಭಾಷಣದಲ್ಲಿ ಶಿಕ್ಷಣ ಕ್ಷೇತ್ರ ಪಡೆದುಕೊಂಡ ಪ್ರಾಮುಖ್ಯತೆ.

ಇದು ಆಶ್ಚರ್ಯಕರ. ಏಕೆಂದರೆ, ಕಳೆದ ವರ್ಷ ಭಾಷಣದಲ್ಲಿ ಶಿಕ್ಷಣ ಕ್ಷೇತ್ರದ ಉಲ್ಲೇಖವೇ ಆಗಿರಲಿಲ್ಲ ಮತ್ತು ಚುನಾವಣೆ ಬಳಿಕ ಮತ್ತೊಂದು ಚುನಾವಣೆ ನಡೆಯುತ್ತಿದ್ದರೂ, ಶಿಕ್ಷಣ ಕ್ಷೇತ್ರವು "ಜನಪ್ರಿಯ" ಪಟ್ಟಿಯಲ್ಲಿ ಇರಲಿಲ್ಲ. ಹೀಗಾಗಿ, ಗ್ರಾಮೀಣ ಆರ್ಥಿಕತೆಯನ್ನು ಭದ್ರಪಡಿಸುವುದು, ಮೂಲಸೌಕರ್ಯದ ನಿರ್ಮಾಣ ಹಾಗೂ ಹಿರಿಯ ನಾಗರಿಕರಿಗೆ ಬೆಂಬಲದ ಜೊತೆಗೆ ಶಿಕ್ಷಣ ಕೂಡ ಆದ್ಯತೆ ಪಡೆದಿರುವುದು ಸಂತಸದ ವಿಷಯ. ವಾಸ್ತವವೆಂದರೆ, ಭವಿಷ್ಯದಲ್ಲಿಯೂ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ಸಿಗಲಿದೆ ಎನ್ನುವುದರ ಸೂಚನೆ ಇದು.

ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟ ಹೆಚ್ಚಳ ಹಾಗೂ ಅದಕ್ಕೆ ಅಗತ್ಯವಾದ ಸಾಧನಗಳಿಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ. ಇದು ಎರಡು ಪ್ರಮುಖ ಘೋಷಣೆಗಳ ರೂಪದಲ್ಲಿ ಬಂದಿದೆ: ಕಪ್ಪು ಹಲಗೆಯಿಂದ ಡಿಜಿಟಲ್ ಬೋರ್ಡ್‌ಗೆ ಸ್ಥಿತ್ಯಂತರಗೊಳ್ಳುವಲ್ಲಿ ತಂತ್ರಜ್ಞಾನಕ್ಕೆ ಪ್ರಾಮುಖ್ಯತೆ ನೀಡುವುದು ಹಾಗೂ ಎರಡನೆಯದಾಗಿ, ಶಿಕ್ಷಣವನ್ನು ಪ್ರಾಥಮಿಕದಿಂದ ಮಧ್ಯಮಕ್ಕೆ ಮುಂದುವರಿಕೆಯಾಗಿ ನೋಡುವ ಸರ್ಕಾರದ ಸಂಪೂರ್ಣಾತ್ಮಕ ದೃಷ್ಟಿಕೋನ. ಈ ಎರಡೂ ಕಾರ್ಯನೀತಿಗಳ ಆಗಮನದ ಸೂಚನೆಗಳು ಬಜೆಟ್‌ಗಿಂತ ಮುನ್ನವೇ ಸುದ್ದಿ ಮಾಡಿದ್ದವು. ಕಳೆದ ಸಿಎಬಿಇ ಸಮಿತಿಯ ಸಭೆಯಲ್ಲಿ ಆಪರೇಷನ್ ಡಿಜಿಟಲ್ ಬೋರ್ಡ್‌ನ್ನು ಘೋಷಿಸಲಾಗಿತ್ತು ಮತ್ತು ಎಂಎಚ್‌ಆರ್‌ಡಿಯು ಎಸ್‌ಎಸ್‌ಎ ಮತ್ತು ಆರ್‌ಎಂಎಸ್‌ಎ (ಇನ್ನಿತರ ಶಿಕ್ಷಕರ ಶೈಕ್ಷಣಿಕ ಯೋಜನೆಗಳೊಂದಿಗೆ) ವಿಲೀನಗೊಳಿಸುವ ಸಂಬಂಧ ಟಿಪ್ಪಣಿಯೊಂದನ್ನು ಚಾಲನೆಗೆ ಬಿಟ್ಟಿತ್ತು. ಇದರ ಜೊತೆಗೆ, ರಾಷ್ಟ್ರೀಯ ಸಾಧನಾ ಸರ್ವೇಕ್ಷಣೆ (ಎನ್‌ಎಎಸ್)ಯ ಫಲಿತಾಂಶವನ್ನು ಆಧರಿಸಿ, ಗುಣಮಟ್ಟವನ್ನು ಹೆಚ್ಚಿಸಲು ಜಿಲ್ಲಾವಾರು ಕಾರ್ಯನೀತಿಯೊಂದನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನೂ ಹಾಕಿಕೊಳ್ಳಲಾಗಿತ್ತು. ಒಟ್ಟಾರೆ ಗುಣಮಟ್ಟ ಹೆಚ್ಚಳಕ್ಕೆ ಶಿಕ್ಷಕರ ಶೈಕ್ಷಣಿಕ ಬಲವರ್ಧನೆ ಮತ್ತು ತರಬೇತಿಯ ಗುಣಮಟ್ಟದ ವರ್ಧನೆ

* ಹಿರಿಯ ಪ್ರಾಧ್ಯಾಪಕರು, ನೀತಿ ಸಂಶೋಧನಾ ಕೇಂದ್ರ. E-mail : kiran.bhatty@gmail.com



ಕ್ಷೇತ್ರಗಳಲ್ಲಿ ಉತ್ತಮೀಕರಣ ಆಗಬೇಕು ಎಂದು ಹೇಳಲಾಗಿತ್ತು. ಉಲ್ಲೇಖಿಗೊಂಡ ಇನ್ನುಳಿದ ಅಂಶಗಳೆಂದರೆ, ನವೋದಯ ವಿದ್ಯಾಲಯಗಳಂತೆ ಬುಡಕಟ್ಟು ಪ್ರದೇಶದಲ್ಲಿ ವಸತಿ ಶಾಲೆಗಳ ಸ್ಥಾಪನೆ ಮತ್ತು ಮುಂದಿನ ನಾಲ್ಕು ವರ್ಷದಲ್ಲಿ ಅನ್ವೇಷಣೆ/ಸಂಶೋಧನೆಗೆ ಒಂದು ಲಕ್ಷ ಕೋಟಿ ರೂ. ಅನುದಾನ ನೀಡುವ ನಿರ್ಧಾರ.

ಈ ಪ್ರತಿಯೊಂದು ಘೋಷಣೆಯೂ ಶ್ಲಾಘನೀಯವಾದುದು. ಶಿಕ್ಷಣ ಕ್ಷೇತ್ರದಲ್ಲಿ ಸಾಧ್ಯವಿರುವಲ್ಲೆಲ್ಲ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕಿದೆ: ಶಿಕ್ಷಣ ಕುರಿತ ಸಮಗ್ರ ದೃಷ್ಟಿಕೋನದಿಂದ ಎಲ್ಲ ಹಂತಗಳಲ್ಲಿ ಸಮರೂಪತೆ ಬರಲಿದೆ ಮತ್ತು ಮೀಸಲಿಟ್ಟ ಹಣ ಹಾಗೂ ಅಧಿಕಾರಶಾಹಿಯ ಸಮರ್ಥ ಬಳಕೆ ಆಗಲಿದೆ; ಶಿಕ್ಷಕರು ಮತ್ತು ಅವರ ತರಬೇತಿಯಲ್ಲಿ ಹೂಡುವ ಬಂಡವಾಳವನ್ನು ಸೂಕ್ತವಾಗಿ ವಿನ್ಯಾಸಗೊಳಿಸಿದರೆ, ತರಗತಿಗಳ ಗುಣಮಟ್ಟದ ಮೇಲೆ ನೇರ ಪರಿಣಾಮ ಆಗಲಿದೆ: ಜಿಲ್ಲಾ ಮಟ್ಟದ ಸಾಧನೆ ಪರೀಕ್ಷೆಗಳನ್ನು ಆಧಾರವಾಗಿಟ್ಟುಕೊಂಡು, ನಿರಂತರವಾಗಿ ಪರಿಶೀಲಿಸುತ್ತ, ಕಲಿಕೆಯ ಮಟ್ಟವನ್ನು ಯೋಜಿಸಬಹುದು. ಗುಣಮಟ್ಟವನ್ನು ಕಾಯ್ದುಕೊಳ್ಳಲು ರೂಪಿಸುವ ಕಾರ್ಯನೀತಿಯಲ್ಲಿ ಸಂಶೋಧನೆ ಹಾಗೂ ಅನ್ವೇಷಣೆಯಲ್ಲಿ ಹೂಡಿಕೆ ಮಾಡುವುದು ಪ್ರಮುಖ ಅಂಶವಾಗಬೇಕು ಹಾಗೂ ಕೊನೆಯದಾಗಿ, ಗುಣಮಟ್ಟದ ಶಿಕ್ಷಣವನ್ನು ಬುಡಕಟ್ಟು ಪ್ರದೇಶಗಳಿಗೂ ವಿಸ್ತರಿಸುವುದು ಅಗತ್ಯ ಎಂದು ಈಗಾಗಲೇ ಪರಿಗಣಿಸಲಾಗಿದೆ. ದುರದೃಷ್ಟವಶಾತ್, ಬಜೆಟ್‌ನಲ್ಲಿ ಈ ಘೋಷಣೆಗಳ ಹಿಂದಿನ ಮಹದಾಶಯಗಳನ್ನು ಈಡೇರಿಸಲು ಅಗತ್ಯವಿರುವಷ್ಟು ಹಣಕಾಸು ನೆರವು ನೀಡಲಾಗಿಲ್ಲ. ಈ ಯೋಜನೆಗಳಿಗೆ ಹೇಗೆ ಹಣ ಒದಗಿಸಲಾಗುತ್ತದೆ ಎನ್ನುವ ಸುಳಿವು ಬಜೆಟ್ ದಾಖಲೆಗಳಲ್ಲಿ ಇಲ್ಲ.

ರಾಷ್ಟ್ರೀಯ ಶಿಕ್ಷಣ ಆಂದೋಳನ (ಎಸ್‌ಎಸ್‌ಎ)ಕ್ಕೆ ಕಳೆದ ವರ್ಷ 28,255 ಕೋಟಿ ರೂ. ನೀಡಿದ್ದು, ಈ ವರ್ಷ 3,000 ಕೋಟಿ ರೂ. ಹೆಚ್ಚಳ ಎಂದರೆ, 31,212 ಕೋಟಿ ರೂ. ನೀಡಲಾಗಿದೆ. ಆದರೆ, ಬಜೆಟ್ ಭಾಷಣದಲ್ಲಿ ಘೋಷಿಸಿದ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಈ ಮೊತ್ತ ಸಾಲದು. ಉದಾಹರಣೆಗೆ, ಆಪರೇಷನ್ ಡಿಜಿಟಲ್ ಬೋರ್ಡ್ ಮೂಲಕ ಶಾಲೆ ಕೊಠಡಿಗಳಲ್ಲಿ ಶಿಕ್ಷಣವನ್ನು ಡಿಜಿಟಲೀಕರಣ ಗೊಳಿಸಲು ಮೂಲಸೌಲಭ್ಯವನ್ನು ಮೇಲ್ದರ್ಜೆಗೇರಿಸಬೇಕಿದ್ದು, ಇದಕ್ಕೆ ಅಪಾರ ಮೊತ್ತ ಬೇಕಾಗುತ್ತದೆ. ಏಕೆಂದರೆ, ದೇಶದಲ್ಲಿ ವಿದ್ಯುತ್ ಸಂಪರ್ಕವಿರುವ ಶಾಲೆಗಳ ಪ್ರಮಾಣ ಶೇ. 62, ಶೇ. 24ರಷ್ಟು ಶಾಲೆಗಳಲ್ಲಿ ಕಂಪ್ಯೂಟರ್ ಮಾತ್ರ ಇದೆ ಹಾಗೂ ಕಂಪ್ಯೂಟರ್ ಮತ್ತು ವಿದ್ಯುತ್ ಎರಡೂ ಇರುವ ಶಾಲೆಗಳು ಶೇ. 9 ಮಾತ್ರ (ಡಿಐಎಸ್‌ಇ, 2015–16). ಇದರಲ್ಲಿ ಎಂಎಚ್‌ಆರ್‌ಡಿ ಪ್ರಕಾರ 6 ದಶಲಕ್ಷ ಹಾಗೂ ಎನ್‌ಎಸ್‌ಎಸ್ ಪ್ರಕಾರ 20 ದಶಲಕ್ಷ ಮಕ್ಕಳು ಶಾಲೆ ಸೇರಿಲ್ಲ. ಇವರನ್ನು ಶಾಲೆಗೆ ಕರೆತರಲು ಅಗತ್ಯವಾದ ಮೂಲಸೌಲಭ್ಯ ನಿರ್ಮಾಣಕ್ಕೆ ಇನ್ನಷ್ಟು ಹೂಡಿಕೆ ಮಾಡಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳ ವಿದ್ಯುದೀಕರಣ ಮಿಷನ್, ಶಾಲೆಗಳನ್ನು ಒಳಗೊಂಡಿಲ್ಲ. ಶಾಲೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗದಿದ್ದರೆ, ಆಪರೇಷನ್ ಡಿಜಿಟಲ್ ಬೋರ್ಡ್ ಅನುಷ್ಠಾನಗೊಳ್ಳುವ ಸಾಧ್ಯತೆ ಕಡಿಮೆ. ಆಪರೇಷನ್ ಡಿಜಿಟಲ್ ಬೋರ್ಡ್‌ಗೆ ಹಣ ಹೇಗೆ ಹೊಂದಿಸಲಾಗುತ್ತದೆ ಎಂಬ ವಿವರ ಆಯವ್ಯಯ ದಾಖಲೆಯಲ್ಲಿ ಇಲ್ಲ. ವಾಸ್ತವವೆಂದರೆ, ಡಿಜಿಟಲ್ ಇಂಡಿಯಾ ಇ–ಕಲಿಕೆಗೆ ಕಳೆದ ವರ್ಷ ನೀಡಿದ್ದಕ್ಕಿಂತ(518 ಕೋಟಿ ರೂ.) ಈ ವರ್ಷ ಕಡಿಮೆ ಅನುದಾನ (456 ಕೋಟಿ ರೂ.) ನಿಗದಿಪಡಿಸಲಾಗಿದೆ.

ಅದೇ ರೀತಿ, ಶಿಕ್ಷಕರ ತರಬೇತಿಗೆ ಒತ್ತು ನೀಡಲಾಗಿದ್ದರೂ, ಮದನ್‌ಮೋಹನ್ ಮಾಳವೀಯ ರಾಷ್ಟ್ರೀಯ ಶಿಕ್ಷಕರ ಹಾಗೂ ತರಬೇತಿ ಮಿಷನ್‌ಗೆ ನಿಗದಿಪಡಿಸಿದ ಮೊತ್ತ ಕಳೆದ ವರ್ಷದಷ್ಟೇ ಇದೆ (120 ಕೋಟಿ ರೂ.). ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಬಲಪಡಿಸಲು 70 ಕೋಟಿ ರೂ. ಅನುದಾನ ನೀಡಲಾಗಿದೆ. ಆದರೆ, ಇದರಲ್ಲಿ 40 ಕೋಟಿ ರೂ. ಭಾಷಾ ಶಿಕ್ಷಕರ ನೇಮಕಕ್ಕೆ ವೆಚ್ಚವಾಗಲಿದೆ (ಅಂಶ 20, ಪುಟ 188). ಎಲ್ಲೆಡೆ, ಅದರಲ್ಲೂ ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ ತೀವ್ರವಾಗಿದ್ದು, ಇಲ್ಲಿ ಭಾಷಾ ಶಿಕ್ಷಕರ ಅಗತ್ಯ ಬಹಳವಿದೆ. ಶಿಕ್ಷಕರ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಸೂಕ್ತ ತರಬೇತಿಯು ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದು ನಿಜ. ಆದರೆ, ಶಿಕ್ಷಕರ ತೀವ್ರ ಕೊರತೆಯಿಂದಾಗಿ ಗುಣಮಟ್ಟ ಕುಸಿಯುತ್ತಿರುವ ಸಂದರ್ಭದಲ್ಲಿ ತರಬೇತಿಗೆ ಮಾಡುವ ವೆಚ್ಚವು ಶಿಕ್ಷಕರ ನೇಮಕದ ಮೇಲೆ ವ್ಯತಿ ರಿಕ್ತ ಪರಿಣಾಮ ಬೀರಬಾರದು. ಶೇ. 11.5 ರಷ್ಟು ಪ್ರಾಥಮಿಕ ಶಾಲೆಗಳು ಮತ್ತು ಒಟ್ಟಾರೆ ಶೇ. 7.5 ರಷ್ಟು ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿದ್ದು, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಅಂದಾಜು ಸಂಖ್ಯೆ ಕೇವಲ 4.3 ಇದೆ. ಒಂದು ಹಂತಕ್ಕೆ ಒಬ್ಬರು ಶಿಕ್ಷಕ ಎನ್ನುವ ಮಾನದಂಡಕ್ಕೆ ಹೋಲಿಸಿದರೆ, ಈ ಪ್ರಮಾಣ ಬಹಳ ಕಡಿಮೆ ಇದ್ದು, ಆತಂಕಕ್ಕೆ ಕಾರಣವಾಗಿದೆ. ಗುಣಮಟ್ಟ ಎಂದರೆ ಏನು ಎನ್ನುವ ಮುಖ್ಯ



ಪ್ರಶ್ನೆಯನ್ನು ಇದು ಎತ್ತಲಿದೆ. ಶಿಕ್ಷಕರ ಕೊರತೆ ಇರುವಾಗ, ಗುಣಮಟ್ಟವನ್ನು ಉತ್ತಮಪಡಿಸಲು ಸಾಧ್ಯವೇ? ಶಿಕ್ಷಕರಿಲ್ಲದ ಶಾಲಾ ಕೊಠಡಿಗಳಿಗೆ ಆಪರೇಷನ್ ಡಿಜಿಟಲ್ ಬೋರ್ಡ್ ಬರುವುದೇ?

ಬುಡಕಟ್ಟು ಪ್ರದೇಶಗಳಲ್ಲಿ ನವೋದಯ ವಿದ್ಯಾಲಯಗಳಂತೆ ವಿಶೇಷ ಶಾಲೆಗಳನ್ನು ತೆರೆಯುವ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬಜೆಟ್‌ನಲ್ಲಿ ಇದಕ್ಕೆ ಅನುದಾನ ನೀಡಿಲ್ಲವಾದರೂ, ಬುಡಕಟ್ಟು ಕಲ್ಯಾಣ ಬಜೆಟ್‌ನಲ್ಲಿ ಏಕಲವ್ಯ ಶಾಲೆಗಳಿಗೆ ಅನುದಾನ ಹೆಚ್ಚಿಸಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಪೂರ್ಣಾತ್ಮಕ ಮಾರ್ಗವನ್ನು ಅನುಸರಿಸಲಾಗುತ್ತದೆ ಎನ್ನುವ ಸರ್ಕಾರದ ಹೇಳಿಕೆಗೆ ಇದು ತದ್ವಿರುದ್ಧವಾಗಿದೆ. ವಾಸ್ತವವೆಂದರೆ, ಎಂಎಚ್‌ಆರ್‌ಡಿ ಇಲ್ಲವೇ ರಾಜ್ಯ ಶಿಕ್ಷಣ ಇಲಾಖೆ ಮತ್ತು ಶಿಕ್ಷಣ ಮಂತ್ರಾಲಯಗಳು ಅಥವಾ ಸಮಾಜ ಕಲ್ಯಾಣ ಹಾಗೂ

ಬುಡಕಟ್ಟು ಕಲ್ಯಾಣ ಇಲಾಖೆಗಳ ನಡುವೆ ಜವಾಬ್ದಾರಿ ಹಂಚಿಕೆಯನ್ನು ಇದೇ ಕಾರಣಕ್ಕಾಗಿ ಟೀಕಿಸಲಾಗುತ್ತಿದೆ– ದ್ವಂದ್ವ ವರ್ಗೀಕರಣ ವ್ಯವಸ್ಥೆಯನ್ನು ಹೊಂದಿರುವುದು. ಬುಡಕಟ್ಟು ಕಲ್ಯಾಣ ಇಲಾಖೆಗೆ ಶಿಕ್ಷಣ ಕುರಿತು ಯಾವುದೇ ತಜ್ಞತೆ ಇಲ್ಲ. ಶೈಕ್ಷಣಿಕ ಯೋಜನೆಗಳನ್ನು ರೂಪಿಸಿ, ನಿರ್ವಹಿಸಬೇಕಾಗಿರುವುದು ಶಿಕ್ಷಣ ಇಲಾಖೆಯ ಕೆಲಸ. ಇಂಥ ದ್ವಂದ್ವ ವರ್ಗೀಕರಣದಿಂದ ಬುಡಕಟ್ಟು ಕಲ್ಯಾಣ ಇಲಾಖೆಯ ಶೈಕ್ಷಣಿಕ ಕೆಲಸಗಳು ಕಲಸು ಮೇಲೋಗರವಾಗುತ್ತದೆ. ಭಾಷಣದಲ್ಲಿ ಹೇಳಿದಂತೆ ಮತ್ತು ಬಜೆಟ್ ದಾಖಲೆಯಲ್ಲಿ ಇರುವಂತೆ, ಶೈಕ್ಷಣಿಕ ಯೋಜನೆಗಳ ಒಂದುಗೊಳಿಸುವಿಕೆಯು ಎಲ್ಲ ಶಾಲೆಗಳಿಗೂ, ಅದರಲ್ಲೂ ದುರ್ಬಲ ವರ್ಗಗಳಿಗೆ ಮೀಸಲಾದ ಶಾಲೆಗಳಿಗೂ ಅನ್ವಯವಾಗಬೇಕು. ಇದರಿಂದ ಯೋಜನೆಯ ಲಾಭಗಳು ಅವರಿಗೂ ಲಭ್ಯವಾಗಲಿದೆ. ಬುಡಕಟ್ಟು ವ್ಯವಹಾರಗಳ ಇಲಾಖೆ ನಡೆಸುತ್ತಿರುವ ಶಾಲೆಗಳ ಕುರಿತ ಕೀಳು ಮನೋಭಾವ ಮುಂದುವರಿಯಬಾರದು ಅಥವಾ ಉದ್ದೇಶಿತ ಏಕಲವ್ಯ ಶಾಲೆಗಳಿಗೆ ವಿಸ್ತರಿಸಬಾರದು. ಎಲ್ಲ ಶಾಲೆಗಳನ್ನು ಒಂದೇ ಆಡಳಿತ ಹಾಗೂ ಎಂಎಚ್‌ಆರ್‌ಡಿ ಮತ್ತು ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ತರಲು ಇದು ಸುಸಮಯ.



ಅದೇ ರೀತಿ, ಶಿಕ್ಷಣ ಕುರಿತ ಸಂಪೂರ್ಣಾತ್ಮಕ ಮಾರ್ಗವು ಬಜೆಟ್ ದಾಖಲೆಯಲ್ಲಿ ಯಾವುದೇ ರೂಪದಲ್ಲಿ ಪ್ರತಿಫಲಿಸಿಲ್ಲ. ಉದಾಹರಣೆಗೆ, ಎಸ್‌ಎಸ್‌ಎ ಮತ್ತು ಆರ್‌ಎಂಎಸ್‌ಎ ಹಾಗೂ ಶಿಕ್ಷಕರ ಶಿಕ್ಷಣಕ್ಕೆ ಪ್ರತ್ಯೇಕವಾಗಿ ಅನುದಾನ ನೀಡಲಾಗಿದೆ. ಎಸ್‌ಎಸ್‌ಎಗೆ ಕಳೆದ ವರ್ಷ 23,500 ಕೋಟಿ ರೂ. ನೀಡಿದ್ದು, ಹಾಲಿ ವರ್ಷ 26,128 ಕೋಟಿ ರೂ. ಮತ್ತು ಆರ್‌ಎಂಎಸ್‌ಎಗೆ ಅನುದಾನವನ್ನು 3,915 ಕೋಟಿ ರೂ.ನಿಂದ 4,213 ಕೋಟಿ ರೂ.ಗೆ ಹೆಚ್ಚಿಸಲಾಗಿದೆ. ಇದನ್ನು ರಾಜ್ಯ ಸರ್ಕಾರಗಳು ಒಟ್ಟುಗೂಡಿಸಿ, ಸಮಗ್ರವಾಗಿ ಬಳಸುತ್ತವೆಯೇ? ನಾನಾ ಯೋಜನೆಗಳಿಗೆ ಅವು ಅನುದಾನವನ್ನು ಹೇಗೆ ಹಂಚುತ್ತವೆ? ಇದರಿಂದ ಎಸ್‌ಎಸ್‌ಎ ಮತ್ತು ಆರ್‌ಎಂಎಸ್‌ಎಯ ಸ್ವರೂಪದಲ್ಲಿ ಏನು ಬದಲಾವಣೆ ಆಗಲಿದೆ? ಈ ಎಲ್ಲ ಪ್ರಶ್ನೆಗಳಿಗೆ ಈಗ ಉತ್ತರ ಸಿಕ್ಕಿಲ್ಲ. ಆದ್ದರಿಂದ, ಗುಣಮಟ್ಟದ ಮೇಲೆ ಆಗಬಹುದಾದ ಪರಿಣಾಮ ವನ್ನು ಲೆಕ್ಕಿಸಲು ಸಾಧ್ಯವಿಲ್ಲ. ಬಹುತೇಕವು ಒಗ್ಗೂಡಿಸಿದ ಯೋಜನೆಯ ವಿನ್ಯಾಸವನ್ನು ಆಧರಿಸಿದೆ.

ಮುಂದಿನ ನಾಲ್ಕು ವರ್ಷಗಳಿಗಾಗಿ ಅನ್ವೇಷಣೆ ಮತ್ತು ಸಂಶೋಧನೆಗೆ ಒಂದು ಲಕ್ಷ ಕೋಟಿ ರೂ. ನಿಗದಿಪಡಿಸಿರುವುದು ಸ್ವಾಗತಾರ್ಹ. ಆದರೆ, ಇದಕ್ಕಾಗಿ ಈ ವರ್ಷ ಮೀಸಲಿಟ್ಟಿರುವ ಮೊತ್ತ ಏನೇನೂ ಸಾಲದು. ಈ ವರ್ಷ ಯೋಜನೆಗೆ ಕೇವಲ 350 ಕೋಟಿ ರೂ. ನೀಡಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, 45 ಕೋಟಿ ರೂ ಹೆಚ್ಚಳ ಮಾತ್ರ. ಭರವಸೆಯನ್ನು ಈಡೇರಿಸಬೇಕಿದ್ದರೆ, ಮುಂದಿನ ಮೂರು ವರ್ಷ ಅಪಾರ ಮೊತ್ತವನ್ನು ನೀಡಬೇಕಾಗುತ್ತದೆ.

ಬಜೆಟ್ ಭಾಷಣದಲ್ಲಿ ಪ್ರಸ್ತಾವಗೊಂಡ ಗುಣಮಟ್ಟಕ್ಕೆ ಸಂಬಂಧಿಸಿದ ಇತರ ಅಂಶಗಳಾದ, ಕಲಿಕೆಯ ಫಲಿತಾಂಶಗಳನ್ನು ಉತ್ತಮಪಡಿಸಲು ನಡೆಸಲಾಗುವ ರಾಷ್ಟ್ರೀಯ ಸಾಧನಾ ಸಮೀಕ್ಷೆಗೆ ಬಜೆಟ್‌ನಿಂದ ಅನುದಾನ ನಿಗದಿಪಡಿಸಬೇಕಿಲ್ಲದ ಕಾರಣ ಅದು ಹಣಕಾಸು ಹೇಳಿಕೆಗಳಲ್ಲಿ ಇಲ್ಲದೆ ಇರುವುದು ಯಾರ ಹುಬ್ಬನ್ನೂ ಏರಿಸುವುದಿಲ್ಲ. ಆದರೆ, ಕಲಿಕಾ ಮಟ್ಟವನ್ನು ಹೆಚ್ಚಿಸಲು ಜಿಲ್ಲಾ ಮಟ್ಟದಲ್ಲಿ ಕಾರ್ಯತಂತ್ರವನ್ನು ರೂಪಿಸಬೇಕೆಂದಿದ್ದರೆ, ಇದನ್ನು ನಿರ್ವಹಿಸಲು ಮತ್ತು ಮೇಲುಸ್ತುವಾರಿ ಮಾಡಲು ಹಾಗೂ ತುರ್ತಿನ ಸಂದರ್ಭದಲ್ಲಿ ಸೂಕ್ತವಾಗಿ ಪ್ರತಿಕ್ರಿಯಿಸಲು ವ್ಯವಸ್ಥೆಯೊಂದನ್ನು ನಿರ್ಮಿಸಬೇಕಿದ್ದು, ಅದಕ್ಕೆ ಹೂಡಿಕೆ ಮಾಡಬೇಕಾಗುತ್ತದೆ. ಈ ಸವಾಲನ್ನು ಜಿಲ್ಲಾಧಿಕಾರ ಹಾಗೂ ಉಪ ಜಿಲ್ಲಾ ಹಂತದ ಆಡಳಿತ ವ್ಯವಸ್ಥೆ ಹೇಗೆ ನಿರ್ವಹಿಸುತ್ತದೆ ಎನ್ನುವುದು ಆಸಕ್ತಿ ಹುಟ್ಟಿಸುವ ಅಂಶ. ಈ ಚಟುವಟಿಕೆಗೆ ಹಣಕಾಸಿನ ನೆರವಿನ ಅಗತ್ಯವಿದೆ. ಪ್ರಾಯಶಃ ಮುಂದಿನ ವರ್ಷದ ಬಜೆಟ್‌ನಲ್ಲಿ ಇದು ಪ್ರತಿಫಲಿತವಾಗಬಹುದು.



ಈ ವರ್ಷದ ಬಜೆಟ್‌ನ ಪ್ರಮುಖ ಸಂದೇಶವೇನೆಂದರೆ, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಆದ್ಯತೆ. ಉತ್ತಮ ಎನ್ನಬಹುದಾದ ಬಹಳಷ್ಟು ಸಂದೇಶಗಳು ಬಂದಿವೆ. ಆದರೆ, ಆದ್ಯತೆಗೆ ಅನುಗುಣವಾಗಿ ಈ ವರ್ಷ ಅನುದಾನ ನಿಗದಿಯಾಗಿಲ್ಲ. ಘೋಷಣೆಗಳಿಗೆ ಅನುಗುಣವಾಗಿ ಸಂಪನ್ಮೂಲ ನಿಗದಿಯಾಗಿಲ್ಲ ಅಥವಾ ಸಂಪನ್ಮೂಲದ ಕ್ರೋಢೀಕರಣ ಹೇಗೆ ಎನ್ನುವ ಸೂಚನೆಗಳನ್ನು ನೀಡಿಲ್ಲ. ಇದರಿಂದ ಏಳುವ ಬಹು ಮುಖ್ಯ ಪ್ರಶ್ನೆಯೆಂದರೆ, ಇದಕ್ಕಾಗಿ ಸರ್ಕಾರ ಬಜೆಟ್‌ಗೆ ಹೊರತಾದ ಇಲ್ಲವೇ ಖಾಸಗಿ ಸಂಪನ್ಮೂಲವನ್ನು ಕ್ರೋಢೀಕರಿಸಲು ಯೋಜಿಸಿದೆಯೇ? ಇದು ಸಾರ್ವಜನಿಕ ಶಿಕ್ಷಣ ಕ್ಷೇತ್ರದ ಭವಿಷ್ಯದ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಸಾರ್ವಜನಿಕ ಕ್ಷೇತ್ರದಲ್ಲಿ ಈ ಬಗ್ಗೆ ಸಮಗ್ರ–ವ್ಯಾಪಕ ಚರ್ಚೆ ನಡೆಯಬೇಕಿದೆ.

ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟ ಹೆಚ್ಚಳಕ್ಕೆ ತಂತ್ರಜ್ಞಾನದ ಬಳಕೆಗೆ ಒತ್ತು ನೀಡಿರುವುದು ಕೂಡ ಒಂದು ಪರಿವರ್ತನೆಯಾಗಿದ್ದು, ಮೂಲಸೌಲಭ್ಯದ ಕೊರತೆ ಮಾತ್ರವಲ್ಲದೆ ಇದರಿಂದ ಕಲಿಕೆಯ ಮೇಲೆ ಯಾವ ಪರಿಣಾಮ ಉಂಟಾಗಲಿದೆ ಎನ್ನುವ ಕುರಿತು ಚರ್ಚೆ ಆಗಬೇಕಿದೆ. ಶೈಕ್ಷಣಿಕ ಕ್ಷೇತ್ರದ ಗಂಭೀರ ಸಾಂಸ್ಥಿಕ ಸಮಸ್ಯೆಗಳನ್ನು ಬದಿಗೆ ಸರಿಸಲು ತಂತ್ರಜ್ಞಾನದ ನೆಪ ಬಳಕೆಯಾಗುತ್ತಿದೆಯೇ? ಸರ್ಕಾರ ತತ್‌ಕ್ಷಣದ ಪರಿಹಾರಗಳನ್ನು ಹುಡುಕುತ್ತಿದ್ದು, ಶೈಕ್ಷಣಿಕ ಗುಣಮಟ್ಟ ಹಾಗೂ ಕಲಿಕಾ ಮಟ್ಟದ ಕುಸಿತದ ಸಮಸ್ಯೆಯ ಪರಿಹಾರಕ್ಕೆ ನಿರಂತರ ಅಗತ್ಯ ಕ್ರಮಗಳನ್ನು ಜಾರಿಗೊಳಿಸಬೇಕಿದೆ. ❒

ಒಳಗೊಳ್ಳುವಿಕೆ

# ವ್ಯವಸಾಯ; ಅನುಶೋಧನೆಗಳಿಗೆ ಮಹತ್ವ

* ಡಾ. ಜೆ.ಪಿ ಮಿಶ್ರಾ
** ಶಿವಲಿಕ ಗುಪ್ತಾ



**ಗ್ರಾಮಾಭಿವೃದ್ಧಿಯಾದರೆ, ಕೃಷಿ ಕ್ಷೇತ್ರ ಸುಸ್ಥಿರ ಉದ್ಯಮವಾಗಿ ರೂಪುಗೊಳ್ಳಲು ಸಾಧ್ಯ ಎಂಬುದನ್ನು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಗುರುತಿಸಲಾಗಿದೆ. ಅದಕ್ಕೆ ತಕ್ಕಂತೆ ಯೋಜನೆಗಳನ್ನು ರೂಪಿಸಲಾಗಿದೆ. ಈ ಮೂಲಕ ಒಳಗೊಳ್ಳುವಿಕೆ, ಸಂಶೋಧನೆ, ಉದ್ಯೋಗ ಮತ್ತು ಸುಸ್ಥಿರ ಕ್ಷೇತ್ರಗಳಿಗೆ ಆದ್ಯತೆ ನೀಡಿ, ರೈತರ ಕಲ್ಯಾಣಕ್ಕೆ ಒತ್ತು ನೀಡಲಾಗಿದೆ.**

ಪ್ರಸಕ್ತ ಮುಂಗಡ ಪತ್ರದಲ್ಲಿ ಕೃಷಿ ಕ್ಷೇತ್ರವನ್ನು ಆರ್ಥಿಕವಾಗಿ ಬಲಗೊಳಿಸಲು ಹೆಚ್ಚಿನ ಮಹತ್ವ ನೀಡಲಾಗಿದೆ. ಕೃಷಿ ಕ್ಷೇತ್ರದ ಆರ್ಥಿಕ ಬಲವರ್ಧನೆಗಾಗಿ ಒಳಗೊಳ್ಳುವಿಕೆ, ಅನುಶೋಧನೆಗಳು ಹಾಗೂ ಅದರ ಆಚೆಗೂ ದೃಷ್ಟಿ ಹರಿಸುವಂತಹ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸಲಾಗಿದೆ. ಕೃಷಿ ವಲಯದಲ್ಲಿ ಉತ್ಪಾದನೆ ಮಾತ್ರವಲ್ಲದೆ ಆದಾಯಕ್ಕೂ ಒತ್ತುಕೊಟ್ಟಿರುವುದು ವಿಶೇಷ.

ದೇಶ ಆಹಾರದ ಕೊರತೆ ಹಂತದಿಂದ ಮೇಲೆದ್ದು, ರಫ್ತು ಮಾಡುವಷ್ಟು ಪ್ರಮಾಣದಲ್ಲಿ ಆಹಾರ ಉತ್ಪಾದಿಸುತ್ತಿದ್ದರೂ, ಪೂರಕ ವಾತಾವರಣ ಕೊರತೆಯಿಂದಾಗಿ ಕೃಷಿ ವಲಯ ಸಂಕಷ್ಟ ಅನುಭವಿಸುತ್ತಿದೆ. ಹೀಗಾಗಿ ಒಂದು ಕಡೆ ಕೃಷಿ ಭೂಮಿ ಕ್ಷೀಣವಾಗುತ್ತಿದೆ. ಸಂಪನ್ಮೂಲಗಳ ಕೊರತೆ ಒಳಸುರಿಗಳ ಹೆಚ್ಚಳದ ಜತೆಗೆ ಕೂಲಿ ಕಾರ್ಮಿಕರ ಸಮಸ್ಯೆಯೂ ಕೃಷಿ ಕ್ಷೇತ್ರದಲ್ಲಿ ಲಾಭ ಗಣನೀಯವಾಗಿ ಕಡಿಮೆಯಾಗಲು ಕಾರಣವಾಗಿದೆ.

2022 ರ ಹೊತ್ತಿಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿಯನ್ನು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಹೊಂದಿದ್ದಾರೆ. ಇದಕ್ಕೆ ಪೂರಕವಾಗಿ ಯೋಜನೆಗಳನ್ನು ಬಜೆಟ್ ರೂಪಿಸಿದೆ. ಇದೇ ಹಿನ್ನೆಲೆಯಲ್ಲಿ ಈ ಬಾರಿಯ ಮುಂಗಡ ಪತ್ರದಲ್ಲಿ ಕೃಷಿ ವಲಯಕ್ಕೆ ಹೆಚ್ಚಿನ ಒತ್ತು ಕೊಡಲಾಗಿದೆ. ಜತೆಗೆ ಕೃಷಿಕರ ಶ್ರೇಯೋಭಿವೃದ್ಧಿಗೂ ಆದ್ಯತೆ ನೀಡಲಾಗಿದೆ.

ಕೃಷಿಕರ ಸಂಕಷ್ಟವನ್ನು ದೂರಗೊಳಿಸಲು ಉತ್ಪಾದನೆ, ಸಂಸ್ಕರಣೆ ಹಾಗೂ ಮಾರುಕಟ್ಟೆಯನ್ನು ಬಲಗೊಳಿಸಬೇಕಿದೆ. ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆ, ಮೌಲ್ಯವರ್ಧನೆ, ಕೃಷಿ ವಹಿವಾಟು ಈ ಕ್ಷೇತ್ರಗಳು ಕೃಷಿಕರ ಆದಾಯ ಹೆಚ್ಚಿಸುವಲ್ಲಿ ಮಹತ್ವದ ಪಾತ್ರವಹಿಸಲಿವೆ ಎಂದು ಬಜೆಟ್‌ನಲ್ಲಿ ವಿಶ್ಲೇಷಿಸಲಾಗಿದೆ.

### ಮುಂಗಡ ಪತ್ರದಲ್ಲಿ ಹೆಚ್ಚಿನ ಅನುದಾನ

'2018–19ರ ಬಜೆಟ್ ನಲ್ಲಿ ಬಹು ಆಯಾಮದ ಕಾರ್ಯತಂತ್ರದ ಮೂಲಕ ಪರಿಣಾಮಕಾರಿಯಾಗಿ ಕೃಷಿಕರ ಸಂಕಷ್ಟಗಳನ್ನು ದೂರಮಾಡುವ ಗುರಿ ಹೊಂದಲಾಗಿದೆ ಎಂದು ಸಚಿವ ಶ್ರೀ ಜೇಟ್ಲಿ ಸ್ಪಷ್ಟಪಡಿಸಿದ್ದಾರೆ.

### ಅನುಶೋಧನೆ

2018–19 ರಲ್ಲಿ ಕೃಷಿ ಕ್ಷೇತ್ರಕ್ಕೆ ಹಣ ಶೇಕಡ 15 ರಷ್ಟು ಹೆಚ್ಚು ಮಾಡಿರುವುದು ಕಡಿಮೆ ಎಂದು ಮೇಲ್ನೋಟಕ್ಕೆ ಕಂಡರೂ ಕಳೆದ ವರ್ಷಕ್ಕಿಂತ ಈ ಬಾರಿ ಪ್ರಧಾನ ಮಂತ್ರಿ ಫಸಲು ಯೋಜನಾ ಬೆಳೆ ವಿಮೆಗೆ ಶೇಕಡ ರಷ್ಟು 22 ಹಂಚಿಕೆ ಹೆಚ್ಚಿಸಿರುವುದು ಗಮನಿಸಬೇಕಾದ ಅಂಶವಾಗಿದೆ.

ಸಾವಯವ ಕೃಷಿ ಸರಣಿ ಯೋಜನೆಗಳು, ಒಳಸುರಿಗಳಿಗೆ ಸಾಲ ಸೌಲಭ್ಯ, ಒಟ್ಟಾರೆ ಕೃಷಿಕರ ಶ್ರೇಯೋಭಿವೃದ್ಧಿಗೆ, ಕಲ್ಯಾಣಕ್ಕೆ ಭದ್ರ ಬುನಾದಿಯ ಕಲ್ಲುಗಳಾಗಿವೆ. ಕೇಂದ್ರ ಸರ್ಕಾರವು ಬೀಜಗಳಿಗೆ ಬೇಡಿಕೆ ಬಂದಾಗಲೆಲ್ಲಾ ಪೂರೈಸುತ್ತಿದೆ, ಅದಕ್ಕಾಗಿಯೇ ಹಣ ಮೀಸಲಿಡಲಾಗಿದೆ. ಇದುವರೆಗೂ ಕೃಷಿ ವಲಯದಲ್ಲಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಆದ್ಯತೆ ಕಡಿಮೆ ಇತ್ತು.

* ಸಲಹಾಕಾರರು (ಕೃಷಿ), ನೀತಿ ಆಯೋಗ. E-mail : mishrajaip@gmail.com

ಆದರೆ, 2018-19 ರ ಹಣಕಾಸು ವರ್ಷದಲ್ಲಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆಯನ್ನು ಬಲಗೊಳಿಸಲು ಹೆಚ್ಚಿನ ಹಣ ನೀಡಲಾಗಿದೆ. ಆಹಾರ ಸಂಸ್ಕರಣಾ ಕೈಗಾರಿಕಾ ವಲಯಕ್ಕೆ 2017-18 ಕ್ಕಿಂತ 2018-19 ರಲ್ಲಿ ಶೇಕಡ 100 ರಷ್ಟು ಹೆಚ್ಚು ಹಣ ಮೀಸಲಿಡಲಾಗಿದೆ.

ಹಣಕಾಸು ವರ್ಷ 2016-17 ಮತ್ತು 2017-18 ಕ್ಕೆ ಹೋಲಿಸಿದರೆ 2018-19 ರ ಆಯವ್ಯಯದಲ್ಲಿ ಸ್ಪಷ್ಟವಾಗಿ, ನೇರವಾಗಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕಾಗಿ ಮೀಸಲಿಡಲಾಗಿದೆ. ಹಂಚಿಕೆ ವಿವರವನ್ನು ಪಟ್ಟಿ – 1 ರಲ್ಲಿ ಕೊಡಲಾಗಿದೆ.

| ಪಟ್ಟಿ 1 : ಕೃಷಿ ಸಚಿವಾಲಯ ಮತ್ತು ಆಹಾರ ಸಂಸ್ಕರಣಾ ಉದ್ಯಮ ಸಚಿವಾಲಯಕ್ಕೆ ಮುಂಗಡ ಪತ್ರದಲ್ಲಿ ಹೆಚ್ಚಿನ ಅನುದಾನ | | | | |
|---|---|---|---|---|
| ಇಲಾಖೆ / ಸಚಿವಾಲಯ | 2016-17 | 2017-18 | 2018-19 | % ಶೇ. ಶೇಕಡಾವಾರು ಬದಲಾವಣೆ |
| ಕೃಷಿ ಸಚಿವಾಲಯ | 44,500 | 50,264 | 57,600 | 15% |
| ಕೃಷಿ, ಸಹಕಾರಿ ಮತ್ತು ಕೃಷಿಕರ ಕಲ್ಯಾಣ ಇಲಾಖೆ | 36,912 | 41,105 | 46,700 | 14% |
| ಪಶು ಸಂಗೋಪನೆ, ಡೇರಿ ಮತ್ತು ಮೀನುಸಾಕಣೆ ಇಲಾಖೆ | 1,858 | 2,167 | 3,100 | 43% |
| ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ | 5,729 | 6,992 | 7,800 | 12% |
| ಕೃಷಿಕರ ಕಲ್ಯಾಣ ಆಹಾರ ಸಂಸ್ಕರಣಾ ಉದ್ಯಮಗಳ ಸಚಿವಾಲಯ | 713 | 715 | 1,400 | 96% |

**ಮಾದರಿ ಬದಲಾವಣೆ : ವಿಸ್ತೃತ ಅವಕಾಶ**

2011 ರ ಜನಗಣತಿಯ ಪ್ರಕಾರ ಶೇಕಡ 55 ರಷ್ಟು ಕೃಷಿಕರು ಕೃಷಿ ಕಾರ್ಮಿಕರಾಗಿದ್ದಾರೆ. ಹಾಗೆಯೇ ಎಸ್‌ಇಸಿಸಿ 2011 ಮಾಹಿತಿ ಪ್ರಕಾರ ಶೇಕಡ 56.4 ಗ್ರಾಮೀಣರು ಭೂರಹಿತರಾಗಿದ್ದಾರೆ. 16.44 ದಶಲಕ್ಷ ಮಂದಿ ಜಾನುವಾರು, ಪಶುಪಾಲನೆ ಹಾಗೂ ಮೀನು ಸಾಕಾಣಿಕೆಯನ್ನು ತಮ್ಮ ಜೀವನೋಪಾಯವಾಗಿ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಈ ಎಲ್ಲಾ ಅಂಕಿ ಸಂಖ್ಯೆಯನ್ನು ಗಮನಿಸಿ ಬಜೆಟ್ ಕೃಷಿಯನ್ನು ಉದ್ಯಮವಾಗಿ ಪರಿಗಣಿಸಿ ಕೃಷಿಕರಿಗೆ ಸಹಾಯವಾಗುವಂತಹ ಯೋಜನೆಗಳನ್ನು ನಿಯೋಜಿಸಲಾಗಿದೆ. ಸಣ್ಣ ಹಾಗೂ ಅತಿ ಸಣ್ಣ ರೈತರು, ಹೈನುಗಾರಿಕೆಯನ್ನು ಅವಲಂಬಿಸುವವರು,

| ಪಟ್ಟಿ 2 : ಕೃಷಿ ಭೂಮಿ, ಕೃಷಿ ವಹಿವಾಟಿನ ವಲಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ | | | | | |
|---|---|---|---|---|---|
| ಕಾರ್ಯ ಆದ್ಯತಾ ವಲಯಗಳು | ಕೇಂದ್ರ ಸರ್ಕಾರದ ಯೋಜನೆಗಳು | 2016-17 | 2017-18 | 2018-19 | %ಬದಲಾವಣೆ |
| ಹಾನಿ ನಿರ್ವಹಣೆ | ನಿರ್ವಹಣೆ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ | 11,051.00 | 10,699.00 | 13,000.00 | 22% |
| ಸಾವಯವ ಕೃಷಿ | ಎನ್‌ಇಆರ್‌ಗೆ ಸಾವಯವ ಮೌಲ್ಯ ಸರಣಿ ಅಭಿವೃದ್ಧಿ | 48.20 | 100 | 160 | 60% |
| ಉನ್ನತ ಮೌಲ್ಯದ ಉತ್ಪನ್ನಗಳು: | ಅಭಿವೃದ್ಧಿ ತೋಟಗಾರಿಕೆ ಅಭಿವೃದ್ಧಿ ಮಂಡಳಿ (ಮಿಶನ್) | 1,493.07 | 2,190.00 | 2536 | 16% |
| ಉತ್ಪನ್ನಗಳು: ಗುಣಮಟ್ಟದ ಒಳಸುರಿಗಳು ಮತ್ತು ಟಿ ಒ ಟಿ | ಬೀಜ ಮತ್ತು ನಾಟಿ | 167.85 | 480.00 | 332.00 | -31% |
| | ಸಸ್ಯ ಸಂರಕ್ಷಣೆ | 137.86 | 62.66 | 129.25 | 106% |
| | ಸಂರಕ್ಷಣೆ ಕೃಷಿ ವಿಸ್ತರಣೆ | 590.46 | 821.00 | 1,020.00 | 24% |
| | ಕೃಷಿ ಯಂತ್ರೋಪಕರಣಗಳು | 366.93 | 776.71 | 1,165.29 | 50% |
| ಒಳಸುರಿಗಳು ನೀರಿನ ಸದ್ಬಳಕೆಗೆ ಪ್ರಾಶಸ್ತ್ಯ | ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆ – ಹರ್ ಖೇತ್ ಕೋ ಪಾನಿ (ಪ್ರತಿ ಕೃಷಿ ಭೂಮಿಗೂ ನೀರು) | 439.8 | 1888 | 2600 | 79% |
| | ಪ್ರಧಾನ ಮತ್ರಿ ಕಿಸಾನ್ ಸಂಪದ ಯೋಜನೆ – ಪರ್ ಡ್ರಾಪ್ ಮೋರ್ (ಹನಿ ನೀರು – ಹೆಚ್ಚು ಬೆಳೆ) | 1991.25 | 3000 | 4000 | 33% |
| ಸದ್ಬಳಕೆ ಕೃಷಿಕರಿಗೆ ಸಣ್ಣ ಮೊತ್ತದ ಸಾಲ ಸೌಲಭ್ಯ | ಹೆಚ್ಚು ಕೃಷಿಕರಿಗೆ ಕೃಷಿ ಸಾಲ ಸೌಲಭ್ಯ | 900000 | 1000000 | 1100000 | 10% |
| ಡೇರಿಯ ಕ್ರಾಂತಿ (ಬಿಳಿ ಕ್ರಾಂತಿ) | ಪಶು ಧನ ಮಂಡಳಿ (ಮಿಶನ್) ಎಲ್‌ಎಚ್‌ಡಿಸಿ | 1309.16 | 1632.97 | 2219.89 | 36% |
| ಮತ್ಸ್ಯಾಭಿವೃದ್ಧಿ ಕ್ರಾಂತಿ (ನೀಲಿ ಕ್ರಾಂತಿ) | ಮತ್ಸ್ಯೋದ್ಯಮದಲ್ಲಿ ಸಮಗ್ರ ಅಭಿವೃದ್ಧಿ | 387.81 | 301.73 | 642.61 | 113% |
| ಸಂಸ್ಕರಣೆ ಮತ್ತು ಮೌಲ್ಯವರ್ಧನೆ | ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆ | – | – | 1313.08 | – |

ಮೀನುಸಾಕಣಿಕೆದಾರರಿಗೆ ಅವರವರ ಮೂಲ ಕ್ಷೇತ್ರಗಳಲ್ಲಿ ಹೆಚ್ಚಿನ ತರಬೇತಿ ನೀಡಲು, ಸಂಪನ್ಮೂಲಗಳ ಬಳಕೆಗಳು ಪೋಲಾಗದಂತೆ ಮಾಡಲು ಸಹಕಾರಿಯಾಗಿದೆ ಹಾಗೂ ಅವರವರ ಕ್ಷೇತ್ರದಲ್ಲಿ ಹೆಚ್ಚಿನ ಆದಾಯವನ್ನು ಗಳಿಸುವುದಕ್ಕೆ ಈ ಎಲ್ಲಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದಾಗಿ ಸಂಪನ್ಮೂಲದ ವಿವೇಚನಾಯುಕ್ತ ಬಳಕೆಗೆ ಇನ್ನಷ್ಟು ನೆರವಾಗಲಿದೆ.

ಕೃಷಿ ಕ್ಷೇತ್ರದಲ್ಲಿ ಒಟ್ಟು ಶೇಕಡ 50ರಷ್ಟು ಭೂ ರಹಿತ ಕಾರ್ಮಿಕರಿದ್ದಾರೆ. ಅವರಿಗೆ ಕೃಷಿ ಸಂಬಂಧಿ ಕಾರ್ಯ ನಿಯೋಜಿಸುವುದರಿಂದ ಅವರ ಆದಾಯವನ್ನು ಹೆಚ್ಚಿಸಲು ಸಾಧ್ಯ.

ಕೇಂದ್ರ ಸರ್ಕಾರವು ರೈತರ ಯೋಗಕ್ಷೇಮಕ್ಕೆ ಅವರ ಆದಾಯವನ್ನು ದ್ವಿಗುಣಗೊಳಿಸಲು ಸ್ಪಷ್ಟವಾದ ಮಾರ್ಗದರ್ಶಿಯನ್ನು ಸಿದ್ಧಪಡಿಸಿದೆ. ಈ ಕಾರ್ಯಯೋಜನೆ ಸಿದ್ಧಪಡಿಸಲು ಮೂರು ವರ್ಷಗಳ ಹಿಂದಿನ ದಾಖಲೆಯನ್ನು ಇಟ್ಟುಕೊಂಡು ಕೃಷಿ ಉತ್ಪಾದನೆಯಿಂದ ಕೊಯ್ಲೋತ್ತರ ತಂತ್ರಜ್ಞಾನದವರೆಗೆ ಎದುರಿಸುವ ಸವಾಲುಗಳನ್ನು ವಿಶ್ಲೇಷಿಸಲಾಗಿದೆ. ಪ್ರಸ್ತುತ ಸರ್ಕಾರ ಬಂದ ಎರಡನೇ ವರ್ಷದಲ್ಲೇ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯನ್ನು ನಿಯೋಜಿಸಲಾಯಿತು. ಪ್ರಸ್ತುತ ಶೇಕಡ ಒಟ್ಟಾರೆ 26.50 ಕೃಷಿಕರು ಈ ಯೋಜನೆಗೆ ಒಳಪಟ್ಟಿದ್ದಾರೆ. ತುಂತುರು ನೀರಾವರಿ, ಮಣ್ಣಿನ ಆರೋಗ್ಯ ಮತ್ತು ಸಾವಯವ ಕೃಷಿ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿಗೆ ಸಹಾಯಕವಾಗಲಿದೆ ಎಂಬುದು ಸರ್ಕಾರದ ಉದ್ದೇಶವಾಗಿದೆ. ಮಣ್ಣಿನ ಆರೋಗ್ಯ ಚೀಟಿಗಳನ್ನು 11.05 ಕೋಟಿ ಕೃಷಿಕರಿಗೆ ವಿತರಿಸಲಾಗಿದೆ. 470 ಮಾರುಕಟ್ಟೆಗಳನ್ನು ಇ–ನಾಮ್‌ಗೆ ಲಿಂಕ್ ಮಾಡಲಾಗಿದೆ.


**ಕಡೆಗಣಿಸಿದ ವಿಷಯಗಳಿಗೆ ಮಾನ್ಯತೆ**

2004ರಿಂದ ಈಚೆಗೆ ಕೃಷಿಕ್ಷೇತ್ರಕ್ಕೆ ಸಾಂಸ್ಥಿಕ ಸಾಲ ನೀಡುವ ಸಲುವಾಗಿ ಬಜೆಟ್ ಹಣ ಹೆಚ್ಚಿಸುತ್ತಲೇ ಬರಲಾಗಿದೆ.


ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ 11 ಲಕ್ಷ ಕೋಟಿಯಷ್ಟು ಕೃಷಿ ಸಾಲ ನೀಡಲು ಗುರಿ ನಿಗದಿಪಡಿಸಲಾಗಿದೆ. ಜತೆಗೆ ಕೃಷಿ ಉತ್ಪಾದನೆ ಹೆಚ್ಚಿಸಲು ಅನುಕೂಲವಾಗುವ ದೃಷ್ಟಿಯಿಂದ ಕೃಷಿ ಕ್ಷೇತ್ರದಲ್ಲಿ ಖಾಸಗಿಯವರಿಗೆ ಹೂಡಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಈ ಕೃಷಿ ಸಾಲ ಎನ್ನುವುದು ಕೆಲವೇ ಕೆಲವು ಭೂ ಹಿಡುವಳಿದಾರರಿಗೆ (ತಮ್ಮ ಹೆಸರಿನಲ್ಲಿ ಆಸ್ತಿ ಹೊಂದಿರುವುದು ಅಥವಾ ಆ ಭೂಮಿಯ ಒಡೆತನ ಇರುವವರಿಗೆ) ಮಾತ್ರ ಲಭ್ಯವಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಗುತ್ತಿಗೆ ಆಧರಿತ ಕೃಷಿ ಮಾಡುವವರಿಗೆ ಸಾಲ ಸಿಗುತ್ತಿದೆ. ಗುತ್ತಿಗೆ ಆಧಾರದ ಮೇಲೆ ಕೃಷಿ ಮಾಡುವವರನ್ನು ಲೆಕ್ಕ ಹಾಕುವುದು ಕಷ್ಟ. ಇಂಥವರಿಗೆ ಸಾಲ ಸಿಗುವುದೂ ಕಷ್ಟ. ಅಂಕಿ ಅಂಶದ ಪ್ರಕಾರ, ದೇಶದಲ್ಲಿ ಗುತ್ತಿಗೆ ಕೃಷಿ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಆದರೆ

**ಚಿತ್ರ 2 : ಗುತ್ತಿಗೆ ಕೃಷಿ ಪಾಲು**




**ಚಿತ್ರ 1 : ರಾಜ್ಯವಾರು ಗುತ್ತಿಗೆ ಪ್ರಮಾಣ**




ಈ ಗುತ್ತಿಗೆ ಕೃಷಿಕರಲ್ಲಿ 1/3ರಷ್ಟು ರೈತರು ಭೂರಹಿತರಾಗಿದ್ದಾರೆ. ಶೇಕಡ 56ರಷ್ಟು ಕೃಷಿ ಸಣ್ಣ ಹಿಡುವಳಿದಾರರಾಗಿದ್ದಾರೆ.

ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಸಮೀಕ್ಷೆ ಪ್ರಕಾರ ಇತ್ತೀಚೆಗಿನ ವರ್ಷಗಳಲ್ಲಿ ಗುತ್ತಿಗೆ ಆಧರಿತ ಕೃಷಿಕರ ಪ್ರಮಾಣ ಹೆಚ್ಚಾಗಿದೆ. ಕೆಲವು ರಾಜ್ಯಗಳಲ್ಲಿರುವ ಒಟ್ಟು ಹಿಡುವಳಿಯಲ್ಲಿ ಶೇಕಡ 25 ಭಾಗವನ್ನು ಗುತ್ತಿಗೆ ಕೃಷಿಕರು ಉಳುಮೆ ಮಾಡುತ್ತಿದ್ದಾರೆ (ಚಿತ್ರ 1). ಇನ್ನೊಂದು ಆಸಕ್ತಿಕರ ಸಂಗತಿ ಎಂದರೆ 1991ರಿಂದ ಇಲ್ಲಿವರೆಗೆ ದೇಶದಲ್ಲಿ ಅಪ್ಪಟ ಗುತ್ತಿಗೆ ಕೃಷಿಕರ ಪ್ರಮಾಣ 2.5ರಷ್ಟು ಹೆಚ್ಚಾಗಿದೆ. (1991ರಲ್ಲಿ ಶೇ 12ರಷ್ಟಿದ್ದ ಗುತ್ತಿಗೆ ಕೃಷಿಕರ ಪ್ರಮಾಣ 2012–13ರಲ್ಲಿ ಶೇ 30ರಷ್ಟು ಆಗಿದೆ). ಕೆಲವು ರಾಜ್ಯಗಳಲ್ಲಿ 2003 ರಿಂದ 2013 ರವರೆಗಿನ ಗುತ್ತಿಗೆ ಕೃಷಿಕರ ಪ್ರಮಾಣ ದ್ವಿಗುಣವಾಗಿದೆ.(ಚಿತ್ರ 2).

ಗುತ್ತಿಗೆ ಕೃಷಿಕರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವ ಪರಿಣಾಮದಿಂದಾಗಿ ಸರ್ಕಾರದ ಎಲ್ಲ ಯೋಜನೆಗಳಲ್ಲೂ (ಪ್ರೋತ್ಸಾಹ ಧನ ಅಥವಾ ಪರಿಹಾರ ಧನ ಅಥವಾ ಯಾವುದೇ ಸರ್ಕಾರದ ಕಾರ್‍ಯಕ್ರಮಗಳಿಲ್ಲದೇ) ಆಹಾರ ಭದ್ರತೆ ವಿಚಾರದಲ್ಲಿ ಗುರಿ ಸಾಧಿಸಿದಂತಾಗಿದೆ. ಈ ಬೆಳವಣಿಗೆ ಕೃಷಿ ಕ್ಷೇತ್ರದಲ್ಲಿ ನಿರಂತರ ಹಾಗೂ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ಬೃಹತ್ ಪ್ರಮಾಣದ ರೈತರಿಗೆ ಯಾವ ರೀತಿ ಸಾಲ ಸೌಲಭ್ಯಗಳನ್ನು ನೀಡಬೇಕು ಎಂದು ಸ್ಪಷ್ಟಪಡಿಸುತ್ತಿದೆ.

2018–19ರ ಕೇಂದ್ರ ಆಯವ್ಯಯ ಕೃಷಿ ಕ್ಷೇತ್ರಕ್ಕೆ ಸಾಲ ಸೌಲಭ್ಯ ಕೊಡುವುದರ ಕುರಿತು ಹೆಚ್ಚು ಗಮನ ಹರಿಸಿದೆ. ಗುತ್ತಿಗೆ ಕೃಷಿಕರ

ಬಲವರ್ಧನೆ ಮತ್ತು ಅವರಿಗೆ ಬೆಳೆ ಸಾಲ ಪಡೆಯುವುದರ ಮೂಲಕ ತಮ್ಮ ಆರ್ಥಿಕ ಸಾಮರ್ಥ್ಯ ಮತ್ತು ಸಾಮಾಜಿಕ ಸ್ಥಿತಿಯನ್ನು ಉನ್ನತೀಕರಿಸಿಕೊಳ್ಳಲು, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗ ಸೃಷ್ಟಿಯ ಬಗ್ಗೆಯೂ ನೀತಿ ಆಯೋಗ ಕೆಲವೊಂದು ಕಡ್ಡಾಯ ನಿಯಮಗಳನ್ನು ರೂಪಿಸುವ ಪ್ರಯತ್ನದಲ್ಲಿದೆ.

ಮೀನುಗಾರರು ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಕೊಂಡಿರುವ ಕೃಷಿಕರಿಗೆ 'ಕಿಸಾನ್ ಕ್ರೆಡ್ರಿಟ್ ಕಾರ್ಡ್' ಯೋಜನೆಯಡಿ ಸಾಲ ಪಡೆಯಲು ಅವಕಾಶ ಕಲ್ಪಿಸಿರುವುದು ಪ್ರಸಕ್ತ ಸಾಲಿನ ಕೇಂದ್ರ ಬಜೆಟ್‌ನ ಮತ್ತೊಂದು ವಿಶೇಷ.

ಮೀನುಗಾರಿಕೆಮತ್ತುಪಶುಸಂಗೋಪನೆ ಕ್ಷೇತ್ರಗಳು ಶೇ. 27 ಪ್ರಮಾಣದಷ್ಟು ದೇಶದ ಪ್ರಗತಿಯ ಪಾಲುದಾರರಾಗಿವೆ. ಈ ಪ್ರಗತಿ ನೇರವಾಗಿ ಸಣ್ಣ, ಅತಿ ಸಣ್ಣ ರೈತರು ಮತ್ತು ಭೂರಹಿತ ಕೃಷಿ ಕುಟುಂಬಗಳ ಮೇಲೆ ಪರಿಣಾಮಬೀರುತ್ತದೆ. ಈ ಕ್ಷೇತ್ರಕ್ಕೆ ಪ್ರಾಮುಖ್ಯತೆ ನೀಡಿರುವ ಪರಿಣಾಮ, ಪಶುಸಂಗೋಪನೆ ಇಲಾಖೆ, ಡೇರಿ ಮತ್ತು ಮತ್ಸ್ಯ ಕೃಷಿ ಇಲಾಖೆಗೆ ತೆಗೆದಿಟ್ಟಿರುವ ಅನುದಾನದ ಪ್ರಮಾಣ ಶೇ 31ರಷ್ಟಾಗಿದೆ. ಆದರೂ, ಈ ಕ್ಷೇತ್ರಗಳ ಮೂಲಸೌಕರ್ಯ ಸೃಷ್ಟಿಗಾಗಿ ಸಾರ್ವಜನಿಕ ಬಂಡವಾಳ ಹೂಡಿಕೆ ಅಗತ್ಯವಿದ್ದು, ಇದನ್ನು ಸರಿಗಟ್ಟಲು 10 ಸಾವಿರ ಕೋಟಿ ರೂಪಾಯಿಗಳ ಎರಡು ನಿಧಿಯನ್ನು ಸ್ಥಾಪಿಸಲಾಗುವುದು.

ರಾಷ್ಟ್ರೀಯ ಆರೋಗ್ಯ ಭದ್ರತಾ ಯೋಜನೆಯಡಿ ದೇಶದ 10 ಕೋಟಿ ಕುಟುಂಬಗಳಿಗೆ ಆರೋಗ್ಯ ವಿಮೆಯನ್ನು ಸರ್ಕಾರ ಘೋಷಿಸಿದೆ. ಸಾವಿರಾರು ಗ್ರಾಮೀಣ ಕುಟುಂಬಗಳು ಈ ಯೋಜನೆಯಡಿ ಒಳಪಡಲಿದ್ದು, ಅದರಲ್ಲಿ ರೈತರೂ ಕೂಡ ಸೇರಲಿದ್ದಾರೆ. ಹಾಗಾಗಿ ಇದು ರೈತರಿಗೂ ವರದಾನವಾಗಿದೆ.

### ಎಲ್ಲ ಬೆಳೆಗೂ ಬೆಂಬಲ ಬೆಲೆ ಮತ್ತು ಮಾರುಕಟ್ಟೆ

ಕೇಂದ್ರ ಸರ್ಕಾರ ಇಲ್ಲಿಯವರೆವಿಗೂ ಪ್ರದೇಶವಾರು ಆಯ್ದ ಬೆಳೆಗಳಿಗಷ್ಟೇ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುತ್ತಿತ್ತು. ಹಾಗೆಯೇ, ಬೆಂಬಲ ಬೆಲೆಯನ್ನು ಉತ್ಪಾದನಾ



ವೆಚ್ಚದ ಮೇಲೆ ನಿಗದಿಗೊಳಿಸುತ್ತಿರಲಿಲ್ಲ. ಇದು ಹಲವು ಜನರ ಟೀಕೆಗೆ ಗುರಿಯಾಗಿತ್ತು.

ಇದನ್ನು ಮನಗಂಡ ಕೇಂದ್ರ ಸರ್ಕಾರ ರೈತರಿಗೆ ಉತ್ತಮ ಬೆಲೆ ನೀಡುವಂತಹ ಹಾಗೂ ಕನಿಷ್ಠ ಬೆಂಬಲ ಬೆಲೆ ಯೋಜನೆಗೆ ಪರ್ಯಾಯವಾಗುವಂತಹ ಯೋಜನೆಯನ್ನು ಸೂಚಿಸುವಂತೆ ನೀತಿ ಆಯೋಗಕ್ಕೆ ನಿರ್ದೇಶನ ನೀಡಿದೆ. ರೈತರು ಅನಿವಾರ್ಯವಾಗಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಉತ್ಪನ್ನಗಳ ಮಾರಾಟ ಮಾಡುವುದನ್ನು ತಪ್ಪಿಸಲು ಸರ್ಕಾರ ಮಧ್ಯಪ್ರವೇಶಿಸುವುದು ಅವಶ್ಯ. ಕೃಷಿ ಉತ್ಪನ್ನಗಳನ್ನು ತಾನೇ ಖರೀದಿಸಿ, ರೈತರಿಗೆ ಮಾರುಕಟ್ಟೆ ಬೆಲೆಗಿಂತ ಉತ್ತಮ ಬೆಲೆ ನೀಡುವಂತಾಗಬೇಕು ಎಂದು ಸರ್ಕಾರ ತಿಳಿಸಿದೆ.

ಕನಿಷ್ಠ ಬೆಂಬಲ ಬೆಲೆಗೆ ಪರ್ಯಾಯವಾಗಿ ಸಂಸದರು ಸೂಚಿಸಿದ ಭಾವಾಂತರ (ಬೆಲೆ ಕೊರತೆ ಪಾವತಿ) ಯೋಜನೆ ಸ್ವಾಗತಾರ್ಹವಾಗಿದ್ದು, ಈ ಯೋಜನೆ ಮೂಲಕ ಉತ್ಪಾದನಾ ವೆಚ್ಚದ ಶೇ 50ರಷ್ಟು ಹಣವನ್ನು ರೈತರಿಗೆ ತಲುಪಿಸಲು ಸಾಧ್ಯವಾಗುತ್ತದೆ. ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳು ಮಾರಾಟವಾದರೆ, ವ್ಯತ್ಯಾಸವಾದ ಬೆಲೆಯನ್ನು ಭರಿಸುವುದು ಈ ಭಾವಾಂತರ ಯೋಜನೆಯ ಉದ್ದೇಶ.

ನೀತಿ ಆಯೋಗ ಕೃಷಿ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಮೇಲೆ ಕಾರ್ಯ ನಿರ್ವಹಿಸುವುದನ್ನು ಕಡ್ಡಾಯಗೊಳಿಸಿದೆ. ಇದರಿಂದ ಸಂಪನ್ಮೂಲಗಳನ್ನು ಗುರುತಿಸಿ, ಭವಿಷ್ಯದ ಬೇಡಿಕೆಗೆ ಅನುಗುಣವಾಗಿ ರೈತರಿಗೆ ಬೆಳೆ ಬೆಳೆಯಲು ಮಾರ್ಗದರ್ಶನ ನೀಡಲು ಅನುಕೂಲವಾಗುತ್ತದೆ.

### ಕೃಷಿ ಜಮೀನಿನ ಬಳಿಗೆ ಮಾರುಕಟ್ಟೆ

ಸೂಕ್ತವಾದ ಮಾರುಕಟ್ಟೆಯ ಕೊರತೆಯ ಕಾರಣದಿಂದಾಗಿ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆ ನಡುವೆ ಬಹುದೊಡ್ಡ ಕಂದಕ ಏರ್ಪಡುತ್ತಿದೆ. ದೇಶದಲ್ಲಿ ಸಣ್ಣ ಮತ್ತು ಅತಿಸಣ್ಣ ಕೃಷಿಕರು ಶೇ 85ರಷ್ಟಿದ್ದು, ಸಣ್ಣ ಪ್ರಮಾಣದಲ್ಲಿ ಬೆಳೆ ಬೆಳೆಯುತ್ತಾರೆ. ಇಂಥ ಕೃಷಿಕರಿಗೆ ಮಾರುಕಟ್ಟೆಯದೇ ಕೊರತೆ. ಸಣ್ಣ ಮತ್ತು ಅತಿ ಸಣ್ಣ ರೈತರು ಮತ್ತು ಸಗಟು ಮಾರುಕಟ್ಟೆ ನಡುವೆ ಸಂಪರ್ಕ ಇಲ್ಲದ ಕಾರಣ, ಮಾರುಕಟ್ಟೆಗಳ ವಿಕೇಂದ್ರೀಕರಣ ಸಾಧ್ಯವಾಗಿಲ್ಲ.

ಈ ಸಂಕಷ್ಟಗಳನ್ನು ಮನಗಂಡ ಕೇಂದ್ರ ರೂ 2000 ಕೋಟಿ ವೆಚ್ಚದಲ್ಲಿ ದೇಶದಾದ್ಯಂತ ಇರುವ 22000 ಗ್ರಾಮೀಣ ನಿಯಮಿತ ಮಾರುಕಟ್ಟೆಗಳನ್ನು, ಗ್ರಾಮೀಣ ಕೃಷಿ ಮಾರುಕಟ್ಟೆ (ಗ್ರಾಮ್ಸ್)ಗಳನ್ನಾಗಿ ಉನ್ನತೀಕರಿಸಲು ತೀರ್ಮಾನಿಸಿದೆ. ಈ ಮಾರುಕಟ್ಟೆಗಳು ಸ್ಥಳೀಯ ಉತ್ಪನ್ನಗಳ ಸಂಗ್ರಹ ಮತ್ತು ಕೃಷಿ ಉತ್ಪನ್ನಗಳ ಜತೆ ಬೇರೆಬೇರೆ ಉತ್ಪನ್ನಗಳ ಚಿಲ್ಲರೆ ಮಾರಾಟಕ್ಕೂ ವೇದಿಕೆಯಾಗಲಿದೆ.

ಗ್ರಾಮ್ಸ್ – ಗ್ರಾಮ ಮಟ್ಟದಲ್ಲಿ ನಡೆಯುವ ಮಾರುಕಟ್ಟೆಯಾದರೂ, ಇಡೀ ದೇಶದಾದ್ಯಂತ ಏಕರೂಪ ಬೆಲೆ ನಿಗದಿಪಡಿಸಲಾಗಿರುತ್ತದೆ. ಗ್ರಾಮೀಣ ಮಾರುಕಟ್ಟೆ ಉತ್ಪನ್ನಗಳನ್ನು ಸಾಗಿಸಲು ಅನುಕೂಲವಾಗುವಂತೆ ಹಾಗೂ ಮಾರುಕಟ್ಟೆ ಮತ್ತು ಗ್ರಾಮಗಳನ್ನು ಸಂಪರ್ಕಿಸಲು ಅನುಕೂಲವಾಗುವಂತೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮೂರನೇ ಹಂತವನ್ನು ಜಾರಿಗೊಳಿಸಲಾಗಿದೆ. ಈ ಯೋಜನೆ ಮೂಲಕ 'ಸರ್ವ ಋತು ರಸ್ತೆ' ಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ.

### ಮೌಲ್ಯ ಸರಣಿ ವ್ಯವಸ್ಥೆ

ಗ್ರಾಮೀಣರ ಜೀವನೋಪಾಯವನ್ನು ಉತ್ತಮಗೊಳಿಸಲು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಗ್ರಾಮೀಣ (ಹಳ್ಳಿ) ಮಟ್ಟದಲ್ಲಿ ಉತ್ತೇಜಿಸುವುದು, ಕೃಷಿ ಮೌಲ್ಯ ಸರಣಿ ಅಭಿವೃದ್ಧಿಗಳು, ಮೂಲ ಸೌಕರ್ಯ ಕಲ್ಪಿಸುವುದು ಮತ್ತು ಬೆಲೆ ನಿಗದಿಗೊಳಿಸುವುದು – ಈ ಅಭಿವೃದ್ಧಿ ಕಾರ್ಯಗಳು ಒಂದು ಹಳ್ಳಿಗೆ ಸೀಮಿತವಾಗದೆ ಸಮೂಹ ಮಟ್ಟದಲ್ಲಿ ಜಾರಿಗೊಳಿಸಬೇಕಾಗಿದೆ. ಹಳ್ಳಿಗಳಲ್ಲದೇ ಗ್ರಾಹಕರಿಗೂ ತಲುಪಿಸುವ ಸಲುವಾಗಿ

ಭವಿಷ್ಯದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಕೃಷಿ ವಹಿವಾಟುಗಳನ್ನು ಉತ್ತೇಜಿಸಲು ಅನುಕೂಲಕರವಾಗಿದೆ. ಇದಕ್ಕಾಗಿ ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಿ ಅದರ ಮೂಲಕ ಮಾಹಿತಿ ವಿಶೇಷತೆಗಳನ್ನು ಒಬ್ಬರಿಂದ ಇನ್ನೊಬ್ಬರಿಗೆ ತಲುಪಿಸಲು ಸಾಧ್ಯವಾಗುತ್ತದೆ. ಹೀಗಾಗಿ ಆಡಳಿತ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ತಾಂತ್ರಿಕ (ಕಂಪ್ಯೂಟರ್) ಸಿಬ್ಬಂದಿ ವರ್ಗದ ಅಗತ್ಯವಿದೆ.

ಕೃಷಿ ಉತ್ಪಾದಕರ ಸಂಸ್ಥೆಯ ಒಂದು ವರ್ಷದ ವಹಿವಾಟು 100 ಕೋಟಿ ತಲುಪುವವರೆಗೂ ಶೇ. 100 ರಷ್ಟು ತೆರಿಗೆಯಲ್ಲಿ ವಿನಾಯಿತಿ ದೊರೆಯಲಿದೆ. ಇದರಿಂದ ಕೃಷಿಕರಿಗೆ ಹಾಗೂ ಸಂಸ್ಥೆಗೂ ಆರ್ಥಿಕವಾಗಿ ಸಹಾಯವಾಗಲಿದೆ.

ಕೃಷಿ ಉತ್ಪಾದಕರ ಸಂಸ್ಥೆಯು ಈರುಳ್ಳಿ, ಆಲೂಗೆಡ್ಡೆ ಮತ್ತು ಟೊಮೆಟೊ ಬೆಳೆಗಳ ಪೂರೈಕೆ – 'ಆಪರೇಶನ್ ಗ್ರೀನ್ಸ್' ಯೋಜನೆ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಇದಕ್ಕಾಗಿ 500 ಕೋಟಿ ರೂಪಾಯಿಗಳಷ್ಟು ಹಣವನ್ನು ಕಾಪು ನಿಧಿಯನ್ನಾಗಿ ತೆಗೆದಿಟ್ಟಿದೆ. ಆಹಾರ ಸಂಸ್ಕರಣಾ ವಲಯಕ್ಕೆ ಇದು ಮಹತ್ವದ ಕೊಡುಗೆಯಾಗಿದೆ.

ನಮ್ಮ ದೇಶದ ಕೃಷಿ ರಫ್ತು ಸಾಮರ್ಥ್ಯ ಮಟ್ಟವನ್ನು ಮುಟ್ಟಲು ಸಾಧ್ಯವಾಗಿಲ್ಲ. ಗುರಿ ಸಾಧನೆಗಾಗಿ ರಫ್ತು ನಿಯಮವನ್ನು ಸರಳೀರಣಗೊಳಿಸಿ, ದೇಶದ 42 ಮೆಗಾ ಫುಡ್ ಪಾರ್ಕಗಳಲ್ಲಿ ಮೂಲ ಸೌಲಭ್ಯ ಹಾಗೂ ಪ್ರಯೋಗಾಲಯಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

### ಉನ್ನತ ಮೌಲ್ಯದ ಉತ್ಪನ್ನಗಳು

ಉನ್ನತ ಮೌಲ್ಯದ ಉತ್ಪನ್ನಗಳಾದ ತೋಟಗಾರಿಕೆ, ಔಷಧೀಯ ಸಸ್ಯಗಳು ಮತ್ತು ಸುಗಂಧದ್ರವ್ಯ ಸಸ್ಯಗಳ ಉತ್ತೇಜನ ಮತ್ತು ಆರ್ಥಿಕ ಅಭಿವೃದ್ಧಿಗೆ ಈ ಬಾರಿಯ ಬಜೆಟ್‌ನಲ್ಲಿ ವಿಶೇಷ ಗಮನಹರಿಸಲಾಗಿದೆ. ದೇಶದಲ್ಲಿ 8 ಸಾವಿರ ಗಿಡಮೂಲಿಕೆಗಳು ಮತ್ತು ಔಷಧೀಯ ಸಸ್ಯ ಪ್ರಭೇದಗಳನ್ನು ಗುರುತಿಸಲಾಗಿದೆ.

ಭಾರತದಲ್ಲಿ ಸುಗಂಧದ್ರವ್ಯ / ಸುಗಂಧ ಸಸ್ಯಗಳ ಮಾರುಕಟ್ಟೆ ಉತ್ತಮವಾಗಿದ್ದು, ಸುಸ್ಥಿರ ಪ್ರಗತಿ ಸಾಧಿಸಿದೆ. ಇದರ ಜತೆಗೆ



ಆರ್ಥಿಕ ತಜ್ಞರು ವಿಶ್ಲೇಷಿಸುವ ಪ್ರಕಾರ, ಭಾರತದಲ್ಲಿ 3169 ಅಮೆರಿಕನ್ ಡಾಲರ್ ನಷ್ಟು ಸುಗಂಧ ದ್ರವ್ಯ ಮತ್ತು ಸುವಾಸನೆ ಬೀರುವ ಸಸ್ಯಗಳು ಮಾರಾಟವಾಗುತ್ತವೆ.

'ಆಪರೇಷನ್ ಹಸಿರು' ಯೋಜನೆ ಬೇಗ ಕೊಳೆಯುವಂತಹ ತೋಟಗಾರಿಕಾ ಉತ್ಪನ್ನಗಳನ್ನು ತ್ವರಿತಗತಿಯಲ್ಲಿ ಮಾರಾಟ ಮಾಡಲು ಉತ್ತೇಜನ ನೀಡುತ್ತದೆ. ಇದಕ್ಕಾಗಿ ಬಜೆಟ್‌ನಲ್ಲಿ 200 ಕೋಟಿಯನ್ನು ಮೀಸಲಿಡಲಾಗಿದೆ. ಈ ಯೋಜನೆಯಿಂದ ಔಷಧೀಯ ಸಸ್ಯಗಳು ಮತ್ತು ಸುಗಂಧ ದ್ರವ್ಯ ತಯಾರಿಸುವ ಸಣ್ಣ ಉದ್ದಿಮೆದಾರರಿಗೆ ಅನುಕೂಲವಾಗಲಿದೆ.

ನೀತಿ ಆಯೋಗ ಕಳೆದೆರಡು ವರ್ಷಗಳಲ್ಲಿ ಕೃಷಿಕ್ಷೇತ್ರದಲ್ಲಿನ ಭವಿಷ್ಯದ ಬೇಡಿಕೆ ಮತ್ತು ಪೂರೈಕೆ ಕುರಿತು ಇತರೆ ಪಾಲುದಾರ ಸಚಿವಾಲಯದೊಂದಿಗೆ ಚರ್ಚಿಸಿದೆ. ಇದಕ್ಕೆ ಈ ಬಜೆಟ್‌ನ ಪ್ರಸ್ತಾವನೆಯಲ್ಲಿ ಅನುದಾನ ಹೆಚ್ಚಿಸುವ ಕುರಿತು ಉತ್ತೇಜನ ನೀಡಲಾಗಿದೆ.

### ಸ್ವಾಭಾವಿಕ ಸಂಪನ್ಮೂಲ ಮತ್ತು ಸುಸ್ಥಿರತೆ

ಈ ಬಾರಿಯ ಬಜೆಟ್‌ನಲ್ಲಿ ಬೆಲೆ ಮತ್ತು ಉತ್ಪಾದನೆಗೆ ನೀಡಿರುವ ಗಮನವನ್ನೇ, ಪ್ರಸ್ತುತವಿರುವ ಆಧುನಿಕ ದಿನಗಳ ಸುಸ್ಥಿರತೆ ಅಂಶಗಳಿಗೂ ನೀಡಲಾಗಿದೆ. ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್‌ಪಿಒ) ಸಾವಯವ ಕೃಷಿ ಉತ್ತೇಜಿಸುವ ವಾಹಕಗಳನ್ನಾಗಿ ಗುರುತಿಸಲಾಗಿದೆ. ಒಂದು ಸಾವಿರ ಹೆಕ್ಟರ್‌ಗೆ ಒಂದರಂತೆ ಎಫ್‌ಪಿಒ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಶಾನ್ಯ ರಾಜ್ಯಗಳಲ್ಲಿ ಸಾವಯವ ಮೌಲ್ಯವರ್ಧಿತ ಉತ್ಪನ್ನಗಳ ಅಭಿವೃದ್ಧಿ (ಯೋಜನೆಗಾಗಿ ಹಂಚಿಕೆ) ಶೇ 60ರಷ್ಟು ಹೆಚ್ಚಾಗಿದೆ. ದೇಶದ ಈಶಾನ್ಯ ಭಾಗದಲ್ಲಿ ಮೂಲತಃ ಸಾವಯವ ಕೃಷಿಕರ ಸಂಖ್ಯೆ ಹೆಚ್ಚಿರುವುದರಿಂದ, ಸಾವಯವ ಉತ್ಪನ್ನಗಳನ್ನು ಏಶಿಯಾ ನೈರುತ್ಯ ರಾಷ್ಟ್ರಗಳ ಅಸೋಷಿಯೇಷನ್ ಮತ್ತು ಸರ್ಕಾರದ ಕಾರ್ಯಪ್ರವೃತ್ತ ಪೂರ್ವನೀತಿ ಪಾಲಿಸಿ ಮೂಲಕ ರಫ್ತುಮಾಡಬಹುದಾಗಿದೆ.

2018–19ನೇ ಸಾಲಿನ ಬಜೆಟ್ ನಲ್ಲಿ ಪಿಎಂಕೆಎಸ್ ವೈ 'ಪ್ರತಿ ಗದ್ದೆಗೂ ನೀರು' ಮತ್ತು ಪಿಎಂಕೆಎಸ್ ವೈ 'ಪ್ರತಿ ಹನಿಗೂ ಹೆಚ್ಚು ಬೆಳೆ' ಈ ಯೋಜನೆಗಳಿಗೆ ಹಣ ನಿಗದಿಯನ್ನು ಕ್ರಮವಾಗಿ ಶೇ. 38 ಮತ್ತು ಶೇ. 33ರಷ್ಟು ಹೆಚ್ಚಿಸಲಾಗಿದೆ.

ತೀವ್ರ ಅಂತರ್ಜಲ ಕೊರತೆ ನೀಗಿಸುವ ಸಲುವಾಗಿ ಅಂತರ್ಜಲ ಕೊರತೆಯಿರುವ 96 ಜಿಲ್ಲೆಗಳಲ್ಲಿ ಪಿಎಂಕೆಎಸ್‌ವೈ ಯೋಜನೆಯನ್ನು ವಿಸ್ತರಿಸಲಾಗುತ್ತಿದೆ. ಈ ಯೋಜನೆಯಿಂದ ಶೇ. 30 ರಷ್ಟು ಭೂ ಹಿಡುವಳಿದಾರರಿಗೆ ಭರವಸೆಯ ನೀರಾವರಿ ವ್ಯವಸ್ಥೆಯಾಗುತ್ತದೆ.

ದೆಹಲಿಯಲ್ಲಿ ಚಳಿಗಾಲದಲ್ಲಿ ಗಾಳಿಯ ಗುಣಮಟ್ಟ ಕಾಪಾಡುವುದಕ್ಕಾಗಿ ಜಮೀನುಗಳಲ್ಲೇ ಬೆಳೆ ಉಳಿಕೆ ನಿರ್ವಹಣೆ ಮಾಡಲು ಅಂತರ ಸರ್ಕಾರಗಳ ಸಹಯೋಗದಲ್ಲಿ ವಿಶೇಷ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಕೃಷಿ ಭೂಮಿಯಲ್ಲಿ ಉತ್ಪಾದನೆಯಾಗುವ ಬೆಳೆಯುಳಿಕೆ ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ ಮತ್ತು ರಾಸುಗಳಿಂದ ಉತ್ಪತ್ತಿಯಾಗುವ ಸೆಗಣಿಯನ್ನು ಸದ್ಬಳಕೆ ಮಾಡಿಕೊಳ್ಳಲು ಈ ಬಾರಿಯ ಬಜೆಟ್ ನಲ್ಲಿ 'ಗೋಬರ್ ಧನ್' ಯೋಜನೆ ಜಾರಿಗೆ ತರಲಾಗುತ್ತಿದೆ. ಬಯೋಗ್ಯಾಸ್, ಸಾವಯವ ಗೊಬ್ಬರ ಮತ್ತು ಬಯೋ ಸಿಎನ್‌ಜಿಯಾಗಿ ಬಳಸಲು ಈ ಯೋಜನೆ ಉತ್ತೇಜಿಸಲಿದೆ.

ನೀತಿ ಆಯೋಗ 115 ಆಶೋತ್ತರ ಜಿಲ್ಲೆಗಳನ್ನು ಗುರುತಿಸಿದ್ದು, ಈ ಜಿಲ್ಲೆಗಳಲ್ಲಿ 'ನವಭಾರತ 2022– ಮಿಷನ್'ಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಚಿಂತನೆ ನಡೆಸಿದೆ. ಈ ಜಿಲ್ಲೆಗಳಲ್ಲಿ ವಿಶೇಷವಾಗಿ ಆರೋಗ್ಯ, ಪೌಷ್ಠಿಕಾಂಶ, ಶಿಕ್ಷಣ, ಕೃಷಿ ಮತ್ತು ಡಿಜಿಟಲ್ ಸಂಪರ್ಕ, ಕೌಶಲ ಅಭಿವೃದ್ಧಿಯಂತಹ ಮೂಲ ಸೌಲಭ್ಯದ ಅಭಿವೃದ್ಧಿಗೆ ಒತ್ತು ನೀಡಲು ಯೋಜಿಸಿದೆ.

**ಉಪ ಸಂಹಾರ**

ಗ್ರಾಮಾಭಿವೃದ್ಧಿಯಾದರೆ, ಕೃಷಿ ಕ್ಷೇತ್ರ ಸುಸ್ಥಿರ ಉದ್ಯಮವಾಗಿ ರೂಪುಗೊಳ್ಳಲು ಸಾಧ್ಯ ಎಂಬುದನ್ನು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಗುರುತಿಸಲಾಗಿದೆ. ಅದಕ್ಕೆ ತಕ್ಕಂತೆ ಯೋಜನೆಗಳನ್ನು ರೂಪಿಸಲಾಗಿದೆ.

ಈ ಬಜೆಟ್‌ನಲ್ಲಿ ಹಿಂದೆ ಘೋಷಿಸಿದ್ದ ರೂ. 20 ಸಾವಿರ ಕೋಟಿ ವೆಚ್ಚದ ದೀರ್ಘಾವಧಿ ನೀರಾವರಿ ಯೋಜನೆಗಳಲ್ಲಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ಮುಂದುವರಿಸಲಾಗಿದೆ.

ಸುಲಭವಾಗಿ ವಿದ್ಯುತ್ ಸಂಪರ್ಕ, ಅಡುಗೆ ಅನಿಲ ಸೌಲಭ್ಯ ಪಡೆಯುವುದು, ನೈರ್ಮಲ್ಯೀಕರಣ, ವಸತಿ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ರೈತರ ಆದಾಯ ದ್ವಿಗುಣಗೊಳಿಸುವಂತಹ ಯೋಜನೆಗಳನ್ನೂ ಬಜೆಟ್ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ. 'ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್' ಯೋಜನೆಗೆ ತೆಗೆದಿಡುವ ಅನುದಾನದ ಪ್ರಮಾಣವನ್ನು ಶೇ 28ರಷ್ಟು ಹೆಚ್ಚಿಸಲಾಗಿದೆ. 'ರಾಷ್ಟ್ರೀಯ ಬಿದಿರು ಯೋಜನೆ'ಗೆ ರೂ. 1290 ಕೋಟಿ ತೆಗೆದಿಡುವ ಮೂಲಕ, ಬಿದಿರು ಮಿಷನ್‌ನ್ನು ಪುನರುತ್ಥಾನಗೊಳಿಸಲಾಗಿದೆ. ಈ ಮೂಲಕ ಗ್ರಾಮೀಣ ಭಾರತದಲ್ಲಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಲಾಗಿದೆ. ಬಜೆಟ್‌ನಲ್ಲಿ ಅನುದಾನಗಳ ಹಂಚಿಕೆಯಲ್ಲಿ ಆರ್ಥಿಕ ಸಂಪನ್ಮೂಲಗಳ ಪುನರ್ ಮನನಕ್ಕೆ ಉತ್ತೇಜನ ನೀಡಲಾಗಿದೆ. ಈ ಅಂಶಗಳು ಕಡಿಮೆ ಅವಧಿಯಲ್ಲಿ ಹೆಚ್ಚು ಫಲಿತಾಂಶ ನೀಡಲು ಸಹಕಾರ ನೀಡುತ್ತವೆ.

ಕಳೆದ ವರ್ಷದ ಆಯವ್ಯಯದಲ್ಲಿ ಬೆಳೆ ಮತ್ತು ಪಶು ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ನಿಗದಿಪಡಿಸಿದ್ದ ಅನುದಾನ ಕಡಿತಗೊಳಿಸಿತ್ತು. ಇದಕ್ಕೆ ವಿರುದ್ಧ ಎಂಬಂತೆ ಈ ಬಾರಿಯ ಬಜೆಟ್‌ನಲ್ಲಿ ಎರಡೂ ಕ್ಷೇತ್ರಗಳಿಗೆ ಕ್ರಮವಾಗಿ ಶೇ. 78 ಮತ್ತು ಶೇ. 47ರಷ್ಟು ಅನುದಾನವನ್ನು ಮೀಸಲಿಡಲಾಗಿದೆ. ಇದರಿಂದ ಭವಿಷ್ಯದಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದ್ದು, ತಾಂತ್ರಿಕತೆ, ಸಂಶೋಧನೆ ಮತ್ತು ಸಾಂಸ್ಥಿಕ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಸಾಧ್ಯವಾಗುತ್ತದೆ.

ಪ್ರಸಕ್ತ ಸಾಲಿನ ಬಜೆಟ್ ಅನುದಾನ ಹಂಚಿಕೆಯ ವಿಧಾನ ವಿಶೇಷವಾಗಿದ್ದು, ಗ್ರಾಮೀಣ ಭಾರತದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ. ನಿಖರವಾದ ಕ್ಷೇತ್ರಗಳನ್ನು ಅಭಿವೃದ್ಧಿಗಾಗಿ ಗುರುತಿಸಲಾಗಿದೆ. ಈ ಮೂಲಕ ಒಳಗೊಳ್ಳುವಿಕೆ, ಸಂಶೋಧನೆ, ಉದ್ಯೋಗ ಮತ್ತು ಸುಸ್ಥಿರ ಕ್ಷೇತ್ರಗಳಿಗೆ ಆದ್ಯತೆ ನೀಡಿ, ರೈತರ ಕಲ್ಯಾಣಕ್ಕೆ ಒತ್ತು ನೀಡಲಾಗಿದೆ.

ಲಭ್ಯ ಅನುದಾನದ ಸದ್ಬಳಕೆಗೆ ಆದ್ಯತೆ ನೀಡಲಾಗಿರುವುದು ಈ ಬಜೆಟ್‌ನ ಮತ್ತೊಂದು ವಿಶೇಷ. ಇರುವ ಹಣದಲ್ಲೇ ಪ್ರಮುಖ ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ. ❑

## ಮಹಿಳಾ ಸಶಕ್ತೀಕರಣದ ದಿಸೆಯಲ್ಲಿ

**(40ನೇ ಪುಟದಿಂದ)**

* ಪ್ರತಿ ಮಗುವಿಗೂ ಉತ್ತಮ ಶಿಕ್ಷಣ ದೊರೆಯುತ್ತಿರುವುದನ್ನು ಖಚಿತ ಪಡಿಸಿಕೊಳ್ಳುವುದು

* ಸುಕನ್ಯಾ ಸಮೃದ್ಧಿ ಯೋಜನೆ – ಇದು ಭಾರತ ಸರ್ಕಾರದ 'ಬೇಟಿ ಬಚಾವೊ ಬೇಟಿ ಪಢಾವೊ' ಕಾರ್ಯಕ್ರಮದ ಅಡಿಯಲ್ಲಿ ಹೆಣ್ಣುಮಕ್ಕಳಿಗಾಗಿ ಹೊರತಂದ ಒಂದು ಸಣ್ಣ ಉಳಿತಾಯ ಯೋಜನೆ. ಇದು ಹೆಣ್ಣುಮಕ್ಕಳಿಗಾಗಿಯೇ ಇರುವ ಪ್ರತ್ಯೇಕ ಯೋಜನೆ. ಈ ಯೋಜನೆಯು ಹೆಣ್ಣು ಮಗುವಿನ ಶಿಕ್ಷಣ ಮತ್ತು ಮದುವೆಯ ವೆಚ್ಚಗಳನ್ನು ಪೂರೈಸಿಕೊಳ್ಳುವುದಕ್ಕೆ ಸೀಮಿತವಾಗಿದೆ. ಈ ಯೋಜನೆಯು ವಾರ್ಷಿಕವಾಗಿ ಒಟ್ಟುಗೂಡುವ 9.1% ತೆರಿಗೆ ಮುಕ್ತ ಬಡ್ಡಿಯನ್ನು ನೀಡುತ್ತದೆ. ಕಾನೂನುಬದ್ಧ ಪೋಷಕರು / ನೈಸರ್ಗಿಕ ಪೋಷಕರು ಹೆಣ್ಣು ಮಗುವಿನ ಹೆಸರಿನಲ್ಲಿ ಖಾತೆ ತೆರೆಯಬಹುದು. ಈ ಖಾತೆಯನ್ನು 21 ವರ್ಷಗಳು ಮುಗಿದ ನಂತರ ಸ್ಥಗಿತಗೊಳಿಸಬಹುದು. ಹೆಣ್ಣು ಮಗುವಿಗೆ


Sukanya Samriddhi Yojana (SSY)

ಮದುವೆಯಾದರೆ 18 ವರ್ಷಗಳ ನಂತರ ಸಾಮಾನ್ಯ ಅವಧಿ ಮುಗಿಯುವ ಮುನ್ನವೇ ಖಾತೆಯನ್ನು ಸ್ಥಗಿತಗೊಳಿಸಬಹುದು.

ಜನರಲ್ಲಿ ಜಾಗೃತಿ ಮೂಡಿಸಬೇಕಾದರೆ ಮೊದಲು ಮಹಿಳೆಯರನ್ನು ಜಾಗೃತಗೊಳಿಸಬೇಕು. ಒಮ್ಮೆ ಆಕೆ ಮುನ್ನಡೆದರೆ, ಕುಟುಂಬ ಮುಂದುವರೆಯುತ್ತದೆ, ಗ್ರಾಮ ಮುಂದುವರೆಯುತ್ತದೆ, ದೇಶವೂ ಮುನ್ನಡೆಯುತ್ತದೆ. ಹಾಗಾಗಿ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರಿಂದ ಪ್ರಾರಂಭಿಸಲ್ಪಟ್ಟ ಮಹಿಳಾ ಸಬಲೀಕರಣದ ಕಾರ್ಯಕ್ರಮಗಳು ಹೆಣ್ಣು ಮಕ್ಕಳನ್ನು ಶಿಕ್ಷಣದ ಮೂಲಕ ಸಶಕ್ತಗೊಳಿಸುವತ್ತ ಒಂದು ಮುಖ್ಯ ಹೆಜ್ಜೆಯಾಗಿದೆ.

2018 ನೇ ಸಾಲಿನ ಮುಂಗಡಪತ್ರವು ಭಾರತದ ಪ್ರಗತಿಗಾಗಿ ರೂಪಾಂತರಗೊಂಡ ನೀಲ ನಕ್ಷೆ. ಸ್ವತಂತ್ರ ಭಾರತದಲ್ಲಿ ಸಾಮಾಜಿಕ ವಲಯಗಳನ್ನು ಕೇಂದ್ರೀಕರಿಸಿದ ಮೊದಲ ಮುಂಗಡಪತ್ರ ಇದಾಗಿದೆ. ವಿತ್ತ ಸಚಿವರು ಭಾರತದ ಆರ್ಥಿಕತೆಯು ಎದುರಿಸುತ್ತಿರುವ ಒತ್ತಡದ ಸವಾಲುಗಳಾದ ಗುಣಮಟ್ಟದ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ, ಮಹಿಳಾ ಸಬಲೀಕರಣ, ಕೃಷಿವರ್ಧನೆ ಮತ್ತು ಉದ್ಯೋಗ ಸೃಷ್ಟಿ ಇವುಗಳ ಬಗ್ಗೆ ಗಮನ ಹರಿಸಿದ್ದಾರೆ. 2018–19 ನೇ ಸಾಲಿನ ಮುಂಗಡಪತ್ರವು ಕ್ಷಿಪ್ರ ಆರ್ಥಿಕ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಅಭಿವೃದ್ಧಿಗೆ ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆ ಇವುಗಳಿಗಿಂತ ಪರಿಣಾಮಕಾರಿ ಸಾಧನಗಳು ಬೇರೆ ಯಾವುದೂ ಇಲ್ಲ. ❑

# ವ್ಯಾಪಾರ ವಹಿವಾಟು ಸರಳೀಕರಣ

* ಡ್ಯಾನಿಶ್ ಎ ಹಾಶಿಮ್
** ವರ್ಷಾ ಕುಮಾರಿ



ಆಯವ್ಯಯದಲ್ಲಿ ವ್ಯವಹಾರ ಸರಳೀಕರಣ ಸುಧಾರಣೆಗಳನ್ನು ಶೀಘ್ರವಾಗಿ ಜಾರಿಗೆ ತರಲು ಪ್ರಯತ್ನಿಸುವುದರ ಜೊತೆಗೆ ದೇಶದಲ್ಲಿ ಬಂಡವಾಳ ಹೂಡಿಕೆಗೆ ಅನುಕೂಲಕರ ವಾತಾವರಣ ನಿರ್ಮಿಸುವ ಮತ್ತು ಉದ್ಯೋಗ ಸೃಷ್ಟಿಯಾಗುವಂತೆ ಮಾಡಲು ಹಲವಾರು ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಗಳಿಂದ ಕಾರ್ಪೊರೇಟ್ ವಲಯದ ಸಮಯ ಮತ್ತು ವೆಚ್ಚ ಎರಡೂ ಉಳಿತಾಯವಾಗಲಿವೆ.

ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಸುಲಭ ವ್ಯಾಪಾರ ನಿರ್ವಹಣೆ – ಇಓಡಿಬಿ ಯೋಜನೆಗೆ ವಿಶೇಷ ಮಹತ್ವ ನೀಡಿದೆ. ಈ ಕ್ಷೇತ್ರವು ಬಂಡವಾಳ ಹೂಡಿಕೆ ಸಾಮರ್ಥ್ಯ ಬಳಸಿಕೊಂಡು ದೇಶದ ಉದ್ಯೋಗ ವಲಯದ ಶಕ್ತಿ ಹೆಚ್ಚಿಸಬೇಕೆಂಬುದು ಇದರ ಉದ್ದೇಶ. ವ್ಯಾಪಾರ ರಂಗ ಎದುರಿಸುವ ಹಲವಾರು ಸಮಸ್ಯೆಗಳನ್ನು ಅಡಚಣೆಗಳನ್ನು ನಿವಾರಿಸಲು ಸರ್ಕಾರ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಅದರಲ್ಲಿ ಕೆಲವು ಸಕಾರಾತ್ಮಕ ಬೆಳವಣಿಗೆಗಳೆಂದರೆ, ಕಂಪನಿ ನೊಂದಾಯಿಸುವ ಕ್ರಮ ಮತ್ತು ಜಿಎಸ್‌ಟಿ ಸರಳೀಕರಣ ದಿವಾಳಿ ಸ್ಥಿತಿಗೆ ತಲುಪಿರುವ ಕಂಪನಿಗಳ ಸಮಸ್ಯೆಗಳಿಗೆ ಪರಿಹಾರ ಕುರಿತಂತೆ ಕಾನೂನು ರಚನೆ ಮಾಡುವುದು ಇತ್ಯಾದಿ.

ಸ್ಪರ್ಧಾತ್ಮಕ ಮನೋಭಾವ ತರಲು ಕೇಂದ್ರ ಸರ್ಕಾರ ಕಾರ್ಮಿಕ ನೀತಿ ಭೂಮಿ ಮತ್ತು ಇದಕ್ಕೆ ಸಂಬಂಧಿಸಿದ ವ್ಯಾಜ್ಯಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟು ಸುಧಾರಣೆ ತರುವಂತೆ ರಾಜ್ಯಗಳಿಗೆ ನಿರ್ದೇಶಿಸಿತು. ಈ ಕ್ರಮಗಳು ಈಗ ಫಲ ಕೊಡಲಾರಂಭಿಸಿವೆ. ಇತ್ತೀಚೆಗೆ ವಿಶ್ವಬ್ಯಾಂಕ್ ಸುಲಭ ವ್ಯಾಪಾರ ಕುರಿತು ಬಿಡುಗಡೆ ಮಾಡಿರುವ ವರದಿಯೂ 2018 ನೇ ಸಾಲಿನಲ್ಲಿ 190 ದೇಶಗಳ ಪೈಕಿ ಭಾರತ 30 ಸ್ಥಾನಗಳ ಪ್ರಗತಿ ಕಂಡಿದೆ ಪ್ರಧಾನ ಮಂತ್ರಿಗಳ ಗುರಿ ಮುಂದಿನ ಎರಡು ವರ್ಷಗಳಲ್ಲಿ ಭಾರತವನ್ನು ಮೊದಲ 50 ರಾಷ್ಟ್ರಗಳ ಪಟ್ಟಿಯಲ್ಲಿ ತರುವುದಾಗಿದೆ. ಇತ್ತೀಚೆಗೆ ಮಂಡಿಸಿದ ಆಯವ್ಯಯದಲ್ಲಿ ಕೇಂದ್ರ ಸರ್ಕಾರ ವ್ಯವಹಾರ ಸರಳೀಕರಣಕ್ಕೆ ಸಂಬಂಧಿಸಿದ ಹಲವು ಸುಧಾರಣಾ ಕ್ರಮಗಳನ್ನು ಘೋಷಿಸಿದೆ. ಕೇಂದ್ರದ ಈ ಘೋಷಣೆಗಳಲ್ಲಿ ಮುಖ್ಯವಾಗಿ ಉದ್ಯೋಗ ಸೃಷ್ಟಿ ಮತ್ತು ಬಂಡವಾಳ ಹೂಡಿಕೆಗಳ ಮೇಲೆ ಒತ್ತು ನೀಡಲಾಗಿದೆ. ಕಾರ್ಪೊರೇಟ್ ವಲಯಕ್ಕೆ ಸಂಬಂಧಿಸಿದ ಕೆಲ ಮುಖ್ಯ ಅಂಶಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ.

**ಕಾರ್ಪೊರೇಟ್ ವ್ಯವಹಾರ ಸರಳೀಕರಣ** : ಸರ್ಕಾರವು ಎಂಎಸ್‌ಎಂಇ ವಲಯಕ್ಕೆ ಮೂರು ಲಕ್ಷ ಕೋಟಿ ರೂಪಾಯಿ ಹಂಚಿಕೆ ಮಾಡಿದೆ. ಈ ನಿಟ್ಟಿನಲ್ಲಿ ಎಮ್‌ಎಸ್‌ಎಂಇಗಳ ಆರ್ಥಿಕ ಸ್ಥಿತಿಗತಿಯನ್ನು ತಿಳಿಸುವ ದತ್ತಾಂಶ ಸಂಗ್ರಹವನ್ನು ಸಿದ್ಧಪಡಿಸಿದ್ದು, ಸಾಲ ಒದಗಿಸಲು ವಿವರ ಮಾಹಿತಿಯನ್ನು ಈ ಇದರ ಮೂಲಕ ಪಡೆಯಬಹುದಾಗಿದೆ.

**ಸಾಲ ಮಂಜೂರಾತಿ** : ಸರ್ಕಾರ "ಟ್ರೇಡ್ ರಿಸಿವೆಬ್ ಡಿಸ್ಕೌಂಟ್ ಸಿಸ್ಟಂ"ನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದು ಈ ವ್ಯವಸ್ಥೆಗೆ ಹೊಸ ರೂಪ ಕೊಡಲು ಯೋಜನೆಯನ್ನು ರೂಪಿಸಿದೆ. ಇದು ಸಣ್ಣ ಉದ್ದಿಮೆಗಳಿಗೆ ಬಂಡವಾಳ ನಿರ್ವಹಣೆಗೆ ಸಹಕಾರಿ ಆಗುವುದಲ್ಲದೇ ಮೂಲ ಬೆಲೆ ಮೇಲೆ ರಿಯಾಯಿತಿ ನೀಡಲು ಸಹಕಾರಿಯಾಗಲಿದೆ. ಇದಲ್ಲದೆ ಬ್ಯಾಂಕ್‌ಗಳಿಗೆ ಎಮ್‌ಎಸ್‌ಎಂಇಗಳ ಆರ್ಥಿಕ ಸ್ಥಿತಿಗತಿಯ ಪೂರ್ಣ ಮಾಹಿತಿ ಇರುವುದರಿಂದ ಅವರು ಯಾವುದೇ ನಕಲಿ ಬಿಲ್‌ಗಳ ಸಮಸ್ಯೆ ಇಲ್ಲದೇ ಇರುವುದರಿಂದ ಯಾವುದೇ ಆತಂಕವಿಲ್ಲದೆ ಹೆಚ್ಚಿನ ಸಾಲ ನೀಡಲು ಸುಲಭವಾಗಲಿದೆ.

**ತೆರಿಗೆ ರಿಯಾಯಿತಿ** ರೂಪಾಯಿ 250 ಕೋಟಿಗಳಿಗೂ ಹೆಚ್ಚು ವ್ಯವಹಾರ ಮಾಡುವ

* ಮುಖ್ಯಸ್ಥರು, ** ಸಲಹಾಕಾರರು, ಇಓಡಿಬಿ, ಭಾರತೀಯ ಕೈಗಾರಿಕೆಗಳ ಒಕ್ಕೂಟ. E-mail : * danish.hashim@cii.in ** varshak.kumari44@gmail.com

ಕಂಪನಿಗಳಿಗೆ [ಮೊದಲು ಇದು 50 ಕೋಟಿ ರೂಪಾಯಿ ಇತ್ತು] ಇಪ್ಪತ್ತೈದು ಪ್ರತಿಶತದಷ್ಟು ಕಾರ್ಪೊರೇಟ್ ತೆರಿಗೆಯಲ್ಲಿ ರಿಯಾಯಿತಿ ನೀಡಿರುವುದು ಒಂದು ಮಹತ್ವದ ನಿರ್ಧಾರವಾಗಿದೆ. ಈ ಕ್ರಮದಿಂದ ದೇಶದ 99% ಕಂಪನಿಗಳಿಗೆ ಅನುಕೂಲವಾಗಲಿದೆ. ಇದರಿಂದ ಅವುಗಳ ಹೂಡಿಕೆ ಸಾಮರ್ಥ್ಯ ಹೆಚ್ಚಾಗುವುದಲ್ಲದೆ ಕಂಪನಿ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೂ ಸಹಕಾರಿಯಾಗಲಿದೆ

**ಮರುಪಾವತಿ ವ್ಯವಸ್ಥೆಯಲ್ಲಿ ಪರಿಹಾರ:** ಆಯವ್ಯಯದಲ್ಲಿ ಎಂಎಸ್‌ಎಂಇಗಳ ಸಾಲ ಮರುಪಾವತಿ ಪದ್ಧತಿಯಲ್ಲಿ ಪರಿಹಾರಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಈ ದಿಶೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಣೆಯೊಂದನ್ನು ಹೊರಡಿಸಿದ್ದು ಇದರನ್ವಯ ಸಾಲ ಪಡೆಯುವವರು ಅದರ ಮರು ಪಾವತಿಯನ್ನು ನಿಗದಿತ ಸಮಯಕ್ಕಿಂತ 180 ಹೆಚ್ಚಿನ ಸಮಯ ತೆಗೆದುಕೊಂಡು ಮರುಪಾವತಿ ಮಾಡಬಹುದು ಆದಾಗಲೂ ಅವರನ್ನು ಬಾಕಿದಾರರು ಎಂದು ಪರಿಗಣಿಸುವುದಿಲ್ಲ. ಈ ಕ್ರಮದಿಂದ ಸಣ್ಣ ಉದ್ದಿಮೆಗಳಿಗೆ ವ್ಯವಹಾರ ಸಾಲ ಮರು ಪಾವತಿ ಸುಲಭವಾಗಲಿದೆ.

**ವಿಶೇಷ ಗುರುತು ಪತ್ರ:** ಪ್ರಸ್ತುತ ಕಂಪನಿಗಳು ಹಲವಾರು ವ್ಯವಹಾರಗಳು ಅಂದರೆ ಕಂಪನಿ ನೊಂದಣಿ, ವಿದ್ಯುತ್ ಸಂಪರ್ಕದ ವಿವರಗಳು, ಆಸ್ತಿ ವಿವರ ಮುಂತಾದವುಗಳನ್ನು ಬೇರೆಯಾಗಿಯೇ ನಿರ್ವಹಿಸುತ್ತವೆ. ಇದರಿಂದ ಸಮಯ ಮತ್ತು ಹಣ ಎರಡೂ ವ್ಯರ್ಥವಾಗುತ್ತಿವೆ. ಸರ್ಕಾರವು ಕಂಪನಿಗಳಿಗೆ ಆಧಾರ್‌ಕಾರ್ಡ್ ಮಾದರಿಯಲ್ಲಿ ವಿಶೇಷ ಗುರುತು ಪತ್ರ ನೀಡಲು ಪ್ರಸ್ತಾಪಿಸಿದೆ.ಇದರಿಂದ ಹಲವಾರು ದಾಖಲೆಗಳನ್ನು ನಿರ್ವಹಿಸುವ ಅನುಕೂಲವಾಗಲಿದ್ದು ಒಂದೆ ಬಾರಿಗೆ ನೊಂದಣಿ, ಅನುಮತಿ, ಪರವಾನಗಿಯನ್ನು ಪಡೆಯಲು ಅನುಕೂಲವಾಗಲಿದೆ.

**ರಾಷ್ಟ್ರೀಯ ಲಾಜಿಸ್ಟಿಕ್ ಪೋರ್ಟಲ್:** ವಾಣಿಜ್ಯ ಇಲಾಖೆಯ ರಾಷ್ಟ್ರೀಯ ಲಾಜಿಸ್ಟಿಕ್ ಪೋರ್ಟಲನ್ನು ಅಭಿವೃದ್ಧಿಪಡಿಸುತ್ತಿದೆ. ಇದರಿಂದ ವಿವಿಧ ರೀತಿಯ ಸಂಕೀರ್ಣ ಮಾಹಿತಿಯನ್ನು ಸಂಗ್ರಹಿಸಲು ಮತ್ತು ನೀಡಲು ಅನುಕೂಲವಾಗುತ್ತದೆ. ಇದರಿಂದ ಬಹಳ ಕಾಲದವರೆಗೆ ಬಾಕಿ ಉಳಿದಿರುವ ಸಮಸ್ಯೆಗಳು ಮುಖ್ಯವಾಗಿ ಪಾಲುದಾರರಿಗೆ ಮಾಹಿತಿ ಗ್ರಾಹಕರಿಗೆ ಮಾಹಿತಿ, ರೈಲ್ವೆ ಇಲಾಖೆ, ಬಂದರು ಇಲಾಖೆ ಜಲ ಮಾರ್ಗ ಇತ್ಯಾದಿಗಳ ವಿವರಗಳು ಮಾಹಿತಿ ಅಂತರ ನಿವಾರಿಸಲು ನೆರವಾಗಲಿವೆ. ಈ ಪೋರ್ಟಲ್ ಯಶಸ್ವಿಯಾದಲ್ಲಿ ಆನ್‌ಲೈನ್ ಮೂಲಕ ಒಂದೇ ಮೂಲದಿಂದ ವಿವಿಧ ಮಾಹಿತಿ ನಿರ್ವಹಣೆ ಮಾಡಿ ಶೇ ಹತ್ತರಷ್ಟು ವೆಚ್ಚ ಉಳಿತಾಯ ಮಾಡಬಹುದು.

**ಎಲ್ಲ ವಲಯಗಳಿಗೆ ನಿರ್ದಿಷ್ಟ ಅವಧಿಗೆ ಉದ್ಯೋಗ ಖಾತ್ರಿ ನೀಡುವುದು :** ನಿರ್ದಿಷ್ಟ ಅವಧಿಗೆ ಕೆಲಸಗಾರರನ್ನು ನೇಮಿಸಿಕೊಳ್ಳುವ ಪದ್ಧತಿ ಈ ಮೊದಲು ಜವಳಿ ಘಟಕಗಳಿಗೆ ಮಾತ್ರ ಇತ್ತು. ಅದನ್ನು ಎಲ್ಲ ವಲಯದಲ್ಲಿ ವಿಸ್ತರಿಸುವ ಪ್ರಸ್ತಾವನೆ ಆಯವ್ಯಯದಲ್ಲಿದೆ. ಈ ಕ್ರಮದಿಂದ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅನುಕೂಲವಾಗುವುದಲ್ಲದೆ ಕಂಪನಿಗಳು ಅವಶ್ಯವಿದ್ದಲ್ಲಿ ಕಡಿಮೆ ಅವಧಿಗೆ ಕೆಲಸಗಾರರನ್ನು ನೇಮಿಸಿಕೊಳ್ಳ ಬಹುದಾಗಿದೆ. ಈ ನೀತಿ ಅಳವಡಿಕೆಯಿಂದ ವಿಶೇಷವಾಗಿ ಪದೇ ಪದೇ ಕಾರ್ಮಿಕರ ಸಮಸ್ಯೆಯನ್ನು ಎದುರಿಸುವ ಚರ್ಮ ಉದ್ಯೋಗ ಪಾದರಕ್ಷೆ ತಯಾರಿಕೆ ಘಟಕಗಳಿಗೆ ಅನುಕೂಲವಾಗಲಿದೆ. ಇದರಿಂದ ಈ ವಲಯದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಗೆ ಅವಕಾಶವಾಗಬಹುದು ಅದಲ್ಲದೆ ಮಧ್ಯವರ್ತಿಗಳ ಪಾತ್ರವಿಲ್ಲದೆ ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು ಇದರಿಂದ ಕಂಪನಿಗಳಿಗೆ ವೆಚ್ಚ ಉಳಿತಾಯವಾಗಲಿದೆ.

**ಮುದ್ರಾಂಕ ಶುಲ್ಕದಲ್ಲಿ ಏಕರೂಪತೆ:** ಕೇಂದ್ರ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಮುದ್ರಾಂಕ ಶುಲ್ಕ ಪಾವತಿಯಲ್ಲಿ ಏಕರೂಪತೆಯನ್ನು ತರಲು ಪ್ರಸ್ತಾಪಿಸಿದೆ. ಸದ್ಯ ವಿವಿಧ ರಾಜ್ಯಗಳಲ್ಲಿ ಮುದ್ರಾಂಕ ಶುಲ್ಕ4% ರಿಂದ 7% ರವರೆಗೆ ವರೆಗೆ ಇದೆ. ಇದು ಜಾರಿಯಾದಲ್ಲಿ ಇಡೀ ದೇಶದಲ್ಲಿನ ಭೂಮಿಯ ಬೆಲೆಯಲ್ಲಿ ಏರುಪೇರಾಗುವುದನ್ನು ಕಡಿಮೆ ಮಾಡಬಹುದು.

**ತಂತ್ರಜ್ಞಾನ ಆಧರಿತ ಆಡಳಿತ :** ದೇಶವ್ಯಾಪಿ ಇರುವ ವಿವಿಧ ಕಾನೂನಾತ್ಮಕ ವ್ಯಾಜ್ಯಗಳ ಸುಲಭ ಪರಿಹಾರಕ್ಕಾಗಿ ದೇಶದ ಎಲ್ಲ ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳನ್ನು ನೆಟ್‌ವರ್ಕಿಂಗ್ ಮೂಲಕ ಗಣಕೀಕರಣಗೊಳಿಸಲು ಪ್ರಸ್ತಾಪಿಸಲಾಗಿದೆ. ಇದರಿಂದ ದೇಶದ ಯಾವುದೇ ನ್ಯಾಯಾಲಯದ ನಡವಳಿಗಳು ತೀರ್ಪುಗಳು ಮುಂತಾದವುಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದೆ. ಅಲ್ಲದೆ ಆನ್‌ಲೈನ್ ಮೂಲಕ ಹಣ ಪಾವತಿ, ಕೇಸು ದಾಖಲೆ ಮಾಡಬಹುದು. ದೇಶ ಸದ್ಯ ತಂತ್ರಜ್ಞಾನ ಆಡಳಿತದಲ್ಲಿ ನೂರಾ ನಲವತ್ತು ನಾಲ್ಕನೇ ಸ್ಥಾನದಲ್ಲಿದ್ದು ಈ ಹೊಸ ಪ್ರಯತ್ನ ಸುಧಾರಣೆ ತಂದು ಪರಿಸ್ಥಿತಿ ಉತ್ತಮ ಪಡಿಸುವುದೆಂದು ನಿರೀಕ್ಷಿಸಲಾಗಿದೆ.

**ಗಣಕೀಕೃತ ಸುಂಕ ಪಾವತಿ :** ಸರ್ಕಾರ ಸದ್ಯ ಚಾಲ್ತಿಯಲ್ಲಿರುವ ಸುಂಕ ಸಂಗ್ರಹ ವ್ಯವಸ್ಥೆಯನ್ನು ಗಣಕೀಕೃತ ಗೊಳಿಸಿ ಅದನ್ನು ಬಲಗೊಳಿಸಲು ಕ್ರಮ ಕೈಗೊಳ್ಳುತ್ತಿದೆ. ಬಳಸಿದಷ್ಟು ಹಣ ಪಾವತಿಸುವ ಯೋಜನೆ ಸದ್ಯ ಕೆಲವು ಕಡೆ ಪ್ರಾಯೋಗಿಕವಾಗಿ ಜಾರಿಯಲ್ಲಿದೆ. ಇದು ಜಾರಿಯಾದಲ್ಲಿ ವಾಣಿಜ್ಯ ಉತ್ಪನ್ನಗಳ ಸಾಗಣೆದಾರರುಗಳಿಗೆ ಹಣ ಮತ್ತು ಸಮಯ ಉಳಿತಾಯವಾಗಲಿದೆ.

**ರಕ್ಷಣಾ ವಲಯದ ಉತ್ಪಾದನೆಗಳಿಗೆ ಚೇತರಿಕೆ ನೀಡುವುದು :** ರಕ್ಷಣಾ ಉತ್ಪನ್ನಗಳ ಉತ್ಪಾದನೆಯಲ್ಲಿ ಖಾಸಗಿಯವರು ಬಂಡವಾಳ ಹೂಡುವ ಚಿಂತನೆಯ ಬೆನ್ನಲ್ಲೇ ಸರ್ಕಾರ ರಕ್ಷಣಾ ಉತ್ಪನ್ನಗಳ ಉತ್ಪಾದನೆಯಲ್ಲಿ ಎರಡು ಪ್ರತ್ಯೇಕ ಕಾರಿಡಾರ್‌ಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಂಡಿದೆ. ಇದರಿಂದ ಆಮದು ಮಾಡಿಕೊಳ್ಳುವ ರಕ್ಷಣಾ ಉತ್ಪನ್ನಗಳಗಳಿಗೆ ಪರ್ಯಾಯವಾಗಿ ಇನ್ನೊಂದನ್ನು ಸೇರಿಸುವ ಅವಕಾಶ ಒಂದಾದರೆ, ಉದ್ಯೋಗ ಸೃಷ್ಟಿಗೂ ಅವಕಾಶವಾಗಬಹುದು. ರಕ್ಷಣಾ ಉತ್ಪನ್ನ ನೀತಿಯಲ್ಲಿ ಎಂಎಸ್‌ಡಿಗಳು ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳು ಸ್ಥಳೀಯವಾಗಿ ರಕ್ಷಣಾ ಉತ್ಪನ್ನಗಳನ್ನು ಉತ್ಪಾದಿಸಲು ಅವಕಾಶವಿದೆ.

**ಪರಿಷ್ಕೃತ ಬಾಹ್ಯ ನೇರ ಬಂಡವಾಳ ಹೂಡಿಕೆ ನೀತಿ :** ಆಯವ್ಯಯದಲ್ಲಿ ಸದ್ಯ ಇರುವ ಮಾರ್ಗದರ್ಶಿ ಸೂತ್ರಗಳನ್ನು ಪರಿಶೀಲಿಸಿ ಸರ್ವಸಮ್ಮತವಾದ ಬಾಹ್ಯ ಹೂಡಿಕೆ

ನೀತಿಯನ್ನು (ಓಡಿಐ) ಪರಿಚಯಿಸುವುದಾಗಿ ಸರ್ಕಾರ ಘೋಷಿಸಿದೆ. ಇದಲ್ಲದೆ ಸರ್ಕಾರ ನವೋದ್ಯಮಿಗಳು ಮತ್ತು ಪಾಲುದಾರಿಕೆ ಕಂಪನಿಗಳು ತಯಾರಿಸುವ ಅತ್ಯಾಧುನಿಕ ಉತ್ಪನ್ನಗಳ ಪಟ್ಟಿ ತಯಾರಿಸುತ್ತಿದ್ದು ಇದು ಸಹ ವಿದೇಶಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಅನುಕೂಲವಾಗಬಹುದು.

**ಕಂಪನಿಗಳ ಹಿಮ್ಮಾಹಿತಿ :** ಸರ್ಕಾರ ಪರಿಚಯಿಸಿರುವ ವ್ಯವಹಾರ ನೀತಿಯನ್ನು ಕೈಗಾರಿಕಾ ನೀತಿ ಮತ್ತು ಅಭಿವೃದ್ಧಿ ಇಲಾಖೆ ಅಧೀನದಲ್ಲಿರುವ ವ್ಯವಹಾರ ಪರಿಷ್ಕರಣ ಕ್ರಿಯಾ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿಸಲು ಕೈಗಾರಿಕಾ ನೀತಿಯನ್ನು ಜಾರಿಗೊಳಿಸುವ ರಾಜ್ಯಗಳಿಂದ ಹಿಮ್ಮಾಹಿತಿ ಬಿಎಆರ್‌ಪಿ ಪಡೆಯುವ ಯೋಜನೆಯನ್ನು ಸರ್ಕಾರ ರೂಪಿಸಿದೆ. ಈ ಮೊದಲು ಕೇವಲ ರಾಜ್ಯ ಸರ್ಕಾರಗಳಿಂದ ಈ ಮಾಹಿತಿ ಪಡೆಯಲಾಗುತ್ತಿತ್ತು. ಇದರಿಂದ ಕಂಪನಿಗಳ ಮಟ್ಟದಲ್ಲಿ ಅಂದರೆ ಪೂರ್ತಿ ಕೆಳಮಟ್ಟದಲ್ಲಿ ಇರುವ ಸಮಸ್ಯೆಗಳ ಅರಿವು ಸರ್ಕಾರಕ್ಕೆ ಸಿಗುತ್ತಿರಲಿಲ್ಲ.



ಇವೆಲ್ಲಾ ಕಾರ್ಪೊರೇಟ್ ವಲಯದಲ್ಲಿ ವ್ಯವಹಾರ ಸರಳೀಕರಣಗೊಳಿಸುವ ಕ್ರಮಗಳಾದರೆ ಅರ್ಥಮಂತ್ರಿಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಕಾರ್ಪೊರೇಟ್ ವಲಯಗಳನ್ನು ಹೊರತು ಪಡಿಸಿ ಇತರ ವಲಯಗಳಿಗೂ ವಿಸ್ತರಿಸುವ ಪ್ರಸ್ತಾವನೆ ಸಲ್ಲಿಸಿದ್ದಾರೆ. ಉದಾಹರಣೆಗಾಗಿ ಕೃಷಿ ವಲಯದಲ್ಲಿ ಗ್ರಾಮೀಣ ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು (GrAM) ಮತ್ತು e-NAM ಮೂಲಕ ದೊಡ್ಡ ಗಾತ್ರದ ಖರೀದಿ ಮಾಡುವಾಗ ಗ್ರಾಹಕ ಮತ್ತು ರೈತರ ನಡುವೆ ನೇರ ಸಂಪರ್ಕ ಕಲ್ಪಿಸುವುದು. ದೀರ್ಘಾವಧಿ ನೀರಾವರಿ ಹಣಕಾಸು ಯೋಜನೆ, (LITE) ಮೀನುಗಾರಿಕೆ ಮತ್ತು ಜಲಸಂಸ್ಕರಣಾ ಮೂಲ ಸೌಕರ್ಯ ಅಭಿವೃದ್ಧಿ (FAIDE) ಪಶುಸಂಗೋಪನೆ, ಮೂಲಭೂತ ಅಭಿವೃದ್ಧಿ ನಿಧಿ (AHIDE) ಇತ್ಯಾದಿ. ಇದೇ ರೀತಿ ಮೂಲ ಸೌಕರ್ಯ ಅಭಿವೃದ್ಧಿ ವಲಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆ ಜಾಲವನ್ನು ವಿಸ್ತರಿಸುವುದರ ಜೊತೆಗೆ ಗ್ರಾಮೀಣ ಭಾಗದ ಜನರಿಗೆ ಬ್ರಾಡ್ ಬ್ಯಾಂಡ್ ಸೇವೆಯನ್ನು ನೀಡುವ ಯೋಜನೆಯೂ ಕೂಡ ಇದರಲ್ಲಿ ಪ್ರಸ್ತಾಪಿಸಲಾಗಿದೆ.

**ಉಪಸಂಹಾರ**

2018–19ರ ಕೇಂದ್ರ ಆಯವ್ಯಯದಲ್ಲಿ ವ್ಯವಹಾರ ಸರಳೀಕರಣ ಸುಧಾರಣೆಗಳನ್ನು ಶೀಘ್ರವಾಗಿ ಜಾರಿಗೆ ತರಲು ಪ್ರಯತ್ನಿಸುವುದರ ಜೊತೆಗೆ ದೇಶದಲ್ಲಿ ಬಂಡವಾಳ ಹೂಡಿಕೆಗೆಅನುಕೂಲಕರ ವಾತಾವರಣ ನಿರ್ಮಿಸುವ ಮತ್ತು ಉದ್ಯೋಗ ಸೃಷ್ಟಿಯಾಗುವಂತೆ ಮಾಡಲು ಹಲವಾರು ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಈ ಪ್ರಸ್ತಾವನೆಗಳಿಂದ ಕಾರ್ಪೊರೇಟ್‌ವಲಯದ ಸಮಯ ಮತ್ತು ವೆಚ್ಚ ಎರಡು ಉಳಿತಾಯವಾಗಲಿವೆ. ಅರ್ಥಮಂತ್ರಿಗಳು ಕಾರ್ಪೊರೇಟ್ ವಲಯವಲ್ಲದೆ ಇನ್ನೂ ವಿಶಾಲ ದೃಷ್ಟಿಕೋನದಿಂದ ಇತರ ವಲಯಗಳಿಗೆ ಅಂದರೆ ಎಂಎಸ್‌ಎಂಇ ಕೃಷಿ ವಲಯ ಗ್ರಾಮೀಣ ಆರ್ಥಿಕತೆ



ಮೂಲಭೂತ ಸೌಕರ್ಯ ಅಭಿವೃದ್ಧಿ ತಂತ್ರಜ್ಞಾನ ಇತ್ಯಾದಿ ವಲಯಗಳಿಗೆ ಈ ನೀತಿಯನ್ನು ವಿಸ್ತರಿಸಿದ್ದಾರೆ. ಈ ಕ್ರಮಗಳು ದೇಶದಲ್ಲಿ ಬಂಡವಾಳ ಹೂಡಿಕೆಗೆ ಹೂಡಿಕೆ ವಾತಾವರಣ ನಿರ್ಮಿಸುವಲ್ಲಿ ಸಹಕಾರಿಯಾಗುವುದಲ್ಲದೇ ಕಾರ್ಮಿಕ ಕಾನೂನು ಭೂಮಿ ಸ್ವಾಧೀನ ಮತ್ತು ತೃತೀಯ ಪಕ್ಷ ತೃತೀಯ ಪಕ್ಷ ಒಪ್ಪಂದಗಳಲ್ಲಿ ಸುಧಾರಣೆ ಕಂಡು ವ್ಯವಹಾರಸ್ನೇಹಿ ವಾತಾವರಣ ನಿರ್ಮಾಣವಾಗಲಿದೆ. ರಾಜ್ಯಗಳು ಇ ಆಡಳಿತಕ್ಕೆ ಒತ್ತು ನೀಡಿ ಕ್ರಮಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರದ ಶ್ರಮ ಸುವಿಧಾ ಪೋರ್ಟಗಳ ಬಳಕೆ (ಜಿಐಎಸ್) ಬಳಕೆ ಗಣಕೀಕೃತ ಮತ್ತು ವಿವಿಧ ಹಂತಗಳಲ್ಲಿಯೇ ಭೂ ದಾಖಲೆಗಳ ಕ್ರೋಢೀಕರಣ ಮಹಾನಗರ ಪಾಲಿಕೆಗಳನ್ನು ಆನ್‌ಲೈನ್ ವ್ಯಾಪ್ತಿಗೆ ತರುವುದು ಇತ್ಯಾದಿ.

ಸಂಪನ್ಮೂಲ ಕೊರತೆ ನಿವಾರಣೆ ಹಾಗೂ ಸುಧಾರಣಾ ಕ್ರಮ ಕೈಗೊಳ್ಳಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಇದೊಂದು ಸುವರ್ಣ ಅವಕಾಶವಿದ್ದು ಅದನ್ನು ಅವು ಸಮರ್ಪಕವಾಗಿ ಬಳಸಿಕೊಂಡು ವ್ಯವಹಾರ ಸರಳೀಕರಣ ಸುಧಾರಣೆಯನ್ನು ಆದಷ್ಟು ಶೀಘ್ರವಾಗಿ ಮಾಡಬೇಕೆಂಬುದು ಸದಾಶಯ. ❑

## ಸುದ್ದಿ – ಚುಟುಕು

ಬ್ಯಾಂಕಿಂಗ್‌ಯೇತರ ಹಣಕಾಸು ಕಂಪೆನಿಗಳಿಗೆ ಓಂಬುಡ್ಸ್ ಮನ್ ಯೋಜನೆ ಜಾರಿಗೊಳಿಸಲು ಆರ್ ಬಿಐ ನಿರ್ಧರಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಭಾರತೀಯ ರಿಸರ್ವ ಬ್ಯಾಂಕ್, ಎನ್ ಬಿಎಫ್ ಸಿ ವಿರುದ್ಧದ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸಲು ಹಾಗೂ ಎನ್‌ಬಿಎಫ್‌ಸಿ ಸೇವಾ ಕೊರತೆಯನ್ನು ತಗ್ಗಿಸುವ ನಿಟ್ಟಿನಲ್ಲಿ ಈ ಯೋಜನೆಯು ಸಹಕಾರಿಯಾಗಲಿದೆ ಎಂದಿದೆ. ಎನ್.ಬಿ.ಎಫ್.ಸಿ.ಯ ಠೇವಣಿ ಮತ್ತು ಅದರ ಅನುಭವದ ಆಧಾರದ ಮೇಲೆ ಈ ಯೋಜನೆ ಒಳಪಡಲಿದೆ. ಜೊತೆಗೆ ಎನ್.ಬಿ.ಎಫ್.ಸಿ.ಯ ಸಂಪತ್ತಿನ ಅಳತೆ 100 ಕೋಟಿ ರೂಪಾಯಿ ಮತ್ತು ಗ್ರಾಹಕರ ಒಳಗೊಳ್ಳುವಿಕೆ ಹೆಚ್ಚಾಗಿದ್ದರೆ ಆರ್‌ಬಿಐ ಯೋಜನೆ ವಿಸ್ತರಣೆಗೊಳ್ಳಲಿದೆ. ಎನ್.ಬಿ.ಎಫ್.ಸಿ. ಕಚೇರಿಯ ಓಂಬುಡ್ಸ್‌ಮನ್, ದೆಹಲಿ, ಮುಂಬೈ, ಕೊಲ್ಕತ್ತಾ ಮತ್ತು ಚೆನ್ನೈನಲ್ಲಿ ಕಾರ್ಯ ನಿರ್ವಹಿಸಲಿವೆ.

# ಬಯಲು ಬಹಿರ್ದೆಸೆ ಮುಕ್ತಗೊಂಡ ದಾವಣಗೆರೆ ಜಿಲ್ಲೆ

* ಎಸ್. ಅಶ್ವತಿ

स्वच्छ भारत

ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ

**ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ವಿಷಯದಲ್ಲಿ ನಿರೀಕ್ಷಿತ ಸುಧಾರಣೆ ಬಹಳ ಕಷ್ಟಕರವಾಗಿತ್ತು. ಜನರ ಹಲವಾರು ವರ್ಷಗಳ ರೂಢಿ ಇದಕ್ಕೆ ಕಾರಣವಾಗಿತ್ತು. ಗ್ರಾಮದಲ್ಲಿ ವಾಸಿಸುವ ಎಲ್ಲಾ ಕುಟುಂಬಗಳನ್ನು ವಿಶ್ವಾಸಕ್ಕೆ ಪಡೆದು ಜನಜಾಗೃತಿ ಮಾಡಿದ ಕಾರಣ ಈ ಸಮಸ್ಯೆಗಳಿಗೆ ಇತಿಶ್ರೀ ಹಾಡಲು ಸಾಧ್ಯವಾಯಿತು.**


ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಕುಟುಂಬವು ಶೌಚಾಲಯ ನಿರ್ಮಾಣ, ಬಳಸುವಂತೆ ಮಾಡಿ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡುವುದು ಒಂದು ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆ ಪದ್ಧತಿಯನ್ನು ತೊಲಗಿಸಲು ಹಾಗೂ ಗ್ರಾಮೀಣ ಸಮುದಾಯದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಗ್ರಾಮೀಣ ಜನರ ಜೀವನ ಪದ್ಧತಿಯನ್ನು ಗಣನೀಯವಾಗಿ ಸುಧಾರಿಸುವ ಹಿನ್ನೆಲೆಯಲ್ಲಿ ಸರ್ಕಾರವು "ಸ್ವಚ್ಛ ಭಾರತ್ ಮಿಷನ್" (ಗ್ರಾ) ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಈ ಯೋಜನೆಯು 2005 ರಿಂದ ಸಂಪೂರ್ಣ ಸ್ವಚ್ಛತಾ ಆಂದೋಲನ ಎಂಬ ಶೀರ್ಷಿಕೆಯೊಂದಿಗೆ ದೇಶಾದ್ಯಾಂತ ಜಾರಿಗೆ ಬಂದಿರುತ್ತದೆ. 2012ರಿಂದ "ನಿರ್ಮಲ ಭಾರತ ಅಭಿಯಾನ" ಎಂಬ ಪರಿಷ್ಕೃತ ಶೀರ್ಷಿಕೆ ಹಾಗೂ ಹೆಸರಿನೊಂದಿಗೆ ಅನುಷ್ಠಾನಗೊಂಡಿದ್ದು, ತದನಂತರ 2014ರ ಅಕ್ಟೋಬರ್-2 ರಿಂದ "ಸ್ವಚ್ಛ ಭಾರತ್ ಮಿಷನ್" ಹೆಸರಿನೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 150ನೇ ಜನ್ಮದಿನವನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ರಾಷ್ಟ್ರವನ್ನಾಗಿಸುವ ಮೂಲಕ ಆಚರಿಸಬೇಕೆನ್ನುವುದು ಭಾರತ ಸರ್ಕಾರದ ಉದ್ದೇಶವಾಗಿರುತ್ತದೆ. ಆದರೆ ರಾಜ್ಯ ಸರ್ಕಾರ ಇದಕ್ಕೂ ಮುಂಚಿತವಾಗಿಯೇ ಅಂದರೆ ಮಾರ್ಚ್-31 2018ಕ್ಕೆ ಕರ್ನಾಟಕ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸುವ ಧ್ಯೇಯ ಹೊಂದಿದೆ.

**ದೇವನಗರಿಯ ಹಿನ್ನೆಲೆ**

1997ರ ಆಗಸ್ಟ್ 15ರಂದು ಚಿತ್ರದುರ್ಗ ಜಿಲ್ಲೆಯಿಂದ ಹರಿಹರ, ದಾವಣಗೆರೆ, ಜಗಳೂರು ತಾಲ್ಲೂಕುಗಳು, ಬಳ್ಳಾರಿ ಜಿಲ್ಲೆಯಿಂದ ಹರಪನಹಳ್ಳಿ ತಾಲ್ಲೂಕು ಹಾಗೂ ಶಿವಮೊಗ್ಗ ಜಿಲ್ಲೆಯಿಂದ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳನ್ನು ಬೇರ್ಪಡಿಸಿ ರಚಿತವಾಗಿರುವ ಜಿಲ್ಲೆಯೇ ದಾವಣಗೆರೆ ಜಿಲ್ಲೆ (ದೇವನಗರಿ).




* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ದಾವಣಗೆರೆ




**2012ರ ಬೇಸ್‌ಲೈನ್ ಸರ್ವೆಯಂತೆ ವೈಯಕ್ತಿಕ ಶೌಚಾಲಯದ ವಿವರ**

| ಕ್ರ.ಸಂ | ತಾಲ್ಲೂಕು | ಒಟ್ಟು ಕುಟುಂಬಗಳು | | |
|---|---|---|---|---|
| | | ಒಟ್ಟು | ಶೌಚಾಲಯ ಸಹಿತ ಕುಟುಂಬಗಳು | ಶೌಚಾಲಯ ರಹಿತ ಕುಟುಂಬಗಳು |
| 1 | ಚನ್ನಗಿರಿ | 61885 | 30446 | 31439 |
| 2 | ದಾವಣಗೆರೆ | 52898 | 22321 | 30577 |
| 3 | ಹರಪನಹಳ್ಳಿ | 50636 | 7372 | 43264 |
| 4 | ಹರಿಹರ | 37224 | 15508 | 21716 |
| 5 | ಹೊನ್ನಾಳಿ | 47115 | 26528 | 20587 |
| 6 | ಜಗಳೂರು | 32520 | 5931 | 26589 |
| | **ಒಟ್ಟು** | **282278** | **108106** | **174172** |

**2012–13 ರಿಂದ 2016–17ನೇ ಸಾಲಿನವರೆಗೆ ಜಿಲ್ಲೆಯಲ್ಲಿ ವೈಯಕ್ತಿಕ ಶೌಚಾಲಯಗಳ ಪ್ರಗತಿಯ ವಿವರಗಳು**

| ಕ್ರ.ಸಂ | ತಾಲ್ಲೂಕು | ಒಟ್ಟು ಕುಟುಂಬಗಳು | | |
|---|---|---|---|---|
| | | ಶೌಚಾಲಯ ರಹಿತ ಕುಟುಂಬಗಳು | 2012–13ರಿಂದ 2016–17ನೇ ಸಾಲಿನವರೆಗಿನ ಪ್ರಗತಿ | ಮಾರ್ಚ್–2017ರ ಅಂತ್ಯಕ್ಕೆ ಬಾಕಿ |
| 1 | ಚನ್ನಗಿರಿ | 31439 | 20336 | 11103 |
| 2 | ದಾವಣಗೆರೆ | 30577 | 18462 | 12115 |
| 3 | ಹರಪನಹಳ್ಳಿ | 43264 | 17745 | 25519 |
| 4 | ಹರಿಹರ | 21716 | 11273 | 10443 |
| 5 | ಹೊನ್ನಾಳಿ | 20587 | 18215 | 2372 |
| 6 | ಜಗಳೂರು | 26589 | 11070 | 15519 |
| | **ಒಟ್ಟು** | **174172** | **97101** | **77071** |

ರಾಜಧಾನಿಯಿಂದ 265 ಕಿ.ಮೀ. ದೂರದಿಂದ ರಾಷ್ಟ್ರಿಯ ಹೆದ್ದಾರಿ 4ಕ್ಕೆ ಹೊಂದಿಕೊಂಡಿರುವ ದಾವಣಗೆರೆ ಜಿಲ್ಲೆಯಲ್ಲಿ 6 ತಾಲ್ಲೂಕುಗಳು, 24 ಹೋಬಳಿಗಳು, 233 ಗ್ರಾಮ ಪಂಚಾಯ್ತಿಗಳು, 772 ಗ್ರಾಮಗಳನ್ನೊಳಗೊಂಡ ಒಂದು ಸುಂದರ ಜಿಲ್ಲೆಯಾಗಿರುತ್ತದೆ.

### ಜಿಲ್ಲೆಯ ಗ್ರಾಮೀಣ ಪ್ರದೇಶ ನೈರ್ಮಲ್ಯದ ಕಿರುನೋಟ

ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ 2012ರಲ್ಲಿ ನಡೆಸಿದ ಬೇಸ್‌ಲೈನ್ ಸರ್ವೆಯಂತೆ 2,82,278 ಕುಟುಂಬಗಳಿದ್ದು, 1,08,106 ಕುಟುಂಬಗಳು ಶೌಚಾಲಯ ಹೊಂದಿದ್ದು, 1,74,172 ಕುಟುಂಬಗಳು ಶೌಚಾಲಯ ರಹಿತವಾಗಿರುತ್ತವೆ.

ಬಾಕಿ ಉಳಿದಿರುವ 77071 ವೈಯಕ್ತಿಕ ಶೌಚಾಲಯ ಹೊಂದದೇ ಇರುವ ಕುಟುಂಬಗಳಿಗಾಗಿ 2017–18ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆ ರೂಪಿಸಲಾಯಿತು, ಅಕ್ಟೋಬರ್–02, 2017ಕ್ಕೆ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು ಹಾಗೂ ನವೆಂಬರ್–19, 2017ಕ್ಕೆ ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಿ, ದಾವಣಗೆರೆಯನ್ನೂ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲಾಗಿದೆ.

### ಅನುಷ್ಠಾನ

ಯೋಜನೆಯನ್ನು ಅನುಷ್ಠಾನಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಮಾರೋಪಾದಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಲು ವಿಶೇಷ ಕಾರ್ಯತಂತ್ರಗಳನ್ನು ರಚಿಸಲಾಯಿತು.

### ಕಾರ್ಯಕ್ರಮಗಳು

* ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿಯು ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದ್ದು, ಮನೆಗೊಂದು ಶೌಚಾಲಯ ನಿರ್ಮಾಣ ಮಾಡಲು ಸಮಾರೋಪಾದಿಯಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಗತಿ ಸಾಧಿಸಲು ಮುಂದಾಯಿತು.

* ನಿಗದಿತ ಗುರಿ ಸಾಧಿಸಲು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಪ್ರಗತಿ ಪರಿಶೀಲನಾ ಮಾಡುವ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಹೋಬಳಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನಾಗಿ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಗ್ರಾಮ ಪಂಚಾಯ್ತಿಗೆ ಒಬ್ಬರಂತೆ ಗ್ರಾಮ ಪಂಚಾಯ್ತಿ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಯಿತು.

* ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಸಮುದಾಯವನ್ನು ಪ್ರೇರೇಣೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಸ್ವಚ್ಛತಾ ದೂತ (ಸ್ವಚ್ಛತಾಗ್ರಹಿ) ಗಳನ್ನು ನೇಮಿಸಲಾಯಿತು.

* ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಜನರಿಗೆ, ಚುನಾಯಿತ ಪ್ರತಿನಿಧಿಗಳಿಗೆ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಲು ಸಮಾರೋಪಾದಿಯಲ್ಲಿ ನಿರಂತರವಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಯಿತು.

* ಪ್ರತಿ 15 ದಿನಗಳಿಗೊಮ್ಮೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ, ಅನುಷ್ಠಾನಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಮಾಡುವ ಮೂಲಕ ಯೋಜನೆಯ ಬಗ್ಗೆ ಮಾಹಿತಿ ನೀಡಲಾಯಿತು.

* ಫಲಾನುಭವಿಗಳ ಖಾತೆಗೆ ಪ್ರೋತ್ಸಾಹಧನವನ್ನು ನೇರವಾಗಿ ಜಮಾ ಮಾಡುವ (ರಾಜ್ಯ ಸರ್ಕಾರದ ನಿಮಯದಂತೆ) ವಿದ್ಯುನ್ಮಾನ ಹಣಕಾಸು ನಿರ್ವಹಣಾ ಪದ್ಧತಿ (e-FMS) ತಂತ್ರಾಂಶವು ಜಿಲ್ಲೆಯಲ್ಲಿ ಪ್ರಗತಿ ಸಾಧಿಸುವುದರಲ್ಲಿ ಪ್ರಮುಖ ಅಂಶವಾಗಿದೆ.

* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಂದಾಳತ್ವದಲ್ಲಿ ಶೌಚಾಲಯ ರಹಿತ ಕುಟುಂಬಗಳ ಮನವೊಲಿಸಲು ಕ್ಷೇತ್ರಭೇಟಿ ಮಾಡಲಾಯಿತು.

* ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಶೌಚಾಲಯ ರಹಿತ ಗರ್ಭಿಣಿಯರು ಮತ್ತು ಬಾಣಂತಿಯರನ್ನು ಗುರುತಿಸಿ ಶೌಚಾಲಯ ಕಟ್ಟಿಸಿಕೊಳ್ಳಲು ಪ್ರೋತ್ಸಾಹಿಸಲು ತೊಡಗಿಸಿಕೊಳ್ಳಲಾಯಿತು.

* ಜಿಲ್ಲೆಯ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಶೌಚಾಲಯ ರಹಿತ ಕುಟುಂಬಗಳ ಮಕ್ಕಳನ್ನು ಗುರುತಿಸಿ ಅವರ ಮೂಲಕ ಪೋಷಕರಿಗೆ ಮನ ಒಲಿಸಲು ಪ್ರೋತ್ಸಾಹಿಸಲಾಯಿತು.



**ಮೌಢ್ಯತೆಯನ್ನು ಮೆಟ್ಟಿ ನಿಂತು ತಮ್ಮ ಮನೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲು ಕಾರಣೀಭೂತರಾದ ಗರ್ಭಿಣಿಯರಿಗೆ ಸೀಮಂತ ಮತ್ತು ಬಾಣಂತಿಯರಿಗೆ ಉಡಿ ತುಂಬುವ ಕಾರ್ಯಕ್ರಮ**



**ಶಾಲಾ ಮಕ್ಕಳ ಜೊತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳಿಂದ ಜಾಗೃತಿ ಕಾರ್ಯಕ್ರಮ**

* ಈ ನೆಡೆಯಲ್ಲಿ ಮೌಢ್ಯತೆಯನ್ನು ಮೆಟ್ಟಿ ನಿಂತು ತಮ್ಮ ಮನೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲು ಕಾರಣೀಭೂತರಾದ ಗರ್ಭಿಣಿಯರಿಗೆ ಸೀಮಂತ ಮತ್ತು ಬಾಣಂತಿಯರಿಗೆ ಉಡಿ ತುಂಬುವ ಹಾಗೂ ತಮ್ಮ ಪೋಷಕರ ಮನವೊಲಿಸಿ ಶೌಚಗೃಹ ನಿರ್ಮಿಸಿಕೊಳ್ಳಲು ಯಶಸ್ವಿಯಾದ ವಿದ್ಯಾರ್ಥಿಗಳಿಗೆ ಪ್ರಶಂಸೆ ವ್ಯಕ್ತಪಡಿಸಿ ಸತ್ಕಾರ ಮಾಡುವ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮವು ಯಶಸ್ವಿಗೆ ಮತ್ತೊಂದು ಮೈಲಿಗಲ್ಲು.

### ವಿಶೇಷತೆಗಳು

ವಿಶೇಷ ಆಂದೋಲನದ ಮೂಲಕ ಶಾಲಾ ಮಟ್ಟದಲ್ಲಿ ಮಕ್ಕಳಿಂದ ಸ್ವಚ್ಚತೆಯ ಸಂದೇಶ ಸಾರುವ ಜಾಥಾಗಳು, ಸ್ವಚ್ಚತೆಯ ಕುರಿತು ಪ್ರಬಂಧ ಸ್ಪರ್ಧೆಗಳು, ಶಾಲಾ ನೈರ್ಮಲ್ಯ ಮತ್ತು ಶುಚಿತ್ವವನ್ನು ಸಾರುವ ಕಿರುಚಿತ್ರಗಳ ಪ್ರದರ್ಶನ, ಎನ್‌ಎಸ್‌ಎಸ್ ತಂಡಗಳ ಮೂಲಕ ಶೌಚಾಲಯದ ಮಹತ್ವ ಮತ್ತು ಸ್ವಚ್ಚ ಪರಿಸರಕ್ಕೆ ಉತ್ತೇಜನ ನೀಡುವಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

* ಜಿಲ್ಲಾದ್ಯಂತ ಯೋಜನೆಗೆ ಅಭೂತ ಪೂರ್ವ ಬೆಂಬಲವು ಸಿಕ್ಕಿದ್ದು ಕಾರ್ಯಕ್ರಮಕ್ಕೆ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಸ್ವಸಹಾಯ ಸಂಘಗಳ ಮಹಿಳೆಯರು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಎಲ್ಲಾರೂ ಕೂಡ ಈ ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾಗಿದ್ದಾರೆ.

* ಜಿಲ್ಲೆಯಲ್ಲಿ 71ನೇ ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಆಗಸ್ಟ್ 9 ರಿಂದ 15ರವರೆಗೆ "ಬಯಲು ಬಹಿರ್ದೆಸೆಯಿಂದ ಮುಕ್ತ-ಸ್ವಾತಂತ್ರ್ಯ ಸಪ್ತಾಹ" ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

* ಜಿಲ್ಲೆಯಲ್ಲಿ ಸೆಪ್ಟೆಂಬರ್-15 ರಿಂದ ಅಕ್ಟೋಬರ್-2ರವರೆಗೆ "ಸ್ವಚ್ಚ ಹೀ ಸೇವಾ" ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



**ಶೌಚಾಲಯರಹಿತ ಕುಟುಂಬಗಳಿಗೆ ಶೌಚಾಲಯ ನಿರ್ಮಾಣ ಮಾಡುವಂತೆ ಮನವೊಲಿಸುತ್ತಿರುವುದು**

### ಸವಾಲುಗಳು ಮತ್ತು ಪರಿಹಾರೋಪಾಯ

ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ವಿಷಯದಲ್ಲಿ ನಿರೀಕ್ಷಿತ ಸುಧಾರಣೆ ಬಹಳ ಕಷ್ಟಕರವಾಗಿತ್ತು. ಜನರ ಹಲವಾರು ವರ್ಷಗಳ ರೂಢಿ, ಪ್ರಕೃತಿಯನ್ನು ಬಿಟ್ಟು ಹೊರ ಬರದೇ ಇರುವುದು ಇದಕ್ಕೆ ಕಾರಣವಾಗಿದೆ. ಅಲ್ಲದೇ ಜನರ ಮನಸ್ಥಿತಿಯು ಮತ್ತೊಂದು ಕಾರಣವಾಗಿತ್ತು.

ಒಟ್ಟಿನಲ್ಲಿ ಗ್ರಾಮದಲ್ಲಿ ವಾಸಿಸುವ ಎಲ್ಲಾ ಕುಟುಂಬಗಳನ್ನು ವಿಶ್ವಾಸಕ್ಕೆ ಪಡೆಯಲಾಯಿತು. ಜೊತೆಗೆ ಲಭ್ಯ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಜನಜಾಗೃತಿ ಮಾಡಿದ ಕಾರಣ ಈ ಸಮಸ್ಯೆಗಳಿಗೆ ಇತಿಶ್ರೀ ಹಾಡಲು ಸಾಧ್ಯವಾಯಿತು. ❐

# ಮನ್ ಕೀ ಬಾತ್



**ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 25-02-2018ರಂದು ಮಾಡಿದ 'ಮನ್ ಕಿ ಬಾತ್' – 41 ನೇ ಭಾಷಣದ ಆಯ್ದ ಕನ್ನಡ ಅವತರಣಿಕೆ**

ನನ್ನ ಪ್ರೀತಿಯ ದೇಶವಾಸಿಗಳೇ, ನಮಸ್ಕಾರ. ಈ ದಿನ ಮೊದಲಿಗೆ ಮನದ ಮಾತು ಕಾರ್ಯಕ್ರಮವನ್ನು ಒಂದು ಫೋನ್ ಕಾಲ್ ಮುಖಾಂತರ ಪ್ರಾರಂಭ ಮಾಡೋಣ.

ಕರೆ : ಆದರಣೀಯ ಪ್ರಧಾನ ಮಂತ್ರಿಗಳೇ, ನಾನು ಕೋಮಲ್ ತ್ರಿಪಾಠಿ, ಮೀರಟ್ ನಿಂದ ಮಾತನಾಡುತ್ತಿದ್ದೇನೆ. 28 ನೇ ತಾರೀಖಿನಂದು ರಾಷ್ಟ್ರೀಯ ವಿಜ್ಞಾನ ದಿನವಾಗಿದೆ. ಭಾರತದ ಪ್ರಗತಿ ಮತ್ತು ಅದರ ಬೆಳವಣಿಗೆಯು ವಿಜ್ಞಾನದ ಜೊತೆಗೆ ಸಂಪೂರ್ಣವಾಗಿ ಬೆಸೆದುಕೊಂಡಿದೆ. ಇದರಲ್ಲಿ ನಾವು ಎಷ್ಟು ಸಂಶೋಧನೆ ಮತ್ತು ಆವಿಷ್ಕಾರಗಳನ್ನು ಮಾಡುತ್ತೇವೆಯೊ, ಅಷ್ಟು ನಾವು ಮುಂದುವರೆಯುತ್ತೇವೆ ಮತ್ತು ಏಳಿಗೆ ಹೊಂದುತ್ತೇವೆ. ನಮ್ಮ ಯುವಕರು ವೈಜ್ಞಾನಿಕವಾಗಿ ತಮ್ಮ ಯೋಚನೆಗಳನ್ನು ಮುಂದುವರೆಸಿ, ನಮ್ಮ ದೇಶವನ್ನೂ ಸಹ ಮುನ್ನಡೆಸುವಂತೆ ಪ್ರೇರೇಪಣೆ ಮಾಡಲು ಅವರನ್ನು ಕುರಿತು ಅಂತಹ ಕೆಲವು ಮಾತುಗಳನ್ನು ಹೇಳಿ. ಧನ್ಯವಾದಗಳು.

ನಿಮ್ಮ ಫೋನ್ ಕಾಲ್‌ಗೆ ನನ್ನ ಅನಂತಾನಂತ ಧನ್ಯವಾದಗಳು. ವಿಜ್ಞಾನದ ಕುರಿತಾಗಿ ನನ್ನ ಯುವ ಸ್ನೇಹಿತರು ಸಾಕಷ್ಟು ಪ್ರಶ್ನೆಗಳನ್ನು ನನಗೆ ಕೇಳುತ್ತಾರೆ, ಏನೋ ಒಂದಿಷ್ಟು ಬರೆಯುತ್ತಲೂ ಇರುತ್ತಾರೆ. ಸಮುದ್ರದ ಬಣ್ಣ ನೀಲಿಯಾಗಿ ಕಾಣುವುದನ್ನು ನಾವು ನೋಡಿದ್ದೇವೆ. ಆದರೆ ನಾವು ನಮ್ಮ ದೈನಂದಿನ ಬದುಕಿನ ಅನುಭವಗಳಿಂದ ನೀರಿಗೆ ಯಾವುದೇ ಬಣ್ಣವಿಲ್ಲ ಎಂದು ಕೂಡ ತಿಳಿದುಕೊಂಡಿದ್ದೇವೆ. ನದಿಯಾಗಲಿ, ಸಮುದ್ರವಾಗಲಿ, ನೀರು ಬಣ್ಣದಿಂದ ಏಕೆ ಕೂಡಿರುತ್ತದೆ ಎಂದು ನಾವು ಎಂದಾದರೂ ಯೋಚಿಸಿದ್ದೇವೆಯೇ? ಇದೇ ಪ್ರಶ್ನೆ 1920 ರ ದಶಕದಲ್ಲಿ ಒಬ್ಬ ಯುವಕನ ಮನದಲ್ಲಿ ಬಂದಿತ್ತು. ಇದೇ ಪ್ರಶ್ನೆ ಆಧುನಿಕ ಭಾರತದ ಒಬ್ಬ ಮಹಾನ್ ವಿಜ್ಞಾನಿಯ ಹುಟ್ಟಿಗೆ ಕಾರಣವಾಗಿತ್ತು. ನಾವು ಯಾವಾಗ ವಿಜ್ಞಾನದ ಬಗ್ಗೆ ಮಾತನಾಡುತ್ತೇವೆಯೊ ಆಗ ಎಲ್ಲಕ್ಕಿಂತ ಮೊದಲು ಭಾರತರತ್ನ ಸರ್ ಸಿ.ವಿ. ರಾಮನ್ ಅವರ ಹೆಸರು ನಮ್ಮ ಕಣ್ಣ ಮುಂದೆ ಬರುತ್ತದೆ. ಅವರಿಗೆ ಬೆಳಕಿನ ವಕ್ರೀಭವನ ಬಗ್ಗೆ ನಡೆಸಿದ ಅತ್ಯುತ್ತಮ ಕಾರ್ಯಕ್ಕೆ ನೊಬೆಲ್ ಪ್ರಶಸ್ತಿ ನೀಡಲಾಗಿತ್ತು. ಅವರ ಒಂದು ಸಂಶೋಧನೆ ರಾಮನ್ ಎಫೆಕ್ಟ್ ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿದೆ. ನಾವು ಪ್ರತಿವರ್ಷ ಫೆಬ್ರವರಿ 28 ರಂದು ವಿಜ್ಞಾನ ದಿನ ಆಚರಿಸುತ್ತೇವೆ ಏಕೆಂದರೆ ಅದೇ ದಿನದಂದು ಅವರು ಲೈಟ್ ಸ್ಕ್ಯಾಟರಿಂಗ್‌ನ ಘಟನೆಯನ್ನು ಸಂಶೋಧಿಸಿದ್ದರು. ಅದಕ್ಕಾಗಿ ಅವರಿಗೆ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿತ್ತು. ಈ ದೇಶವು ವಿಜ್ಞಾನ ಕ್ಷೇತ್ರದಲ್ಲಿ ಬಹಳಷ್ಟು ಮಹಾನ್ ವಿಜ್ಞಾನಿಗಳಿಗೆ ಜನ್ಮ ಕೊಟ್ಟಿದೆ. ಒಂದು ಕಡೆ ಮಹಾನ್ ಗಣಿತಜ್ಞ ಬೋಧಾಯನ, ಭಾಸ್ಕರ, ಬ್ರಹ್ಮಗುಪ್ತ ಮತ್ತು ಆರ್ಯಭಟ ಇವರ ಪರಂಪರೆ ಇದ್ದರೆ, ಇನ್ನೊಂದು ಕಡೆ ಚಿಕಿತ್ಸಾ ಕ್ಷೇತ್ರದಲ್ಲಿ ಸುಶ್ರೂತ ಮತ್ತು ಚರಕ ಇವರು ನಮ್ಮ ಗೌರವವಾಗಿದ್ದಾರೆ. ಸರ್ ಜಗದೀಶ್ ಚಂದ್ರ ಬೋಸ್ ಮತ್ತು ಹರಗೋವಿಂದ ಖುರಾನಾ ಇವರುಗಳಿಂದ ಹಿಡಿದು ಸತ್ಯೇಂದ್ರನಾಥ್ ಬೋಸ್ ರವರಂಥ ವಿಜ್ಞಾನಿಗಳು ಇವರೆಲ್ಲರೂ ಭಾರತದ ಹೆಮ್ಮೆ. ಖ್ಯಾತ ಭೊಸೊನ್ ಕಣದ ನಾಮಕರಣವನ್ನಂತೂ ಸತ್ಯೇಂದ್ರನಾಥ್ ಬೋಸ್ ರವರ ಹೆಸರಿನ ಮೇಲೆಯೇ ಮಾಡಲಾಗಿದೆ. ಇತ್ತೀಚೆಗೆ ನನಗೆ ಮುಂಬೈನಲ್ಲಿ 'ವಾದ್ವಾನಿ ಇನ್‌ಸ್ಟಿಟ್ಯೂಟ್ ಫಾರ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಸಂಸ್ಥೆಯ ಉದ್ಘಾಟನಾ


* ಕೃಪೆ; ಆಕಾಶವಾಣಿ, ಬೆಂಗಳೂರು

ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ವಿಜ್ಞಾನ ಕ್ಷೇತ್ರದಲ್ಲಿ ಏನೇನು ಚಮತ್ಕಾರಗಳು ಆಗುತ್ತಿವೆಯೋ ಅವುಗಳ ಬಗ್ಗೆ ತಿಳಿದುಕೊಳ್ಳುವುದು ಬಹಳ ಕುತೂಹಲಕಾರಿಯಾಗಿತ್ತು. ಕೃತಕ ಬುದ್ಧಿಮತ್ತೆ ಮಾಧ್ಯಮವು ರೊಬೊಟ್ಸ್, ಬೋಟ್ಸ್ ಮತ್ತು ನಿರ್ದಿಷ್ಟ ಕಾರ್ಯಗಳನ್ನು ಮಾಡುವ ಯಂತ್ರಗಳನ್ನು ತಯಾರಿಸಲು ಸಹಾಯಕವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯಂತ್ರಗಳು ಸ್ವ ಕಲಿಕೆಯಿಂದ ತಮ್ಮಷ್ಟಕ್ಕೆ ತಾವೇ ಬುದ್ಧಿಮತ್ತೆಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಈ ತಂತ್ರಜ್ಞಾನ ಬಡವರು, ವಂಚಿತರು ಮತ್ತು ಅವಶ್ಯಕತೆ ಇರುವವರ ಜೀವನವನ್ನು ಉತ್ತಮಗೊಳಿಸುವ ಕೆಲಸಕ್ಕೆ ಉಪಯೋಗವಾಗುತ್ತದೆ. ಕೃತಕ ಬುದ್ಧಿಮತ್ತೆಯ ಆ ಕಾರ್ಯಕ್ರಮದಲ್ಲಿ ದಿವ್ಯಾಂಗ ಸೋದರ ಸೋದರಿಯರ ಜೀವನವನ್ನು ಸುಗಮಗೊಳಿಸಲು ಈ ಕೃತಕ ಬುದ್ಧಿಮತ್ತೆಯಿಂದ ಯಾವ ರೀತಿಯ ಸಹಾಯ ದೊರೆಯಬಹುದು? ಈ ಕೃತಕ ಬುದ್ಧಿಮತ್ತೆಯ ಮಾಧ್ಯಮದಿಂದ ಪ್ರಕೃತಿ ವಿಕೋಪಗಳ ಬಗ್ಗೆ ಹೆಚ್ಚು ನಿಖರ ಮಾಹಿತಿ ಪಡೆಯಬಹುದೇ? ರೈತರ ಫಸಲಿನ ಇಳುವರಿಯ ಬಗ್ಗೆ ಏನಾದರೂ ಉಪಯೋಗವಾಗಬಹುದೇ? ಈ ಕೃತಕ ಬುದ್ಧಿಮತ್ತೆಯು ಆರೋಗ್ಯ ಸೇವೆಗಳ ತಲುಪುವಿಕೆಯನ್ನು ಸುಲಭಗೊಳಿಸಿ ಆಧುನಿಕ ವಿಧಾನಗಳಿಂದ ರೋಗಗಳ ಚಿಕಿತ್ಸೆ ಮಾಡಲು ಸಹಾಯಕವಾಗುತ್ತದೆಯೇ? ಎಂದು ನಾನು ವಿಜ್ಞಾನಿಗಳ ಸಮುದಾಯವನ್ನು ಕೇಳಿದೆ.

ಕೆಲವು ದಿನಗಳ ಹಿಂದೆ ಗುಜರಾತ್‌ನ ಅಹಮದಾಬಾದ್‌ನಲ್ಲಿ ನನಗೆ ಇಸ್ರೇಲ್‌ನ ಪ್ರಧಾನಮಂತ್ರಿಯವರ ಜೊತೆ ಐ ಕ್ರಿಯೇಟ್ ಇದರ ಉದ್ಘಾಟನಾ ಸಮಾರಂಭಕ್ಕೆ ಹೋಗುವ ಅವಕಾಶ ದೊರಕಿತ್ತು. ಅಲ್ಲಿ ಒಬ್ಬ ಯುವಕನು – ಮಾತು ಬರುವ ವ್ಯಕ್ತಿಯ ಜೊತೆಗೆ, ಮಾತು ಬಾರದವರೂ ಒಂದು ಸಲಕರಣೆ ಮಾಧ್ಯಮದಿಂದ ಸಂಭಾಷಿಸಬಹುದಾದ ಅಂಕೀಕೃತ ಸಾಧನವನ್ನು ಅಭಿವೃದ್ಧಿಗೊಳಿಸಿದ್ದ. ಈ ರೀತಿಯ ಹಲವು ವಿಧಾನಗಳಲ್ಲಿ ಕೃತಕ ಬುದ್ಧಿಮತ್ತೆಯ ಉಪಯೋಗವನ್ನು ಮಾಡಬಹುದು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಮೌಲ್ಯ ತಟಸ್ಥವಾಗಿರುತ್ತದೆ. ಅದಕ್ಕೆ ಸ್ವಂತದ ಮೌಲ್ಯ ಇರುವುದಿಲ್ಲ. ಯಾವುದೇ ಯಂತ್ರವಾದರೂ ನಾವು ಹೇಗೆ ಬಯಸುತ್ತೇವೆಯೋ, ಹಾಗೆಯೇ ಕಾರ್ಯ ನಿರ್ವಹಿಸುತ್ತದೆ. ಆದರೆ ನಾವು ಯಂತ್ರದಿಂದ ಏನು ಕೆಲಸ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಮೇಲೆಯೇ ಅವಲಂಬಿತವಾಗಿರುತ್ತದೆ. ಇಲ್ಲಿ ಮಾನವೀಯ ಉದ್ದೇಶ ಮಹತ್ವಪೂರ್ಣವಾಗಿರುತ್ತದೆ. ಮಾನವ ಸಮೂಹದ ಕಲ್ಯಾಣಕ್ಕೆ ವಿಜ್ಞಾನದ ಉಪಯೋಗ; ಮಾನವ ಜೀವನದ ಸರ್ವೋಚ್ಚ ಎತ್ತರವನ್ನು ಮುಟ್ಟಲು ಬಳಕೆ.

ಲೈಟ್ ಬಲ್ಬ್‌ನ್ನು ಕಂಡುಹಿಡಿದ ಥಾಮಸ್ ಅಲ್ವಾ ಎಡಿಸನ್ ತನ್ನ



ಪ್ರಯೋಗದಲ್ಲಿ ಬಹಳಷ್ಟು ಸಾರಿ ವಿಫಲವಾಗಿದ್ದರು. ಒಂದು ಬಾರಿ ಇದರ ಬಗ್ಗೆ ಅವರನ್ನು ಕೇಳಿದಾಗ ನಾನು ಲೈಟ್ ಬಲ್ಬ್ ತಯಾರಿಕೆಯ ಹಿಂದೆ 10 ಸಾವಿರ ವಿಫಲ ಪ್ರಯತ್ನಗಳನ್ನು ಕಂಡಿದ್ದೇನೆ ಎನ್ನುವ ಉತ್ತರ ಕೊಟ್ಟಿದ್ದರು. ಅಂದರೆ ಎಡಿಸನ್ ತಮ್ಮ ವಿಫಲತೆಗಳನ್ನೂ ಸಹ ತಮ್ಮ ಶಕ್ತಿಯನ್ನಾಗಿ ಮಾಡಿಕೊಂಡಿದ್ದರು. ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ನಮ್ಮ ವಿಜ್ಞಾನಿಗಳು, ವಿಜ್ಞಾನದೊಂದಿಗೆ ಬೆಸೆದುಕೊಂಡಿರುವ ಎಲ್ಲಾ ಜನರಿಗೂ ನಾನು ಅಭಿನಂದನೆಗಳನ್ನು ತಿಳಿಸುತ್ತೇನೆ. ನಮ್ಮ ಯುವ ಪೀಳಿಗೆ ಸತ್ಯ ಮತ್ತು ಜ್ಞಾನದ ಅನ್ವೇಷಣೆಗೆ ಪ್ರೇರಿತರಾಗಲಿ, ವಿಜ್ಞಾನದ ನೆರವಿನಿಂದ ಸಮಾಜದ ಸೇವೆ ಮಾಡಲು ಪ್ರೇರಿತರಾಗಲಿ, ಅದಕ್ಕಾಗಿ ನನ್ನ ಅನಂತಾನಂತ ಶುಭಾಶಯಗಳು.

ಗೆಳೆಯರೇ, ಬಿಕ್ಕಟ್ಟಿನ ಸಮಯದಲ್ಲಿ ಸುರಕ್ಷತೆ, ದುರಂತ ಈ ವಿಷಯಗಳ ಬಗ್ಗೆ ನನಗೆ ಬಹಳಷ್ಟು ಸಾರಿ ಸಂದೇಶಗಳು ಬರುತ್ತಿರುತ್ತವೆ. ಜನರು ನನಗೆ ಏನಾದರೊಂದು ಬರೆಯುತ್ತಲೇ ಇರುತ್ತಾರೆ. ಪುಣೆಯ ಶ್ರೀಯುತ ರವೀಂದ್ರ ಸಿಂಗ್ ರವರು ನರೇಂದ್ರ ಮೋದಿ ಮೊಬೈಲ್ ಆ್ಯಪ್‌ನಲ್ಲಿ, ತಮ್ಮ ಕಾಮೆಂಟ್‌ನಲ್ಲಿ ವೃತ್ತಿ ಸಂಬಂಧಿ ಸುರಕ್ಷತೆಯ ಬಗ್ಗೆ ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ಫ್ಯಾಕ್ಟರಿಗಳು ಮತ್ತು ನಿರ್ಮಾಣ ಕಾಮಗಾರಿಗಳಲ್ಲಿ ಸುರಕ್ಷತೆ ಗುಣಮಟ್ಟಗಳು ಅಷ್ಟೊಂದು ಚೆನ್ನಾಗಿಲ್ಲ, ಬರುವ ಮಾರ್ಚ್ 4 ರಂದು ಭಾರತದ ರಾಷ್ಟ್ರೀಯ ಸುರಕ್ಷತಾ ದಿನವಾಗಿರುವುದರಿಂದ ಪ್ರಧಾನಮಂತ್ರಿಗಳು ತಮ್ಮ ಮನದ ಮಾತು ಕಾರ್ಯಕ್ರಮದಲ್ಲಿ ಸುರಕ್ಷತೆಯ ಬಗ್ಗೆ ಮಾತನಾಡಲಿ ಅದರಿಂದ ಜನರಲ್ಲಿ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಲಿ ಎಂದು ಅವರು ಬರೆದಿದ್ದಾರೆ. ನಾವು ಸಾರ್ವಜನಿಕ ಸುರಕ್ಷತೆಯ ಬಗ್ಗೆ ಮಾತನಾಡುವಾಗ ಎರಡು ವಿಷಯಗಳು ಬಹಳ ಮಹತ್ವಪೂರ್ಣವಾಗುತ್ತದೆ ಮೊದಲನೆಯದು ಸಕ್ರಿಯತೆ ಮತ್ತು ಎರಡನೆಯದು ಸನ್ನದ್ಧತೆ. ಸುರಕ್ಷತೆ ಎನ್ನುವುದು ಎರಡು ರೀತಿಯದ್ದಾಗಿರುತ್ತದೆ : ಒಂದು, ವಿಪತ್ತಿನ ಸಮಯದಲ್ಲಿ ಅವಶ್ಯಕವಾದುದು ಮತ್ತು ಎರಡನೆಯದು ದಿನನಿತ್ಯದ ಜೀವನದಲ್ಲಿ ಅವಶ್ಯಕವಾಗಿರುವುದು ಒಂದು ವೇಳೆ ದಿನನಿತ್ಯದ ಜೀವನದಲ್ಲಿ ಸುರಕ್ಷತೆಯ ಬಗ್ಗೆ ಜಾಗರೂಕರಾಗಿರದಿದ್ದರೆ, ಪಾಲಿಸುತ್ತಿಲ್ಲವಾದಲ್ಲಿ ಆಪತ್ತಿನ ಸಮಯದಲ್ಲಿ ಇದನ್ನು ಸಾಧಿಸುವುದು ಕಷ್ಟಸಾಧ್ಯವಾಗುತ್ತದೆ. ನಾವೆಲ್ಲರೂ ಎಷ್ಟೋ ಬಾರಿ ರಸ್ತೆಗಳಲ್ಲಿ ಹಾಕಿರುವ ಬೋರ್ಡ್ ಗಳನ್ನು ಓದುತ್ತೇವೆ. ಅದರಲ್ಲಿ

– ಜಾಗರೂಕತೆ ಮರೆಯಿತು ದುರ್ಘಟನೆ ನಡೆಯಿತು

– ಒಂದು ತಪ್ಪಿನಿಂದ ಆದ ಹಾನಿ, ಸಂತೋಷ ಮತ್ತು ನಗುವನ್ನು ಕಿತ್ತುಕೊಂಡಿತು

– ಇಷ್ಟು ಬೇಗ ಈ ಜಗತ್ತನ್ನು ಬಿಡಬೇಡ, ಸುರಕ್ಷತೆಯ ಜೊತೆಗೆ ಸಂಬಂಧ ಮಾಡದಿರಬೇಡ

– ಸುರಕ್ಷತೆಯ ಜೊತೆಗೆ ಬೇಡ ತಮಾಷೆ, ಇಲ್ಲದಿದ್ದರೆ ಜೀವನ ಆಗುವುದು ಹತಾಶೆ ಎಂದೆಲ್ಲಾ ಬರೆದಿರುತ್ತದೆ.

ಒಮ್ಮೊಮ್ಮೆ ಅದರಾಚೆಗೆ ನಮ್ಮ ಜೀವನದಲ್ಲಿ ಆ ವಾಕ್ಯಗಳ ಉಪಯೋಗ ಆಗುವುದೇ ಇಲ್ಲ. ಪ್ರಾಕೃತಿಕ ವಿಕೋಪಗಳನ್ನು ಬಿಟ್ಟರೆ ಹೆಚ್ಚಿನ ದುರ್ಘಟನೆಗಳು ನಮ್ಮ ಒಂದಿಲ್ಲೊಂದು ತಪ್ಪಿನ ಪರಿಣಾಮವೇ ಆಗಿರುತ್ತದೆ. ಒಂದು ವೇಳೆ ನಾವು ಎಚ್ಚರದಿಂದಿದ್ದರೆ, ಅವಶ್ಯಕ ನಿಯಮಗಳನ್ನು ಪಾಲನೆ ಮಾಡಿದರೆ ನಾವು ನಮ್ಮ ಜೀವನದ ರಕ್ಷಣೆಯನ್ನು ಮಾಡಿಕೊಳ್ಳಬಹುದು ಜೊತೆಗೆ



ಬಹು ದೊಡ್ಡ ದುರ್ಘಟನೆಗಳಿಂದ ನಮ್ಮ ಸಮಾಜವನ್ನು ಕೂಡ ಕಾಪಾಡಿಕೊಳ್ಳಬಹುದು.

ನನ್ನ ಪ್ರೀತಿಯ ದೇಶ ಬಾಂಧವರೇ


ಈ ಸಲದ ಬಜೆಟ್‌ನಲ್ಲಿ ಸ್ವಚ್ಛ ಭಾರತ ಯೋಜನೆಯ ಅಡಿಯಲ್ಲಿ ಹಳ್ಳಿಗಳಲ್ಲಿ ಬಯೊ ಗ್ಯಾಸ್ ಸಹಾಯದಿಂದ **'ಕಸದಿಂದ ಸಂಪತ್ತು'** ಮತ್ತು ಕಸದಿಂದ ಇಂಧನ ಉತ್ಪತ್ತಿ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಇದಕ್ಕಾಗಿ ಪ್ರಾರಂಭಿಸಿರುವ ಹೊಸ ಯೋಜನೆಗೆ 'ಗೋಬರ್ ಧನ್' – ಎಂದು ಹೆಸರಿಸಲಾಗಿದೆ. 'ಗೋಬರ್ ಧನ್' ಯೋಜನೆಯ ಉದ್ದೇಶವೆಂದರೆ ಹಳ್ಳಿಗಳನ್ನು ಸ್ವಚ್ಛವಾಗಿಡುವುದು ಮತ್ತು ಪಶುಗಳ ತ್ಯಾಜ್ಯವನ್ನು ಕೃಷಿ ಮತ್ತು ಗೊಬ್ಬರಕ್ಕಾಗಿ ಬಳಸುವುದು, ಅದರಿಂದ ಗೊಬ್ಬರ ತಯಾರಿಸುವುದು ಮತ್ತು ಬಯೋಗ್ಯಾಸ್ ಉತ್ಪಾದಿಸುವುದಾಗಿದೆ. ಇದರಿಂದ ಹಣ ಗಳಿಸಬಹುದು ಹಾಗೂ ಇಂಧನ ತಯಾರಿಸಬಹುದಾಗಿದೆ.

ಭಾರತದಲ್ಲಿರುವ ಪಶುಸಂಪತ್ತು ಜಗತ್ತಿನಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿದೆ. ಭಾರತದಲ್ಲಿರುವ 30 ಕೋಟಿ ಜಾನುವಾರುಗಳಿಂದ ಪ್ರತಿ ದಿನ 30 ಲಕ್ಷ ಟನ್ ಗೊಬ್ಬರ ದೊರೆಯುತ್ತದೆ. ಯೂರೋಪ್‌ನ ಅನೇಕ ದೇಶಗಳಲ್ಲಿ ಮತ್ತು ಚೀನಾದಲ್ಲಿ ಪಶುಗಳ ಸಗಣಿಯನ್ನು ಮತ್ತು ಇತರ ಸಾವಯವ ತ್ಯಾಜ್ಯವನ್ನು ಇಂಧನವನ್ನಾಗಿ ಪರಿವರ್ತಿಸಲಾಗುತ್ತಿದೆ. ಭಾರತದಲ್ಲಿ ಸಗಣಿಯನ್ನು ಈ ಉದ್ದೇಶಕ್ಕೆ ಸಂಪೂರ್ಣ ಸಾಮರ್ಥ್ಯದಲ್ಲಿ ಬಳಸಲಾಗುತ್ತಿಲ್ಲ. ಆದರೆ ಈಗ ನಾವು ರೂಪಿಸಿರುವ ಹೊಸ ಗ್ರಾಮೀಣ ಸ್ವಚ್ಛಭಾರತ ಮಿಷನ್ ನಲ್ಲಿ ಇಂತಹ ಪ್ರಗತಿಪರ ಗುರಿಯನ್ನು ಹೊಂದಿ ಮುಂದುವರೆಯುತ್ತಿದ್ದೇವೆ.

ಇದರ ಉದ್ದೇಶವೆಂದರೆ ಸಗಣಿಯನ್ನು, ಕೃಷಿ ತ್ಯಾಜ್ಯ ಮತ್ತು ಅಡಿಗೆ ಮನೆ ತ್ಯಾಜ್ಯ ಇವುಗಳನ್ನು ಬಯೋಗ್ಯಾಸ್ ಆಧರಿತ ಇಂಧನ ಉತ್ಪಾದನೆಗಾಗಿ ಬಳಸಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಗೋಬರ್ ಧನ್ ಯೋಜನೆಯ ಅಡಿಯಲ್ಲಿ ಇನ್ನು ಮುಂದೆ ದನಗಳ ಸಗಣಿಯನ್ನು ಮತ್ತು ತ್ಯಾಜ್ಯವನ್ನು ನಮ್ಮ ಗ್ರಾಮೀಣ ರೈತರು, ಸೋದರ ಸೋದರಿಯರಿಗೆ ಆದಾಯದ ಮೂಲವಾಗಿ ಮಾರ್ಪಡಿಸುವಂತೆ ಪ್ರೋತ್ಸಾಹ ನೀಡಿ ಅವರು ತ್ಯಾಜ್ಯವನ್ನು ಬರೀ ತ್ಯಾಜ್ಯವಾಗಿ ನೋಡದೆ ಆದಾಯದ ಮೂಲವಾಗಿ ನೋಡುವಂತೆ ಮಾಡುವುದೇ ಇದರ ಆಶಯವಾಗಿದೆ. ಗೋಬರ್ ಧನ್ ಯೋಜನೆಯಿಂದ ಗ್ರಾಮೀಣ ಕ್ಷೇತ್ರಗಳಿಗೆ ಹಲವಾರು ಲಾಭಗಳು ದೊರೆಯುತ್ತವೆ. ಇದರಿಂದ ಹಳ್ಳಿಯನ್ನು ಸ್ವಚ್ಛವಾಗಿಡಲು ಸಹಾಯಕವಾಗುತ್ತದೆ, ಜಾನುವಾರುಗಳ ಆರೋಗ್ಯ ವೃದ್ಧಿಸುತ್ತದೆ ಮತ್ತು ಅವುಗಳಿಂದ ಬರುವ ಉತ್ಪಾದನೆಯೂ ಅಧಿಕವಾಗುತ್ತದೆ. ಬಯೋಗ್ಯಾಸನ್ನು ಅಡಿಗೆ ಮಾಡಲು ಮತ್ತು ಬೆಳಕಿಗಾಗಿ ಬಳಸುವುದರಿಂದ ರೈತರ ಸ್ವಾವಲಂಬನೆ ಹೆಚ್ಚುತ್ತದೆ. ಇದರಿಂದ ರೈತರು ಮತ್ತು ಪಶುಸಂಗೋಪನೆ ಮಾಡುವವರ ಆದಾಯದಲ್ಲಿ ಏರಿಕೆಯಾಗುತ್ತದೆ. ತ್ಯಾಜ್ಯದ ಸಂಗ್ರಹ, ಸಾಗಣೆ ಮತ್ತು ಬಯೋಗ್ಯಾಸ್ ಮಾರಾಟದಿಂದ ಹೊಸ ಉದ್ಯೋಗಗಳಿಗೆ ಅವಕಾಶ ದೊರೆಯುತ್ತದೆ.

ಗೋಬರ್ ಧನ್ ಯೋಜನೆಯ ಸುಗಮ ವ್ಯವಸ್ಥೆಗಾಗಿ ಒಂದು ಆನ್ ಲೈನ್ ಟ್ರೇಡಿಂಗ್ ಪ್ಲಾಟ್ ಫಾರಂ ಸ್ಥಾಪಿಸಲಾಗುವುದು. ಇದು ರೈತರನ್ನು ಖರೀದಿದಾರರೊಂದಿಗೆ ಕನೆಕ್ಟ್ ಮಾಡುತ್ತದೆ. ಇದರಿಂದ ರೈತರಿಗೆ ಸಗಣಿ ಮತ್ತು ಕೃಷಿ ತ್ಯಾಜ್ಯಗಳಿಗೆ ಸರಿಯಾದ ಬೆಲೆ ದೊರೆಯುತ್ತದೆ. ನಾನು ಉದ್ಯಮಿಗಳಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ನನ್ನ ಸೋದರಿಯರಿಗೆ ನೀವು ಮುಂದೆ ಬರಬೇಕೆಂದು ಆಗ್ರಹಿಸುತ್ತೇನೆ. ಸ್ವಸಹಾಯ ಸಂಘಗಳು ಮತ್ತು ಸಹಕಾರಿ ಸಂಘಸಂಸ್ಥೆಗಳನ್ನು ರೂಪಿಸಿಕೊಂಡು ಈ ಯೋಜನೆಯ ಸಂಪೂರ್ಣ ಲಾಭ ಪಡೆಯಬೇಕು. ಕ್ಲೀನ್ ಎನರ್ಜಿ ಮತ್ತು ಗ್ರೀನ್ ಜಾಬ್ಸ್ ಎನ್ನುವ ಅಂದೋಳನದ ಭಾಗವಾಗಲು ನಾನು ನಿಮ್ಮೆಲ್ಲರನ್ನೂ ಆಹ್ವಾನಿಸುತ್ತೇನೆ. ನಿಮ್ಮ ಹಳ್ಳಿಗಳಲ್ಲಿ ತ್ಯಾಜ್ಯವನ್ನು ಸಂಪತ್ತಾಗಿ ಪರಿವರ್ತಿಸಲು ಮತ್ತು ಗೋಬರ್ ಅನ್ನು ಗೋಬರ್ ಧನ್ ಮಾಡುವ ನಿಟ್ಟಿನಲ್ಲಿ ನೀವೆಲ್ಲರೂ ಕ್ರಮ ಕೈಗೊಳ್ಳಬೇಕು.

ಪ್ರತಿವರ್ಷ ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ನಮ್ಮ ದೇಶದಲ್ಲಿ ಹಾಗೂ ಇಡೀ ಜಗತ್ತಿನಲ್ಲಿ ಇದಕ್ಕಾಗಿ ಅನೇಕಾನೇಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಈ ದಿನದಂದು ದೇಶದಲ್ಲಿ ನಾರಿಶಕ್ತಿ ಪುರಸ್ಕಾರವನ್ನು ನೀಡಿ ಮಹಿಳೆಯರನ್ನು ಗೌರವಿಸಲಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸಾಧನೆ ಮಾಡಿದವರನ್ನು ಪುರಸ್ಕರಿಸಲಾಗುವುದು. ದೇಶದಲ್ಲೀಗ ಮಹಿಳೆಯರ ಅಭಿವೃದ್ಧಿಯೊಂದಿಗೇ ಮಹಿಳಾ ನೇತೃತ್ವವನ್ನೂ ಅಭಿವೃದ್ಧಿಪಡಿಸಬೇಕಾಗಿದೆ. ಈಗ ನಾವು ಮಹಿಳಾ ವಿಕಾಸದಿಂದ ಮುಂದೆ ಸಾಗಿ ಮಹಿಳೆಯರ ನೇತೃತ್ವದಲ್ಲಿ ವಿಕಾಸ ಸಾಧಿಸಬೇಕಾಗಿದೆ. ಈ ಸಂದರ್ಭದಲ್ಲಿ ನನಗೆ ಸ್ವಾಮಿ ವಿವೇಕಾನಂದರು ಹೇಳಿದ ಮತ್ತೊಂದು ನೆನಪಿಗೆ ಬರುತ್ತಿದೆ. ಪರಿಪೂರ್ಣವಾದ ಸ್ತ್ರೀತ್ವ ಎಂದರೆ ಸಂಪೂರ್ಣವಾದ ಸ್ವಾತಂತ್ರ್ಯವೆಂದೇ ಅವರು ಹೇಳಿದ್ದರು. ಶತಮಾನದ ಹಿಂದೆಯೇ ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯಲ್ಲಿ ಮಹಿಳಾ ಶಕ್ತಿಯ ಬಗ್ಗೆ ಚಿಂತಿಸಿದ್ದರು. ಇಂದು ಸಾಮಾಜಿಕ, ಆರ್ಥಿಕ ಜೀವನದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ



ಮಹಿಳೆಯರಿಗೆ ಸರಿಯಾದ ಸ್ಥಾನಮಾನ ದೊರೆಯುವಂತೆ ನೋಡಿಕೊಳ್ಳಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ಈ ಪರಂಪರೆಯ ಭಾಗವಾಗಿದ್ದೇವೆ. ಪುರುಷರ ಪರಿಚಯವೇ ನಾರಿಯರಿಂದಲೇ ಆಗುತ್ತಿದೆ. ಯಶೋಧಾ–ನಂದನ್, ಕೌಶಲ್ಯ–ನಂದನ್, ಗಾಂಧಾರಿ–ಪುತ್ರ ಹೀಗೆ ತಾಯಿಯಿಂದ ಮಕ್ಕಳನ್ನು ಗುರುತಿಸುತ್ತೇವೆ. ಈವತ್ತು ನಮ್ಮ ನಾರೀಶಕ್ತಿ ತಮ್ಮ ಆತ್ಮ ಬಲ ಮತ್ತು ಆತ್ಮ ವಿಶ್ವಾಸದಿಂದ ಮುನ್ನಡೆದಿದೆ. ಅವರು ಸ್ವಯಂ ಆತ್ಮ ನಿರ್ಭರತೆಯಿಂದ ಸ್ವಶಕ್ತಿಯಿಂದ ಬೀಗುತ್ತಿದ್ದಾರೆ. ಹೀಗೆ ಅವರು ತಮ್ಮ ಧೀಶಕ್ತಿಯಿಂದ ಮುನ್ನಡೆಯುತ್ತಿದ್ದಾರೆ. ಅಷ್ಟೇಅಲ್ಲ ಅವರು ದೇಶ ಮತ್ತು

ಸಮಾಜವನ್ನೂ ಹೊಸ ಎತ್ತರಕ್ಕೆ ಒಯ್ಯುವ ಕಾರ್ಯದಲ್ಲಿ ನಿರತರಾಗಿದ್ದಾರೆ, ಯಾವಾಗ ನಾರಿ ದೇಶದ ಸಮಗ್ರ ವಿಕಾಸದಲ್ಲಿ ಸಶಕ್ತವಾಗಿ ಸಬಲವಾಗಿ ಭಾಗಿಯಾಗುವಳೊ ಆಗ ನಾವು ಕನಸು ಕಂಡಿರುವ ನವ ಭಾರತದ ನಿರ್ಮಾಣವಾಗುತ್ತದೆ. ಈ ಹಿಂದೆ ಯಾರೋ ಒಬ್ಬ ಮಹಾನ್ ವ್ಯಕ್ತಿ ನನಗೊಂದು ಉತ್ತಮ ಸೂಚನೆ ಕೊಟ್ಟಿದ್ದರು. ಮಾರ್ಚ್ 8ರಂದು ಮಹಿಳಾದಿನ ಆಚರಿಸುವಾಗ 100 ವರ್ಷ ತುಂಬಿದ ತಾಯಂದಿರನ್ನು ಎಲ್ಲ ಹಳ್ಳಿ, ಪಟ್ಟಣಗಳಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಏಕೆ ಆಯೋಜಿಸಬಾರದು ಎಂದು ಕೇಳಿದ್ದರು.



ಅವರ ದೀರ್ಘಾಯುಷ್ಯದ ಆರೋಗ್ಯದ ಗುಟ್ಟನ್ನು ಪ್ರಸ್ತಾಪ ಮಾಡಬಹುದಲ್ಲವೇ ಎಂದು ಕೇಳಿದ್ದರು. ನನಗೂ ಈ ವಿಚಾರ ಉತ್ತಮ ಸಲಹೆಯಾಗಿ ಕಂಡಿತ್ತು. ಅದನ್ನು ಈಗ ತಮ್ಮವರೆಗೂ ತಲುಪಿಸುತ್ತಿದ್ದೇನೆ. ನಾರಿ ಶಕ್ತಿ ಏನು ಮಾಡಬಹುದು? ಎಂಬುದಕ್ಕೆ ನಿಮ್ಮ ಮುಂದೆ ಹಲವಾರು ನಿದರ್ಶನಗಳಿವೆ.

ನಿಮ್ಮ ಸುತ್ತುಮುತ್ತಲಿನಲ್ಲೇ ನಿಮ್ಮ ಜೀವನಕ್ಕೆ ಸ್ಫೂರ್ತಿ ಕೊಡುವ ಇಂತಹ ಅನೇಕ ಕತೆಗಳನ್ನು ಕಾಣುತ್ತೀರಿ. ಇದೇ ಈಗ ನನಗೆ ಜಾರ್ಖಂಡ್ ರಾಜ್ಯದಿಂದ ಒಂದು ಸುದ್ದಿ ಬಂದಿದೆ. ಅಲ್ಲಿನ 15 ಲಕ್ಷ ಮಹಿಳೆಯರು ಸಂಘಟಿತಗಾಗಿ ಸ್ವಚ್ಛಭಾರತ ಅಭಿಯಾನದಲ್ಲಿ ತಮ್ಮನ್ನು ತಾವು 1 ತಿಂಗಳ ಕಾಲ ತೊಡಗಿಸಿಕೊಂಡಿದ್ದರು. ಈ ಅಂಕಿ ಅಂಶ ಚಿಕ್ಕದಲ್ಲ. 2018ರ ಜನವರಿ 26 ರಂದು ಆರಂಭವಾದ ಈ ಕಾರ್ಯಕ್ರಮದಲ್ಲಿ ಅವರು 20ದಿನದಲ್ಲಿ 1 ಲಕ್ಷ 70ಸಾವಿರ ಶೌಚಾಲಯಗಳನ್ನು ನಿರ್ಮಾಣ ಮಾಡಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇದರಲ್ಲಿ 1 ಲಕ್ಷ ಸಖೀಮಂಡಲಗಳು ಸಮ್ಮಿಲನಗೊಂಡಿವೆ. 14 ಲಕ್ಷ ಮಹಿಳೆಯರು, 29000 ಮಹಿಳಾ ಪಂಚಾಯತ್ ಪ್ರನಿಧಿಗಳು, ಜಲ ಸಹಾಯಕರು, 10 ಸಾವಿರ ಮಹಿಳಾ ಸ್ವಚ್ಛಾಗ್ರಹಿಗಳು, 50 ಸಾವಿರ ಮಹಿಳಾ ರಾಜಮೇಸ್ತ್ರಿಗಳು ಈ ಬೃಹತ್ ಆಂದೋಲನದಲ್ಲಿ ಭಾಗಿಯಾಗಿದ್ದಾರೆಂದರೆ ಇದರ ಗಾತ್ರವನ್ನು ನೀವೇ ಕಲ್ಪಿಸಿಕೊಳ್ಳಬಹುದು. ಜಾರ್ಖಂಡ್ ಮಹಿಳೆಯರು, ಮಹಿಳಾ ಶಕ್ತಿ ಎಂತಹ ಅಗಾಧವನ್ನು ಸಾಧಿಸಬಲ್ಲದೆಂಬುದನ್ನು ಈ ಸ್ವಚ್ಛಭಾರತ ಅಭಿಯಾನದಿಂದ ನಿರೂಪಿಸಿದ್ದಾರೆ. ಇಂತಹ ಸ್ತ್ರೀ ಶಕ್ತಿ ಸಾಮಾನ್ಯ ಜೀವನದಲ್ಲಿ, ಸ್ವಚ್ಛತಾ ಅಭಿಯಾನದಲ್ಲಿ ತೊಡಗಿಕೊಂಡರೆ ಜನಸಾಮಾನ್ಯರೆಲ್ಲರೂ ಸ್ವಚ್ಛತೆಯ ಸಂಸ್ಕಾರದ ಪ್ರಭಾವಕ್ಕೆ ಒಳಗಾಗುತ್ತಾರೆ. ಸಮಾಜದಲ್ಲಿ ಪರಿವರ್ತನೆಯಾಗುತ್ತದೆ ಎಂಬುದು ನಿಚ್ಚಳ.

ಸೋದರ ಸೋದರಿಯರೇ, 2 ದಿನಗಳ ಹಿಂದೆ ನ್ಯೂಸ್ ನೋಡುತ್ತಿದ್ದಾಗ ಎಲಿಫೆಂಟಾ ಗುಹೆಗಳ ಬಳಿಯ 3 ಹಳ್ಳಿಗಳಿಗೆ ಸ್ವಾತಂತ್ರ್ಯ ಬಂದ 70 ವರ್ಷಗಳ ನಂತರ ವಿದ್ಯುತ್ ಸಂಪರ್ಕ ಸಿಕ್ಕಿದೆ ಎಂಬ ಸುದ್ದಿ ಬಂತು. ಇದರಿಂದ ಅಲ್ಲಿನ ಜನರಿಗೆಲ್ಲಾ ಉತ್ಸಾಹ ಮತ್ತು ಸಂತಸವಾಗಿದೆ.

ಎಲಿಫೆಂಟಾ ದ್ವೀಪ ಮುಂಬೈನಿಂದ ಸಮುದ್ರದಾಚೆ 10 ಕಿ.ಮೀ. ದೂರದಲ್ಲಿದೆ. ಇದು ಪ್ರವಾಸೋದ್ಯಮ ಸ್ಥಳ. ಇದು ಯುನೆಸ್ಕೊದ ಜಾಗತಿಕ ಪರಂಪರೆಯ ತಾಣ. ಇಲ್ಲಿಗೆ ದೇಶ ವಿದೇಶಗಳ ಸಹಸ್ರಾರು ಪ್ರವಾಸಿಗರು ದಿನವೂ ಬರುತಾರೆ. ಇದು ಭಾರತದ ಮಹತ್ವ ಪೂರ್ಣವಾದ ಪ್ರವಾಸಿ ಕೇಂದ್ರ, ಇಂತಹ ಪ್ರಮುಖ ಪ್ರವಾಸಿ ಕೇಂದ್ರಕ್ಕೇ ಸ್ವಾತಂತ್ರ್ಯಬಂದು 70 ವರ್ಷಗಳಾದರೂ ವಿದ್ಯುತ್ ಇಲ್ಲವೆಂದರೆ ಹೇಗೆ? ಎಲಿಫೆಂಟಾ ದ್ವೀಪದ ರಾಜಬಂದರ್, ಮೋರ್‌ಬಂದರ್ ಮತ್ತು ಸೆಂತಾಬಂದರ್‌ನ 3 ದ್ವೀಪಗಳಿಗೆ 70 ವರ್ಷಗಳಿಂದಲೂ ವಿದ್ಯುತ್ ಸಂಪರ್ಕ ಇಲ್ಲದೆ ಅಲ್ಲಿನ ಜನರ ಜೀವನದಲ್ಲಿ ಅಂಧಕಾರವೇ ತುಂಬಿತ್ತು. ಈಗ ಅಲ್ಲಿನ ಅಂಧಕಾರ ಕಳೆದು ಬೆಳಕು ಬಂದಿದೆ. ಅವರ ಜೀವನದಲ್ಲಿ ಹೊಸ ಚೈತನ್ಯ ಉಂಟಾಗಿದೆ. ನಾನು ಅಲ್ಲಿನ ಎಲ್ಲ ಆಡಳಿತ ವರ್ಗಕ್ಕೆ ಮತ್ತು ಜನತೆಗೆ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ. ಈಗ ಎಲಿಫೆಂಟಾ ಗ್ರಾಮಗಳಲ್ಲಿ ಮತ್ತು ಎಲಿಫೆಂಟಾ ಗುಹೆಯಲ್ಲಿ ವಿದ್ಯುತ್ತಿನ ಬೆಳಕು ರಾರಾಜಿಸುತ್ತಿರುವುದು ನನಗೆ ಖುಷಿ ತಂದಿದೆ. ಇದು ಕೇವಲ ವಿದ್ಯುತ್ತಿನ ವಿಚಾರ ಮಾತ್ರವಲ್ಲ, ವಿಕಾಸದ ಹಾದಿಯೆಲ್ಲೊಂದು ಹೊಸ ಪ್ರಾರಂಭ. ನನ್ನ ದೇಶವಾಸಿಗಳ ಜೀವನದಲ್ಲಿ ಬೆಳಕು ಮೂಡಬೇಕು. ಅವರೆಲ್ಲರ ಜೀವನದಲ್ಲಿ ಖುಷಿ ಮೂಡಲಿ, ಇದಕ್ಕಿಂತ ಖುಷಿ ಮತ್ತು ಸಂತೋಷದ ವಿಚಾರ ಬೇರೆ ಇನ್ನೆಲ್ಲಿದೆ.

ನನ್ನ ಪ್ರೀತಿಯ ಅಣ್ಣತಮ್ಮಂದಿರೆ, ಅಕ್ಕತಂಗಿಯರೇ, ನಾವು ಇದೇ ಈಗ ಶಿವರಾತ್ರಿ ಹಬ್ಬವನ್ನು ಸಡಗರದಿಂದ ಆಚರಿಸಿದ್ದೇವೆ. ಈಗ ಮಾರ್ಚ ತಿಂಗಳಲ್ಲಿ ನಾವು ಕೃಷಿ ಕ್ಷೇತ್ರದಲ್ಲಿ ಫಸಲುಗಳ ಉತ್ಸವವನ್ನು ಆಚರಿಸುತ್ತೇವೆ. ಗೋಧಿಯ ಹೊಲಗಳು ತೆನೆಹೊತ್ತು ತೂಗುತ್ತಿವೆ, ಮಾವಿನ ಹೂ



ಗೊಂಚಲು ಮನಕ್ಕೆ ಅಹ್ಲಾದ ಕೊಡುತ್ತದೆ. ಇದೇ ಮಾರ್ಚ್‌ತಿಂಗಳ ಶೋಭೆ. ಇದು ಈ ಮಾಸದ ವಿಶೇಷವೂ ಹೌದು. ಈ ತಿಂಗಳೇ ಬರುವ ಹೋಳಿ ಹಬ್ಬವೂ ನಮ್ಮೆಲ್ಲರಿಗೆ ಅತ್ಯಂತ ಪ್ರಿಯವಾದದ್ದು. ಮಾರ್ಚ್2ರಂದು ಇಡೀದೇಶದಲ್ಲಿ ಹೋಳಿ ಹಬ್ಬವನ್ನು ಹರ್ಷೋಲ್ಲಾಸದಿಂದ ಆಚರಿಸಲಾಗುತ್ತದೆ. ಹೋಳಿ ಹಬ್ಬದ ರಂಗಿನಾಟದಷ್ಟೇ ಮಹತ್ವ ಹೋಳಿ ದಹನಕ್ಕೂ ಇದೆ. ಕೆಡುಕುಗಳನ್ನೆಲ್ಲಾ ಅಂದು ಸುಟ್ಟು ಭಸ್ಮ ಮಾಡುತ್ತೇವೆ. ಎಲ್ಲರೂ ಒಟ್ಟಾಗಿ ಮನಸ್ತಾಪ ಮರೆತು ಜೊತೆಯಾಗಿ ಸುಖ ಆನಂದದಲ್ಲಿ ಸಹಭಾಗಿಗಳಾಗುವ ಶುಭ ಸಂದರ್ಭ ಇದಾಗಿದೆ. ಪ್ರೇಮ, ಏಕತೆ ಸೋದರತ್ವದ ಸಂದೇಶವನ್ನು ಹೋಳಿ ಸಾರುತ್ತದೆ. ಎಲ್ಲಾ ದೇಶವಾಸಿಗಳಿಗೆ ಹೋಳಿಯ ಬಣ್ಣದ ಹಬ್ಬಕ್ಕೆ ಹಾರ್ದಿಕ ಶುಭಾಶಯಗಳು. ರಂಗು ರಂಗಿನ ಶುಭಾಶಯಗಳು. ಈ ಪರ್ವದಲ್ಲಿ ನಮ್ಮ ದೇಶದ ಎಲ್ಲಾ ಜನರ ಜೀವನ ಸಂತೋಷದಿಂದ ತುಂಬಿರಲಿ ಎನ್ನುವುದೇ ನನ್ನ ಶುಭಕಾಮನೆ. ❑

# ಕರ್ನಾಟಕ ಬಜೆಟ್ 2018–19



**ಹಣಕಾಸು ಖಾತೆಯನ್ನೂ ಹೊಂದಿರುವ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ವಿಧಾನ ಸಭೆಯಲ್ಲಿ ಫೆಬ್ರವರಿ 16 ರಂದು 2018–19ರ ಮುಂಗಡ ಪತ್ರವನ್ನು ಮಂಡಿಸಿದರು. ಬಜೆಟ್‌ನ ಮುಖ್ಯಾಂಶ ಇಲ್ಲಿದೆ.**

ಮಾನ್ಯ ಸಭಾಧ್ಯಕ್ಷರೇ,

2018–19ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ. 14ನೇ ವಿಧಾನಸಭೆಯ ಕೊನೆಯ ಅಧಿವೇಶನಕ್ಕೆ ನಾವು–ನೀವೆಲ್ಲ ಸಾಕ್ಷಿಭೂತರಾಗಿದ್ದೇವೆ. ವಿಧಾನಸಭೆ ಐದು ವರ್ಷಗಳ ಅವಧಿಯನ್ನು ನಿರ್ವಹಿಸಲು ಸಹಕಾರ ನೀಡಿದ ರಾಜ್ಯದ ಜನತೆ ಹಾಗೂ ಆಳುವ ಮತ್ತು ವಿರೋಧ ಪಕ್ಷಗಳ ಸದಸ್ಯರಿಗೆ ತುಂಬು ಮನಸ್ಸಿನಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮುಖ್ಯಮಂತ್ರಿಯಾಗಿ ಈವರೆಗೆ ಮಂಡಿಸಿದ ಐದು ಆಯವ್ಯಯ ಪತ್ರಗಳೂ ಸೇರಿದಂತೆ ಒಟ್ಟು ಹನ್ನೆರಡು ಆಯವ್ಯಯ ಪತ್ರಗಳನ್ನು ಮಂಡಿಸಿದ್ದೆ. ಇದು ಹದಿಮೂರನೇ ಆಯವ್ಯಯ ಪತ್ರ. ರಾಜ್ಯದ ಬೊಕ್ಕಸದಲ್ಲಿರುವುದು ಜನ ತೆರಿಗೆ ಮೂಲಕ ನೀಡಿರುವ ಬೆವರಗಳಿಕೆಯ ದುಡ್ಡು, ನಾನು ಅದನ್ನು ನಿರ್ವಹಿಸುವ ಟ್ರಸ್ಟಿ ಮಾತ್ರ. ಈ ಎಚ್ಚರಿಕೆ ನನ್ನಲ್ಲಿ ಸದಾ ಇದೆ. ರಾಜ್ಯದ ಪ್ರತಿಯೊಬ್ಬ ತೆರಿಗೆದಾರನಿಗೆ, ಅವನು ನೀಡುವ ಪ್ರತಿಯೊಂದು ಪೈಸೆ ತೆರಿಗೆಗೂ ಲೆಕ್ಕಪತ್ರ ಒಪ್ಪಿಸುವ ಉತ್ತರದಾಯಿತ್ವ ನನಗಿದೆ. ಲೆಕ್ಕ ಕೇಳುವ ಹಕ್ಕು ರಾಜ್ಯದ ಜನತೆಗಿದೆ, ಆ ಹಕ್ಕನ್ನು ಗೌರವಿಸುವುದು ನನ್ನ ಧರ್ಮ. ಅತ್ಯಂತ ಪಾರದರ್ಶಕವಾಗಿ, ಪ್ರಾಮಾಣಿಕತೆಯಿಂದ ಆ ಲೆಕ್ಕವನ್ನು ಈ ಆಯವ್ಯಯ ಮುಂಗಡಪತ್ರದಲ್ಲಿಒಪ್ಪಿಸಿದ್ದೇನೆ.

ಕೈಗಾರಿಕಾ ಬಂಡವಾಳ ಸೆಳೆಯುವಲ್ಲಿ ಸತತ ಎರಡನೇ ವರ್ಷವೂ ಕರ್ನಾಟಕ ಮೊದಲ ಸ್ಥಾನವನ್ನು ಕಾಯ್ದುಕೊಂಡಿದೆ. ಕರ್ನಾಟಕ ಭಾರತದ ಐಟಿ ರಾಜಧಾನಿ ಮಾತ್ರವಲ್ಲ, ವಿಶ್ವದ ನಾಲ್ಕನೇ ಅತಿದೊಡ್ಡ ಟೆಕ್ನಾಲಜಿ ವಲಯ. ಐಟಿ ರಫ್ತಿನಲ್ಲಿ ನಾವೇ ನಂಬರ್ ಒನ್. ದೇಶದ ಒಟ್ಟು ಬಯೋಟೆಕ್ನಾಲಜಿ ಉದ್ದಿಮೆ ಆದಾಯದ ಶೇಕಡಾ 35ರಷ್ಟು ಪಾಲು ನಮ್ಮದು. ದೇಶದ ಉತ್ಪಾದನಾ ವಲಯದ ಹೂಡಿಕೆ ಪಾಲುದಾರಿಕೆಯಲ್ಲಿ ನಮ್ಮ ಪಾಲು ಶೇಕಡಾ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು (ಜಿ.ಎಸ್.ಡಿ.ಪಿ.) 2016–17ರಲ್ಲಿದ್ದ ಶೇ.7.5ಕ್ಕೆ ಪ್ರತಿಯಾಗಿ 2017–18ರಲ್ಲಿ ಶೇ.8.5ರಷ್ಟು ಬೆಳವಣಿಗೆಯಾಗಿದೆ. ಈ ಸಾಲಿನಲ್ಲಿ ಕೃಷಿ ವಲಯವು ಶೇ.4.9ರಷ್ಟು ಬೆಳವಣಿಗೆ ಹೊಂದುವ ನಿರೀಕ್ಷೆಯಿದೆ, ಕೈಗಾರಿಕಾ ವಲಯವು ಶೇ.4.9ರ ಬೆಳವಣಿಗೆಯನ್ನು ಹಾಗೂ ಸೇವಾ ವಲಯವು ಶೇ.10.4ರಷ್ಟು ಬೆಳವಣಿಗೆ ದರ ದಾಖಲಿಸುವ ನಿರೀಕ್ಷೆ ಇದೆ.

2017ರ ಜೂನ್‌ನಲ್ಲಿ 6ನೇ ವೇತನ ಆಯೋಗವನ್ನು ರಚಿಸಲಾಗಿದೆ ಹಾಗೂ ಆಯೋಗವು ವೇತನ ಪರಿಷ್ಕರಣೆಗೆ ಸಂಬಂಧಿಸಿದ ತನ್ನ ಮೊದಲನೇ ವರದಿಯನ್ನು ಸಲ್ಲಿಸಿದೆ. ಒಟ್ಟಾರೆಯಾಗಿ, ಆಯೋಗವು ಶೇ.30 ವೇತನ ಹೆಚ್ಚಿಸಲು ಶಿಫಾರಸು ಮಾಡಿದ್ದು, ಇದರಿಂದ ರಾಜ್ಯದಲ್ಲಿರುವ 5.93 ಲಕ್ಷ ನೌಕರರು ಹಾಗೂ 5.73 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯಲಿದ್ದಾರೆ.

ರಾಜ್ಯದ ಸಂಚಿತ ನಿಧಿ ಗಾತ್ರವು 2017–18ರಲ್ಲಿ 1,86,561 ಕೋಟಿ ರೂ. ಗಳಿಗೆ ನಿಗದಿಯಾಗಿತ್ತು. ಇದಕ್ಕೆ ಎದುರಾಗಿ 2017–18ರ ಪರಿಷ್ಕೃತ ಅಂದಾಜುಗಳ ಪ್ರಕಾರ ಸಂಚಿತ ನಿಧಿ ಗಾತ್ರವು 1,89,679 ಕೋಟಿ ರೂ. ಗಳೆಂದು ಅಂದಾಜಿಸಲಾಗಿದೆ.

2018–19ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಒಟ್ಟಾರೆಯಾಗಿ 5,849 ಕೋಟಿ ರೂ.ಗಳನ್ನು ಒದಗಿಸಲಾಗುವುದು.

* ಕೃಪೆ : ಹಣಕಾಸು ಇಲಾಖೆ ವೈಬ್‌ಸೈಟ್, ಕರ್ನಾಟಕ ಸರ್ಕಾರ.

ಪ್ರಸಕ್ತ ವರ್ಷದಲ್ಲಿ ಅಪರೂಪದ (ಎಕ್ಸಾಟಿಕ್) ಹಣ್ಣುಗಳಾದ ಪ್ಯಾಷನ್ ಹಣ್ಣು, ರಾಂಬೂತಾನ್, ದುರಿಯನ್, ಡ್ರಾಗನ್ ಹಣ್ಣು, ಲಿಚ್ಚಿ, ಮ್ಯಾಂಗೋಸ್ಟೀನ್, ಆಪಲ್ ಬರ್, ಬೆಣ್ಣೆಹಣ್ಣು, ನೇರಳೆ, ಸ್ಟ್ರಾಬೆರಿ ಇತ್ಯಾದಿ ಹಾಗೂ ಹೊಸ ಮತ್ತು ಬೀಜ ರಹಿತ ಸೀತಾಫಲ ಮತ್ತು ಸೀಬೆಯ ತಳಿಗಳನ್ನು ಬೆಳೆಯಲು ಕೇಂದ್ರ ಪುರಸ್ಕೃತ ಹಾಗೂ ರಾಜ್ಯವಲಯ ಯೋಜನೆಗಳಡಿ ಪ್ರಾಧಾನ್ಯತೆ ನೀಡಿ ಉತ್ತೇಜನ ನೀಡಲಾಗುವುದು. 2018–19ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 995 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಕುರಿ ಮತ್ತು ಆಡು ಸಾಕಾಣಿಕೆ ರಾಜ್ಯದಲ್ಲಿ ರೈತರ ಒಂದು ಲಾಭದಾಯಕ ಉಪಕಸುಬಾಗಿದೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (ಎನ್.ಸಿ.ಡಿ.ಸಿ.) ಹಣಕಾಸು ನೆರವು ಮೂಲಕ ರಾಜ್ಯದಲ್ಲಿ ಕುರಿ ಮತ್ತು ಆಡು ಸಾಕಾಣಿಕೆಗೆ ಪ್ರೋತ್ಸಾಹ ನೀಡಲಾಗುವುದು. 25,000 ಘಟಕಗಳನ್ನು ಸ್ಥಾಪಿಸಿ ರಾಜ್ಯದಲ್ಲಿ ಕುರಿ ಮತ್ತು ಆಡು ಸಾಕಾಣಿಕೆಗೆ ಹೆಚ್ಚಿನ ಒತ್ತು ನೀಡಲಾಗುವುದು.



2018–19ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಗೆ 2,377 ಕೋಟಿ ರೂ.ಗಳನ್ನು, ರೇಷ್ಮೆ ಇಲಾಖೆಗೆ 457 ಕೋಟಿ ರೂ.ಗಳನ್ನು, ಮೀನುಗಾರಿಕೆ ಇಲಾಖೆಗೆ 252 ಕೋಟಿ ರೂ.ಗಳನ್ನು, ಸಹಕಾರ ಇಲಾಖೆಗೆ 5,837 ಕೋಟಿ ರೂ.ಗಳನ್ನು, ಜಲಸಂಪನ್ಮೂಲ ಇಲಾಖೆಗೆ 15,998 ಕೋಟಿ ರೂ.ಗಳನ್ನು, ಸಣ್ಣ ನೀರಾವರಿ ಇಲಾಖೆಗೆ 2,114 ಕೋಟಿ ರೂ.ಗಳನ್ನು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ 1,949 ಕೋಟಿ ರೂ.ಗಳನ್ನು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ 22,350 ಕೋಟಿ ರೂ.ಗಳನ್ನು, ಉನ್ನತ ಶಿಕ್ಷಣ ಇಲಾಖೆಗೆ 4,514 ಕೋಟಿ ರೂ.ಗಳನ್ನು ಒದಗಿಸಲಾಗುವುದು. ರಾಜ್ಯದ ಎಲ್ಲಾ ಜನತೆಗೆ ಪ್ರಥಮ ಹಾಗೂ ನಿರ್ದಿಷ್ಟ ದ್ವಿತೀಯ ಮತ್ತು ತೃತೀಯ ಹಂತದ ಚಿಕಿತ್ಸೆ ದೊರಕುವಂತೆ "ಆರೋಗ್ಯ ಕರ್ನಾಟಕ ಯೋಜನೆ"ಯನ್ನು ಪ್ರಾರಂಭಿಸಲಾಗುವುದು. 2018–19ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 6,645 ಕೋಟಿ ರೂ.ಗಳನ್ನು ನೀಡಲಾಗುವುದು.

2018–19ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ 2,177 ಕೋಟಿ ರೂ.ಗಳನ್ನು ನೀಡಲಾಗುವುದು.

2018–19ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒಟ್ಟಾರೆಯಾಗಿ 5,371 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಜಾತ್ಯತೀತ ಮತ್ತು ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಶೇ.25ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು

2018–19ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ 6,528 ಕೋಟಿ ರೂ.ಗಳ ವೆಚ್ಚದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ವೃತ್ತಿ ಪ್ರೋತ್ಸಾಹ ಯೋಜನೆಯಡಿ ಮೆಕ್ಯಾನಿಕ್, ಕಾರ್‌ಪೆಂಟರ್, ಹಣ್ಣು ಮತ್ತು ತರಕಾರಿ ಮಾರಾಟ, ಬೇಕರಿ, ಪಂಚರ್ ಮತ್ತು ವೆಲ್ಡಿಂಗ್ ಶಾಪ್, ಎಲೆಕ್ಟ್ರಿಕಲ್/ ಎಲೆಕ್ಟ್ರಾನಿಕ್ ರಿಪೇರಿ ಇತ್ಯಾದಿ ವೃತ್ತಿಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ಸಾಲ ಮತ್ತು ಸಹಾಯಧನ ನೀಡಲು 30 ಕೋಟಿ ರೂ.ಗಳ ಮೊತ್ತದಲ್ಲಿ ಹೊಸ ಯೋಜನೆ ಜಾರಿಗೊಳಿಸಲಾಗುವುದು. ಮುಂದಿನ 5 ವರ್ಷಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 20 ಲಕ್ಷ ಮನೆಗಳ ನಿರ್ಮಾಣ ಮಾಡಲಾಗುವುದು. ಪ್ರಸ್ತುತ, ಬೆಂಗಳೂರು ನಗರ ಪ್ರದೇಶಕ್ಕೆ ಜಾರಿಗೆ ತರಲಾದ ಬಹುಮಹಡಿ ಕಟ್ಟಡ ನಿರ್ಮಾಣದ ಯೋಜನೆಯನ್ನು ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೂ ವಿಸ್ತರಿಸಿ "ಮುಖ್ಯಮಂತ್ರಿಗಳ ನಗರ ವಸತಿ ಯೋಜನೆ" ಎಂಬ ಹೆಸರಿನ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಅಸಂಘಟಿತ ಕಾರ್ಮಿಕರಲ್ಲಿ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ಸಹ "ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ" ಯೋಜನೆಯಡಿ ಸ್ಮಾರ್ಟ್ ಕಾರ್ಡನ್ನು ವಿತರಿಸುವ ಜೊತೆಗೆ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು 25 ಕೋಟಿ ರೂ.ಗಳ ವೆಚ್ಚದಲ್ಲಿ ಜಾರಿಗೊಳಿಸಲಾಗುವುದು. 2018–19ನೇ ಸಾಲಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ 2.50 ಲಕ್ಷ ಜನರಿಗೆ ವೃತ್ತಿ ತರಬೇತಿ ಸಂಸ್ಥೆಗಳ ಮೂಲಕ ತರಬೇತಿಯನ್ನು ನೀಡಲಾಗುವುದು.

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು (ಸಿಡಾಕ್) 2017–18ನೇ ಸಾಲಿನಲ್ಲಿ ಯು.ಎನ್.ಡಿ.ಪಿ. ಸಹಯೋಗದೊಂದಿಗೆ 16 ಜಿಲ್ಲೆಗಳಲ್ಲಿ ಸಂಭಾವ್ಯ ಉದ್ದಿಮೆದಾರರಿಗೆ ತರಬೇತಿಯನ್ನು ನೀಡಲು ದಿಶಾ ಯೋಜನೆಯನ್ನು ಜಾರಿಗೊಳಿಸಿದ್ದು, ಈ ಯೋಜನೆಯಡಿ 32,000 ಜನರಿಗೆ ಪ್ರಯೋಜನವನ್ನು ನೀಡಲಾಗುವುದು. 2018–19ನೇ ಸಾಲಿನಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿ 2 ಕೋಟಿ ರೂ. ಅನುದಾನದಲ್ಲಿ 1 ಲಕ್ಷ ಜನರಿಗೆ ಈ ಯೋಜನೆಯ ಪ್ರಯೋಜನವನ್ನು ಒದಗಿಸಲಾಗುವುದು. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಒಟ್ಟಾರೆಯಾಗಿ 794 ಕೋಟಿ ರೂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 425 ಕೋಟಿ ರೂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 237 ಕೋಟಿ ರೂ.ಗಳನ್ನು ಒದಗಿಸಲಾಗುವುದು.

### ಆಹಾರ ಮತ್ತು ನಾಗರಿಕ ಸರಬರಾಜು

ಪಡಿತರ ವಿತರಕರಾದ ಚಿಲ್ಲರೆ ಮಾರಾಟಗಾರರ ಲಾಭಾಂಶವನ್ನು ಪ್ರತಿ ಕ್ವಿಂಟಲ್‌ಗೆ ಹಾಲಿ ಇರುವ 87 ರೂ.ಗಳಿಂದ 100 ರೂ.ಗಳಿಗೆ ಹೆಚ್ಚಿಸಲಾಗುವುದು. ಇದರಿಂದ ಚಿಲ್ಲರೆ ಮಾರಾಟಗಾರರಿಗೆ 80 ಕೋಟಿ ರೂ.ಗಳಷ್ಟು ಪ್ರಯೋಜನವಾಗಲಿದೆ.

"ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆ" ಯಡಿಯಲ್ಲಿ ರಾಜ್ಯ ಸರ್ಕಾರದಿಂದ ಅಂದಾಜು 30 ಲಕ್ಷ

ಫಲಾನುಭವಿಗಳಿಗೆ 1350 ಕೋಟಿ ರೂ.ಗಳ ವೆಚ್ಚದಲ್ಲಿ ಉಚಿತ ಅನಿಲ ಸಂಪರ್ಕ, 2 ಬರ್ನರ್ ಉಳ್ಳ ಗ್ಯಾಸ್ ಸ್ಟೌವ್ ಮತ್ತು ಎರಡು ರೀಫಿಲ್‌ಗಳನ್ನು ನೀಡಲಾಗುವುದು. 2018–19ನೇ ಸಾಲಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಒಟ್ಟಾರೆಯಾಗಿ 3,882 ಕೋಟಿ ರೂ.ಗಳನ್ನು ಒದಗಿಸಲಾಗುವುದು.

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಗ್ರಾಮೀಣ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವ ಸಂಕಲ್ಪದಿಂದ ಅವರು ವಾಸಿಸುವ ಸ್ಥಳದಲ್ಲಿಯೇ ಉದ್ಯೋಗ ಒದಗಿಸುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈಗಾಗಲೇ ವ್ಯಕ್ತಿಗತ ಫಲಾನುಭವಿಗಳು ನಿರ್ಮಿಸಲಾದ ಕೊಳಗಳಲ್ಲಿ ಹಾಗೂ ಸಮುದಾಯದ ಕೊಳಗಳಲ್ಲಿ ಮೀನುಗಾರಿಕೆ ಇಲಾಖೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ "ನೀಲಿ ಕ್ರಾಂತಿ" ಯೋಜನೆಯ ಹಾಗೂ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಮಾರ್ಗಸೂಚಿಗಳನ್ನು ಅನುಸರಿಸಿ ಜಲ ಕೃಷಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. ಗ್ರಾಮ ಪಂಚಾಯತಿಗಳ ದಾಖಲೆ ಮತ್ತು



ದಾಖಲಾತಿಗಳನ್ನು ಗಣಕೀಕರಣಗೊಳಿಸಲು ಉದ್ದೇಶಿಸಿದ್ದು, ಇದನ್ನು ಪ್ರಾಯೋಗಿಕವಾಗಿ ಆಯ್ದ ಗ್ರಾಮ ಪಂಚಾಯತಿಗಳಲ್ಲಿ ಜಾರಿಗೊಳಿಸಲಾಗುವುದು. ಇದಕ್ಕೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಪ್ರತಿ ಜಿಲ್ಲಾ ಪಂಚಾಯತಿಗೆ ಕುಂದುಕೊರತೆ ನಿವಾರಣಾ ಪ್ರಾಧಿಕಾರ ಸ್ಥಾಪಿಸಲಾಗುವುದು ಹಾಗೂ ನಿರ್ವಹಣಾ ವೆಚ್ಚ ಒದಗಿಸಲಾಗುವುದು. 2018–19ನೇ ಸಾಲಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಟ್ಟಾರೆಯಾಗಿ 14,268 ಕೋಟಿ ರೂ.ಗಳ ಹಂಚಿಕೆ ಪ್ರಸ್ತಾಪಿಸಲಾಗಿದೆ.

### ಯೋಜನೆ ಮತ್ತು ಪ್ರದೇಶಾಭಿವೃದ್ಧಿ

ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಪ್ರದೇಶಗಳ ಅಭಿವೃದ್ಧಿ ಮಂಡಳಿಗಳಿಗೆ ಕ್ರಮವಾಗಿ 70 ಕೋಟಿ ರೂ., 55 ಕೋಟಿ ರೂ., 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಶಾಸಕರ ಸ್ಥಳೀಯ ಅಭಿವೃದ್ಧಿ ಯೋಜನೆಗಳಿಗಾಗಿ 600 ಕೋಟಿ ರೂ.ಗಳನ್ನು ಒದಗಿಸಲಾಗುವುದು. 2018–19ನೇ ಸಾಲಿನಲ್ಲಿ ಯೋಜನೆ ಮತ್ತು ಪ್ರದೇಶಾಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 1,763 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

### ನಗರಾಭಿವೃದ್ಧಿ

2018–19ರಲ್ಲಿ 105.55 ಕಿ.ಮೀ. ಉದ್ದದ 'ಬೆಂಗಳೂರು ಮೆಟ್ರೋ ಹಂತ–3' ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ನಗರ ಪ್ರದೇಶದ ಪ್ರತಿ ಮನೆಗೂ ನೀರು ಪೂರೈಕೆ ಮಾಡುವ ಉದ್ದೇಶ ಹೊಂದಿದ್ದು ಮೊದಲ ಹಂತದಲ್ಲಿ 2018–19ನೇ ಸಾಲಿನಲ್ಲಿ ರಾಜ್ಯದ ಹತ್ತು ಪಟ್ಟಣಗಳಲ್ಲಿ ಎಲ್ಲಾ ವಾಸದ ಮನೆಗಳಿಗೆ ಪ್ರತ್ಯೇಕ ಸಂಪರ್ಕ ಕಲ್ಪಿಸಲು ಉದ್ದೇಶಿಸಿದೆ. ಮಾನವ ತ್ಯಾಜ್ಯ ಕಲ್ಮಷಗಳ ಸಂಸ್ಕರಣೆ ಮತ್ತು ನಿರ್ವಹಣೆಯ ಬಗ್ಗೆ ರಾಜ್ಯದ ನೀತಿ ಜಾರಿಯಾಗಿದ್ದು, ಮೊದಲ ಹಂತದಲ್ಲಿ 2018–19ನೇ ಸಾಲಿನಲ್ಲಿ ಒಳಚರಂಡಿ ವ್ಯವಸ್ಥೆ ಹೊಂದಿರದ 50 ನಗರಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಬೆಂಗಳೂರು ಸೇರಿದಂತೆ ಕರ್ನಾಟಕದ ಎಲ್ಲಾ ನಗರಗಳ ಕೃಷಿ, ಕೈಗಾರಿಕೆ ಇನ್ನಿತರೆ ಉದ್ದೇಶಗಳಿಗೆ ಹೆಚ್ಚುವರಿ ನೀರಿನ ಬೇಡಿಕೆಯನ್ನು ಪೂರೈಸಲು ಹಾಗೂ ರಾಜ್ಯದ ಥರ್ಮಲ್ ಘಟಕಗಳೂ ಸೇರಿದಂತೆ ನಗರ ಪ್ರದೇಶದ ತ್ಯಾಜ್ಯ ನೀರಿನ ಮರು ಬಳಕೆಗಾಗಿ ಸಂಸ್ಕರಣೆ ಮಾಡುವ ಬಗ್ಗೆ ನೀತಿಯೊಂದನ್ನು ರೂಪಿಸಲಾಗಿರುತ್ತದೆ. 2018–19ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ 10 ನಗರಗಳಲ್ಲಿ ತ್ಯಾಜ್ಯ ನೀರಿನ ಮರು ಬಳಕೆ ಯೋಜನೆಯನ್ನು ಕೈಗೊಳ್ಳಲಾಗುವುದು. ಬೆಂಗಳೂರಿನಲ್ಲಿ ವಿಶ್ವದರ್ಜೆಯ ಉಪ ನಗರ ರೈಲು ಸಂಪರ್ಕ ಕಲ್ಪಿಸಲು 10,929 ಕೋಟಿ ರೂ.ಗಳ ವಿಸ್ತೃತ ಯೋಜನಾ ವರದಿಯ ಕರಡನ್ನು ರೈಲ್ವೆ ಮಂತ್ರಾಲಯಕ್ಕೆ 2016ರಲ್ಲಿ ಸಲ್ಲಿಸಲಾಗಿತ್ತು. ಕಳೆದ ವರ್ಷ ಕನ್ವೆನ್ಷನಲ್ ಕೋಚ್‌ಗಳನ್ನು ಎಂಇಎಂಯು ರೈಲುಗಳಿಗೆ ಪರಿವರ್ತಿಸುವ ಯೋಜನಾ ವೆಚ್ಚ ಶೇ.80ರಷ್ಟು ಅಂದರೆ 280 ಕೋಟಿ ರೂ.ಗಳನ್ನು ನಾವು ಒದಗಿಸಿದ್ದೆವು. ಇತ್ತೀಚೆಗೆ ಬೆಂಗಳೂರು ಉಪ ನಗರ ರೈಲು ಯೋಜನೆಗಾಗಿ ರೈಲ್ವೆ ಮಂತ್ರಾಲಯದೊಂದಿಗೆ ಜಂಟಿಯಾಗಿ ವಿಶೇಷ ಉದ್ದೇಶ ವಾಹಕವನ್ನು ಪ್ರಾರಂಭಿಸಲು ನಿರ್ಧರಿಸಿದ್ದೇವೆ. 1745 ಕೋಟಿ ರೂ.ಗಳ ಯೋಜನಾ ವೆಚ್ಚದಲ್ಲಿ ಹಂತ–1 ನ್ನು ಅನುಷ್ಠಾನಗೊಳಿಸಲು ಎಸ್‌ಪಿವಿಯ ಈಕ್ವಿಟಿಗಾಗಿ ನಾವು 349 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದೇವೆ. ಭಾರತ ಸರ್ಕಾರವು 17,000 ಕೋಟಿ ರೂ.ಗಳ ಯೋಜನಾ ವೆಚ್ಚದ ಬೆಂಗಳೂರು ಉಪ ನಗರ ರೈಲು ಯೋಜನೆಯನ್ನು ಘೋಷಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಬೆಂಗಳೂರು ಉಪ ನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸಲು ರೈಲ್ವೆ ಮಂತ್ರಾಲಯದೊಂದಿಗೆ ಕೈಜೋಡಿಸುತ್ತೇವೆ.

### ಕಂದಾಯ

ಆನ್‌ಲೈನ್ ಹಾಗೂ ಓವರ್ ದಿ ಕೌಂಟರ್ ಮೂಲಕ ಜಾತಿ, ಆದಾಯ ಹಾಗೂ ವಾಸದ ಪ್ರಮಾಣ ಪತ್ರಗಳನ್ನು ತಕ್ಷಣವೇ ನೀಡುವ ಪದ್ಧತಿ – "ಈ ಕ್ಷಣ" ಪ್ರಾರಂಭಿಸಲಾಗಿದೆ. ಇದನ್ನು ನಗರ ಪ್ರದೇಶ ಸೇರಿದಂತೆ ರಾಜ್ಯದ ಎಲ್ಲಾ ಕಡೆ ವಿಸ್ತರಿಸಲಾಗುವುದು. 2018–19ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ ಒಟ್ಟಾರೆಯಾಗಿ 6,642 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

### ಇಂಧನ

10 ಹೆಚ್‌ಪಿ ಮತ್ತು ಕಡಿಮೆ ಸಾಮರ್ಥ್ಯ ಹೊಂದಿದ ಸಹಕಾರ ಸಂಘಗಳ ಖಾಸಗಿ ಹೆಚ್‌ಟಿ ಮತ್ತು ಎಲ್‌ಟಿ ಸಮೂಹ ಏತನೀರಾವರಿ ಸ್ಥಾವರಗಳಿಗೆ 2018–19ನೇ ಸಾಲಿನಿಂದ ವಿದ್ಯುತ್ ಪೂರೈಕೆಯ ಮಿತಿ ಮತ್ತು ನಿಬಂಧನೆಗಳಿಗೆ ಒಳಪಟ್ಟು ಪ್ರತಿ ದಿನ 7 ಗಂಟೆಗಳ ವಿದ್ಯುತ್ ಬಳಕೆ ವೆಚ್ಚವನ್ನು ಬಳಕೆದಾರರಿಗೆ ಹಿಂಪಾವತಿ ಮಾಡಲಾಗುವುದು. 2018–19ನೇ ಸಾಲಿನಲ್ಲಿ

ಇಂಧನ ಇಲಾಖೆಗೆ ಒಟ್ಟಾರೆಯಾಗಿ 14,136 ಕೋಟಿ ರೂ.ಗಳನ್ನು ನೀಡಲಾಗುವುದು.

**ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ**

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ–4ರಲ್ಲಿ (KSHDP) 2722 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಗಳನ್ನು 3480 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, 2018–19ನೇ ಸಾಲಿನಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುವುದು. 2018–19ನೇ ಸಾಲಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಒಟ್ಟಾರೆಯಾಗಿ 9,271 ಕೋಟಿ ರೂ.ಗಳನ್ನು ನೀಡಲಾಗುವುದು.

**ಮೂಲಸೌಲಭ್ಯ ಅಭಿವೃದ್ಧಿ**

2018–19ನೇ ಸಾಲಿನಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಒಟ್ಟಾರೆಯಾಗಿ 601 ಕೋಟಿ ರೂ.ಗಳನ್ನು ನೀಡಲಾಗುವುದು.

**ವಾಣಿಜ್ಯ ಮತ್ತು ಕೈಗಾರಿಕೆ**

ಯುವಜನರ ಹೊಸತನದ ಪರಿಕಲ್ಪನೆಗಳನ್ನು ಮತ್ತು ತಾಂತ್ರಿಕ ಮತ್ತು ಸಂಶೋಧನಾ ಸಂಸ್ಥೆಗಳ ಸಹಯೋಗದೊಂದಿಗೆ ಉತ್ಪಾದನಾ ನವೋದ್ಯಮಗಳನ್ನು ಹೆಚ್ಚಿನ ರೀತಿಯಲ್ಲಿ ಉತ್ತೇಜಿಸಲು ಇನ್ನೊವೇಶನ್ ಪಾಲಿಸಿಯನ್ನು ಘೋಷಿಸಲು ಉದ್ದೇಶಿಸಲಾಗಿದೆ. 2018–19ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಒಟ್ಟಾರೆಯಾಗಿ 1,681 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ 2018–19ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಟ್ಟಾರೆಯಾಗಿ 247 ಕೋಟಿ ರೂ.ಗಳನ್ನು ಒದಗಿಸಲಾಗುವುದು.

**ಇ–ಆಡಳಿತ**

2018–19 ಸಾಲಿನಲ್ಲಿ, ನಮ್ಮ ಸರ್ಕಾರವು ಇ– ಸೈನ್, ಡಿಜಿ ಲಾಕರ್ ಇತ್ಯಾದಿ ಆಧುನಿಕ ಇ– ಆಡಳಿತ ಉಪಕರಣಗಳನ್ನು ಬಳಸಿ ಸಕಾಲ 2.0ಗೆ ಉನ್ನತೀಕರಿಸಿ ಸೇವೆಗಳನ್ನು ಮುಖ ರಹಿತ, ನಗದುರಹಿತ ಮತ್ತು ಕಾಗದರಹಿತವಾಗಿ ಮಾಡಲಾಗುವುದು. 2018–19ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ



459 ಕೋಟಿ ರೂ.ಗಳನ್ನು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ 239 ಕೋಟಿ ರೂ., ಸಾರಿಗೆ ಇಲಾಖೆಗೆ 2,208 ಕೋಟಿ ರೂ.ಗಳನ್ನು ಒದಗಿಸಲಾಗುವುದು.

2018–19ನೇ ಸಾಲಿನಿಂದ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸನ್ನು ನೀಡಲಾಗುವುದು. ಇದರಿಂದ 19.60 ಲಕ್ಷ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯಲಿದ್ದಾರೆ.

**ನೋಂದಣಿ ಮತ್ತು ಮುದ್ರಾಂಕ**

2017–18 ನೇ ಸಾಲಿಗೆ 9000 ಕೋಟಿ ರೂ.ಗಳ ರಾಜಸ್ವ ಗುರಿ ನಿಗದಿಪಡಿಸಲಾಗಿದ್ದು, 2018 ರ ಜನವರಿ ಅಂತ್ಯದವರೆಗೆ 7237.28 ಕೋಟಿರೂ.ಗಳ ರಾಜಸ್ವ ಗುರಿಗೆ, 7291.58 ಕೋಟಿ ರೂ.ಗಳ ರಾಜಸ್ವವನ್ನು ಸಂಗ್ರಹಿಸಿದ್ದು, ಇದು ಗುರಿಗೆ ಶೇ.100.75 ರಷ್ಟು ಸಾಧನೆಯಾಗಿದೆ. ಇಲಾಖೆಯ ಪಾರಂಪರಿಕ/ಕಾನೂನಾತ್ಮಕ ದಾಖಲೆಗಳನ್ನು "ಸುರಭಿ" (ಸೂಕ್ಷ್ಮ ರಕ್ಷಣಾ ಅಭಿಲೇಖಗಳು) ಎಂಬ ನಾಮದಡಿ ಹಂತ ಹಂತವಾಗಿ ಸ್ಕ್ಯಾನಿಂಗ್ ಹಾಗೂ ಡಿಜಿಟೈಸ್ ಮಾಡಿ ಸಂರಕ್ಷಿಸಿಡಲು ಉದ್ದೇಶಿಸಿದೆ. 2018–19 ನೇ ಸಾಲಿಗೆ 10,400 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದೆ.

**ಸಾರಿಗೆ**

2017–18ನೇ ಸಾಲಿಗೆ 6006 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆಯ ಗುರಿಯನ್ನು ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿದೆ. 2018–19ನೇ ಸಾಲಿಗೆ 6600 ಕೋಟಿ ರೂ.ಗಳ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದೆ.

**ಪರಿಷ್ಕೃತ ಅಂದಾಜು 2017–18**

2017–18ರ ಪರಿಷ್ಕೃತ ಅಂದಾಜುಗಳನ್ವಯ ಆಯವ್ಯಯದಲ್ಲಿ ಅಂದಾಜಿಸಲಾದ 1,82,119 ಕೋಟಿ ರೂ. ಗಳಿಗೆ ಹೋಲಿಸಿದಲ್ಲಿ ಒಟ್ಟಾರೆ ಜಮೆ 1,83,263 ಕೋಟಿ ರೂ.ಗಳಾಗಿದೆ. ರಾಜ್ಯದ ರಾಜಸ್ವ ಕ್ರೋಢೀಕರಣದ ಪ್ರಯತ್ನಗಳು 1,46,033 ಕೋಟಿ ರೂ.ಗಳಾಗಿದ್ದು, ಇದರಲ್ಲಿ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯು ಜಿ.ಎಸ್.ಟಿ ಪರಿಹಾರ ಒಳಗೊಂಡಂತೆ 91,718 ಕೋಟಿ ರೂ.ಗಳಾಗಿರುತ್ತದೆ. ಪರಿಷ್ಕೃತ ಅಂದಾಜಿನ ಪ್ರಕಾರ ಒಟ್ಟು ವೆಚ್ಚವು 1,89,679 ಕೋಟಿ ರೂ.ಗಳಾಗಿದೆ. ಇದು 2016–17ಕ್ಕೆ ಹೋಲಿಸಿದಲ್ಲಿ ಶೇ. 11.9 ರಷ್ಟು ಹೆಚ್ಚಳ ಕಂಡಿದೆ.

**ಆಯವ್ಯಯ ಅಂದಾಜುಗಳು 2018–19**

ಸನ್ಮಾನ್ಯ ಸಭಾಧ್ಯಕ್ಷರೇ,

2018–19ನೇ ಸಾಲಿನಲ್ಲಿ ಒಟ್ಟು ಜಮೆಗಳು 2,02,297 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,62,765 ಕೋಟಿ ರೂ. ರಾಜಸ್ವ ಜಮೆಗಳು ಹಾಗೂ 39,328 ಕೋಟಿ ರೂ.ಗಳ ಸಾಲ ಸೇರಿದಂತೆ 39,532 ಕೋಟಿ ರೂ.ಗಳ ಬಂಡವಾಳ ಜಮೆಗಳುಒಳಗೊಂಡಿರುತ್ತದೆ. 1,62,637 ಕೋಟಿ ರೂ.ಗಳ ರಾಜಸ್ವ ವೆಚ್ಚ, 35,458 ಕೋಟಿ ರೂ.ಗಳ ಬಂಡವಾಳ ಹಾಗೂ ಸಾಲದ ಮರುಪಾವತಿ 11,086 ಕೋಟಿ ರೂ.ಗಳ ವೆಚ್ಚವನ್ನು ಒಳಗೊಂಡು, ಒಟ್ಟು ವೆಚ್ಚವು 2,09,181 ಕೋಟಿ ರೂ. ಗಳಾಗುತ್ತದೆಂದು ಅಂದಾಜು ಮಾಡಲಾಗಿದ

**ಸಂಪನ್ಮೂಲಗಳ ಕ್ರೋಢೀಕರಣ**

2018–19ನೇ ಸಾಲಿನ ರಾಜ್ಯದ ಒಟ್ಟು ಸ್ವಂತ ತೆರಿಗೆ ರಾಜಸ್ವವನ್ನು 2017–18ನೇ ಸಾಲಿನ ಪರಿಷ್ಕೃತ ಅಂದಾಜು ಮೀರಿ ಶೇ.12.78ರ ಹೆಚ್ಚಳದೊಂದಿಗೆ 1,03,444 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ತೆರಿಗೆಯೇತರ ರಾಜಸ್ವಗಳಿಂದ 8,163 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 36,215 ಕೋಟಿ ರೂ.ಗಳನ್ನು ಹಾಗೂ 14,942 ಕೋಟಿ ರೂ.ಗಳನ್ನು ಕೇಂದ್ರ

**(71ನೇ ಪುಟಕ್ಕೆ)**

ಬೆಲೆ ಬಾಳುವ ಲೋಹ – ಚಿನ್ನಕ್ಕೆ ಆಸ್ತಿಯ ಸ್ಥಾನಮಾನ ಕಲ್ಪಿಸಲು ಸಮಗ್ರ ಚಿನ್ನ ನೀತಿ ತರುವುದಾಗಿ ಹಣಕಾಸು ಸಚಿವರು 2018–19ರ ಬಜೆಟ್‌ನಲ್ಲಿ ಹೇಳಿದ್ದಾರೆ. ಯಾವುದೇ ಅಡೆತಡೆ ಇಲ್ಲದೆ ಮುಕ್ತವಾಗಿ ಜನರು ಚಿನ್ನ ಠೇವಣಿ ಖಾತೆ ತೆರೆಯಲು ಅನುಕೂಲವಾಗುವಂತೆ ಚಿನ್ನದ ಗಳಿಕೆ ಯೋಜನೆ ಪುನಾರೂಪಿಸಲಾಗುವುದು. ಇದು ದೇಶದಲ್ಲಿ ಚಿನ್ನದ ನಿಯಂತ್ರಿತ ವಿನಿಮಯವನ್ನು ಗ್ರಾಹಕ ಸ್ನೇಹಿ, ವಹಿವಾಟುದಕ್ಷ ವ್ಯವಸ್ಥೆಯನ್ನಾಗಿಸಲಿದೆ. ಚಿನ್ನ ವಿನಿಮಯ,ಬಂಗಾರವನ್ನು ಪಾರದರ್ಶಕವಾಗಿ ಮತ್ತು ಹೆಚ್ಚು ವೃತ್ತಿಪರವಾಗಿ ನಿರ್ವಹಿಸುವ ಅಂತಾರಾಷ್ಟ್ರೀಯ ಕ್ರಮವಾಗಿದೆ. ಇದು ಅಡೆತಡೆ ನಿವಾರಿಸುವ ಜತೆ ಬಂಗಾರದ ವ್ಯಾಪಾರವನ್ನು ಹೆಚ್ಚು ಅಂಕೀಕೃತ ಮತ್ತು ವಿವೇಚನಾಯುಕ್ತವನ್ನಾಗಿಸಲು ನೆರವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಚಿನ್ನದ ವ್ಯಾಪಾರ ಸುಲಭ ಸಾಧ್ಯವಾಗಲಿದೆ. ಭಾರತದ ಚಿನ್ನ ಬಳಕೆಯ ಪ್ರಮಾಣದಲ್ಲಿ ಗ್ರಾಮೀಣ ಭಾಗದ ಪಾತ್ರ ಹಿರಿದಾಗಿದ್ದು, ಶೇ.65 ರಷ್ಟು ಬಂಗಾರದ ಬಳಕೆ ಈ ಪ್ರದೇಶಗಳಲ್ಲೇ ಆಗುತ್ತಿದೆ. ಇದರಲ್ಲಿ ಮಧ್ಯವರ್ತಿಗಳು ಈ ಹಿಂದೆ, ಲೆಕ್ಕಕ್ಕೆ ಬಾರದಂತೆ ನಗದು ವಹಿವಾಟು ನಡೆಸುತ್ತಿದ್ದು ಅದಕ್ಕೆ ಈಗಾಗಲೇ ತಡೆಹಾಕಲಾಗಿದೆ.

ಕೇಂದ್ರ ಸರ್ಕಾರ 2015–16ರ ಬಜೆಟ್‌ನಲ್ಲಿ ಚಿನ್ನದ ಗಳಿಕೆ ಯೋಜನೆಯನ್ನು ಪ್ರಕಟಿಸಿತು. ಭಾರತದಲ್ಲಿ ಗೃಹಬಳಕೆಯಲ್ಲಿ ಇರುವ ಕುಟುಂಬದ ಚಿನ್ನವನ್ನು ಸಂರಕ್ಷಿಸುವ ಜತೆಗೆ, ಅದನ್ನು ಗಳಿಕೆಯ ಮಾದರಿಯಲ್ಲಿ ಇಡುವ ಉದ್ದೇಶ ಈ ಯೋಜನೆಯದಾಗಿತ್ತು. ದೇಶೀಯ ಬೇಡಿಕೆ ಕಡಿಮೆಗೊಳಿಸಿ, ಚಿನ್ನದ ಆಮದು ಕಡಿಮೆಗೊಳಿಸುವುದು ಪ್ರಮುಖ ಉದ್ದೇಶವಾಗಿತ್ತು. ಭಾರತ, ಚಿನ್ನದ ಗ್ರಾಹಕ ಸ್ಥಾನದಲ್ಲಿ ಚೀನಾದ ನಂತರದ ಅಂದರೆ

## ನಿಮಗಿದು ತಿಳಿದಿದೆಯೇ?

ಎರಡನೆ ಸ್ಥಾನದಲ್ಲಿದೆ. ಚಿನ್ನದ ಗಳಿಕೆ ಯೋಜನೆಯಡಿ ಠೇವಣಿದಾರರು ತಾವು ಇಡುವ ಹಳದಿ ಲೋಹದ ಮೇಲೆ ಬಡ್ಡಿ ಸಂಪಾದಿಸಬಹುದು. ಲೋಹಖಾತೆಯಲ್ಲಿ ಠೇವಣಿ ಹೂಡುತ್ತಿದ್ದಂತೆ ಬಡ್ಡಿ ಬರಲಾರಂಭಿಸುತ್ತದೆ. ಈ ಯೋಜನೆಯ ಪ್ರಮುಖ ಗುಣಲಕ್ಷಣಗಳು ಮುಂದಿನಂತಿವೆ.

**ಸುಲಭ ಸುಭದ್ರ** : ಇದು ಚಿನ್ನಕ್ಕೆ ಭದ್ರತೆ ಒದಗಿಸುತ್ತದಲ್ಲದೆ, ಯೋಜನೆಯ ಅವಧಿ ಪೂರ್ಣಗೊಂಡಾಗ ಠೇವಣಿದಾರರು ಚಿನ್ನ ಅಥವಾ ಅದಕ್ಕೆ ಪ್ರತಿಯಾಗಿ ಹಣವನ್ನು ಪಡೆಯಬಹುದು. ಜನರು ಸಾಮಾನ್ಯವಾಗಿ ಸುರಕ್ಷತೆ ದೃಷ್ಟಿಯಿಂದ ಚಿನ್ನವನ್ನು ಬ್ಯಾಂಕಿನ ಲಾಕರ್‌ಗಳಲ್ಲಿ ಇಡುತ್ತಾರೆ ಹಾಗೂ ಈ ಸೇವೆಗಾಗಿ ಬ್ಯಾಂಕಿಗೆ ವಾರ್ಷಿಕ ಶುಲ್ಕವನ್ನು ಕಟ್ಟುತ್ತಾರೆ. ಕುಟುಂಬದ ಸಭೆ ಸಮಾರಂಭಗಳಲ್ಲಿ ಹಾಕಿಕೊಳ್ಳುವ ಸಂದರ್ಭಗಳಲ್ಲಿ ಮಾತ್ರ ಬ್ಯಾಂಕಿನ ಲಾಕರ್‌ನಿಂದ ಚಿನ್ನದಾಭರಣಗಳನ್ನು ತೆಗೆದುಕೊಂಡು ಹೋಗುತ್ತಾರೆ. **ಹಳೆಯ ಚಿನ್ನದ ಬಳಕೆ** : ಹಳೆಯ ಬಳಸದ ಚಿನ್ನವನ್ನು ಮನೆಯಲ್ಲಿ ಅಥವಾ ಲಾಕರ್‌ಗಳಲ್ಲಿ ಇಡುತ್ತಾರೆ. ಒಂದು ರೀತಿಯಲ್ಲಿ ಇದು ಅನುತ್ಪಾದಕ ಸಂಪತ್ತೆನಿಸಿಕೊಳ್ಳುತ್ತದೆ. ಚಿನ್ನದ ಗಳಿಕೆ ಯೋಜನೆಯಡಿ ಬಡ್ಡಿ ಮಾತ್ರವಲ್ಲ, ಅವಧಿ ಪೂರ್ತಿಗೊಂಡ ಸಮಯದಲ್ಲಿ ಚಿನ್ನ ಮಾರಾಟ ಮಾಡಬಯಸಿದರೆ, ಅದಕ್ಕೂ ಹೆಚ್ಚಿನ ಚಿನ್ನದ ಬೆಲೆ ದೊರಕಂತಾಗುತ್ತದೆ. **ಠೇವಣಿ ಮಾದರಿ** : ಚಿನ್ನವನ್ನು ಆಭರಣ, ನಾಣ್ಯ, ಗಟ್ಟಿ, ಹೀಗೆ ಯಾವುದೇ ಮಾದರಿಯಲ್ಲಿ ಇಡಬಹುದು. ಹರಳುಗಳಿರುವ ಚಿನ್ನಕ್ಕೆ ಅವಕಾಶವಿಲ್ಲ **ಪ್ರಮಾಣ** : ಯಾವುದೇ ಶುದ್ಧತೆಯ ಕನಿಷ್ಠ 30ಗ್ರಾಂಗೆ ಮೇಲ್ಪಟ್ಟ ಚಿನ್ನವನ್ನು ಠೇವಣಿ ಇರಿಸಬಹುದು. **ಅವಧಿ** : ಒಟ್ಟಾರೆ ಮೂರು ಸಾವಧಿಕ ಯೋಜನೆಗಳಿವೆ. ಇದರಲ್ಲಿ 1 ರಿಂದ 3 ವರ್ಷಗಳ ಅಲ್ಪಾವಧಿ ಯೋಜನೆಯೂ ಇದೆ. ಅವಧಿಗೆ ಮುನ್ನ ಬಂಗಾರ ಬೇಕಾದರೆ, ಅಲ್ಪ ಪ್ರಮಾಣದ ದಂಡದೊಂದಿಗೆ ಹಿಂಪಡೆಯಬಹುದು. **ಆಕರ್ಷಕ ಬಡ್ಡಿದರ** : ಠೇವಣಿಯ ಅವಧಿ ಅವಲಂಬಿಸಿ ಶೇ 0.5 ರಿಂದ ಶೇ 2.5 ರವರೆಗೆ ಬಡ್ಡಿ ದೊರಕುತ್ತದೆ. ಅಲ್ಪಾವಧಿಯ ಬಡ್ಡಿಯನ್ನು ಸಂಬಂಧಿತ ಬ್ಯಾಂಕು ಹಾಗೂ ಮಧ್ಯಮ ಮತ್ತು ದೀರ್ಘಾವಧಿಯ ಠೇವಣಿಗಳ ಬಡ್ಡಿಯನ್ನು ಕೇಂದ್ರ ಸರ್ಕಾರ ನಿರ್ಧರಿಸುತ್ತದೆ. **ಬಡ್ಡಿ ಲೆಕ್ಕಾಚಾರ** : ಅಲ್ಪಾವಧಿಯ ಠೇವಣಿಗೆ ಬ್ಯಾಂಕುಗಳು ಚಿನ್ನದ ಗಳಿಕೆಯ ಯೋಜನೆಯಡಿ ಬಡ್ಡಿಯನ್ನು ಹಣದ ರೂಪದಲ್ಲಿ ಲೆಕ್ಕ ಹಾಕುವುದಿಲ್ಲ. ಚಿನ್ನವನ್ನೇ ಬಡ್ಡಿಯಾಗಿ ಗ್ರಾಂ. ಪ್ರಮಾಣದಲ್ಲಿ ನೀಡಲಾಗುತ್ತದೆ. ಆದರೆ, ಉದಾಹರಣೆಗೆ ವಾರ್ಷಿಕ ಬಡ್ಡಿ ಶೇ 1 ಇದ್ದರೆ 100 ಗ್ರಾಂ ಚಿನ್ನಕ್ಕೆ 1 ಗ್ರಾಂ ಚಿನ್ನ ಬಡ್ಡಿಯಾಗಿ ದೊರಕುತ್ತದೆ. ಆದರೆ, ಮಧ್ಯಮ ಮತ್ತು ದೀರ್ಘಾವಧಿ ಚಿನ್ನಕ್ಕೆ ಠೇವಣಿ ಇರಿಸಿದ ಸಂದರ್ಭದಲ್ಲಿನ ಚಿನ್ನ ಮೌಲ್ಯಕ್ಕೆ ಹಣದ ರೂಪದಲ್ಲಿ ಬಡ್ಡಿ ಲೆಕ್ಕಾಚಾರ ಮಾಡಲಾಗುತ್ತದೆ. **ಶುದ್ಧತೆ** : ಠೇವಣಿ ಇಡುವ ಬಂಗಾರದ ಶುದ್ಧತೆಯನ್ನು ದೇಶಾದ್ಯಂತ ಇರುವ ಸುಮಾರು 330 ಪರೀಕ್ಷಾ ಕೇಂದ್ರಗಳಲ್ಲಿ ಪರಿಶೀಲಿಸಲಾಗುತ್ತದೆ. ಈ ಕೇಂದ್ರಗಳು ಚಿನ್ನದ ಶುದ್ಧತೆ, ಪ್ರಮಾಣದ ಬಗ್ಗೆ ರಸೀದಿ ನೀಡುತ್ತವೆ. ಬ್ಯಾಂಕ್‌ನಲ್ಲಿ ಠೇವಣಿ ಇಡುವಾಗ ಇವುಗಳನ್ನು ಪ್ರಮಾಣಪತ್ರವಾಗಿ ಪರಿವರ್ತಿಸಲಾಗುತ್ತದೆ. **ತೆರಿಗೆ ಪ್ರಯೋಜನ** : ಚಿನ್ನದ ಗಳಿಕೆ ಯೋಜನೆಯಡಿ ಬರುವ ಲಾಭಕ್ಕೆ ಕ್ಯಾಪಿಟಲ್‌ಗೇನ್ಸ್ ತೆರಿಗೆ ಇರುವುದಿಲ್ಲ. ಕ್ಯಾಪಿಟಲ್‌ಗೇನ್ಸ್‌ಗೆ ಸಂಪತ್ತು ತೆರಿಗೆ ಮತ್ತು ಆದಾಯ ತೆರಿಗೆಗಳಿಂದಲೂ ವಿನಾಯ್ತಿ ಇರುತ್ತದೆ. ❑

(70ನೇ ಪುಟದಿಂದ)

## ಕರ್ನಾಟಕ ಬಜೆಟ್ 2018–19

ಸರ್ಕಾರದಿಂದ ಸಹಾಯಾನುದಾನ ರೂಪದಲ್ಲಿ ರಾಜ್ಯ ಸರ್ಕಾರವು ನಿರೀಕ್ಷಿಸಿದೆ. ಈ ರಾಜಸ್ವ ಜಮೆಗಳಿಗೆ ಪೂರಕವಾಗಿ 39,328 ಕೋಟಿ ರೂ.ಗಳ ಒಟ್ಟು ಸಾಲಗಳು, 75 ಕೋಟಿ ರೂ.ಗಳ ಋಣೇತರಸ್ವೀಕೃತಿಗಳು ಮತ್ತು 129 ಕೋಟಿ ರೂ.ಗಳ ಸಾಲಗಳ ವಸೂಲು ಮೊತ್ತವನ್ನು ಅಂದಾಜಿಸಲಾಗಿದೆ. ರಾಜ್ಯದ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 16,760 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ. ಈಗ ಆಯವ್ಯಯವನ್ನು ಗೌರವಾನ್ವಿತ ಸದನದ ಪರಿಗಣನೆಗಾಗಿ ಮಂಡಿಸುತ್ತಿದ್ದೇನೆ. ಹಾಗೂ ಆಯವ್ಯಯ ಅಂದಾಜಿನನ್ವಯ 2018–19ನೇ ಸಾಲಿನ 31ನೇ ಜುಲೈ 2018ರವರೆಗಿನ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್ ಜೈ ಕರ್ನಾಟಕ ❑

# ವಾರ್ತಾ ವಿಶೇಷ

ಪ್ರಸಕ್ತ 2017–18ನೇ ಸಾಲಿನ ಬೆಳೆ ವರ್ಷಕ್ಕೆ ಆಹಾರ ಧಾನ್ಯಗಳ ಉತ್ಪಾದನೆ ಹೊಸ ದಾಖಲೆ ಎಂಬಂತೆ 277.49 ಮಿಲಿಯನ್ ಟನ್‌ಗೆ ಮುಟ್ಟಲಿದೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ. ಕಳೆದ ವರ್ಷ ಈ ಅವಧಿಯಲ್ಲಿ 275.11 ಮಿಲಿಯನ್ ಟನ್ ಆಹಾರ ಧಾನ್ಯ ಉತ್ಪಾದಿಸಲಾಗಿತ್ತು.

ಆಹಾರ ಧಾನ್ಯಗಳ ಅಂದಾಜು ಉತ್ಪಾದನೆ ಕುರಿತು ಇತ್ತೀಚೆಗೆ ಬಿಡುಗಡೆ ಮಾಡಲಾದ ಎರಡನೇ ಅಂಕಿ ಅಂಶಗಳ ಪ್ರಕಾರ, ಈ ವರ್ಷ ಬೇಳೆಕಾಳುಗಳ ಉತ್ಪಾದನೆ ದಾಖಲೆಯೆಂಬಂತೆ 23.95 ಮಿಲಿಯನ್ ಟನ್‌ಗೆ ಏರಿದೆ. ಇದು ಕಳೆದ ವರ್ಷ ಉತ್ಪಾದಿಸಲಾಗಿದ್ದ 23.13 ಮಿಲಿಯನ್ ಟನ್ ಗಿಂತಲೂ 0.82 ಮಿಲಿಯನ್ ಟನ್ ಅಧಿಕವಾಗಿದೆ. ಗೋಧಿ ಉತ್ಪಾದನೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ 1.40 ಮಿಲಿಯನ್ ಟನ್ ನಷ್ಟು ಅಧಿಕ ಉತ್ಪಾದನೆಯಾಗಿದೆ ಎಂದು ಅಂದಾಜಿಸಲಾಗಿದೆ. ಪ್ರಸಕ್ತ ವರ್ಷ 97.11 ಮಿಲಿಯನ್ ಟನ್ ಉತ್ಪಾದನೆಯಾಗಿದ್ದರೆ, ಹಿಂದಿನ ವರ್ಷ 98.51ಮಿಲಿಯನ್ ನಷ್ಟು ಉತ್ಪಾದನೆಯಾಗಿತ್ತು. ಈ ಮಧ್ಯೆ ಒರಟಾದ ಧಾನ್ಯಗಳ ಉತ್ಪಾದನೆಯನ್ನು ಪ್ರಸಕ್ತ ವರ್ಷ 45.42 ಮಿಲಿಯನ್ ಟನ್ ನಷ್ಟು ಅಂದಾಜಿಸಲಾಗಿದೆ, ಕಳೆದ ಬಾರಿ 43.77 ಮಿಲಿಯನ್ ಟನ್ ನಷ್ಟು ಉತ್ಪಾದಿಸಲಾಗಿತ್ತು. ಆದರೆ ಎಣ್ಣೆಬೀಜಗಳ ಉತ್ಪಾದನೆಯಲ್ಲಿ ಪ್ರಸಕ್ತ ವರ್ಷ 1.39 ಮಿಲಿಯನ್ ಟನ್ ನಷ್ಟು ಕುಂಠಿತವಾಗಿದೆ. 2017– 18ನೇ ಸಾಲಿನಲ್ಲಿ 29.88 ಮಿಲಿಯನ್ ಟನ್‌ನಷ್ಟು ಉತ್ಪಾದನೆಯಾಗಿದ್ದರೆ, ಕಳೆದ ವರ್ಷ 31.28 ಮಿಲಿಯನ್ ನಷ್ಟು ಉತ್ಪಾದಿಸಲಾಗಿತ್ತು.

* * *

ಒಡಿಶಾದ ಪರದೀಪ್ ಬಂದರ್‌ನಲ್ಲಿ ದೇಶೀಯ ನಿರ್ಮಿತ ಧನುಷ್ ಕ್ಷಿಪಣಿಯ ಪರೀಕ್ಷಾರ್ಥ ಹಾರಾಟವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಈ ಕ್ಷಿಪಣಿ 350 ಕಿಲೋಮೀಟರ್ಸ್ ವ್ಯಾಪ್ತಿಯಲ್ಲಿ ದಾಳಿ ಮಾಡಬಲ್ಲ ಹಾಗೂ 500 ಕೆ.ಜಿ. ತೂಕ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. 2015ರ ನಂತರ ನಡೆಸಲಾದ 2ನೇ ಯಶಸ್ವಿ ಪರೀಕ್ಷಾರ್ಥ ಹಾರಾಟ ಇದಾಗಿದೆ. ಧನುಷ್ ಕ್ಷಿಪಣಿ, ಭೂಮಿಯ ಮೇಲಿಂದ ಆಕಾಶಕ್ಕೆ ಮತ್ತು ಸಮುದ್ರದಿಂದ ಭೂಮಿಯ ಮೇಲೆ ದಾಳಿ ಮಾಡುವ ಸಾಮರ್ಥ್ಯ ಹೊಂದಿದೆ.

* * *

ಭಾರತೀಯ ರೈಲ್ವೆ ಇಲಾಖೆ, ಕನ್ನಡ ಭಾಷೆ ಒಳಗೊಂಡ ಟಿಕೆಟ್‌ಗಳನ್ನು ಪ್ರಯಾಣಿಕರಿಗೆ ನೀಡಲಿದೆ. ಕನ್ನಡ ಭಾಷೆಯ ಟಿಕೆಟ್ ವಿತರಣೆ ಕುರಿತು ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿ ರೈಲು ನಿಲ್ದಾಣಗಳಲ್ಲಿ ಕೈಗೊಂಡ ಪ್ರಯೋಗ ಯಶಸ್ವಿಯಾಗಿದ್ದು, ನೈರುತ್ಯ ರೈಲ್ವೆ ವ್ಯಾಪ್ತಿಯ ಎಲ್ಲ 358 ನಿಲ್ದಾಣಗಳಲ್ಲಿ ನೀಡಲು ಉದ್ದೇಶಿಸಲಾಗಿದೆ. ಸದ್ಯ ಮುಂಗಡ ರಹಿತ ದ್ವಿತೀಯ ದರ್ಜೆ ಟಿಕೆಟ್‌ಗಳಲ್ಲಿ ಮಾತ್ರ ಕನ್ನಡ ಬಳಸಲಾಗುತ್ತಿದೆ ಎಂದು ಇಲಾಖೆ ತಿಳಿಸಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________ date __________

Name (in block letters) : ______________________

Subscriber's profile : Student / Academician / Institution / Others

Address : ______________________

______________________

PIN : ______________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
Log on to
**http://publicationsdivision.nic.in/**,
*in collaboration with* **bharatkosh.gov.in**